ಪ್ರಜಾ ವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಕ್ಕಳನ್ನು ಬೆಳೆಸುವುದೆಂದರೆ ಪ್ರತಿ ದಿನವೂ ನಿರ್ವಹಿಸಬೇಕಾದ ಜವಾಬ್ದಾರಿ

ಆಳ-ಅಗಲ
ಕೆರೆ, ಕೆರೆಜಾಲ ಅಭಿವೃದ್ಧಿಯಲ್ಲಿ ಜೀವಸೆಲೆ

ದಲಿತ ಮಹಿಳೆ ಬೆತ್ತಲಾಗಿಸಿ, ಮೂತ್ರ ವಿಸರ್ಜನೆ 7
‘ಕಾಂಗ್ರೆಸ್ ಪಕ್ಷ ತುಕ್ಕು ಹಿಡಿದ ಕಬ್ಬಿಣ’ 7

ಸೆನ್ಸೆಕ್ಸ್	ನಿಫ್ಟಿ	₹/$
66,023 ▲	19,674.55 ▲	83.13 ▼

ಬಿಜೆಪಿ, ಜೆಡಿಎಸ್ ಬೆಂಬಲ • 50ಕ್ಕೂ ಹೆಚ್ಚು ಸಂಘಟನೆಗಳು ಭಾಗಿ • ಕರವೇ ಪ್ರತ್ಯೇಕ ಹೋರಾಟ

ಇಂದು ಬೆಂಗಳೂರು ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸಬಾರದು’ ಎಂದು ಆಗ್ರಹಿಸಿ ಕಾವೇರಿ ಜಲ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ಸೆ. 26ರಂದು (ಮಂಗಳವಾರ) ಬೆಂಗಳೂರು ಬಂದ್‌ಗೆ ಕರೆ ನೀಡಲಾಗಿದೆ. ಬಿಜೆಪಿ ಹಾಗೂ ಜೆಡಿಎಸ್ ಜತೆ, 50ಕ್ಕೂ ಹೆಚ್ಚು ಸಂಘಟನೆಗಳು ಬಂದ್‌ಗೆ ಬೆಂಬಲ ಸೂಚಿಸಿವೆ.

‘ಕಾವೇರಿ ನದಿ ನಮ್ಮ ಜನ್ಮ ಸಿದ್ಧ ಹಕ್ಕು’ ಘೋಷವಾಕ್ಯದೊಂದಿಗೆ-ಬಂದ್‌ಗೆ ಕರೆ ನೀಡಿರುವ ಸಮಿತಿ ಪದಾಧಿಕಾರಿಗಳು, ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಿದ್ದಾರೆ.

ರಾಜ್ಯ ಕಬ್ಬು ಬೆಳೆಗಾರರ ಸಂಘ, ಆಮ್ ಆದ್ಮಿ ಪಕ್ಷ, ಬಿಬಿಎಂಪಿ ಕಾರ್ಮಿಕರ ಸಂಘ, ಖಾಸಗಿ ವಾಹನ ಮಾಲೀಕರ ಒಕ್ಕೂಟ, ಖಾಸಗಿ ಶಾಲೆಗಳ ಪೋಷಕರ ಒಕ್ಕೂಟ, ಎಪಿಎಂಸಿ ಈರುಳ್ಳಿ-ಆಲೂಗಡ್ಡೆ ವರ್ತಕರ ಸಂಘ, ಬೆಳ್ಳುಳ್ಳಿ ವರ್ತಕರ ಸಂಘ, ಚಿಕ್ಕಪೇಟೆ ವರ್ತಕರ ಒಕ್ಕೂಟ, ಬಿಡಿಎ ನೌಕರರ ಒಕ್ಕೂಟ, ಬೆಂಗಳೂರು ವಕೀಲರ ಸಂಘ, ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆ, ಭಾರತ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ ನವ ನಿರ್ಮಾಣ ಸೇನೆ ಸೇರಿದಂತೆ 50ಕ್ಕೂ ಹೆಚ್ಚು ಸಂಘಟನೆಗಳ ಸದಸ್ಯರು ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ.

ಮೆಜೆಸ್ಟಿಕ್, ಗಾಂಧಿನಗರ ಹಾಗೂ ಸುತ್ತಮುತ್ತ ಸೋಮವಾರ ಸಂಚರಿಸಿದ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಬಂದ್ ಕರಪತ್ರಗಳನ್ನು ಹಂಚಿದರು. ಕಾವೇರಿ ನದಿ ನೀರಿಗಾಗಿ ಬಂದ್‌ನಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಜನರನ್ನು ಕೋರಿದರು.

ಬಂದ್‌ಗೆ ಬೆಂಬಲ ನೀಡಿರುವ ಖಾಸಗಿ ವಾಹನಗಳ ಒಕ್ಕೂಟ, ಬಸವನ ಗುಡಿ ನ್ಯಾಷನಲ್ ಕಾಲೇಜು ಮೈದಾನ ದಿಂದ ಪುರಭವನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ಹೇಳಿದೆ.

ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಸೋಮವಾರ ಮಂಡ್ಯದಲ್ಲಿ ಪಟಾಪಟ್ಟಿ ಚಡ್ಡಿ ಧರಿಸಿ ಮೆರವಣಿಗೆ ನಡೆಸಿದರು

ಏನು ಇರುತ್ತದೆ?

- ಆಸ್ಪತ್ರೆಗಳು
- ಔಷಧಿ ಮಳಿಗೆಗಳು
- ಆಂಬುಲೆನ್ಸ್ ಸಂಚಾರ
- ಬ್ಯಾಂಕ್‌ಗಳು
- ದಿನಪತ್ರಿಕೆಗಳು
- ಮೆಟ್ರೊ, ರೈಲು

ಅನುಮಾನ

- ಓಲಾ–ಉಬರ್ ಕ್ಯಾಬ್
- ಬಿಎಂಟಿಸಿ ಬಸ್
- ಸರ್ಕಾರಿ ಕಚೇರಿಗಳು
- ಐಟಿ–ಬಿಟಿ ಕಂಪನಿಗಳು
- ಸಿನಿಮಾ ಮಂದಿರಗಳು
- ಹೋಟೆಲ್‌ಗಳು

ಏನು ಇರುವುದಿಲ್ಲ?

- ಆಟೊ
- ಮ್ಯಾಕ್ಸಿ ಕ್ಯಾಬ್
- ಖಾಸಗಿ ಬಸ್‌ಗಳು
- ಖಾಸಗಿ ಹಾಗೂ ಸರ್ಕಾರಿ ಶಾಲೆಗಳು
- ಶಾಲಾ ವಾಹನಗಳು
- ಚಿಕ್ಕಪೇಟೆ ಹಾಗೂ ಸುತ್ತಮುತ್ತ ಮಾರುಕಟ್ಟೆ
- ಕೆಲ ಖಾಸಗಿ ಶಾಲೆಗಳು
- ಗೂಡ್ಸ್ ಸಾಗಣೆ ವಾಹನಗಳು
- ಆಭರಣ ಮಳಿಗೆಗಳು
- ಕೈಗಾರಿಕೆಗಳು

‘ಪ್ರತಿಭಟನಾ ಮೆರವಣಿಗೆಯಲ್ಲಿ ಆಟೊ ಚಾಲಕರು ಹಾಗೂ ಮಾಲೀಕರು ಪಾಲ್ಗೊಳ್ಳಲಿದ್ದಾರೆ. ಹೀಗಾಗಿ, ಆಟೊಗಳ ಸೇವೆ ಇರುವುದಿಲ್ಲ’ ಎಂದು ಪೀಸ್ ಆಟೊ ಒಕ್ಕೂಟದ ಅಧ್ಯಕ್ಷ ರಘು ತಿಳಿಸಿದ್ದಾರೆ.

ಕರವೇ ಪ್ರತ್ಯೇಕ: ಕರ್ನಾಟಕ ರಕ್ಷಣಾ ವೇದಿಕೆಯ ಟಿ.ಎ. ನಾರಾಯಣಗೌಡ ಬಣದಿಂದ ಮಂಗಳವಾರ ಬೆಳಿಗ್ಗೆ ಪ್ರತ್ಯೇಕ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಗಾಂಧಿನಗರದಲ್ಲಿ ಇರುವ ಸಂಘಟನೆಯ ಕಚೇರಿಯಿಂದ ವಿಧಾನ ಸೌಧದವರೆಗೆ ಮೆರವಣಿಗೆ ನಡೆಸಿ, ವಿಧಾನಸೌಧಕ್ಕೆ ಮುತ್ತಿಗೆ ಹಾಕುವುದಾಗಿ ಕರವೇ ತಿಳಿಸಿದೆ.

‘ಕಾವೇರಿ ನದಿ ವಿಚಾರವಾಗಿ ನಮ್ಮ ಹೋರಾಟ ನಿರಂತರ. ಜನರಲ್ಲಿ ಜಾಗೃತಿ ಮೂಡಿಸುವುದು ಮೊದಲ ಆದ್ಯತೆ. ಬಂದ್ ಮಾಡಿ ಜನಸಾಮಾನ್ಯರಿಗೆ ತೊಂದರೆ ನೀಡುವ ಉದ್ದೇಶ ನಮಗಿಲ್ಲ. ಬಂದ್ ಎಂಬುದು ಹೋರಾಟದ ಕೊನೆಯ ಅಸ್ತ್ರ. ಹೀಗಾಗಿ, ಯಾವುದೇ ಬಂದ್‌ಗೆ ನಮ್ಮ ಬೆಂಬಲವಿಲ್ಲ’ ಎಂದು ಟಿ.ಎ. ನಾರಾಯಣಗೌಡ ತಿಳಿಸಿದ್ದಾರೆ.

2ನೇ ಪುಟ ನೋಡಿ

ಸೆ. 29ರಂದು ಕರ್ನಾಟಕ ಬಂದ್

ಸೆ. 26ರಂದು ಬೆಂಗಳೂರು ಬಂದ್ ಬೆನ್ನಲ್ಲೇ ಸೆ. 29ರಂದು ಕರ್ನಾಟಕ ಬಂದ್‌ಗೂ ಕರೆ ನೀಡಲಾಗಿದ್ದು, ಅಂದು ಹಲವು ಸೇವೆಗಳಲ್ಲಿ ವ್ಯತ್ಯಯ ಉಂಟಾಗಲಿದೆ.

ಕನ್ನಡ ಸಂಘಟನೆಗಳ ಒಕ್ಕೂಟ ಬಂದ್‌ಗೆ ಕರೆ ನೀಡಿದೆ. ಕಾವೇರಿ ಜನ ಸಂರಕ್ಷಣಾ ಸಮಿತಿ ಕರೆ ನೀಡಿರುವ ಮಂಗಳವಾರದ ಬಂದ್‌ಗೆ ಬೆಂಬಲ ನೀಡದ ಹಲವು ಸಂಘಟನೆಗಳು, ಸೆ. 29ರ ಬಂದ್‌ಗೆ ಬೆಂಬಲ ಸೂಚಿಸಿವೆ.

‘ಕಾವೇರಿ ನದಿ ವಿಚಾರ ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ. ಇದು ರಾಜ್ಯದ ಹಕ್ಕು. ಜೊತೆಗೆ, ಮಹದಾಯಿ ಯೋಜನೆ, ಕೃಷ್ಣಾ ನದಿ ಯೋಜನೆಗಳು ಸಮರ್ಪಕವಾಗಿ ಜಾರಿಯಾಗಬೇಕು. ಈ ಎಲ್ಲ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯವ್ಯಾಪಿ ಹೋರಾಟದ ಅಗತ್ಯವಿದೆ. ಹೀಗಾಗಿ, ಕರ್ನಾಟಕ ಬಂದ್ ಮಾಡಲಾಗುತ್ತಿದೆ. ಹಲವು ಸಂಘಟನೆಗಳು ಈಗಾಗಲೇ ಬೆಂಬಲ ನೀಡಿವೆ. ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು’ ಎಂದು ಒಕ್ಕೂಟದ ಪದಾಧಿಕಾರಿಗಳು ತಿಳಿಸಿದರು.

ಸಂಘಟನೆಗಳಲ್ಲಿ ಒಡಕು: ಕಾವೇರಿ ನದಿ ನೀರಿಗಾಗಿ ನಡೆಯುತ್ತಿರುವ ಹೋರಾಟದ ವಿಚಾರದಲ್ಲಿ ಸಂಘಟನೆಗಳ ನಡುವೆ ಒಡಕು ಮೂಡಿದೆ.

ಕೆಲ ಸಂಘಟನೆಗಳು, ಮಂಗಳವಾರ ಬಂದ್ ನಡೆಸುತ್ತಿವೆ. ಇದಕ್ಕೆ ಬೆಂಬಲ ಸೂಚಿಸದ ಸಂಘಟನೆಗಳು, ಸೆ. 29ರಂದು ಬಂದ್ ಮಾಡುವುದಾಗಿ ಹೇಳುತ್ತಿವೆ. ಇದರಿಂದಾಗಿ ಜನರಲ್ಲಿ ಗೊಂದಲ ಮೂಡಿದೆ. ದಿನದ ದುಡಿಮೆ ನಂಬಿಕೊಂಡಿರುವ ಜನ, ‘ಎರಡು ಬಂದ್ ಬೇಕಿತ್ತಾ’ ಎಂದು ಪ್ರಶ್ನಿಸುತ್ತಿದ್ದಾರೆ.

‘ಮಾಲೀಕರು ಹಾಗೂ ಚಾಲಕರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಇಂಥ ಸಂದರ್ಭದಲ್ಲಿ ಎರಡು ದಿನ ಬಂದ್ ಮಾಡಿದರೆ, ಮತ್ತಷ್ಟು ಕಷ್ಟ ಎದುರಿಸಲಿದ್ದಾರೆ. ಹೀಗಾಗಿ 29ರ ಬಂದ್‌ಗೆ ಮಾತ್ರ ಬೆಂಬಲ’ ಎಂದು ಓಲಾ–ಉಬರ್ ಚಾಲಕರು ಹಾಗೂ ಮಾಲೀಕರ ಒಕ್ಕೂಟದ ಅಧ್ಯಕ್ಷ ತನ್ವೀರ್ ಪಾಷಾ ತಿಳಿಸಿದ್ದಾರೆ.

ಶಾಲೆ– ಕಾಲೇಜುಗಳಿಗೆ ರಜೆ

ಬೆಂಗಳೂರು: ಸೆ. 26ರಂದು ಬೆಂಗಳೂರು ಬಂದ್ ಹಿನ್ನೆಲೆಯಲ್ಲಿ ನಗರದ ಶಾಲೆ–ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ. ಈ ಬಗ್ಗೆ ಆದೇಶ ಹೊರಡಿಸಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್, ‘ಮಕ್ಕಳ ರಕ್ಷಣೆ ಹಾಗೂ ಸುರಕ್ಷತೆ ದೃಷ್ಟಿಯಿಂದ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ’ ಎಂದಿದ್ದಾರೆ.

ಬಹುತೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಬಂದ್ ದಿನ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿ ನಡೆಸುವುದಾಗಿ ಹೇಳಿಕೆ ನೀಡಿವೆ. ಮಂಗಳವಾರ ನಿಗದಿಯಾಗಿದ್ದ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು ನಗರ ವಿಶ್ವವಿದ್ಯಾಲಯಗಳು ಸಹ ತಮ್ಮ ವ್ಯಾಪ್ತಿಯ ಕಾಲೇಜುಗಳಿಗೆ ರಜೆ ನೀಡಿದ್ದು, ನಡೆಯಬೇಕಿದ್ದ ಪರೀಕ್ಷೆಗಳನ್ನು ಮುಂದೂಡಿವೆ.

ಇನ್ನಷ್ಟು ಸುದ್ದಿಗಳು 6

ಭಾರತಕ್ಕೆ ಬಂಗಾರ ಸಿಂಗಾರ

19th Asian Games Hangzhou 2022

ಚೀನಾದ ಹಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಸೋಮವಾರ ಭಾರತದ ಕ್ರೀಡಾಪಟುಗಳು ಎರಡು ಚಿನ್ನ, ನಾಲ್ಕು ಕಂಚು ಸೇರಿದಂತೆ ಒಟ್ಟು ಆರು ಪದಕಗಳನ್ನು ಗೆದ್ದುಕೊಂಡರು. ಚಿನ್ನದ ಪದಕಗಳು ಮಹಿಳೆಯರ ಟಿ20 ಕ್ರಿಕೆಟ್ ಮತ್ತು ಶೂಟಿಂಗ್‌ನಲ್ಲಿ ಬಂದವು.

ಚಿನ್ನ

ಶೂಟಿಂಗ್
ಪುರುಷರ 10 ಮೀಟರ್ಸ್ ಏರ್ ರೈಫಲ್ ತಂಡ ವಿಭಾಗ
ದಿವ್ಯಾಂಶ್ ಸಿಂಗ್, ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಮತ್ತು ರುದ್ರಾಂಕ್ಷ್ ಪಾಟೀಲ (ವಿಶ್ವದಾಖಲೆ)

ಮಹಿಳಾ ಟಿ20 ಕ್ರಿಕೆಟ್
ಹರ್ಮನ್‌ಪ್ರೀತ್ ಕೌರ್ ಬಳಗಕ್ಕೆ ಫೈನಲ್‌ನಲ್ಲಿ ಶ್ರೀಲಂಕಾ ವಿರುದ್ಧ 19 ರನ್‌ಗಳ ಗೆಲುವು
ಸ್ಕೋರ್: ಭಾರತ: 7ಕ್ಕೆ116 (20 ಓವರ್)
ಶ್ರೀಲಂಕಾ: 8ಕ್ಕೆ97 (20 ಓವರ್)

ಕಂಚು

ರೋಯಿಂಗ್
ಪುರುಷರ ಫೋರ್ ಸ್ಪರ್ಧೆ
ಜಸ್ವಿಂದರ್ ಸಿಂಗ್, ಭೀಮ್ ಸಿಂಗ್, ಪುನೀತ್ ಕುಮಾರ್ ಮತ್ತು ಆಶೀಷ್ ಗೂಲಿಯಾನ್
ಪುರುಷರ ಕ್ವಾಡ್ರಾಪಲ್ ಸ್ಕಲ್ಸ್ ವಿಭಾಗ
ಸತ್ನಾಮ್ ಸಿಂಗ್, ಪರ್ಮಿಂದರ್ ಸಿಂಗ್, ಜಾಕರ್ ಖಾನ್ ಮತ್ತು ಸುಖಮೀತ್ ಸಿಂಗ್

ಶೂಟಿಂಗ್
ಪುರುಷರ 10 ಮೀ. ಏರ್ ರೈಫಲ್ ವೈಯಕ್ತಿಕ ವಿಭಾಗ
ಐಶ್ವರಿ ಪ್ರತಾಪ್ ಸಿಂಗ್ ತೋಮರ್
ಪುರುಷರ 25 ಮೀ. ರ‍್ಯಾಪಿಡ್ ಫೈರ್ ತಂಡ ವಿಭಾಗ
ಆದರ್ಶ್ ಸಿಂಗ್, ಅನೀಶ್ ಭನ್ವಾಲಾ, ವಿಜಯವೀರ್ ಸಿಧು

ಪುಟ 11

ಕಾರ್ಯಕರ್ತರಿಗೆ ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷರ ‘ಸಲಹೆ’

ಪತ್ರಕರ್ತರಿಗೆ ಆತಿಥ್ಯದ ಆಮಿಷ

ಮುಂಬೈ (ಪಿಟಿಐ): ‘ಪತ್ರಕರ್ತರನ್ನು ಢಾಬಾಕ್ಕೆ ಕರೆದುಕೊಂಡು ಹೋಗಿ ಚೆನ್ನಾಗಿ ನೋಡಿಕೊಳ್ಳಿ, ಅವರು ನಮ್ಮ ವಿರುದ್ಧ ಏನನ್ನೂ ಬರೆಯಬಾರದು’ ಎಂದು ಮಹಾರಾಷ್ಟ್ರ ಬಿಜೆಪಿ ಮುಖ್ಯಸ್ಥ ಚಂದ್ರಶೇಖರ ಬಾವನಕುಳೆ ಹೇಳಿರುವ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇದರ ಬೆನ್ನಲ್ಲೇ, ಮಾಧ್ಯಮವನ್ನು ನಿಯಂತ್ರಿಸಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಬಿಜೆಪಿ ವಿರೋಧಿ ಪಕ್ಷಗಳು ಆರೋಪ ಮಾಡಿವೆ.

ಮತಗಟ್ಟೆ ನಿರ್ವಹಣೆಗೆ ಸಂಬಂಧಿಸಿ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಅಹಮದ್‌ನಗರದಲ್ಲಿ ಮಾತನಾಡುತ್ತಿದ್ದಾಗ ಚಂದ್ರಶೇಖರ ಹೀಗೆ ಹೇಳಿದ್ದಾರೆ.

ಆಡಿಯೊ ಸಂಚಲನ ಸೃಷ್ಟಿಸುತ್ತಿದ್ದಂತೆಯೇ ಚಂದ್ರಶೇಖರ ಅವರು ಸಮಜಾಯಿಷಿ ನೀಡಿದ್ದಾರೆ. ಪತ್ರಕರ್ತರನ್ನು ಗೌರವದಿಂದ ನಡೆಸಿಕೊಳ್ಳಬೇಕು ಎಂದಷ್ಟೇ ನಾನು ಹೇಳಿರುವುದರ ಉದ್ದೇಶ ಎಂದು ಅವರು ಹೇಳಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಮಾಧ್ಯಮಗಳು ವಿರೋಧಪಕ್ಷಗಳಾಗಿ ಕೆಲಸ ಮಾಡುತ್ತವೆ. ಅದನ್ನು ಹೇಗೆ ಹತ್ತಿಕ್ಕಬೇಕು ಎಂದು ಬಿಜೆಪಿ ಅಧ್ಯಕ್ಷರು ಪಾಠ ಮಾಡುತ್ತಿದ್ದಾರೆ
ಸುಪ್ರಿಯಾ ಸುಳೆ, ಎನ್‌ಸಿಪಿ ಸಂಸದೆ

ಕಾರ್ಯಕರ್ತರ ಜೊತೆಗೆ ಮಾತನಾಡುವಾಗ ಕೆಲವೊಂದು ಸಂಗತಿಗಳನ್ನು ಲಘುವಾದ ಶೈಲಿಯಲ್ಲಿಯೇ ಹೇಳಬೇಕಾಗುತ್ತದೆ
ದೇವೇಂದ್ರ ಫಡಣವೀಸ್
ಉಪ ಮುಖ್ಯಮಂತ್ರಿ

7ನೇ ಪುಟ ನೋಡಿ

ಒಳ ಪುಟ
ಎನ್‌ಡಿಎ ಮೈತ್ರಿ ಕಡಿದುಕೊಂಡ ಎಐಎಡಿಎಂಕೆ 7

ಚಿನಕುರಳಿ
ಪ್ರಕಾಶ್ ಶೆಟ್ಟಿ

ಮೊದಲ ಜನತಾ ದರ್ಶನ 6,684 ಅಹವಾಲು ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 29 ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಸೋಮವಾರ ನಡೆಸಿದ ಜನತಾ ದರ್ಶನದಲ್ಲಿ ಒಟ್ಟು 6,684 ಅಹವಾಲುಗಳು ಸಲ್ಲಿಕೆಯಾಗಿವೆ. 21 ಅಹವಾಲುಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಲಾಗಿದೆ.

‘ಗದಗ ಮತ್ತು ಬೆಳಗಾವಿ ಹೊರತುಪಡಿಸಿ ಉಳಿದ ಎಲ್ಲ ಜಿಲ್ಲೆಗಳಲ್ಲೂ ಜನತಾ ದರ್ಶನ ನಡೆಸಲಾಗಿದೆ. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಅತ್ಯಧಿಕ 2,100 ಅಹವಾಲುಗಳು ಬಂದಿವೆ. ನಂತರದ ಸ್ಥಾನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಗಳಿವೆ. ಒಟ್ಟು 6,663 ಅಹವಾಲುಗಳನ್ನು ವಿಲೇವಾರಿಗಾಗಿ ವಿವಿಧ ಇಲಾಖೆಗಳಿಗೆ ರವಾನಿಸಲಾಗಿದೆ’ ಎಂದು ಮುಖ್ಯಮಂತ್ರಿಯವರ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯಂತೆ ಪ್ರತಿ ತಿಂಗಳ 25ರಂದು ಎಲ್ಲ ಜಿಲ್ಲೆಗಳಲ್ಲೂ ಆಯಾ ಜಿಲ್ಲಾ ಉಸ್ತುವಾರಿ ಸಚಿವರು ಜನತಾ ದರ್ಶನ ನಡೆಸಲಿದ್ದಾರೆ. ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ-ನಿರ್ವಹಣಾ ಅಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದು ಜನರ ಅಹವಾಲು ಇತ್ಯರ್ಥಕ್ಕೆ ಕ್ರಮ ಕೈಗೊಳ್ಳುವ ಹೊಸ ಕಾರ್ಯಕ್ರಮ ಸೋಮವಾರದಿಂದ ಜಾರಿಗೆ ಬಂದಿದೆ.

774 ಅಹವಾಲುಗಳೊಂದಿಗೆ ಹಾವೇರಿ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಹಾಸನ (432) ಮತ್ತು ಕೋಲಾರ (423) ಜಿಲ್ಲೆಗಳಿವೆ. ಲಿಖಿತ ರೂಪದ ಅಹವಾಲುಗಳನ್ನು ಸ್ವೀಕರಿಸಿ, ದಾಖಲಿಸಿಕೊಳ್ಳಲಾಗಿದೆ. ಪರಿಹಾರಕ್ಕಾಗಿ ಸಂಬಂಧಿಸಿದ ಇಲಾಖೆಗಳಿಗೆ ರವಾನಿಸಲಾಗಿದೆ. ಮೌಖಿಕ ಅಹವಾಲುಗಳನ್ನೂ ಆಲಿಸಿ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿಯವರ ಸಚಿವಾಲಯ ತಿಳಿಸಿದೆ.

ಬೆಳೆ ಪರಿಹಾರ: ಸಾವಿರಾರು ಅರ್ಜಿ

ಹಾವೇರಿ ಜಿಲ್ಲೆಯಲ್ಲಿ ಬೆಳೆ ನಷ್ಟದಿಂದ ಸಂಕಷ್ಟ ಅನುಭವಿಸುತ್ತಿರುವ ಸಾವಿರಾರು ರೈತರು ಬೆಳೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಅಂತಹ ಅರ್ಜಿಗಳನ್ನು ಸ್ವೀಕರಿಸುವಾಗ ಸಮಸ್ಯೆಗಳಾಗಿವೆ. ಅವುಗಳನ್ನು ವೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಸಾಧ್ಯವಾಗಿಲ್ಲ ಎಂದು ಮುಖ್ಯಮಂತ್ರಿಯವರ ಸಚಿವಾಲಯ ತಿಳಿಸಿದೆ.

‘ಭೂಗಳ್ಳರನ್ನು ಪಕ್ಕದಲ್ಲಿ ಕೂರಿಸಿಕೊಂಡು ಜನತಾ ದರ್ಶನ’ ಎಂದ ಸಂಸದ

ಕೋಲಾರ: ಶಾಸಕ-ಸಂಸದ ಜಟಾಪಟಿ

ಪ್ರಜಾವಾಣಿ ವಾರ್ತೆ

ಕೋಲಾರ: ನಗರದಲ್ಲಿ ಸೋಮವಾರ ನಡೆದ ಜನತಾ ದರ್ಶನದ ವೇದಿಕೆಯಲ್ಲಿಯೇ ಬಂಗಾರಪೇಟೆಯ ಕಾಂಗ್ರೆಸ್ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಹಾಗೂ ಬಿಜೆಪಿ ಸಂಸದ ಎಸ್. ಮುನಿಸ್ವಾಮಿ ಕಿತ್ತಾಡಿಕೊಂಡಿದ್ದಾರೆ.

ಪರಸ್ಪರ ಅವಾಚ್ಯವಾಗಿ ನಿಂದಿಸಿಕೊಂಡು, ಕೈ ಕೈ ಮಿಲಾಯಿಸಲು ಮುಂದಾದ ಇಬ್ಬರನ್ನೂ ಪೊಲೀಸರು, ಅಧಿಕಾರಿಗಳು ಸಮಾಧಾನಪಡಿಸಿ-ದರು. ಶಾಸಕರ ಮೇಲೆ ಏರಿಹೋದ ಸಂಸದರನ್ನು ಪೊಲೀಸರು ವೇದಿಕೆಯಿಂದ ಎಳೆದೊಯ್ಯಬೇಕಾಯಿತು.

ಶಾಸಕ ಮತ್ತು ಸಂಸದರ ಜಟಾಪಟಿಗೆ ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಸೇರಿದ್ದ ಸಾವಿರಾರು ಜನರು, ಅಧಿಕಾರಿಗಳು ಸಾಕ್ಷಿಯಾದರು. ವೇದಿಕೆಯಲ್ಲಿದ್ದ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಹಾಗೂ ಶಾಸಕರು, ಇಬ್ಬರ ಈ ಕಿತ್ತಾಟವನ್ನು ತಡೆಯಲು ಸಾಧ್ಯವಾಗದೆ ಅಸಹಾಯಕರಾಗಿ ಕುಳಿತಿದ್ದರು.

ಜಟಾಪಟಿ ಶುರುವಾಗಿದ್ದು ಹೇಗೆ?: ಶ್ರೀನಿವಾಸಪುರದಲ್ಲಿ ಅರಣ್ಯ ಇಲಾಖೆ ಕೈಗೊಂಡಿರುವ ಒತ್ತುವರಿ ತೆರವು ಕಾರ್ಯಾಚರಣೆ ವಿರುದ್ಧ ಸಂಸದ ಮುನಿಸ್ವಾಮಿ ಅವರು ಸ್ಥಳೀಯ ರೈತ ಮುಖಂಡರ ಜೊತೆಗೂಡಿ ಸಚಿವರಿಗೆ ಅಹವಾಲು ಸಲ್ಲಿಸಲು ಬಂದಿದ್ದರು. ಈ ವೇಳೆ ಅವರು, ‘ಭೂಗಳ್ಳರನ್ನು ಪಕ್ಕದಲ್ಲಿ ಕೂರಿಸಿಕೊಂಡು ಸಚಿವರು ಜನತಾ ದರ್ಶನ ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

ಆ ಮಾತಿನಿಂದ ಕೆರಳಿ, ಕುರ್ಚಿಯಿಂದ ಮೇಲೆದ್ದ ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿ ಅವರು ವೇದಿಕೆಯಿಂದಲೇ, ‘ನಿಮ್ಮಪ್ಪ ಭೂಗಳ್ಳ, ಯಾರಿಗೆ ಹೇಳುತ್ತೀಯಾ ಮಗನೇ’ ಎಂದರು. ‘ಬಾಯಿಗೆ ಬಂದಂತೆ ಮಾತನಾಡಬೇಡ. ಶಾಸಕನಿಗೆ ಗೌರವಕೊಡು. ರೌಡಿ ರೀತಿ ವರ್ತಿಸುತ್ತೀಯಾ’ ಎಂದು ನಿಂದಿಸಿದರು.

ಇದರಿಂದ ಕೆಂಡಾಮಂಡಲವಾದ ಮುನಿಸ್ವಾಮಿ ವೇದಿಕೆ ಏರಿ, ಶಾಸಕರತ್ತ ನುಗ್ಗಿ ಹೋದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಮತ್ತು ಇತರ ಪೊಲೀಸ್ ಅಧಿಕಾರಿಗಳು ಮಧ್ಯೆ ಪ್ರವೇಶಿಸಿ ಸಂಸದರನ್ನು ತಡೆದು, ವೇದಿಕೆಯಿಂದ ಕೆಳಗೆ ಎಳೆದೊಯ್ದರು.

ಸಿಟ್ಟಿನಿಂದ ಕುದಿಯುತ್ತಿದ್ದ ಮುನಿಸ್ವಾಮಿ ಅವರು ಪೊಲೀಸರಿಂದ ಕೊಸರಿಕೊಂಡು ಮತ್ತೆ ಶಾಸಕರತ್ತ ನುಗ್ಗಿ ಹೋದರು. ‘ಭೂಗಳ್ಳರನ್ನು ಪಕ್ಕದಲ್ಲಿ ಕೂರಿಸಿಕೊಂಡು ಜನತಾ ದರ್ಶನ ಮಾಡುತ್ತೀರಾ ಎಂದಷ್ಟೇ ನಾನು ಕೇಳಿದೆ. ಯಾರ ಹೆಸರನ್ನೂ ಹೇಳಿಲ್ಲ. ಯಾರನ್ನೂ ಹೊಡೆಯಲು ಮುಂದಾಗಿಲ್ಲ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿನೋಡಿಕೊಳ್ಳುವುದು ಏಕೆ? ಅವಾಚ್ಯ ಶಬ್ದಗಳಿಂದ ನನ್ನನ್ನು ಏಕೆ ನಿಂದಿಸಿದೆ’ ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಕಾರ್ಯಕರ್ತರು ಸಂಸದರ ವಿರುದ್ಧ ಮುಗಿಬಿದ್ದರು.

ಸಚಿವ ಬೈರತಿ ಸುರೇಶ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಶಾಸಕ ಕೊತ್ತೂರು ಮಂಜುನಾಥ್, ವಿಧಾನ ಪರಿಷತ್ ಸದಸ್ಯ ಇಂಚರ ಗೋವಿಂದರಾಜು ಇಬ್ಬರನ್ನೂ ಸಮಾ-ಧಾನಪಡಿಸಲು ಯತ್ನಿಸಿ ಸೋತು, ಸುಮ್ಮನಾದರು.

ಸಮಸ್ಯೆ ಹೇಳಿಕೊಳ್ಳಲು ಬಂದಿದ್ದ ಸಾರ್ವಜನಿಕರು ಜನಪ್ರತಿನಿಧಿಗಳ ಜಗಳ ಕಂಡು ಕಕ್ಕಾಬಿಕ್ಕಿಯಾದರು.

ಕೋಲಾರದಲ್ಲಿ ಸೋಮವಾರ ಜನತಾದರ್ಶನದಲ್ಲಿ ವೇದಿಕೆ ಮೇಲೆ ಶಾಸಕ ಎಸ್‌ಎನ್‌ನಾರಾಯಣಸ್ವಾಮಿ ಹಾಗೂ ಸಂಸದ ಎಸ್‌ಮುನಿಸ್ವಾಮಿ ನಡೆದ ಜಟಾಪಟಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಜಾಗೃತಿ ಸಾಗರ್ ಆಸ್ಪತ್ರೆ ವತಿಯಿಂದ ವಿಶ್ವ ಹೃದಯ ದಿನಾಚರಣೆಯ ಪೂರ್ವಭಾವಿಯಾಗಿ ಹೃದಯ ಆರೋಗ್ಯ ಕುರಿತು ಜಾಗೃತಿ ಮೂಡಿಸಲು ನಗರದಲ್ಲಿ ಸೈಕ್ಲೋಥಾನ್ ಆಯೋಜಿಸಲಾಗಿತ್ತು. ಸುಮಾರು 500 ಸೈಕಲ್ ಸವಾರರು ಭಾಗವಹಿಸಿದ್ದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ • ಕೆಡಿಪಿ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗರಂ

‘ನಗರದ ಅವ್ಯವಸ್ಥೆ: ಅಧಿಕಾರಿಗಳೇ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರನ್ನು ವ್ಯವಸ್ಥಿತ ನಗರವನ್ನಾಗಿ ಬೆಳೆಸಲು ಒಂದು ಕಡೆ ಬಿಡಿಎ ಕಷ್ಟಪಡುತ್ತಿದೆ. ಜಿಲ್ಲಾ ಪಂಚಾಯಿತಿ ಸಹಿತ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಅವ್ಯವಸ್ಥಿತ ನಗರವನ್ನಾಗಿ ಸುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಿಡಿ ಕಾರಿದರು.

ಬನಶಂಕರಿಯಲ್ಲಿರುವ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ 2023-24ನೇ ಸಾಲಿನ ಮೊದಲ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಅವರು ಮಾತನಾಡಿದರು.

110 ಹಳ್ಳಿಗಳನ್ನು ನಗರಕ್ಕೆ ಹೊಸದಾಗಿ ಸೇರಿಸಲಾಗಿದೆ. ಅವುಗಳು ಅಭಿವೃದ್ಧಿಯಾಗದೇ ಅತಂತ್ರ ಸ್ಥಿತಿಯಲ್ಲಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಮಳೆ ಕೊರತೆಯಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಇದರ ನಿವಾರಣೆಗೆ ಕ್ರಮ ತೆಗೆದುಕೊಳ್ಳಬೇಕು. ನೀರಿಗಾಗಿ ನಾವು ಬಡಿದಾಡುತ್ತಾ ಇದ್ದೇವೆ. ಆದರೆ, ನಿಮ್ಮ ಬಳಿ ಮಾಹಿತಿಯೇ ಇಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 2023–24ನೇ ಸಾಲಿನ ಮೊದಲ ತ್ರೈಮಾಸಿಕ ಕೆಡಿಪಿ ಸಭೆ ನಡೆಸಿದರು

ಶುದ್ಧ ನೀರು ಪೂರೈಕೆ ಘಟಕಗಳು ಎಷ್ಟಿವೆ? ನಿತ್ಯ ಎಷ್ಟು ನೀರು ಪೂರೈಕೆ ಆಗುತ್ತಿದೆ. ಎಷ್ಟು ಜನ ಬಳಸುತ್ತಿದ್ದಾರೆ ಎಂಬ ವಿವರವೇ ನಿಮ್ಮ ಬಳಿ ಇಲ್ಲ. ಯಾವುದೇ ಸಿದ್ಧತೆ ಇಲ್ಲದೇ ಸಭೆಗೆ ಬಂದಿದ್ದೀರಿ ಎಂದು ಟೀಕಿಸಿದರು.

ಡೆಂಗಿ ಜ್ವರ, ಮಳೆ ಕೊರತೆ, ಬರ, ಕುಡಿಯುವ ನೀರು ಸಮಸ್ಯೆ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಪ್ರಾಣಿಗಳ ಸಾವು-ನೋವು ಹೀಗೆ ಯಾವುದೇ ವಿಚಾರಗಳ ಬಗ್ಗೆ ಒಬ್ಬರೂ ವರದಿ ನೀಡಿಲ್ಲ ಎಂದು ಬೇಸರಿಸಿದರು.

ಕಂದಾಯ ವಿಭಾಗದಲ್ಲಿನ ಮನೆ, ಜಮೀನು ಖಾತೆ ಮಾಡಿಕೊಡಲು ಕಿರುಕುಳ ನೀಡುತ್ತಿರುವುದು ಗಮನಕ್ಕೆ ಬಂದಿದೆ. ಕಂದಾಯ ನಿವೇಶನಗಳ ಹೆಚ್ಚಳಕ್ಕೂ ಅಧಿಕಾರಿಗಳು ಕುಮ್ಮಕ್ಕು ನೀಡುತ್ತಿದ್ದಾರೆ. ಹೊಸ ಸರ್ಕಾರ ಹೊಸ ಆಶಯಗಳೊಂದಿಗೆ ಕೆಲಸ ಮಾಡುತ್ತಿದೆ. ನೀವು ಅದರಂತೆ ಕೆಲಸ ಮಾಡಬೇಕು ಎಂದು ತಿಳಿಸಿದರು.

ರಸ್ತೆಬದಿಯಲ್ಲೇ ಕಸ ಸುರಿಯುತ್ತಿರುವವರ, ಎಲ್ಲೆಂದರಲ್ಲಿ ವೈದ್ಯಕೀಯ ತ್ಯಾಜ್ಯ ಹಾಕುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಜಿಲ್ಲಾಧಿಕಾರಿ, ಸಿಇಒ, ಪೊಲೀಸ್ ಅಧಿಕಾರಿಗಳು, ಆರ್ ಟಿಒ ಅಧಿಕಾರಿಗಳು, ಪಾಲಿಕೆ ಅಧಿಕಾರಿಗಳು ಸಭೆ ನಡೆಸಿ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ವರದಿ ನೀಡುವ ಸೌಜನ್ಯ ಇಲ್ಲವೇ: ಡಿಕೆಶಿ

ಪ್ರಮುಖ ಆಗುಹೋಗುಗಳ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ವರದಿ ಕೊಡಬೇಕೆಂಬ ಕನಿಷ್ಠ ಸೌಜನ್ಯ ನಿಮಗೆ ಇಲ್ಲವೇ? ನಿಮಗೆ ಹೇಳೋರು, ಕೇಳೋರು ಯಾರೂ ಇಲ್ಲ ಅಂತಾ ತಿಳಿದುಕೊಂಡಿದ್ದೀರಾ? ನಿಮ್ಮದೇ ಲೋಕದಲ್ಲಿ ವಿಹರಿಸುತ್ತೀರಿ. ಕೆಲಸ ಮಾಡೋ ಆಸಕ್ತಿ ಇಲ್ಲ ಅಂದರೆ ಜಾಗ ಖಾಲಿ ಮಾಡಿ ಎಂದು ಅಧಿಕಾರಿಗಳಿಗೆ ಡಿ.ಕೆ. ಶಿವಕುಮಾರ್ ಅವರು ಎಚ್ಚರಿಕೆ ನೀಡಿದರು.

‘ಸಭೆಗೆ ಗೈರಾದವರನ್ನು ಅಮಾನತು ಮಾಡಿ’

ಬೆಂಗಳೂರು ನಗರ ಜಿಲ್ಲೆ ಪಂಚಾಯಿತಿಯ ಕೆಡಿಪಿ ಸಭೆಗೆ ಗೈರಾದ ಅಧಿಕಾರಿಗಳ ಹೆಸರನ್ನು ಪಟ್ಟಿ ಮಾಡಿ. ನ್ಯಾಯಾಲಯದ ವಿಚಾರ ಬಿಟ್ಟು ಬೇರೆ ಕಾರಣಕ್ಕೆ ಬಾರದವರನ್ನೆಲ್ಲ ಅಮಾನತು ಮಾಡಿ ಎಂದು ಡಿ.ಕೆ. ಶಿವಕುಮಾರ್ ಅವರು ಸಿಇಒಗೆ ಸೂಚನೆ ನೀಡಿದರು.

ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ ಎಲ್ಲಿ ಎಂದು ಸಭೆಯ ಆರಂಭದಲ್ಲಿ ಉಪಮುಖ್ಯಮಂತ್ರಿ ಪ್ರಶ್ನಿಸಿದರು. ಅವರು ಹೊಸಕೋಟೆ ಜನತಾ ದರ್ಶನಕ್ಕೆ ಹೋಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಅವರನ್ನು ಅಮಾನತು ಮಾಡುವಂತೆ ತಿಳಿಸಿದರು. ಬಳಿಕ ಗೈರಾದ ಎಲ್ಲ ಅಧಿಕಾರಿಗಳನ್ನು ಅಮಾನತು ಮಾಡಲು ಸೂಚಿಸಿದರು.

ಇದು ತಿಳಿಯುತ್ತಿದ್ದಂತೆ ಕಾರ್ಯನಿರ್ವಾಹಕ ಎಂಜಿನಿಯರ್ ಜನತಾ ದರ್ಶನ ಬಿಟ್ಟು ವಾಪಸ್ಸಾದರು. ಆದ್ಯತೆ ಯಾವುದು ಎಂಬುದು ಗೊತ್ತಿಲ್ಲವೆ ಎಂದು ಡಿಸಿಎಂ ಪ್ರಶ್ನಿಸಿದರು. ರಸ್ತೆಬದಿ ಕಸ ಸುರಿಯಲು ಯಾಕೆ ಅವಕಾಶ ಮಾಡಿಕೊಟ್ಟಿದ್ದೀರಿ? ತಪ್ಪಿತಸ್ಥರ ವಿರುದ್ಧ ಯಾಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದ ಶಿವಕುಮಾರ್, ಕಸ ವಿಲೇವಾರಿ ಸಂಬಂಧ ಸಮಗ್ರ ವರದಿ ನೀಡುವಂತೆ ಸೂಚಿಸಿದರು.

ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ
(CIN:U40107KA2015PLCO79223)
ನಂ.6/13/1, ಕೆಆರ್ಇಡಿಎಲ್ ಬಿಲ್ಡಿಂಗ್, 5ನೇ ಮಹಡಿ, 10ನೇ ಬ್ಲಾಕ್, ನಾಗರಬಾವಿ, 2ನೇ ಹಂತ, ಬೆಂಗಳೂರು–560 072

ರದ್ದು ಪ್ರಕಟಣೆ

ಕೆ.ಎಸ್.ಪಿ.ಡಿ.ಸಿ.ಎಲ್. ವತಿಯಿಂದ ಪಾವಗಡದ ಇಂಟುರಾಯನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ 500ಮೆ.ವ್ಯಾ . ಸೋಲಾರ್ ಪಾರ್ಕ್‌ನ್ನು ಸ್ಥಾಪಿಸಲು ರೈತರ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು.

ಈ ದಿನಪತ್ರಿಕೆಯಲ್ಲಿ ದಿನಾಂಕ: 24.08.2023ರಂದು ಪ್ರಕಟವಾಗಿದ್ದ ಕೆಎಸ್‌ಪಿಡಿಸಿಎಲ್ ವತಿಯಿಂದ ಪಾವಗಡದ ಇಂಟುರಾಯನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ 500 ಮೆ.ವ್ಯಾ. ಸೋಲಾರ್ ಪಾರ್ಕ್‌ನ್ನು ಸ್ಥಾಪಿಸುವ ಉದ್ದೇಶದಿಂದ ರೈತರ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ರೈತರ ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದಾಗಿ ರದ್ದುಪಡಿಸಲಾಗಿದೆ.

ಸಹಿ/– ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ಕೆಎಸ್‌ಪಿಡಿಸಿಎಲ್

PUBLIC NOTICE

Public are hereby notified that we, Nexon Omniverse Limited (FORMERLY KNOWN AS ETHNICITY LIMITED) (“Lessee”) have entered into Memorandum of Understanding dated 05th August 2023 (“MOU”) with Mr. N. P. Raveendranath Naidu, Mrs. N.P. Renuka Naidu and Mr. N.P.Rishi Kiran (“Owners/Lessors”) whereunder the said Owners have agreed to grant on lease the entire commercial building situated at ‘Napa Prime’ consisting of Basement, ground floor plus three upper floors, located at No.7/24, 11th Main and No. 30, 12th Main, 4th Block East, Jayanagar, Bangalore - 560041 , for a period of 9 years to operate our retail brand **‘STYLE UNION’** and we have there under paid ₹ 13,75,000/- towards part of the Interest Free Refundable Security Deposit as per the terms of the MOU. However, the said owners are now resiling from their obligations under the MOU and negotiating to grant the property on lease to third parties.

Public are hereby cautioned not to enter into any lease or any other arrangement or agreement with the said Owner or any other person(s) in respect of the Schedule Property as the same will be illegal and not binding on us. We reserve our right to take appropriate legal recourse to protect our interest.

Schedule Properties
Schedule Property - 1
All that piece and parcel of Commercial Property bearing No.7/24, 11th Main, IV Block East Jayanagar, Bengaluru – 560011 comprising of land measuring East to West 60 Feet and North to South 39 Feet in all measuring 2340 Sq.ft with a commercial Building built thereon with Cellar, Ground First and Second Floros with a Built up Area of about 3800 Sq.ft and bounded by: East By: Private Property bearing Site No.30; West By: 11th Main Road: North By: Private Property bearing Site No.6; and South By: Private Property bearing Site No.8”
Schedule Property – 2
All that piece and parcel of the Immovable Property bearing Site No.30, Municipal No.46, Old PID No.60-136-46, New PID No.169-W0089-45, situated at 12th Main Road, 4th Block Jayanagar (East), Bangalore measuring East to West 60 Feet, North to South 39 Feet in all measuring 2340 Sq.ft and bounded by: East By :12th Main Road; West By: Site No.7: North By : Site No.31; and South By: Site No.29”

ಕ್ಷಣಕ್ಷಣದ ತಾಜಾ ಸುದ್ದಿಗಳಿಗಾಗಿ prajavani.net ನೋಡಿ

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. CAO/CN/BNC/145/2023 ದಿನಾಂಕ: 07.02.2023 ಕ್ಕೆ ತಿದ್ದುಪಡಿ–3

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಇಪಿಸಿ ಮೋಡ್‌ನಲ್ಲಿ ದೂರಸಂಪರ್ಕ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳು ಸೇರಿದಂತೆ ಧಾರವಾಡ–ಬೆಳಗಾವಿ ಹೊಸ ಮಾರ್ಗ ಯೋಜನೆ (73.10 ಕಿಮೀ) ಅಡಿಯಲ್ಲಿ ಕ್ಯಾರಕೊಪ್ಪ (ಹೊರತುಪಡಿಸಿ) (ಸಿಎಚ್: 6100) ಮತ್ತು ಮುಮ್ಮಿಗಟ್ಟಿ (ಸೇರಿದಂತೆ) (ಸಿಎಚ್ : 17800) (11.700 ಕಿಮೀ) ನಡುವೆ ಹೊಸ ಬ್ರಾಡ್ ಗೇಜ್ ಲೈನ್ ಟ್ರ್ಯಾಕ್ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: DWR-BGM-EPC-01).	ರೂ. 243,66,29,736/-

ಅಸ್ತಿತ್ವದಲ್ಲಿರುವ ಕೊನೆಯ ದಿನಾಂಕ: 05–10–2023, 11:00 ಗಂಟೆಯವರೆಗೆ

ಪರಿಷ್ಕೃತ ಕೊನೆಯ ದಿನಾಂಕ: 05–12–2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿಗಳು/ಬೆಂಗಳೂರು ಕಂಟೋನ್ಮೆಂಟ್

PUB/390/AAV/PRB/SWR/2023-24

S.W.Railways SWRRLY SWRRLY

ಬಿಎಂಐಸಿ: ನಾಳೆ ದುಂಡು ಮೇಜಿನ ಸಭೆ

ಬೆಂಗಳೂರು: ಬಿಎಂಐಸಿ ಯೋಜನೆಗೆ 1997ರಲ್ಲಿ ರೈತರ ಜಮೀನು ಸ್ವಾಧೀನಪಡಿಸಿಕೊಂಡ ನೈಸ್ ಕಂಪನಿಯ ದೌರ್ಜನ್ಯ ಹಾಗೂ ಭ್ರಷ್ಟಾಚಾರ ವಿರೋಧಿಸಿ ಇದೇ 27ರಂದು ಶಾಸಕರ ಭವನದಲ್ಲಿ ದುಂಡು ಮೇಜಿನ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ನೈಸ್ ಸಂತ್ರಸ್ತ ರೈತರ ಹೋರಾಟ ಸಮಿತಿ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಎನ್. ವೆಂಕಟಾಚಲಯ್ಯ, ‘ನೈಸ್ ಕಂಪನಿಯು ಬಡಾವಣೆ ಮತ್ತು ಹೆದ್ದಾರಿ ಅಭಿವೃದ್ಧಿಗೊಳಿಸಲು ರೈತರ ಜಮೀನು ಸ್ವಾಧೀನಪಡಿಸಿಕೊಂಡಿದೆ. ಆದರೆ, ಅಲ್ಲಿ ಅಭಿವೃದ್ಧಿ ಚಟುವಟಿಕೆ ಕೈಗೊಳ್ಳದೇ ಮೂಲ ಒಪ್ಪಂದವನ್ನು ಉಲ್ಲಂಘಿಸಿದೆ. ರೈತರಿಗೆ ಪರಿಹಾರ ನೀಡದೇ ಸಿವಿಲ್ ನ್ಯಾಯಾಲಯದ ನೋಟಿಸ್ ನೀಡುವ ಮೂಲಕ ಒಕ್ಕಲೆಬ್ಬಿಸುತ್ತಿದೆ’ ಎಂದು ದೂರಿದರು.

ಬಂದ್–ಸೂಕ್ತ ಕ್ರಮ: ಎಜಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಯಾವುದೇ ಶಾಂತಿಯುತ ಪ್ರತಿಭಟನಾ ಮೆರವಣಿಗೆ, ರ‍್ಯಾಲಿ ನಡೆಸಲು ಕೇವಲ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರವೇ ಅವಕಾಶವಿದೆ. ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕರ ಸಂಚಾರಕ್ಕೆ ಸಮಸ್ಯೆಯಾಗದಂತೆ ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುವುದು’ ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಭರವಸೆ ನೀಡಿದರು.

ಕಾವೇರಿ ನೀರು ಹಂಚಿಕೆ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ವಿವಿಧ ಸಂಘಟನೆಗಳು ಮಂಗಳವಾರ (ಸೆ.26) ಕರೆ ನೀಡಿರುವ ಬೆಂಗಳೂರು ಬಂದ್ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು’ ಎಂದು ಕೋರಿ ರವಿಕುಮಾರ್ ಕಂಚನಹಳ್ಳಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ಹಾಗೂ ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ‘ಮಂಗಳವಾರ (ಸೆ.26) ಕರೆ ನೀಡಲಾಗಿರುವ ಬಂದ್‌ಗೆ ಸಂಬಂಧಿಸಿದಂತೆ ಯಾವುದೇ ಅಹಿತಕರ ಘಟನೆ ನಡೆಯದಂತೆ ರಾಜ್ಯ ಸರ್ಕಾರ ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಂಡಿದೆ’ ಎಂದು ತಿಳಿಸಿದರು.

ಅರ್ಜಿದಾರರ ಪರ ವಕೀಲರಾದ ಜಿ.ಆರ್.ಮೋಹನ್ ಮತ್ತು ಸುನಿಲ್ ಎಸ್.ರಾವ್, ’ಬಂದ್ ವೇಳೆ ಆಸ್ಪತ್ರೆ, ಸಾರಿಗೆ ಮತ್ತು ಬಿಎಂಟಿಸಿ ಬಸ್ ಸಂಚಾರಕ್ಕೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ’ಬಂದ್ ಸಂದರ್ಭದಲ್ಲಿ ಸಾರ್ವಜನಿಕ ಜನಜೀವನ ಅಸ್ತವ್ಯಸ್ತವಾಗದಂತೆ, ಸರ್ಕಾರಿ ಹಾಗೂ ಖಾಸಗಿ ಆಸ್ತಿಪಾಸ್ತಿಗೆ ಹಾನಿಯಾಗದಂತೆ ಎಲ್ಲಾ ಸುರಕ್ಷತಾ ಕ್ರಮ ಕೈಗೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ಇಂತಹುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ 2020ರ ಫೆಬ್ರುವರಿ 20ರಂದು ಸರ್ಕಾರಕ್ಕೆ ಆದೇಶಿಸಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿದೆ. ಹೀಗಾಗಿ, ಈ ಬಗ್ಗೆ ಪ್ರತ್ಯೇಕವಾಗಿ ಯಾವುದೇ ನಿರ್ದೇಶನ ನೀಡುವ ಅನಿವಾರ್ಯತೆ ಇಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಿಲೇವಾರಿ ಮಾಡಿತು.

ಶಾಶ್ವತ ಸಂಕಷ್ಟ ಸೂತ್ರ ರಚಿಸಲು ಆಗ್ರಹ

ಬೆಂಗಳೂರು: ‘ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಮಧ್ಯೆ ಕಾವೇರಿ ನೀರು ಹಂಚಿಕೆ ವಿಚಾರದಲ್ಲಿನ ಸಮಸ್ಯೆಗೆ ಪರಿಹಾರ ದೊರಕಿಸಲು ಎರಡೂ ರಾಜ್ಯಗಳ ಹೊರಗಿನ ತಜ್ಞರನ್ನು ಒಳಗೊಂಡ ಸಮಿತಿಯನ್ನು ನೇಮಿಸಿ, ಶಾಶ್ವತ ಸಂಕಷ್ಟ ಸೂತ್ರ ರಚಿಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರನ್ನು ಆಗ್ರಹಿಸಿದ್ದಾರೆ.

ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಬರೆದಿರುವ ಅವರು, ‘ಕರ್ನಾಟಕದಲ್ಲಿ 123 ವರ್ಷಗಳಲ್ಲೇ ಅತಿ ಕಡಿಮೆ ಮಳೆಯಾಗಿದೆ. ಕುಡಿಯುವ ನೀರಿಗೂ ಸಮಸ್ಯೆ ಎದುರಾಗುವ ಪರಿಸ್ಥಿತಿ ತಲೆದೋರಿದೆ. ಕೃಷಿ ಮತ್ತು ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ. ಈ ಎಲ್ಲವನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ. ಕರ್ನಾಟಕ ಮತ್ತು ತಮಿಳುನಾಡು ಎರಡೂ ರಾಜ್ಯಗಳ ನೈಜ ಸ್ಥಿತಿಯನ್ನು ಅಧ್ಯಯನ ಮಾಡಬೇಕು. ತಮಿಳುನಾಡಿನಲ್ಲಿ ನೀರಿನ ಲಭ್ಯತೆ, ಬೆಳೆಯ ಪ್ರಮಾಣವನ್ನು ಪರಿಶೀಲಿಸಬೇಕು. ಇದಕ್ಕಾಗಿ ತಜ್ಞರ ತಂಡವನ್ನು ನೇಮಿಸಬೇಕು. ಕಾವೇರಿ ಕಣಿವೆಯ ನಾಲ್ಕು ರಾಜ್ಯಗಳ ಹೊರಗಿನ ತಜ್ಞರ ತಂಡವನ್ನು ನೇಮಿಸಿ, ವರದಿ ಪಡೆಯಬೇಕು. ಅದರ ಆಧಾರದಲ್ಲಿ ಸಂಕಷ್ಟ ಸೂತ್ರ ರಚಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಕೀಲರ ಸಂಘದ ಬೆಂಬಲ

ಬೆಂಗಳೂರು: ಕಾವೇರಿ ನೀರು ಹಂಚಿಕೆ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ವಿವಿಧ ಸಂಘಟನೆಗಳು ಮಂಗಳವಾರ (ಸೆ.26) ಕರೆ ನೀಡಿರುವ ಬೆಂಗಳೂರು ಬಂದ್‌ಗೆ ಬೆಂಗಳೂರು ವಕೀಲರ ಸಂಘ ಬೆಂಬಲ ವ್ಯಕ್ತಪಡಿಸಿದೆ.

ಈ ಕುರಿತಂತೆ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ‘ನಾಡಿನ ನೆಲ, ಜಲ ರಕ್ಷಣೆಯ ವಿಷಯದಲ್ಲಿ ಸಂಘವು ಸದಾ ಕನ್ನಡಿಗರ ಬೆಂಬಲಕ್ಕಿರುತ್ತದೆ‘ ಎಂದು ತಿಳಿಸಿದ್ದಾರೆ.

ಇಂದು ಬೆಂಗಳೂರು ಬಂದ್

ಒಂದನೇ ಪುಟದಿಂದ...

ಮೆಟ್ರೊ, ಕ್ಯಾಬ್ ಓಡಾಟ ಯಥಾಪ್ರಕಾರ: ನಮ್ಮ ಮೆಟ್ರೊ ಹಾಗೂ ಓಲಾ–ಉಬರ್ ಸೇರಿದಂತೆ ಇತರೆ ಕ್ಯಾಬ್‌ಗಳು ಯಥಾಪ್ರಕಾರ ಸಂಚರಿಸಲಿವೆ. ಸೆ. 26ರಂದು ಕರೆ ನೀಡಿರುವ ಬಂದ್‌ಗೆ ಕ್ಯಾಬ್ ಚಾಲಕರು ಹಾಗೂ ಮಾಲೀಕರ ಒಕ್ಕೂಟ ಬೆಂಬಲ ನೀಡಿಲ್ಲ. ಹೀಗಾಗಿ, ನಗರದಲ್ಲಿ ಕ್ಯಾಬ್‌ಗಳ ಸಂಚಾರವಿರಲಿದೆ.

ಬೀದಿಬದಿ ವ್ಯಾಪಾರಿಗಳಿಂದ ನೈತಿಕ ಬೆಂಬಲ: ‘ಸೆ. 26ರ ಬಂದ್‌ಗೆ ನೈತಿಕ ಬೆಂಬಲ ಮಾತ್ರ ನೀಡಲಾಗುತ್ತಿದೆ. ಬೀದಿಬದಿ ವ್ಯಾಪಾರ–ವಹಿವಾಟು ಯಥಾಪ್ರಕಾರ ಇರಲಿದೆ’ ಎಂದು ರಾಜ್ಯ ಬೀದಿಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಇ. ರಂಗಸ್ವಾಮಿ ತಿಳಿಸಿದ್ದಾರೆ.‘ರಾಜ್ಯದ ರೈತರು ಹಾಗೂ ಜೀವ-ಜಲದ ಹಿತದೃಷ್ಟಿಯಿಂದ ಕಾವೇರಿ ನದಿ ನೀರು ವಿಚಾರದ ಹೋರಾಟಕ್ಕೆ ನಮ್ಮ ಬೆಂಬಲವಿದೆ. ಕೈಗೆ ಕಪ್ಪುಪಟ್ಟಿ ಕಟ್ಟಿಕೊಂಡು ಪತ್ರಿಕೆ ವಿತರಣೆ ಮಾಡಲಿದ್ದೇವೆ’ ಎಂದು ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಂಗಮ್ ಸುರೇಶ್ ತಿಳಿಸಿದ್ದಾರೆ.

‘ಬಂದ್‌ಗಿಲ್ಲ ಅವಕಾಶ, ನಿಷೇಧಾಜ್ಞೆ ಜಾರಿ’

‘ಹೈಕೋರ್ಟ್ ಆದೇಶದನ್ವಯ ನಗರದಲ್ಲಿ ಪ್ರತಿಭಟನೆ ಹಾಗೂ ಬಂದ್‌ಗಳಿಗೆ ಅವಕಾಶವಿಲ್ಲ. ಸೆ. 26ರಂದು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಮಂಗಳವಾರ ರಾತ್ರಿ 12 ಗಂಟೆಯವರೆಗೆ ನಿಷೇಧಾಜ್ಞೆ ಜಾರಿಯಲ್ಲಿರಲಿದೆ. ಈ ಅವಧಿಯಲ್ಲಿ ಜನರು ಗುಂಪು ಸೇರುವುದು ಕಾನೂನು ಬಾಹಿರ. ಒತ್ತಾಯದಿಂದ ಬಂದ್ ಮಾಡಲು ಪ್ರಯತ್ನಿಸಿದರೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡಿದ್ದೇನೆ’ ಎಂದರು.

‘ಕೆಎಸ್‌ಆರ್‌ಪಿಯ 60 ತುಕಡಿ, ಸಿಎಆರ್‌ನ 40 ತುಕಡಿ ಸೇರಿದಂತೆ 3 ಸಾವಿರಕ್ಕೂ ಹೆಚ್ಚು ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳು, ಡಿಸಿಪಿಗಳು, ಎಸಿಪಿಗಳು, ಇನ್‌ಸ್ಪೆಕ್ಟರ್‌ಗಳು ಭದ್ರತೆ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ’ ಎಂದು ಹೇಳಿದರು.

‘ತಮಿಳುನಾಡಿನಿಂದ ನಗರಕ್ಕೆ ಬರುವ ಬಸ್‌ಗಳಿಗೆ ಭದ್ರತೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ತುರ್ತು ಸಂದರ್ಭದಲ್ಲಿ ಸಹಾಯ ಬೇಕಾದರೆ ಹಾಗೂ ಬಂದ್‌ಗೆ ಯಾರಾದರೂ ಒತ್ತಾಯಪಡಿಸಿದರೆ 112ಕ್ಕೆ ಕರೆ ಮಾಡಬಹುದು’ ಎಂದು ತಿಳಿಸಿದರು.

ಸಿರಿ ಪತ್ತಿನ ಸಹಕಾರ ಸಂಘ ನಿಯಮಿತ
ಶ್ರೀ ಬಸವೇಶ್ವರ ಕಾಂಪ್ಲೆಕ್ಸ್, ಇಂದಿರಾ ಕ್ಯಾಂಟೀನ್ ಎದುರು, ಕೊಳ್ಳೇಗಾಲ ರಸ್ತೆ
ಮಳವಳ್ಳಿ ಟೌನ್, ಮಳವಳ್ಳಿ–571430

ಸಿರಿ ಪತ್ತಿನ ಸಹಕಾರ ಸಂಘದ 2022–2023ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಮಳವಳ್ಳಿ ಪಟ್ಟಣದ ಅಂಬೇಡ್ಕರ್ ಭವನದಲ್ಲಿ 24–09–2023ನೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಏರ್ಪಡಿಸಲಾಗಿದ್ದು ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಘದ ಗೌರವಾನ್ವಿತ ನಿರ್ದೇಶಕರು ಹಾಗೂ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀಯುತ ಪ್ರಭುಲಿಂಗು ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀಯುತ ಬಿ ಸಿ ರಾಜಣ್ಣನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಯುತ ಪಿ ಎಂ ಪಳನಿ ಮುರುಗನ್‌ರವರು (ಪೂರಿಗಾಲಿ ಗ್ರಾಮ, ಮಳವಳ್ಳಿ ತಾಲ್ಲೂಕು), ಡೆಲ್ಲಿ ಫ್ರೀ ಸ್ಕೂಲ್ ನ ಸಂಸ್ಥಾಪಕರಾದ ಶ್ರೀಯುತ ಶ್ರೀಕಾಂತ್ ಸೀತಾರಾಮ್ ರವರು ಜಿಲ್ಲಾ ಪತ್ರ ಬರಹಗಾರರ ಸಂಘದ ಗೌರವಾನ್ವಿತ ನಿರ್ದೇಶಕರಾದ ಶ್ರೀಯುತ ಆರ್ ಸಿದ್ದರಾಜುರವರು ನಿವೃತ್ತ ಮುಖ್ಯೋಪಾಧ್ಯಾಯರು ಸಂಘದ ನಿರ್ದೇಶಕರಾದ ಎಂ ಆರ್ ಸಿದ್ದರಾಜುರವರು ಶ್ರೀನಿಧಿ ಸಂಸ್ಥೆಯ ಮಾಲೀಕರು ಟಿ ನರಸೀಪುರ ತಾಲೂಕಿನ ಮುಖಂಡರಾದ ಶ್ರೀಯುತ ಬಿ ಎಂ ಸತೀಶ್ ನಾಯಕ ರವರು ಮಾಜಿ ಗ್ರಾಮ ಪಂಚಾಯತಿ ಸದಸ್ಯರು ಮುಖಂಡರಾದ ಕಲ್ಕುಣಿ ಚಂದ್ರಪ್ಪನವರು ಹೋರಾಟಗಾರರು ಸಂಘದ ಉಪಾಧ್ಯಕ್ಷರಾದ ಮಹದೇವಸ್ವಾಮಿರವರು ಮಹಿಳಾ ಮುಖಂಡರು ಸಂಘದ ನಿರ್ದೇಶಕರಾದ ಶ್ರೀಮತಿ ಎಂ ಜಿ ಗಾಯತ್ರಿ ರವರು ಇಂದ್ರಮ್ಮನವರು ಎಂ ಡಿ ಶಂಕರ್ ರವರು ಶರತ್ಚಂದ್ರರವರು ಭಾಗವಹಿಸಿದ್ದರು

ಇದೇ ಸಂದರ್ಭದಲ್ಲಿ ಸಂಘದಲ್ಲಿ ನಿಶ್ಚಿತ ಠೇವಣಿಯನ್ನು ಹೂಡಿಕೆ ಮಾಡಿರುವ ಮಹನೀಯರುಗಳಿಗೆ ಸನ್ಮಾನವನ್ನು ನೆರವೇರಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಆರ್ ಭರಣಯ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾದ ಶ್ರೀಯುತ ಬಿ ಎಂ ಲಿಂಗರಾಜನವರು ನೆರವೇರಿಸಿದರು ಸ್ವಾಗತ ಭಾಷಣವನ್ನು ಸಂಘದ ಗೌರವಾನ್ವಿತ ನಿರ್ದೇಶಕರಾದ ಶ್ರೀಯುತ ಬಿ ಎಂ ಸತೀಶ್ ನಾಯಕರವರು ನೆರವೇರಿಸಿದರು ವಂದನಾರ್ಪಣೆಯನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಕುಮಾರಿ ಎನ್ ಸೌಮ್ಯರವರು ನೆರವೇರಿಸಿದರು ಅಂತಿಮವಾಗಿ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಬಿ. ಸಿ. ರಾಜಣ್ಣ
ಅಧ್ಯಕ್ಷರು
ಸಿರಿ ಪತ್ತಿನ ಸಹಕಾರ ಸಂಘ ನಿಯಮಿತ
ಮಳವಳ್ಳಿ ಟೌನ್, ಮಳವಳ್ಳಿ

ಪಿಎಚ್‌.ಡಿ ಪ್ರವೇಶ ಪರೀಕ್ಷೆ ಅಕ್ರಮ: ನೋಟಿಸ್ ಜಾರಿ

ಬೆಂಗಳೂರು: ‘ಪಿಎಚ್‌.ಡಿ ಪ್ರವೇಶಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯ ನಡೆಸಿರುವ ಪರೀಕ್ಷೆ ರದ್ದುಪಡಿಸಬೇಕು ಮತ್ತು ಕೌನ್ಸೆಲಿಂಗ್ ಪ್ರಕ್ರಿಯೆ ತಡೆಹಿಡಿಯಬೇಕು‘ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಬೆಂಗ ಳೂರು ವಿ.ವಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

‘ಪಿಎಚ್‌.ಡಿ ಪ್ರವೇಶ ಪರೀಕ್ಷೆಯಲ್ಲಿ ಅಕ್ರಮ ನಡೆದಿವೆ‘ ಎಂದು ಆರೋಪಿಸಿ ಎಸ್. ಆದಿ ಮಂಜುನಾಥ್ ಸೇರಿದಂತೆ 17 ಮಂದಿ ಅಭ್ಯರ್ಥಿಗಳು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಪಿಎಚ್‌.ಡಿ ಪ್ರವೇಶಾತಿ ಮತ್ತು ಕೌನ್ಸೆಲಿಂಗ್ ಪ್ರಕ್ರಿಯೆಯು ಈ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯ ನೀಡುವ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ‘ ಎಂದು ಸ್ಪಷ್ಟಪಡಿಸಿ ರುವ ನ್ಯಾಯಪೀಠ, ವಿ.ವಿ ಕುಲಪತಿ, ಆಡಳಿತ ಮತ್ತು ಮೌಲ್ಯಮಾಪನ ವಿಭಾಗದ ರಿಜಿಸ್ಟ್ರಾರ್‌ಗಳು ಸೇರಿದಂತೆ ಒಟ್ಟು 31 ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ನಗರದಲ್ಲಿ ಇಂದು

ಉದ್ಯೋಗ ಮೇಳ: ಉದ್ಘಾಟನೆ: ಮಹೇಂದ್ರನಾಥ್ ಪಾಂಡೆ, ಆಯೋಜನೆ: ಭಾರತೀಯ ಅಂಚೆ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 9.30

ವಾರ್ಷಿಕ ಸಾಮಾನ್ಯಸಭೆ: ವರ್ಚ್ಯುವಲ್ ಉದ್ಘಾಟನೆ: ನಿತಿನ್ ಗಡ್ಕರಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಬೈರತಿ ಸುರೇಶ್, ಅಧ್ಯಕ್ಷತೆ: ಬಿ.ವಿ. ಗೋಪಾಲ್ ರೆಡ್ಡಿ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಬೆಳಿಗ್ಗೆ 10.30

‘ಗ್ರ್ಯಾಂಡ್ ಮಾ ಹೋಮ್, ಹಂಗರ್ ಫ್ರೀ ವರ್ಲ್ಡ್’: ಉದ್ಘಾಟನೆ: ಲಕ್ಷ್ಮಿ ಹೆಬ್ಬಾಳ್ಕರ್, ಆಯೋಜನೆ: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್, ಸ್ಥಳ: ಬನಶಂಕರಿ 3ನೇ ಹಂತ, ಹೊಸಕೆರೆಹಳ್ಳಿ, ಬೆಳಿಗ್ಗೆ 11.30

ಕನ್ನಡದ ನಾಳೆಗಳಿಗಾಗಿ ಮಾತುಕತೆ: ಭಾಗವಹಿಸುವವರು: ಟಿ.ಎನ್. ವಾಸುದೇವಮೂರ್ತಿ, ಉಪಸ್ಥಿತಿ: ದಾ.ಪಿ. ಆಂಜನಪ್ಪ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿ, ಚಾಮರಾಜಪೇಟೆ, ಸಂಜೆ 5

ಪ್ರವಚನ ವಾಹಿನಿ: ‘ಭಾಗವತದ ಪಂಚಗೀತೆಗಳು’ ಕುರಿತ ಉಪನ್ಯಾಸ: ರಮಾ ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE This is to inform the General Public that my client Mrs. CHANDRIKA SUNDARRAMAN, W/O Mr.Janakiraman Sundarraman, Aged about 50 years, residing at B-110, Oman Topaz, Sarjapur Road, HSR Layout, Bangalore, lost the Original Sale Deed Document No. 5105/1997-98 dt.28.07.1997, while taking xerox in HSR Layout on 14.11.2022. Ref: Complaint #PO1796230600792 at the HSR Layout Police Station. Public is hereby notified that if anyone finds this document or has any person or persons asserting any rights, title, interest or claim in the property or any part thereof on the basis of the lost document have no semblance of rights, title or interest in the same shall be hand over to or bought to the notice of the advocate at the below mentioned address within 7days of this notice.
Sd/- RACHANA LAW ASSOCIATES No.2980, 17th Cross, Banashankari 2nd Stage, B'lore - 560070, Ph:9731333880
Date: 26/09/2023 Place: Bangalore

JOB OPPORTUNITIES

General

CAREER OFFER: For Retired Officials/ Bankers/ Self Employed/ Housewives/ IT Employees. Excellent Income/ Recognition & Reward. Contact:- 9448670516 Phone & WhatsApp.

DH ಪ್ರಜಾವಾಣಿ Classifieds JOB HUNT
More value, more impact
Get your HIRING NEEDS answered
Get the right people for your company...Book your Ad with us now !
www.dhclassifieds.com
BOOK NOW
For more details contact:
+91 9731810277
+91 9900428036
080- 45557163/164

ಕ್ಲಾಸಿಫೈಡ್ಸ್ ADMISSION CORNER

VIVEKANANDA INSTITUTE OF MANAGEMENT
An Institute of Janatha Education Society®
Affiliated to Bengaluru City University
As per NEP 2020
BCA | BBA
MBA | M.Com
PGCET B-323
CREATING BUSINESS LEADERS
College of Pharmacy
D.Pharm B.Pharm M.Pharm CET B060
2023-24 Admissions Open
Institute of Technology (VKIT)
BE: Bachelor of Engineering
Computer Science
Information Science
Artificial Intelligence & Machine Learning
Electronics & Communication
Mechanical & Civil - (Below CET Fee)
CET E087
95139 53480
95139 53482
Admission Center | Dr.Rajkumar Road, Next to Orion Mall, Rajajinagar II Stage, Bengaluru-560055

BUSINESS

Business Offers

Finance

WANTED BUSINESS
Partner Veg Hotel Investment 15 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

PERSONAL

Change of Name

SUMAN, WIFE/O 6495449K, HAV/ASH, MAHENDRA KUMAR, R/o Plot No. 16 Ganpati Hotel Ke Samne, Shushant City Ward No. 19 Lachhmangarh, Sikar, Rajasthan changed name from SUMAN to SUMAN KUMARI, 22/09/2023, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

2025ಕ್ಕೆ ಸಿದ್ಧಗೊಳ್ಳಲಿರುವ ಮೆಟ್ರೊ ಗುಲಾಬಿ ಮಾರ್ಗ • ₹ 5,925 ಕೋಟಿ ವೆಚ್ಚ

ಭೂಗತ ಮಾರ್ಗ: ಕಾಮಗಾರಿ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅತಿ ಉದ್ದದ ಭೂಗತ ಹಳಿಯನ್ನು ಹೊಂದಿರುವ ಮೆಟ್ರೊ ಗುಲಾಬಿ ಮಾರ್ಗದ ಕಾಮಗಾರಿ ವೇಗದಿಂದ ಸಾಗುತ್ತಿದೆ.

ಮೆಟ್ರೊ ರೈಲು ಮಾರ್ಗ ವಿಸ್ತರಣೆಗಾಗಿ ನಡೆಯುತ್ತಿರುವ ಸುರಂಗ ಮಾರ್ಗಗಳು ಮತ್ತು ಸುರಂಗ ನಿಲ್ದಾಣಗಳ ಕಾಮಗಾರಿಗಳು 2025ರ ಮಾರ್ಚ್ ಒಳಗೆ ಪೂರ್ಣಗೊಳಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೊಂದಿದ್ದಾರೆ.

ಹಂತ 2ರ ಯೋಜನೆಯಡಿ ರೀಚ್–6 ಮಾರ್ಗ ಇದಾಗಿದೆ. ಒಟ್ಟು ₹ 5,925 ಕೋಟಿ ವೆಚ್ಚದಲ್ಲಿ ನಾಲ್ಕು ಪ್ಯಾಕೇಜ್‌ಗಳಲ್ಲಿ ನಿರ್ಮಾಣಗೊಳ್ಳುತ್ತಿದೆ.

ಕಾಳೇನ ಅಗ್ರಹಾರದಿಂದ ನಾಗವಾರದವರೆಗೆ 21.26 ಕಿಲೋಮೀಟರ್ ಇದೆ. ಅದರಲ್ಲಿ ಕಾಳೇನ ಅಗ್ರಹಾರದಿಂದ ತಾವರೆ-ಕೆರೆವರೆಗೆ 7.5 ಕಿ.ಮೀ. ಎತ್ತರಿಸಿದ ಮಾರ್ಗ ನಿರ್ಮಾಣಗೊಳ್ಳುತ್ತಿದ್ದು, 6 ನಿಲ್ದಾಣಗಳಿವೆ. ಡೈರಿ ವೃತ್ತದಿಂದ ನಾಗವಾರದವರೆಗೆ 13.76 ಕಿ.ಮೀ. ಸುರಂಗ ಮಾರ್ಗ ನಿರ್ಮಾಣಗೊಳ್ಳುತ್ತಿ-ದೆ. ಅದರಲ್ಲಿ 12 ಸುರಂಗ ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ.

ಆರ್‌ಎಂಎಸ್, ಎಂ.ಜಿ ರಸ್ತೆ, ಶಿವಾಜಿನಗರ ನಿಲ್ದಾಣಗಳು ಶೇ 90ರಷ್ಟು ಪೂರ್ಣಗೊಂಡಿವೆ. ಡೈರಿ ಸರ್ಕಲ್, ಲಕ್ಕಸಂದ್ರ, ಲ್ಯಾಂಗ್‌ಫೋರ್ಡ್ ಸುರಂಗ ನಿಲ್ದಾಣಗಳ ಕಾಮಗಾರಿ ಶೇ 60ರಷ್ಟು ಆಗಿದೆ. ಕಂಟೋನ್ಮೆಂಟ್, ಪಾಟರಿಟೌನ್ ನಿಲ್ದಾಣಗಳು ಶೇ 85ರಷ್ಟು ಹಾಗೂ ಟ್ಯಾನರಿ ರಸ್ತೆ, ವೆಂಕಟೇಶಪುರ, ಕೆ.ಜಿ. ಹಳ್ಳಿ, ನಾಗವಾರ ನಿಲ್ದಾಣಗಳು ಶೇ 50ರಷ್ಟು ಮುಗಿದಿವೆ.

ಎರಡು ಮಾರ್ಗಗಳ ಸಂಯೋಜನೆ: ಎಂ.ಜಿ. ರಸ್ತೆಯಲ್ಲಿ ಸದ್ಯ ಇರುವ ನೇರಳೆ ಮಾರ್ಗದ ಮೆಟ್ರೊ ನಿಲ್ದಾಣ ಮತ್ತು ಈಗ ನಿರ್ಮಾಣಗೊಳ್ಳುತ್ತಿರುವ ಗುಲಾಬಿ ಮಾರ್ಗದ ನಿಲ್ದಾಣಗಳ ನಡುವೆ 50 ಮೀಟರ್ ಅಂತರ ಇದೆ. ಆದರೂ ಪ್ರಯಾಣಿಕರು ಮಾರ್ಗ ಬದಲಾಯಿಸಲು ಸುಲಭವಾಗುವಂತೆ ಯೋಜನೆ ರೂಪಿಸಲಾಗಿದೆ. ನೇರಳೆ ಮತ್ತು ಗುಲಾಬಿ ನಿಲ್ದಾಣಗಳ ನಡುವಿನ ಓಡಾಟಕ್ಕೆ ಪ್ರಯಾಣಿಕರು ಗೇಟ್ ದಾಟಿ ಹೋಗದಂತೆ ಈ ಯೋಜನೆ ರೂಪಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಮುಖ್ಯ ಎಂಜಿನಿಯರ್ ಸುಬ್ರಹ್ಮಣ್ಯ ಗುಡ್ಗೆ ತಿಳಿಸಿದ್ದಾರೆ.

2024ರ ಜೂನ್ ಒಳಗೆ ಈ ಮಾರ್ಗದ ಎಲ್ಲ ಸಿವಿಲ್, ಟ್ರ್ಯಾಕ್ ಅಳವಡಿಕೆ ಕಾರ್ಯಗಳನ್ನು ಪೂರ್ಣಗೊಳಿಸಿ, ಸಿಗ್ನಲಿಂಗ್ ಸಹಿತ ಇತರ ತಾಂತ್ರಿಕ ಕಾರ್ಯಗಳನ್ನು ಶುರು ಮಾಡಬೇಕು. 2025ರಲ್ಲಿ ಗುಲಾಬಿ ಮಾರ್ಗದಲ್ಲಿ ಮೆಟ್ರೊ ರೈಲು ಸಂಚರಿಸಬೇಕು ಎಂಬ ಗುರಿ ಇಟ್ಟುಕೊಂಡು ವೇಗವಾಗಿ ಕಾಮಗಾರಿ ನಡೆಸಲಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಕಂಟೋನ್ಮೆಂಟ್ ಬಳಿ ನಿರ್ಮಾಣಗೊಳ್ಳುತ್ತಿರುವ ಮೆಟ್ರೊ ನಿಲ್ದಾಣ –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ರೈಲು ರಿವರ್ಸ್‌ಗೆ ಅವಕಾಶ

6,930 ಚದರ ಮೀಟರ್ ವ್ಯಾಪ್ತಿಯನ್ನು ಹೊಂದಿರುವ ಪಾಟರಿ ಟೌನ್ ನಿಲ್ದಾಣವು ನಗರದ ಅತಿದೊಡ್ಡ ಮೆಟ್ರೊ ನಿಲ್ದಾಣವಾದರೆ, 4,356 ಚದರ ಮೀಟರ್ ವ್ಯಾಪ್ತಿಯ ಎಂ.ಜಿ. ರಸ್ತೆ ನಿಲ್ದಾಣವು ಎರಡನೇ ಅತಿ ದೊಡ್ಡದಾಗಿದೆ.

ಪಾಟರಿ ಟೌನ್ ನಿಲ್ದಾಣವು ರೈಲುಗಳನ್ನು ರಿವರ್ಸ್ ತೆಗೆಯಲು ಸಹಾಯ ಮಾಡುವ 'ಟರ್ನ್‌ಔಟ್ ಲೈನ್'ಗಳನ್ನು ಹೊಂದಿದೆ. ಎಂ.ಜಿ. ರಸ್ತೆ ನಿಲ್ದಾಣವು ಈಗ ಇರುವ ಎರಡು ಪ್ರವೇಶದ್ವಾರಗಳಲ್ಲದೇ ಕಬ್ಬನ್ ರಸ್ತೆಯ ಎಡ ಮತ್ತು ಬಲ ಬದಿಗಳಲ್ಲಿ ಎರಡು ಸೇರಿ ಒಟ್ಟು ನಾಲ್ಕು ಪ್ರವೇಶದ್ವಾರಗಳನ್ನು ಹೊಂದಿರಲಿದೆ.

ನಿಯಮ ಉಲ್ಲಂಘಿಸಿದ ಯುಟ್ಯೂಬರ್ ವಿರುದ್ಧ ಕ್ರಮ

ಬೆಂಗಳೂರು ಮೆಟ್ರೊದಲ್ಲಿ ಟಿಕೆಟ್ ಇಲ್ಲದೆ ಹೇಗೆ ಪ್ರಯಾ-ಣಿಸಬಹುದು ಎಂದು ಟಿಕೆಟ್ ಇಲ್ಲದೇ ಪ್ರಯಾಣಿಸಿ, ಅದರ ವಿಡಿಯೊವನ್ನು ಹಂಚಿಕೊಂಡಿರುವ ವಿದೇಶಿ ಯುಟ್ಯೂಬರ್ ಕ್ರಮವು ಟೀಕೆಗೆ ಗುರಿಯಾಗಿದೆ. ಯುಟ್ಯೂಬರ್ ವಿರುದ್ಧ ಕ್ರಮ ಕೈಗೊಳ್ಳಲು ಬಿಎಂಆರ್‌ಸಿಎಲ್ ಮುಂದಾಗಿದೆ.

ಸೈಪ್ರಸ್ ದೇಶದ ಯುಟ್ಯೂಬರ್ ಫಿಡಿಯಾಸ್ ಪನಾಯೊಟೌ ಬೆಂಗಳೂರಿನ ಗ್ರೀನ್ ಲೈನ್ ಮೆಟ್ರೊದಲ್ಲಿ ಟಿಕೆಟ್ ಪಡೆಯದೆ ಗೇಟ್ ದಾಟಿ (ಹಾರಿ) ಪ್ರಯಾಣಿಸಿ, ಅದನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು.

'ನಿಯಮ ಉಲ್ಲಂಘಿಸಿದ್ದಲ್ಲದೇ ಸಮಾಜಕ್ಕೆ ತಪ್ಪು ಸಂದೇಶ ಸಾರಿರುವ ವಿದೇಶಿ ಯುಟ್ಯೂಬರ್ ವಿರುದ್ಧ ಸುರಕ್ಷತಾ ವಿಭಾಗದ ಅಧಿಕಾರಿಗಳು ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುತ್ತಿದ್ದಾರೆ' ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕ ಅಧಿಕಾರಿ ಯಶವಂತ್ ಚವಾಣ್ ತಿಳಿಸಿದ್ದಾರೆ.

ಬ್ಯಾಕ್ ಫ್ಲಿಪ್ ಮಾಡಲು ಹೋಗಿ ಬಿದ್ದ ಯುವಕ: ಮೆಟ್ರೊ ರೈಲಿನಲ್ಲಿ ಪ್ರಯಾಣಿಸುವ ವೇಳೆ ಪ್ರಯಾಣಿಕರ ಗಮನ ಸೆಳೆಯಲು ಯುವಕನೊಬ್ಬ ಬ್ಯಾಕ್ ಫ್ಲಿಪ್ ಮಾಡಲು ಹೋಗಿ ಆಯ ತಪ್ಪಿ ಬಿದ್ದಿರುವ ವಿಡಿಯೊ ಹರಿದಾಡಿದೆ.

'ಮೆಟ್ರೊ ಮೇ ಚೋಟ್ ಲಗ್ ಗಯಿ ಗಯ್ಸ್' (ನಾನು ಮೆಟ್ರೊದಲ್ಲಿ ಗಾಯಗೊಂಡಿದ್ದೇನೆ ಹುಡುಗರೇ) ಎಂದು ಚಮನ್ ಫ್ಲಿಪ್ಪರ್ (CHAMAN_FLIPPER) ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿರುವ ವಿಡಿಯೊ ಚರ್ಚೆಗೆ ಒಳಗಾಗಿದೆ. ಮೆಟ್ರೊದಲ್ಲಿ ಯಾಕೆ ಈ ಸಾಹಸ ಮಾಡಲು ಹೋಗಿದ್ದೀರಿ ಎಂದು ಅನೇಕರು ಪ್ರಶ್ನಿಸಿದ್ದಾರೆ.

ವಾರ್ಡ್ ಪುನರ್ ವಿಂಗಡಣೆಯ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ಡ್‌ವಾರು ಕ್ಷೇತ್ರ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯ-ಕ್ಷತೆಯಲ್ಲಿ ರಚಿಸಲಾಗಿದ್ದ ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸುಗ-ಳನ್ನು ಸರ್ಕಾರವು ಒಪ್ಪಿರುತ್ತದೆ ಹಾಗೂ ಬಿಬಿಎಂಪಿ ಅಧಿನಿಯಮ– 2020ರ ಕಲಂ 7ರ ಅನ್ವಯ ಅಧಿಕಾರವನ್ನು ಚಲಾಯಿಸಿ, 2011ರ ಜನಗಣತಿಯ ಆಧಾರದ ಮೇರೆಗೆ ವಾರ್ಡ್ ವಾರು ಕ್ಷೇತ್ರ ಪುನರ್ ವಿಂಗಡಣೆಯನ್ನು ಅಂತಿಮಗೊ-ಳಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ವಾರ್ಡ್‌ಗಳ ಸಂಖ್ಯೆ 225 ಆಗಿದ್ದು, ವಾರ್ಡ್‌ಗಳ ಹೆಸರು ಮತ್ತು ವ್ಯಾಪ್ತಿಯನ್ನು ನಿಗದಿಪಡಿಸಲಾಗಿದೆ.

ಪ್ರದೇಶ ಪುನರಾವರ್ತನೆ: ಅಂತಿಮ ಅಧಿಸೂಚನೆಯಲ್ಲಿ ಕೆಲವು ಪ್ರದೇಶಗಳು ಪುನರಾವರ್ತನೆಯಾಗಿವೆ. 188ನೇ ವಾರ್ಡ್‌ನಲ್ಲಿ (ಯಡಿಯೂರು) ಇರುವ ಪ್ರದೇಶಗಳೇ 189ನೇ ವಾರ್ಡ್‌ನಲ್ಲಿವೆ. ಕಾಂಗ್ರೆಸ್‌ಗೆ ಸೇರ್ಪಡೆಯಾಗಿರುವ ಬಿಜೆಪಿಯ ಮಾಜಿ ಪಾಲಿಕೆ ಸದಸ್ಯರಿಗೆ ಅನುಕೂಲ ಮಾಡಿಕೊಡಲು ಪದ್ಮನಾ-ಭನಗರ, ಕೆ.ಆರ್.ಪುರ, ಜಯನಗರ, ಯಶವಂತಪುರ ಸಹಿತ ಹಲವು ವಾರ್ಡ್‌ಗಳಲ್ಲಿ ಬೂತ್‌ಗಳನ್ನು ಬದಲಾ-ಯಿಸಲಾಗಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕ ಅಧ್ಯಕ್ಷ ರಮೇಶ್ ಎನ್. ಆರ್. ರಮೇಶ್ ಆರೋಪಿಸಿದ್ದಾರೆ.



ನಗರದ ಡೈರಿ ವೃತ್ತದಲ್ಲಿರುವ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಎದುರು ಸೋಮವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಟ್ಟಡ ನಿರ್ಮಾಣ ಕಾರ್ಮಿಕರು ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

ಶೈಕ್ಷಣಿಕ ಸಹಾಯಧನ ಬಿಡುಗಡೆಗೆ ಆಗ್ರಹಿಸಿ ಕಾರ್ಮಿಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಸಹಾಯ-ಧನವನ್ನು ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿ ಕಟ್ಟಡ ನಿರ್ಮಾಣ ಕಾರ್ಮಿಕರು, ಡೈರಿ ವೃತ್ತದಲ್ಲಿರುವ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಒಕ್ಕೂಟದ ವತಿಯಿಂದ ಈ ಪ್ರತಿಭಟನೆ ಹಮ್ಮಿಕೊ-ಳ್ಳಲಾಗಿತ್ತು.

'2021–22ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿರುವ 1.5 ಲಕ್ಷ ಫಲಾನುಭವಿಗಳಿಗೆ ಇದುವರೆಗೂ ಸಹಾಯಧನ ನೀಡಿಲ್ಲ. 2022–23ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಯಾರಿಗೂ ಸಹಾಯಧನ ಬಿಡುಗಡೆ ಮಾಡಿಲ್ಲ. 2023–24ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಿ ನಾಲ್ಕು ತಿಂಗಳಾದರೂ ಇನ್ನೂ ಅರ್ಜಿ ಕರೆದಿಲ್ಲ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಶೈಕ್ಷಣಿಕ ಸಹಾಯಧನ ಬಿಡುಗಡೆಗೆ ಹಣದ ಕೊರತೆ ಇದೆ ಎಂದು ಹೇಳಲಾಗುತ್ತಿದೆ. ಆದರೆ, ಟ್ಯಾಬ್, ಲ್ಯಾಪ್‌ಟಾಪ್, ಸ್ಕೂಲ್ ಕಿಟ್ ಖರೀದಿಸಲಾಗಿದೆ. ಖರೀದಿಗೆ ಮಾತ್ರ ಹಣ ಇದೆಯೇ' ಎಂದು ಪ್ರಶ್ನಿಸಿದರು.

'ಹಿಂದಿನ ಸರ್ಕಾರವು ಕಳಪೆ ಗುಣಮಟ್ಟದ, ಬಳಕೆಗೆ ಯೋಗ್ಯವಲ್ಲದ ಕಿಟ್‌ಗಳನ್ನು ದುಬಾರಿ ಬೆಲೆ ಕೊಟ್ಟು ಖರೀದಿಸಿದೆ. ರೇಷನ್ ಕಿಟ್, ಬೂಸ್ಟರ್ ಕಿಟ್, ಟ್ರೇಡ್‌ವಾರು ಟೂಲ್ ಕಿಟ್, ಸೇಫ್ಟಿಕಿಟ್, ಇನ್ನೋವಾ ಕಾರು, ಟಿ.ವಿ ಹೀಗೆ ಕಾರ್ಮಿಕರು ಕೇಳದ್ದನ್ನೆಲ್ಲ ಖರೀ-ದಿಸಲಾಗಿತ್ತು. ಆದರೆ, ಮಕ್ಕಳ ಕಲಿಕೆಗೆ ಬೇಕಾದ ಸಹಾಯಧನವನ್ನು ಮಾತ್ರ ಬಿಡುಗಡೆ ಮಾಡಿರಲಿಲ್ಲ. ಹಿಂದಿನ ಸರ್ಕಾರದ ಖರೀದಿಯನ್ನು ತನಿಖೆಗೆ ಒಳಪಡಿಸಬೇಕು. ಹಿಂದಿನ ಬಾಕಿ ಸಹಾಯಧನವನ್ನು ಮತ್ತು ಈ ವರ್ಷದ ಸಹಾಯಧನವನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

28ರಿಂದ ಛಾಯಾಚಿತ್ರ ಪ್ರದರ್ಶನ

ಬೆಂಗಳೂರು: ನಿವೃತ್ತ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿ-ಕಾರಿ ಎಂ.ಎನ್. ಜಯಕುಮಾರ್ ಅವರ 'ಎನ್‌ಕೌಂಟರ್ಸ್ ಇನ್ ದಿ ವೈಲ್ಡ್ 2.0' ವನ್ಯಜೀವಿ ಛಾಯಾಚಿತ್ರ ಪ್ರದರ್ಶನವು ಇದೇ 28ರಿಂದ ಅಕ್ಟೋಬರ್ 8ರವರೆಗೆ ನಗರದ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯಲಿದೆ.

ಅರಣ್ಯ ಸಚಿವ ಈಶ್ವರ್ ಖಂಡ್ರೆ ಪ್ರದರ್ಶನ ಉದ್ಘಾಟಿಸಲಿದ್ದಾರೆ. ಅರಣ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಜಾವೇದ್ ಅಖ್ತರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜೀವ್ ರಂಜನ್, ವನ್ಯಜೀವಿ ವಿಭಾಗದ ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುಭಾಷ್ ಕೆ. ಮಾಲ್ಖೇಡೆ, ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತ ವನ್ಯಜೀವಿ ಚಲನಚಿತ್ರ ನಿರ್ಮಾಪಕ ಸುಬ್ಬಯ್ಯ ನಲ್ಲ ಮುತ್ತು, ಕರ್ನಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀಕೃಷ್ಣನ್ ಎಚ್., ಪಿಗ್ಮೇಲಿಯನ್ ವೆಲ್ತ್‌ನ ಸಂಸ್ಥಾಪಕ ವೆಂಕಟೇಶ್ವರನ್ ರಾಮನನ್, ಚಿತ್ರಕಲಾ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಶಶಿಧರ ಪಾಲ್ಗೊಳ್ಳಲಿದ್ದಾರೆ

ಆಯುಷ್ ಕೋರ್ಸ್ ಶುಲ್ಕ ಹೆಚ್ಚಳಕ್ಕೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಷ್ ಕೋರ್ಸ್‌ನ ಪ್ರವೇಶ ಶುಲ್ಕವನ್ನು ಶೇ 25ರಷ್ಟು ಹೆಚ್ಚಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಖಂಡಿಸಿದೆ.

ಖಾಸಗಿ ಕಾಲೇಜುಗಳ ಸರ್ಕಾರಿ ಕೋಟಾ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ₹60 ಸಾವಿರ ಇದ್ದ ಪ್ರವೇಶ ಶುಲ್ಕವನ್ನು ₹75 ಸಾವಿರಕ್ಕೆ ಏರಿಕೆ ಮಾಡಲಾಗಿದೆ. ಬಡ ಪ್ರತಿಭಾವಂತ ವಿದ್ಯಾರ್ಥಿಗಳ-ನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವ ಈ ಶುಲ್ಕ ಹೆಚ್ಚಳವನ್ನು ಈ ಕೂಡಲೇ ರಾಜ್ಯ ಸರ್ಕಾರ ಹಿಂಪಡೆಯಬೇಕೆಂದು ಆಗ್ರಹಿಸಿದೆ.

ಬೆಳ್ಳಿ ಪ್ರಶಸ್ತಿ

ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯಾ (ಕ್ಯೂಸಿಎಫ್‌ಐ) ಬೆಂಗಳೂರು ಚಾಪ್ಟರ್ ಆಯೋಜಿಸಿದ್ದ 32ನೇ ಸಮಾವೇಶದಲ್ಲಿ 'ಚಾಪ್ಟರ್ ಕನ್ವೆನ್ಷನ್ ಆನ್ ಕ್ವಾಲಿಟಿ ಕಾನ್‌ಸೆಪ್ಟ್'ನಲ್ಲಿ (ಸಿಸಿಕ್ಯೂಸಿ) ಟಿಪಿಎಂಎಲ್ ಪ್ರೊಡಕ್ಷನ್ ತಂಡವು ಬೆಳ್ಳಿ ಪ್ರಶಸ್ತಿ ಪಡೆದುಕೊಂಡಿದೆ. (ಎಡದಿಂದ) ನಿರ್ವಹಣಾ ವಿಭಾಗದ ವ್ಯವಸ್ಥಾಪಕ ಜಿ.ಕೆ. ಗಣೇಶನ್, ಮೆಕ್ಯಾನಿಕಲ್ ಮೇಂಟೆನೆನ್ಸ್ ವಿಭಾಗದ ಲೋಹಿತ್ ಕೊರವರ್, ಪ್ರೊಡಕ್ಷನ್ ವಿಭಾಗದ ಎಜಿಎಂ ಮತ್ತು ತಂಡದ ಮುಖ್ಯಸ್ಥ ಲೋಕನಾಥ ಜಿ., ಪ್ರೊಡಕ್ಷನ್ ವಿಭಾಗದ ವ್ಯವಸ್ಥಾಪಕ ಕೆ. ಸುರೇಶ್ ಕುಮಾರ್, ಎಲೆಕ್ಟ್ರಿಕಲ್ ನಿರ್ವಹಣಾ ವಿಭಾಗದ ವ್ಯವಸ್ಥಾಪಕ ಎಸ್.ಎನ್. ನಾಗಭೂಷಣ ಇದ್ದಾರೆ

ಶಾಮನೂರಿಗೆ 'ಹಾನಗಲ್ ಕುಮಾರೇಶ್ವರ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಶಾಮನೂರು ಶಿವಶಂಕರಪ್ಪ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರು ಜಿಲ್ಲಾ ಘಟಕದಿಂದ ನೀಡುವ 'ಹಾನಗಲ್ ಕುಮಾರೇಶ್ವರ ಪ್ರಶಸ್ತಿ'ಗೆ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಆಯ್ಕೆಯಾಗಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಗರ ಘಟಕದ ಅಧ್ಯಕ್ಷ ಎಸ್. ಗುರುಸ್ವಾಮಿ, 'ಪ್ರಶಸ್ತಿಯು ₹51 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. 2022–23ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕಿಂತ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು' ಎಂದು ತಿಳಿಸಿದರು.

ಇದೇ 28ರಂದು ಆನಂದ ರಾವ್ ವೃತ್ತದ ಹತ್ತಿರುವ ಇರುವ ಜಗದ್ಗುರು ರೇಣುಕಾಚಾರ್ಯ ಮಹಾವಿದ್ಯಾಲ-ಯದ ಷರಾಫ್ ಬಸಪ್ಪ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಶಿವಮೊಗ್ಗ ಜಿಲ್ಲೆಯ ಹೊಸನಗರದ ಮೂಲೇ-ಗದ್ದೆಮಠದ ಚನ್ನಬಸಪ್ಪ ಸ್ವಾಮೀಜಿ, ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ, ಮಹಾಸಭೆಯ ಉಪಾಧ್ಯಕ್ಷ ಎನ್. ತಿಪ್ಪಣ್ಣ, ಪ್ರಧಾನ ಕಾರ್ಯದರ್ಶಿ ಈಶ್ವರ್ ಬಿ. ಖಂಡ್ರೆ, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್ ಭಾಗವಹಿಸಲಿದ್ದಾರೆ.

ನಿಧನ ವಾರ್ತೆ

ಡಿ.ಎಸ್.ಉಮೇಶ್

ರಾಜರಾಜೇಶ್ವರಿನಗರ: ಲೋಕೋಪಯೋಗಿ ಇಲಾಖೆಯ ನಿವೃತ್ತ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಡಿ.ಎಸ್. ಉಮೇಶ್ (65) ನಿಧನರಾದರು. ಸರ್ಕಾರಿ ಕರ್ತವ್ಯದಿಂದ ಸ್ವಯಂ ನಿವೃತ್ತಿ ಪಡೆದ ಬಳಿಕ ವಕೀಲರಾಗಿ ವೃತ್ತಿ ಆರಂಭಿಸಿದ್ದರು.

ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಚಾಮರಾಜಪೇಟೆಯ ವೀರಶೈವ ರುದ್ರಭೂಮಿಯಲ್ಲಿ ಸೋಮವಾರ ನೆರವೇರಿತು.

ಹೊಸ ಮದ್ಯದಂಗಡಿ ಪರವಾನಗಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಹೊಸ ಮದ್ಯದ ಅಂಗಡಿಗಳಿಗೆ ಪರವಾನಗಿ ನೀಡುವಂತೆ ಅಬಕಾರಿ ಇಲಾಖೆ ಸಲ್ಲಿಸಿರುವ ಪ್ರಸ್ತಾವನೆಗೆ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಖಂಡಿಸಿದೆ.

'ಗ್ರಾಮ ಪಂಚಾಯಿತಿಗಳು ಹಾಗೂ ನಗರಗಳಲ್ಲಿನ ಸೂಪರ್ ಮಾರುಕಟ್ಟೆಗಳಲ್ಲಿ ಹೊಸ ಮತ್ತು ಬಳಕೆಯಲ್ಲಿ ಇಲ್ಲದ ಪರವಾನಗಿಗಳಿಗೆ ಮರುಜೀವ ನೀಡುವಂತೆ ಅಬಕಾರಿ ಇಲಾಖೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿ ಸಿದೆ. ಈ ಜನವಿರೋಧಿ ಪ್ರಸ್ತಾವನೆಯನ್ನು ಕೂಡಲೇ ಕೈಬಿಡಬೇಕು' ಎಂದು ಎಐಎಂಎಸ್‌ಎಸ್‌ನ ರಾಜ್ಯ ಕಾರ್ಯದರ್ಶಿ ಶೋಭಾ ಎಸ್ ಆಗ್ರಹಿಸಿದ್ದಾರೆ.

'ಈಗಾಗಲೇ ಮದ್ಯಪಾನ ದುಶ್ಚಟದಿಂದ ಹಲವಾರು ಕುಟುಂಬಗಳು ಬೀದಿಪಾಲಾಗಿವೆ. ಒಂದೆಡೆ ಬೆಲೆ ಏರಿಕೆ, ಬಡತನ, ನಿರುದ್ಯೋಗ ಸಮಸ್ಯೆಯಿಂದ ಜನಜೀವನ ತತ್ತರಿಸುತ್ತಿದೆ. ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ, ಕುಟುಂಬ ಕಲಹಗಳಿಗೆ ಕಾರಣವಾಗುವ ಮದ್ಯಪಾನಕ್ಕೆ ಎಡೆ ಮಾಡಿಕೊಡು-ತ್ತಿರುವ ಸರ್ಕಾರ ನಡೆ ಮಹಿಳಾ ಸಮುದಾಯ ಮತ್ತು ಪ್ರಜ್ಞಾವಂತರು ಖಂಡಿಸಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೇಮ ಕುಶಲ

ಅಲ್ಝೀಮರ್ಸ್: ಮರೆವಿನ ಕಾಯಿಲೆಯಷ್ಟೆ ಅಲ್ಲ

ಡಾ. ಶಿವಾನಂದ ಬಿ. ಹಿರೇಮಠ

ಮುಪ್ಪಿನ ಅರಳು ಮರಳು ಮನುಷ್ಯನಲ್ಲಿ ಕಾಣುವ ವಯೋಸಹಜ ಬದಲಾವಣೆ. ಆದರೆ ಇಳಿವಯಸ್ಸಿಗಿಂತಲೂ ವೇಗವಾಗಿ ಹಾಗೂ ವ್ಯಾಪಕವಾಗಿ ನೆನಪಿನ ಶಕ್ತಿಯು ಕೆಲವೊಮ್ಮೆ ಕಡಿಮೆಯಾಗುತ್ತದೆ. ಇದನ್ನೇ 'ಡೆಮೆನ್ಶಿ'ಯ ಅಥವಾ 'ಮುಪ್ಪಿನ ಮರೆವಿನ ಕಾಯಿಲೆ' ಎನ್ನುತ್ತೇವೆ.

ವಿಶ್ವದಲ್ಲಿ ಸುಮಾರು 5 ಕೋಟಿ ಜನ ಡೆಮೆನ್ಶಿಯದಿಂದ ಬಳಲುತ್ತಿದ್ದಾರೆ. ಪ್ರತಿ 3 ಸೆಕೆಂಡಿಗೆ ಒಬ್ಬರು, ಡೆಮೆನ್ಶಿಯಕ್ಕೆ ತುತ್ತಾಗುತ್ತಿದ್ದಾರೆ. ಭಾರತದಲ್ಲಿ ಈ ಸಂಖ್ಯೆ ಸುಮಾರು 45-50 ಲಕ್ಷ! ನಮ್ಮಲ್ಲಿ ಈ ಕಾಯಿಲೆಯ ಬಗ್ಗೆ ಅರಿವು ಅಷ್ಟೊಂದಿಲ್ಲದ ಕಾರಣ, ಅನೇಕರು ವೈದ್ಯಕೀಯ ಸಂಪರ್ಕಕ್ಕೆ ಬರುವುದಿಲ್ಲ. ಹೀಗಾಗಿ ಬಳಲುತ್ತಿರುವವರ ಸಂಖ್ಯೆ ವಾಸ್ತವದಲ್ಲಿ ಇನ್ನೂ ಹೆಚ್ಚಿರಬಹುದು.

ಡೆಮೆನ್ಶಿಯಕ್ಕೆ ಅನೇಕ ಕಾರಣಗಳಿವೆ. ಅದರಲ್ಲಿ ಮುಖ್ಯವಾದದ್ದು 'ಅಲ್ಝೀಮರ್ಸ್ ಕಾಯಿಲೆ'. ಪ್ರತಿ ವರ್ಷ ಸೆಪ್ಟೆಂಬರ್ 21ರಂದು 'ವಿಶ್ವ ಅಲ್ಝೀಮರ್ಸ್ ದಿನ' ಎಂದು ಆಚರಿಸಲಾಗುತ್ತದೆ.

ಕಾರಣಗಳು

ಇಳಿವಯಸ್ಸು, ಆನುವಂಶೀಯತೆ, ಜೆನೆಟಿಕ್ ಅಂಶಗಳು ಮುಖ್ಯ ಕಾರಣಗಳು. ಜೊತೆಗೆ ತಲೆಗೆ ಬಲವಾದ ಪೆಟ್ಟು, ದುಶ್ಚಟ, ಅನಾರೋಗ್ಯಕರ ಆರೋಗ್ಯಶೈಲಿ - ಈ ಕಾಯಿಲೆಯ ಸಾಧ್ಯತೆಯನ್ನು ಹೆಚ್ಚಿಸುತ್ತವೆ.

ನೆನಪುಗಳು ಮುಖ್ಯವಾಗಿ ಮಿದುಳಿನ ಹೊರ ಮೇಲ್ಮೈ (ಕಾರ್ಟೆಕ್ಸ್‌ನಲ್ಲಿ) 'ಅಸಿಟೈಲ್ ಕೊಲಿನ್' ಎಂಬ ರಾಸಾಯನಿಕದ ಸಹಾಯದಿಂದ ಸಂಗ್ರಹಗೊಳ್ಳುತ್ತವೆ. ಅಲ್ಝೀಮರ್ಸ್ ಕಾಯಿಲೆಯಲ್ಲಿ ಅಮ್ಯೆಲಾಯ್ಡ್ ಹಾಗೂ ಟಾವು ಎಂಬ ಪ್ರೊಟೀನ್‌ಗಳು ಮಿದುಳಿನ ನರಕೋಶಗಳಲ್ಲಿ ಹಾಗೂ ಸುತ್ತಮುತ್ತ ಸಂಗ್ರಹಗೊಳ್ಳುತ್ತವೆ. ಇದರಿಂದ ನರಕೋಶಗಳು ಹಾಳಾಗಿ ಮಿದುಳಿನ ಗಾತ್ರ ಸಂಕುಚಿತಗೊಳ್ಳುತ್ತದೆ. 'ಅಸಿಟೈಲ್ ಕೊಲೀನ್' ಎಂಬ ನರವಾಹಕದ ಪ್ರಮಾಣವು ಕಡಿಮೆಯಾಗಿ, ನೆನಪಿನ ಶಕ್ತಿ ಕುಂದಲಾರಂಭಿಸುತ್ತದೆ.

ಲಕ್ಷಣಗಳು

ಮೊದಲಿನ ಹಂತದಲ್ಲಿ ಮರೆವು ಶುರುವಾಗುತ್ತದೆ. ಇತ್ತೀಚಿನ ಚಟುವಟಿಕೆಗಳು, ಘಟನೆಗಳು ನೆನಪಿಗೆ ಬರುವುದಿಲ್ಲ. ಉದಾಹರಣೆಗೆ, ಬೆಳಗಿನ ಉಪಾಹಾರ ಸೇವಿಸಿದ್ದರೂ, ಪದೇ ಪದೇ ಬಂದು ಉಪಾಹಾರ ಕೇಳುವುದು. ದಿನನಿತ್ಯದ ವಸ್ತುಗಳನ್ನು ಇಟ್ಟ ಜಾಗವನ್ನು ಮರೆಯುವುದು, ಹುಡುಕಾಡುವುದು. ವಸ್ತುಗಳ ಹೆಸರೂ ಮರೆತುಹೋಗಬಹುದು. ಹೊರಗೆ ಹೋದರೆ ಮರಳಿ ಮನೆಗೆ ಬರಲು ದಾರಿ ಗೊತ್ತಾಗದೇ ಇರಬಹುದು. ಸಂಕೀರ್ಣ ಚಟುವಟಿಕೆಗಳನ್ನು ನಿಭಾಯಿಸಲು ಆಗುವುದಿಲ್ಲ.

ಈ ಹಂತದಲ್ಲಿ, ಚಿಕ್ಕ ಪುಟ್ಟ ವಿಷಯಗಳು ನೆನಪಿಗೆ ಬರದಿದ್ದಾಗ, ವಸ್ತುಗಳು ಸಿಗದಿದ್ದಾಗ ಹತಾಶೆ, ಸಿಟ್ಟು ಬರುತ್ತದೆ. ಹೀಗೆ ಮುಂದುವರಿದರೆ, ಆತಂಕ, ಖಿನ್ನತೆಗಳು ಶುರುವಾಗುತ್ತವೆ.

ಮಧ್ಯದ ಹಂತದಲ್ಲಿ, ಮರೆವು ಇನ್ನಷ್ಟು ಹೆಚ್ಚು ಜೀವನದ ವಿವಿಧ ಆಯಾಮಗಳನ್ನು ಆವರಿಸಿಕೊಳ್ಳುತ್ತದೆ. ಲೆಕ್ಕ, ವಸ್ತುಗಳ ಉಪಯೋಗ, ಮನೆಯಲ್ಲಿ ಕೋಣೆಯ ದಾರಿ - ಇವೆಲ್ಲ ಮರೆತುಹೋಗಬಹುದು. ಹತ್ತಿರದ ಸಂಬಂಧಿಗಳು, ಬಂಧುಮಿತ್ರರ ಹೆಸರುಗಳನ್ನು ಸ್ಮರಿಸಿಕೊಳ್ಳಲು ಆಗದಿರಬಹುದು. ದಿಕ್ಕು ತಪ್ಪಿ ಅಲೆದಾಡುವುದು, ಪದೇ ಪದೇ ಕೇಳಿದ್ದನ್ನೇ ಕೇಳುವುದು ಸಾಮಾನ್ಯವಾಗುತ್ತದೆ. ಮಾತು ಕಡಿಮೆಯಾಗಬಹುದು. ಭ್ರಾಂತಿ, ನಿದ್ರಾಹೀನತೆ, ಅಸಹಜವಾದ ಸಿಟ್ಟು, ಗೊಂದಲ ಉಂಟಾಗುತ್ತವೆ.

ಕೊನೆಯ ಹಂತದಲ್ಲಿ ವ್ಯಕ್ತಿಯು ಸಂಪೂರ್ಣವಾಗಿ ಇತರರ ಮೇಲೆ ಅವಲಂಬಿತರಾಗುತ್ತಾರೆ. ಆಹಾರವನ್ನು ಜಗಿಯುವುದು, ದ್ರವ ಪಧಾರ್ಥಗಳನ್ನು ನುಂಗುವುದನ್ನು ಹೇಳಬೇಕಾಗುತ್ತದೆ. ಮಲ-ಮೂತ್ರ ವಿಸರ್ಜನೆಯ ಮೇಲಿನ ನಿಯಂತ್ರಣ ಇರುವುದಿಲ್ಲ. ದಿನ-ರಾತ್ರಿಯ ಪ್ರಜ್ಞೆ ಇರುವುದಿಲ್ಲ. ಹಗಲು ಮಲಗುತ್ತಾರೆ, ರಾತ್ರಿ ಎಚ್ಚರವಿರುತ್ತಾರೆ. ಭ್ರಮಾವಸ್ಥೆ ಹೆಚ್ಚುತ್ತದೆ.

ಚಿಕಿತ್ಸೆ

ಈ ಕಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸಲಾಗುವುದಿಲ್ಲ. ಆದರೆ, ಕೆಲವು ಔಷಧಿಗಳು, ಥೆರಪಿ ಹಾಗೂ ಉತ್ತಮ ಆರೈಕೆಯಿಂದ ರೋಗ ಉಲ್ಬಣಗೊಳ್ಳುವ ಗತಿಯನ್ನು ನಿಧಾನಗೊಳಿಸಬಹುದು.

ಔಷಧಿಗಳ ಜೊತೆಗೆ, ರೆಮಿನಿಸೆನ್ಸ್ ಥೆರಪಿ (ಹಳೆಯ ಘಟನೆಗಳನ್ನು, ನೆನಪುಗಳನ್ನು ಸ್ಮರಿಸಲು ಕಥೆ-ಚಿತ್ರದ ಸಹಾಯದಿಂದ ಕೈಗೊಳ್ಳುವ ಚಿಕಿತ್ಸೆ), ಬೌದ್ಧಿಕ ಪುನರ್ವಸತಿಗಳಿಂದ ವ್ಯಕ್ತಿಯ ರೋಗಲಕ್ಷಣಗಳು ಒಂದು ಮಟ್ಟಿಗೆ ಹತೋಟಿಯಲ್ಲಿರುತ್ತವೆ. ಜೊತೆಗೆ, ಖಿನ್ನತೆ, ಆತಂಕ, ಭ್ರಮೆ, ನಿದ್ರಾಹೀನತೆಗೆ ಚಿಕಿತ್ಸೆ ನೀಡುವುದರಿಂದ ರೋಗಿಯ ಜೀವನದ ಗುಣಮಟ್ಟವೂ ಸುಧಾರಿಸುತ್ತದೆ.

ಆರೈಕೆ

ಈ ಕಾಯಿಲೆಯಿಂದ ಬಳಲುತ್ತಿರುವವರು ಪ್ರತಿಯೊಂದು ಚಟುವಟಿಕೆಗೂ ಇತರರನ್ನು ಅವಲಂಬಿಸಿರುತ್ತಾರೆ. ಅವಲಂಬನೆ ಹೆಚ್ಚಾಗಿ ವ್ಯಕ್ತಿಗೆ ಮುಜುಗರವಾಗುತ್ತದೆ. ಇದು ಮುಂದುವರಿದು ಹತಾಶೆ, ಖಿನ್ನತೆಗಳು ಎದುರಾಗುತ್ತವೆ; ತಾವು ಇತರರಿಗೆ ಭಾರ ಎಂಬ ಭಾವನೆ ಉಂಟಾಗುತ್ತದೆ. ಹೀಗಾಗಿ ಶಾಂತ ಹಾಗೂ ವಿಶ್ವಾಸಭರಿತ ಆರೈಕೆಯ ಅವಶ್ಯಕತೆಯಿರುತ್ತದೆ.

ಸಲಹೆಗಳು

- ದಿನಚರಿಯನ್ನು ನಿಗದಿಪಡಿಸಿ. ಊಟ, ವ್ಯಾಯಾಮ, ಓದು ಇತ್ಯಾದಿ ಚಟುವಟಿಕೆಗಳಿಗೆ ಸಮಯವನ್ನು ನಿಗದಿಗೊಳಿಸಿ.
- ರೋಗಿಯ ಮರೆವನ್ನು ಅವಮಾನಿಸದಿರಿ. ಅವರ ಅಸಹಾಯಕತೆಗೆ ಕೋಪಗೊಳ್ಳಬೇಡಿ.
- ಅವರು ನೆನಪಿಸಿಕೊಳ್ಳಲು ಕಷ್ಟಪಡುತ್ತಿರುವಾಗ, ನೆನಪಿಸಿಕೊಳ್ಳುವಂತೆ ಸವಾಲು ಹಾಕಬೇಡಿ. ಬದಲಾಗಿ, ಅವರು ಕೇಳುವ ಮುನ್ನವೇ ಅವರಿಗೆ ಸಹಾಯ ಮಾಡಿ.
- ಮನೆಯ ವಾತಾವರಣ ಶಾಂತವಾಗಿರಲಿ. ಅನವಶ್ಯಕ ಶಬ್ದ, ಗದ್ದಲ ಬೇಡ.
- ಅವರಿಗೆ ಕೇಳುವ ಪ್ರಶ್ನೆಗಳು ಸರಳವಾಗಿರಲಿ. 'ಏನು ಕುಡಿಯುತ್ತೀರಿ?' ಎನ್ನುವ ಬದಲು 'ಕಾಫಿ ಇಲ್ಲವೇ ಟೀ ಕುಡಿಯುವಿರಾ?' ಎಂದು ಪ್ರಶ್ನಿಸಿ.
- ಮನೆಯಲ್ಲಿ ಕೋಣೆಗಳು, ದಿನಬಳಕೆಯ ವಸ್ತುಗಳ ಸ್ಥಳಗಳು ಮುಂತಾದವನ್ನು ಹೆಸರಿನಿಂದ ಗುರುತಿಸಿ.
- ಅವರನ್ನು ಒಬ್ಬರನ್ನೇ ಹೊರಹೋಗಲು ಬಿಡಬೇಡಿ. ಮನೆಯ ಬಾಗಿಲುಗಳು ಭದ್ರವಾಗಿರಲಿ. ಅಕ್ಕಪಕ್ಕದವರಿಗೆ, ಆ ವ್ಯಕ್ತಿಯ ಪರಿಸ್ಥಿತಿಯ ಬಗ್ಗೆ ತಿಳಿಸಿ.
- ದೈಹಿಕ ಸ್ವಚ್ಛತೆ ಹಾಗೂ ಆಹಾರದ ಬಗ್ಗೆ ವಿಶೇಷ ಕಾಳಜಿಯಿರಲಿ.
- ಸುಲಭವಾಗಿ ಧರಿಸುವಂತಹ ಹಾಗೂ ಕಳಚುವಂತಹ ಬಟ್ಟೆಗಳನ್ನು ಹಾಕಿಸಿ.
- ಅವರ ಬಳಿ ಅವರ ಹೆಸರು, ವಿಳಾಸ, ತುರ್ತು ದೂರವಾಣಿ ಸಂಖ್ಯೆಗಳಿರುವ ಗುರುತಿನ ಚೀಟಿಯನ್ನು ಅವರ ಬ್ರೇಸ್ ಲೆಟ್‌ನಲ್ಲೋ, ಜೇಬಿನಲ್ಲೋ ಸದಾ ಇಟ್ಟಿರಿ.

ಇನ್ನು ಕೆಲವು ದಶಕಗಳಲ್ಲಿ ನಮ್ಮ ಜನಸಂಖ್ಯೆಯಲ್ಲಿ ಹಿರಿಯ ನಾಗರಿಕರ ಸಂಖ್ಯೆ ಹೆಚ್ಚಾಗಲಿದೆ. ಆಗ ಸಹಜವಾಗಿಯೇ ಡೆಮೆನ್ಶಿಯದಿಂದ ಬಳಲುವವರ ಸಂಖ್ಯೆ ವೃದ್ಧಿಸಲಿದೆ. ಹೀಗಾಗಿ, ಈ ಕಾಯಿಲೆಯ ಬಗ್ಗೆ ಜಾಗೃತಿಯಷ್ಟೇ ಅಲ್ಲ, ಇದನ್ನು ನಿಭಾಯಿಸುವುದಕ್ಕೆ ಅಗತ್ಯವಿರುವ ಕೌಶಲ ಹಾಗೂ ಸಂಪನ್ಮೂಲಗಳ ಬಗೆಗಿನ ತಯಾರಿ ಈಗಿನಿಂದಲೇ ಆರಂಭವಾಗಬೇಕಿದೆ. ❖

ಮಕ್ಕಳನ್ನು ಬೆಳೆಸುವುದು ಎಂದರೆ...

ರಮ್ಯಾ ಶ್ರೀಹರಿ

ಪೋಷಕರು ಮತ್ತು ಮಕ್ಕಳ ನಡುವಿನ ಸಂಬಂಧದ ಬಗೆಗೆ ಪೋಷಕರು ತಾಳುವ ನಿಲುವು ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಭಾವ ಬೀರುತ್ತದೆ. ಮಕ್ಕಳನ್ನು 'ಬೆಳೆಸುವುದು' ಎನ್ನುವುದರ ಅರ್ಥವೇನು ಎಂಬ ಪ್ರಶ್ನೆಯನ್ನು ಪೋಷಕರು ಆಗಾಗ ಕೇಳಿಕೊಳ್ಳುತ್ತಿರಬೇಕಾಗುತ್ತದೆ. ಮಕ್ಕಳನ್ನು 'ಬೆಳೆಸುವುದು' ಎಂದರೆ ಅವರ ಭವಿಷ್ಯ ರೂಪಿಸುವುದೆಂದೇ? ಅವರು ಜೀವನದಲ್ಲಿ ಯಶಸ್ಸು ಕಾಣಲು ಸಹಕರಿಸುವುದೆಂದೇ? ಅವರು ಬದುಕಿನಲ್ಲಿ ಮುಂದೆ ಏನೋ ಸಾಧಿಸಲು ಬೇಕಾದ ವಿದ್ಯಾಭ್ಯಾಸ ಕೊಡಿಸುವುದೆಂದೇ? ಅವರು ಅರ್ಥಪೂರ್ಣವಾಗಿ, ಸಂತೋಷವಾಗಿ ಬದುಕಲು ಮಾನಸಿಕ, ಭಾವನಾತ್ಮಕ ಬುನಾದಿ ಹಾಕಿಕೊಡುವುದೆಂದೇ? ಪೋಷಕರು ತಾವು ಜೀವನದ ಗುರಿ, ಸಾರ್ಥಕತೆ ಯಾವುದರಲ್ಲಿ ಅಡಗಿದೆ ಎಂದು ತಿಳಿದುಕೊಂಡಿರುತ್ತಾರೋ ಅದರ ಮೇಲೆಯೇ ಅವರು ಮಕ್ಕಳನ್ನು ಬೆಳೆಸುವ ರೀತಿಯೂ ಅವಲಂಬಿತವಾಗಿರುತ್ತದೆ.

ಮಕ್ಕಳಿಗೇನೂ ಗೊತ್ತಾಗುವುದಿಲ್ಲ, ಅವರು ಖಾಲಿ ಹಾಳೆಯಿದ್ದಂತೆ, ಅವರನ್ನು ಅವರಷ್ಟಕ್ಕೆ ಬಿಟ್ಟುಬಿಟ್ಟರೆ ತಪ್ಪುಗಳಾಗುವ ಸಾಧ್ಯತೆಯೇ ಹೆಚ್ಚು. ಮುಂದಿನ ಬದುಕಿನಲ್ಲಿ ಅವರು ದಾರಿ ತಪ್ಪದೇ ಇರಬೇಕಾದರೆ ಇಂದಿನಿಂದಲೇ ನಾವು ಅವರನ್ನು ತಿದ್ದುತ್ತಿರಬೇಕು ಎಂದು ನಂಬಿರುವ ಪೋಷಕರು ಮಕ್ಕಳು ಮಾಡುವ ಎಲ್ಲ ಕ್ರಿಯೆ-ಪ್ರತಿಕ್ರಿಯೆಗಳಲ್ಲೂ ಏನಾದರೂ ತಪ್ಪು ಹುಡುಕುತ್ತಾ ಮಕ್ಕಳು ಎಷ್ಟು ಪರಿಪೂರ್ಣರಾಗಿದ್ದರೂ ಸಾಲದು ಎನ್ನುವಂತಹ ಧೋರಣೆ ಹೊಂದಿರುತ್ತಾರೆ. 'ಮಕ್ಕಳು ಮೂಲತಃ ಸಹಜವಾದ ವಿವೇಕವುಳ್ಳವರು. ಜೀವನಪ್ರೀತಿ, ಪರಿಶುದ್ಧತೆ, ಒಳ್ಳೆಯತನಗಳು ಅವರಿಗೆ ಹುಟ್ಟಿನಿಂದಲೇ ಬಂದಿರುತ್ತವೆ. ಅವರ ಈ ಸಹಜ ಅರಿವು ಮತ್ತು ಪ್ರೀತಿ ಮಸುಕಾಗದಂತೆ ಅದನ್ನು ಉಳಿಸಿ ಬೆಳೆಸುವುದು ಪೋಷಕರಾಗಿ ನಮ್ಮ ಕರ್ತವ್ಯ' ಎಂದು ತಿಳಿದಿರುವ ಪೋಷಕರು ತಾವು ಅತ್ಯಂತ ಗೌರವಿಸುವ, ಮೆಚ್ಚಿಕೊಳ್ಳುವ, ಅಚ್ಚರಿ, ಕುತೂಹಲಗಳಿಂದ ನೋಡುವ ವ್ಯಕ್ತಿಯೊಂದಿಗೆ ಹೇಗೆ ನಡೆದುಕೊಳ್ಳುತ್ತಾರೋ ಹಾಗೆಯೇ ತಮ್ಮ ಮಕ್ಕಳೊಂದಿಗೂ ವರ್ತಿಸುತ್ತಾರೆ. ಮಕ್ಕಳ ಸಹಜ ವಿವೇಕದಲ್ಲಿ ನಂಬಿಕೆಯನ್ನಿಟ್ಟು, ಅವರ ಆತ್ಮಗೌರವಕ್ಕೆ, ಆತ್ಮಮೌಲ್ಯಕ್ಕೆ (self-worth) ಗಾಸಿಯಾಗದಂತೆ, ತಂದೆ/ತಾಯಿ ಮತ್ತು ಮಗುವಿನ ನಡುವಿರುವ ಆತ್ಮೀಯ ಬಾಂಧವ್ಯ, ಪ್ರೀತಿಯೇ ಮುಂದಿನ ಅವರ ಬದುಕಿಗೆ ದಾರಿದೀಪವಾಗುವಂತೆ ಮಕ್ಕಳನ್ನು ಬೆಳೆಸುವ ದಿಕ್ಕಿನಲ್ಲಿ ಪೂರಕವಾಗಬಹುದಾದ ಕೆಲವು ವಿಚಾರಗಳು ಹೀಗಿವೆ:

ನಕಾರಾತ್ಮಕ ಮಾತುಗಳಿಂದ ಮಕ್ಕಳ ಮನಸ್ಸಿಗೆ ಆಘಾತ ಉಂಟಾಗಬಹುದು

- ಈಗ ತಂದೆ/ತಾಯಿಯಾಗಿ ಮಕ್ಕಳನ್ನು ಬೆಳೆಸುತ್ತಿರುವ ಪೋಷಕರೂ ಹಿಂದೊಮ್ಮೆ ಮಕ್ಕಳಾಗಿದ್ದರು, ಅವರಿಗೂ ಅವರ ಪೋಷಕರಿಗೂ ಇದ್ದ ಬಾಂಧವ್ಯ ಇಂದು ಅವರು ತಮ್ಮ ಮಕ್ಕಳನ್ನು ಹೇಗೆ ಬೆಳೆಸುತ್ತಾರೆ ಎನ್ನುವುದನ್ನು ಬಹುಪಾಲು ನಿರ್ಧರಿಸುತ್ತದೆ. ಪೋಷಕತ್ವದ ಬಗ್ಗೆ ನಾವೆಷ್ಟೇ ಪುಸ್ತಕಗಳನ್ನು ಓದಿ, 'ಹೀಗೆ ಹೀಗೆ ನಡೆದುಕೊಳ್ಳಬೇಕು' ಎಂದು ಸಂಕಲ್ಪಿಸಿದರೂ ನಮ್ಮ ಪೋಷಕರು ನಮ್ಮನ್ನು ನಡೆಸಿಕೊಂಡ ರೀತಿ ನಾವು ನಮ್ಮ ಮಕ್ಕಳನ್ನು ನೋಡಿಕೊಳ್ಳುವ ರೀತಿಯನ್ನು ಪ್ರಭಾವಿಸುತ್ತದೆ. ಹಾಗಾಗಿ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ನಮ್ಮನ್ನು ಅತಿಯಾಗಿ ಕಂಗೆಡಿಸುತ್ತಿದೆಯಾದರೆ ಅದಕ್ಕೆ ಬಲವಾದ ಕಾರಣಗಳಿರುತ್ತವೆ, ಆಗ ತಜ್ಞರೊಂದಿಗೆ ಸಮಾಲೋಚಿಸುವುದು, ಮನಸ್ಸನ್ನು ಶಾಂತವಾಗಿರಿಸಿಕೊಂಡು ಆಲೋಚಿಸುವುದನ್ನು ಅಭ್ಯಾಸಮಾಡಿಕೊಳ್ಳಬೇಕು.
- ಕೆಲವೊಮ್ಮೆ ನಾವೆಷ್ಟೇ ಮಕ್ಕಳ ಮೇಲೆ ಕೂಗಾಡದೆ ಅವರಿಗೆ ಅರ್ಥವಾಗುವಂತೆ ಸಾವಧಾನದಿಂದ ತಿಳಿಹೇಳಬೇಕೆಂದುಕೊಂಡರೂ ನಮ್ಮ ಹಿಡಿತ ತಪ್ಪಿಹೋಗಿ ಪ್ರಚೋದನೆಗೊಳಗಾಗಿ ಕೂಗಾಡುತ್ತೇವೆ. ಆದರೆ ನಮ್ಮ ಭಾವನೆಗಳಿಗೆ, ವರ್ತನೆಗಳಿಗೆ ನಾವು ಜವಾಬ್ದಾರರೇ ಹೊರತು ನಮ್ಮ ಮಕ್ಕಳಲ್ಲ. ಮಕ್ಕಳ ಮೇಲೆ ಕೂಗಾಡುವುದು ಭಾವನೆಗಳನ್ನು, ಒಳಗಿನ ತುಮುಲಗಳನ್ನು ನಿರ್ವಹಿಸಲಾರದ ನಮ್ಮ ಅಸಹಾಯಕತೆಯ ಅಭಿವ್ಯಕ್ತಿ. ಮಕ್ಕಳನ್ನು ನಾವೆಷ್ಟೇ ಪ್ರೀತಿಸುತ್ತಿದ್ದರೂ ನಮ್ಮನ್ನು ನಾವು ನಿಯಂತ್ರಿಸಿಕೊಳ್ಳುವುದರಲ್ಲಿ ಸೋತಾಗ ಆ ಬೇಸರವನ್ನು ಸಿಟ್ಟಿನ ರೂಪದಲ್ಲಿ ತೋರ್ಪಡಿಸಿಕೊಳ್ಳುವುದು ಮಕ್ಕಳ ಮನಸ್ಸಿನಲ್ಲಿ ಸಲ್ಲದ ಗೊಂದಲಗಳನ್ನು ಸೃಷ್ಟಿಸುತ್ತದೆ. ತನ್ನ ತಂದೆ/ತಾಯಿಯ ಬೇಸರ, ಕೋಪಕ್ಕೆ ತಾನೇ ಕಾರಣ ಎಂದುಕೊಳ್ಳುವ ಮಗು ತನಗೆ ಏನು ಬೇಕು-ಬೇಡ ಎನ್ನುವುದನ್ನು ಕಡೆಗಣಿಸಿ ತನ್ನ ತಂದೆ/ತಾಯಿ ಬೇಸರ, ಕೋಪ ಮಾಡಿಕೊಳ್ಳದಂತೆ ಹೇಗೆ ವರ್ತಿಸುವುದು ಎಂದು ಪೋಷಕರ ಭಾವನೆಗಳನ್ನು ತಾನು ನಿರ್ವಹಿಸುವ ಕೆಲಸ ಮಾಡಲು ಹೊರಡುತ್ತದೆ. ಇದು ಖಂಡಿತವಾಗಿಯೂ ಮಗುವಿನ ಮನೋವಿಕಾಸಕ್ಕೆ ಮಾರಕವಾಗುತ್ತದೆ.

ಸಿಟ್ಟಿನಿಂದ ಮಕ್ಕಳನ್ನು ಬೈಯುತ್ತಾ ಅವರನ್ನು ನಿಂದಿಸುವುದು, ಅವಹೇಳನಕಾರಿಯಾದ ಭಾಷೆ ಉಪಯೋಗಿಸುವುದು, ಮಕ್ಕಳ ಮೇಲೆ ಅನುಮಾನ ಪಡುವುದು, ಮಕ್ಕಳ ಭವಿಷ್ಯದ ಬಗೆಗೆ ನಕಾರಾತ್ಮಕವಾದ ಮಾತುಗಳನ್ನಾಡುವುದು, ಮಕ್ಕಳಲ್ಲಿ ತೀವ್ರವಾದ ಮಾನಸಿಕ ಆಘಾತವನ್ನುಂಟುಮಾಡುತ್ತದೆ.

- ಮಕ್ಕಳು ಸಣ್ಣ ಪುಟ್ಟ ಸುಳ್ಳು ಹೇಳುವುದು, ಪರೀಕ್ಷೆಯಲ್ಲಿ ಅಥವಾ ಆಟದಲ್ಲಿ ಮೋಸಮಾಡುವುದು, ಬೇರೆಯವರಿಗೆ ಅಗೌರವ ತೋರಿಸುವುದು, ತೊಂದರೆ ಕೊಡುವುದು, ದುರಭ್ಯಾಸಗಳನ್ನು ರೂಢಿಸಿಕೊಳ್ಳುವುದು ಮುಂತಾದವು ಮಾಡಿದಾಗ ತಾವು ಕೆಟ್ಟ ಪೋಷಕರು, ತಮ್ಮಲ್ಲೇ ಏನೋ ದೊಡ್ಡ ದೋಷವಿರುವುದರಿಂದಲೇ ತಮ್ಮ ಮಕ್ಕಳು ಹೀಗಾಡುತ್ತಿದ್ದಾರೆ ಎಂಬ ಅವಮಾನ, ದುಃಖದಿಂದ ಆವೇಶಕ್ಕೆ ಒಳಗಾಗಿ ಪೋಷಕರು ಮಕ್ಕಳಿಗೆ ಅತಿಯಾದ ಶಿಕ್ಷೆ ಕೊಡುವ ಮುನ್ನ ಮಕ್ಕಳ ಇಂತಹ ವರ್ತನೆಗೆ ಏನು ಕಾರಣ ಎಂದು ಅರ್ಥಮಾಡಿಕೊಳ್ಳುವ ಮತ್ತು ಈ ಬಿಕ್ಕಟ್ಟಿನ ಮೂಲಕವೂ ತಮ್ಮ ಮತ್ತು ತಮ್ಮ ಮಕ್ಕಳ ನಡುವಿನ ಬಾಂಧವ್ಯವನ್ನು ಗಟ್ಟಿಗೊಳಿಸುವ ಕೆಲಸ ಮಾಡುವುದು ಒಳ್ಳೆಯದು. ತಮ್ಮನ್ನು ತಾವೇ ಸಮಾಧಾನಗೊಳಿಸಿಕೊಂಡು ನಂತರವಷ್ಟೇ ಮಕ್ಕಳಿಗೆ 'ಹೀಗೆ ಮಾಡುವುದು ಏಕೆ ತಪ್ಪು, ಆ ತಪ್ಪನ್ನು ಮಾಡದಿರುವುದು ಹೇಗೆ' ಎಂದು ವಿವರಿಸುತ್ತಾ ನಿಧಾನವಾಗಿ ಮಾತನಾಡಬಹುದು.
- ಕೆಲವೊಮ್ಮೆ ಎಷ್ಟೇ ಹೇಳಿಕೊಟ್ಟರೂ ಮಕ್ಕಳು ತಮ್ಮ ವರ್ತನೆಗಳನ್ನು ಬದಲಾಯಿಸಿಕೊಳ್ಳುವುದೇ ಇಲ್ಲ. ಉದಾಹರಣೆಗೆ ತನ್ನ ಪುಸ್ತಕ, ಬಟ್ಟೆಗಳನ್ನು ಜೋಡಿಸಿಕೊಳ್ಳುವುದರಲ್ಲಿ ಅಶಿಸ್ತು, ಅತಿಯಾದ ಸ್ಕ್ರೀನ್ ಟೈಮ್, ಹೋಂವರ್ಕ್ ಮಾಡಲು, ಓದಿಕೊಳ್ಳಲು ಸತಾಯಿಸುವುದು, ಹೀಗೆ. ಇಂಥವುಗಳ ಬಗೆಗೆ ಪದೇ ಪದೇ ಹೇಳಬೇಕಾದಾಗ ರೇಜಿಗೆಯಾಗಿ ಮಕ್ಕಳೊಂದಿಗೆ ಒರಟಾಗಿ ನಡೆದುಕೊಳ್ಳುವ ಪ್ರಸಂಗಗಳೂ ಬಂದುಬಿಡುತ್ತವೆ. ಆಗ ಒಂದು ವಿಷಯವನ್ನು ಮನಸ್ಸಿಗೆ ತಂದುಕೊಳ್ಳಬೇಕಾಗುತ್ತದೆ: ಪೋಷಕತ್ವ ಎನ್ನುವುದು ಪ್ರತಿದಿನವೂ, ಪ್ರತಿನಿಮಿಷವೂ ನಿರ್ವಹಿಸಬೇಕಾದ ಜವಾಬ್ದಾರಿ, ಅದನ್ನು ಒಂದು ದಿನದಲ್ಲಿ ಮಾಡಿ ಮುಗಿಸಿ ಕೈತೊಳೆದುಕೊಳ್ಳಲಾಗುವುದಿಲ್ಲ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

28) ಇತರೇ ಯುರೋಪಿಯನ್ ಈಸ್ಟ್ ಇಂಡಿಯಾ ಕಂಪನಿಗೂ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಗೂ ಇರುವ ವ್ಯತ್ಯಾಸವೇನು?

ಉತ್ತರ:- ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಸರ್ಕಾರಿ ಒಡೆತನದ ಕಂಪನಿಯಾಗಿ ಆರಂಭವಾಯಿತು. ಆದರೆ ಉಳಿದವು ಖಾಸಗಿ ಕಂಪನಿಗಳಾಗಿದ್ದವು.

29) ಯಾವ ವರ್ಷ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.

ಉತ್ತರ:- 1664

30) ಫ್ರೆಂಚರ ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿ.

ಉತ್ತರ:- ಸೂರತ್, ಮಚಲಿಪಟ್ಟಣ, ಚಂದ್ರನಗರ, ಮಾಹೆ, ಕಾರೈಕಲ್ಲು, ಕಾಸಿಂ ಬಜಾರ್, ಬಾಲಸೂರ್

31) ಪಾಂಡಿಚೇರಿ ಬಗ್ಗೆ ಬರೆಯಿರಿ.

ಉತ್ತರ:- ಫ್ರೆಂಚರು 1674ರಲ್ಲಿ ವಾಲಿಕೊಂಡಪುರಂನ ಸ್ಥಳೀಯ ಮುಸ್ಲಿಂ ಅಧಿಕಾರಿಯಿಂದ ಪಡೆದರು. ಕ್ರಮೇಣ ಇದನ್ನೆ ದೊಡ್ಡ ವ್ಯಾಪಾರ ಕೇಂದ್ರವಾಗಿ ಮಾರ್ಪಡಿಸಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಅದೇ ಪುದುಚೇರಿ ಅಥವಾ ಪಾಂಡಿಚೇರಿ. ಇದು ಫ್ರೆಂಚರು ಭಾರತ ತೊರೆದು ಹೋಗುವವರೆಗೆ ಅವರ ರಾಜಧಾನಿಯಾಗಿತ್ತು.

32) ಯಾವ ವರ್ಷ ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದ?

ಉತ್ತರ:- 1746

33) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ಯಾರು?

ಉತ್ತರ:- 'ಅಸಫ್ ಜಾ'

34) ಯಾವ ಒಪ್ಪಂದದೊಂದಿಗೆ ಮೊದಲ ಕಾರ್ನಾಟಿಕ್ ಯುದ್ಧ ಅಂತ್ಯವಾಯಿತು?

ಉತ್ತರ:-ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ಆದ 'ಏಕ್ಸ್-ಲಾ-ಚಾಪೆಲ್' ಒಪ್ಪಂದದೊಂದಿಗೆ ಮುಕ್ತಾಯವಾಯಿತು

35) ಮೊದಲ ಕಾರ್ನಾಟಿಕ್ ಯುದ್ಧದ ಬಗ್ಗೆ ಬರೆಯಿರಿ

ಉತ್ತರ:- ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ಬ್ರಿಟಿಷರಿಂದ ಮದ್ರಾಸನ್ನು ವಶಪಡಿಸಿಕೊಂಡನು. ಅಸಹಾಯಕರಾದ ಬ್ರಿಟಿಷರು ಕಾರ್ನಾಟಿಕ್ ನವಾಬನಾದ ಅನ್ವರುದ್ದೀನನಲ್ಲಿ ಮೊರೆ ಇಟ್ಟರು. ಮದ್ರಾಸ್‌ನಿಂದ ಫ್ರೆಂಚರನ್ನು ಹೊರಗಟ್ಟಲು ಅನ್ವರುದ್ದೀನ್ ಕಳುಹಿಸಿಕೊಟ್ಟ ಸೇನೆಯು ಸೋತಿತು. ಕೊನೆಗೆ ಲಾಬೋರ್ಡಿನನು ಡೂಪ್ಲೆಗೆ ತಿಳಿಸದೆ ಬ್ರಿಟಿಷರಿಂದ ಹಣಪಡೆದು ಮದ್ರಾಸನ್ನು ಬಿಟ್ಟುಕೊಟ್ಟು ಮಾರಿಷಸ್‌ಗೆ ಹೊರಟು ಹೋದನು. ಇದರಿಂದ ಕೋಪಗೊಂಡ ಡೂಪ್ಲೆಯು ಮದ್ರಾಸನ್ನು ಮತ್ತೆ ಪಡೆಯುವ ವಿಫಲ ಪ್ರಯತ್ನ ನಡೆಸಿದನು. ಅಂತಿಮವಾಗಿ ಈ ಯುದ್ಧವು ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ಆದ 'ಏಕ್ಸ್-ಲಾ-ಚಾಪೆಲ್' ಒಪ್ಪಂದದೊಂದಿಗೆ ಮುಕ್ತಾಯವಾಯಿತು.

36) ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದವರು ಯಾರು?

ಉತ್ತರ:- ಫ್ರೆಂಚರು

37) ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಆತನ ರಕ್ಷಣೆಗೆ ಫ್ರೆಂಚರು ಯಾರನ್ನು ನೇಮಿಸಿದ್ದರು?

ಉತ್ತರ:- ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ 'ಬುಸ್ಸಿ' ಎಂಬ ಅಧಿಕಾರಿಯನ್ನು ನೇಮಿಸಿದ್ದರು.

38) ಎರಡನೆಯ ಕಾರ್ನಾಟಿಕ್ ಯುದ್ಧವು ಯಾವ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು?

ಉತ್ತರ:- ಎರಡನೆಯ ಕಾರ್ನಾಟಿಕ್ ಯುದ್ಧವು 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು.

39) ಎರಡನೆಯ ಕಾರ್ನಾಟಿಕ್ ಯುದ್ಧ ಕುರಿತು ಬರೆಯಿರಿ.

ಉತ್ತರ:- ಫ್ರೆಂಚರು ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದರು. ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ 'ಬುಸ್ಸಿ' ಎಂಬ ಅಧಿಕಾರಿಯನ್ನು ನೇಮಿಸಿದ್ದರು. ಮತ್ತೊಂದು ಕಡೆ ಫ್ರೆಂಚರ ಬೆಂಬಲದಿಂದ ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನಾಗಿದ್ದನು ಆದರೆ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿ ರಾಬರ್ಟ್ ಕ್ಲೈವನು ಕಾರ್ನಾಟಿಕದ ರಾಜಧಾನಿ ಆರ್ಕಾಟಿನ ಮೇಲೆ ಆಕ್ರಮಣ ಮಾಡಿ ಫ್ರೆಂಚರು ಮತ್ತು ಚಂದಾಸಾಹೇಬನನ್ನು ಸೋಲಿಸಿದನು. ಅಂತಿಮವಾಗಿ ಈ ಯುದ್ಧದಲ್ಲಿ ಚಂದಾಸಾಹೇಬನನ್ನು ಬಂಧಿಸಿ ಹತ್ಯೆ ಮಾಡಲಾಯಿತು. ಅವನ ಸ್ಥಾನಕ್ಕೆ ಬ್ರಿಟಿಷರು ಅನ್ವರುದ್ದೀನನ ಮಗನಾದ ಮಹಮ್ಮದ್ ಅಲಿಯನ್ನು ನವಾಬನಾಗಿ ನೇಮಕ ಮಾಡಿದರು. ಕೊನೆಗೆ ಎರಡನೆಯ ಕಾರ್ನಾಟಿಕ್ ಯುದ್ಧವು 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು. ಫ್ರೆಂಚರು ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡರು. ಈ ಯುದ್ಧವು ಫ್ರೆಂಚರಿಗೆ ರಾಜಕೀಯ ಹಿನ್ನಡೆಯನ್ನು, ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು.

40) ಮೂರನೆಯ ಕಾರ್ನಾಟಿಕ್ ಯುದ್ಧ ಬಗ್ಗೆ ಬರೆಯಿರಿ.

ಉತ್ತರ: ಫ್ರೆಂಚರ 'ಕೌಂಟ್ ಡಿ ಲಾಲಿ'ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು. ಈ ನಿರ್ಣಾಯಕ ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೇನಾಧಿಕಾರಿ ಸರ್. ಐರ್ ಕೂಟನು ಫ್ರೆಂಚರನ್ನು ಸೋಲಿಸಿದನಲ್ಲದೆ, ಬುಸ್ಸಿಯನ್ನು ಸೆರೆಹಿಡಿದನು. ಲಾಲಿಯು ತಪ್ಪಿಸಿಕೊಂಡು ಪಾಂಡಿಚೇರಿಯಲ್ಲಿ ತಲೆಮರೆಸಿಕೊಂಡನು. ಅಂತಿಮವಾಗಿ ಐರ್‌ಕೂಟನು ಪಾಂಡಿಚೇರಿಗೂ ಮುತ್ತಿಗೆ ಹಾಕಿದಾಗ ಲಾಲಿಯು 1761ರಲ್ಲಿ ಬೇಷರತ್ತಾಗಿ ಶರಣಾದನು. ಕಾರ್ನಾಟಿಕ್ ಯುದ್ಧಗಳ ಪರಿಣಾಮವಾಗಿ ಫ್ರೆಂಚರು ಭಾರತದಲ್ಲಿ ತಮ್ಮ ಎಲ್ಲ ನೆಲೆಗಳನ್ನು ಕಳೆದುಕೊಂಡರು. ಅದಾಗ್ಯೂ 1763ರಲ್ಲಿ ನಡೆದ 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು. ಈ ಬೆಳವಣಿಗೆಗಳೊಂದಿಗೆ ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು. ಹೀಗೆ ಬ್ರಿಟಿಷರು ತಮ್ಮ ಇತರ ಯುರೋಪಿಯನ್ ಪ್ರತಿಸ್ಪರ್ಧಿಗಳನ್ನು ದಮನ ಮಾಡಿ ದಕ್ಷಿಣ ಭಾರತವನ್ನು ಗೆಲ್ಲುವ ಕಾರ್ಯದಲ್ಲಿ ಮಗ್ನರಾದರು.

41) ರಾಬರ್ಟ್ ಕ್ಲೈವ್ ಬಗ್ಗೆ ಬರೆಯಿರಿ

ಉತ್ತರ:- ಭಾರತದಲ್ಲಿ ಬ್ರಿಟಿಷ್ ಅಧಿಕಾರವನ್ನು ಕಟ್ಟಿದ ಪ್ರಥಮ ಅಧಿಕಾರಿ ರಾಬರ್ಟ್ ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕಾರಕೂನನಾಗಿ ಸೇವೆಗೆ ಸೇರಿದ್ದನು. ಕಾರ್ನಾಟಿಕ್ ಯುದ್ಧದಲ್ಲಿ ಅದರಲ್ಲೂ ಆರ್ಕಾಟ್‌ನ ಮುತ್ತಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿ, ಬ್ರಿಟಿಷರ ವಿಜಯಕ್ಕೆ ಕಾರಣನಾದನು. ದಕ್ಷಿಣ ಭಾರತದಲ್ಲಿ ಬ್ರಿಟಿಷರ ಅಸ್ತಿತ್ವ ರೂಪಿಸುವಲ್ಲಿ ಸಫಲನಾದ ಈತ ಬಂಗಾಳದ ವಿಜಯಕ್ಕೂ ಕಾರಣನಾದನು. 1757ರ ಪ್ಲಾಸಿ ಕದನದ ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೆ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು. ಅಪಾರ ಸಂಪತ್ತಿನಿಂದ ಇಂಗ್ಲೆಂಡಿಗೆ ಹಿಂದಿರುಗಿದ ಕ್ಲೈವ್ ಸಂಸತ್ತಿನ ಸದಸ್ಯನಾಗಿ ಸಹ ನೇಮಕಗೊಂಡನು. ರಾಬರ್ಟ್ ಕ್ಲೈವ್ ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರದಲ್ಲಿ ನಷ್ಟವನ್ನು ಅನುಭವಿಸತೊಡಗಿತು. ಅವನ ಮೇಲೆ ಆಪಾದನೆಗಳು ಇದ್ದಾಗ್ಯೂ ಸಹ ಅನಿವಾರ್ಯತೆಯಲ್ಲಿ ಸರ್ಕಾರವು ಮತ್ತೆ ಕ್ಲೈವ್ ಬ್ರಿಟಿಷರ ಘನತೆ ಮತ್ತು ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಭಾರತಕ್ಕೆ ಸೇನಾಪತಿಯಾಗಿ ಕಳುಹಿಸಿಕೊಟ್ಟಿತು. ಬಕ್ಸಾರ್ ಕದನದಲ್ಲಿ ಮತ್ತೆ ವಿಜಯಿಯಾಗಿ ಬ್ರಿಟಿಷರಿಗೆ ಘನತೆಯನ್ನು ತಂದುಕೊಟ್ಟ ಕ್ಲೈವನು ಬಂಗಾಳ, ಬಿಹಾರ, ಒಡಿಶಾ ಪ್ರಾಂತ್ಯಗಳ ಮೇಲೆ ದಿವಾನಿ ಹಕ್ಕನ್ನು ಕಂಪನಿಗೆ ತಂದುಕೊಟ್ಟನು. ಇದರಿಂದ ಮತ್ತೆ ಸಂಪತ್ತನ್ನು ತನಗೂ ಮತ್ತು ಈಸ್ಟ್ ಇಂಡಿಯಾ ಕಂಪನಿಗೆ ದೊರಕಿಸಿಕೊಂಡು 1767ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದನು.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 1

ELECTRIC CHARGES AND FIELDS

MULTIPLE CHOICE QUESTIONS

3. A point charge +q, is placed at a distance d from an isolated conducting plane. The field at a point p on the other side of the plane is

a) directed perpendicular to the plane and away from the plane.
b) directed perpendicular to the plane but towards the plane.
c) directed radially away from the point charge.
d) directed radially towards the point charge.

Ans:- (a)

4. The fig given shows electric field lines in which an electric dipole p is placed. Which of the following statements is correct?



a) The dipole will not experience force.
b) The dipole will experience a force towards right.
c) The dipole will experience a force towards left.
d) The dipole will experience a force upwards.

Ans:- C

5. A hemisphere is uniformly charged positively. The electric field at a point on a diameter away from the centre is directed -

a) perpendicular to the diameter
b) parallel to the diameter
c) at an angle tilted towards the diameter
d) at an angle tilted away from the diameter.

Ans:- a

Answer the following questions:-

1. Why can one ignore quantisation of electric charge when dealing with macroscopic i.e., large scale charges?

Ans:- At macroscopic level, the quantization of charge has no practical importance because the charge at this level is very large as compared to elementary charge 'e' i.e., 1.6×10^{-19} C.

Eg:- A small charge of $1\mu C$ has about 10^{13} electronic charges. In such cases the charge may be treated as continuous and not quantized.

2. What are electric field lines?

Ans:- Electric field lines are a way of pictorially mapping the electric field around a configuration of charges. An electric field line is, in general, a curve drawn in such a way that the tangent to it at each point is in the direction of the net field at that point. An arrow on the curve specifies the direction of the electric field from the two possible directions indicated by a tangent to the curve. A field line is a space curve, i.e., a curve in three dimensions.

3. An electrostatic field line is a continuous curve. That is, a field line cannot have sudden breaks. Why not?

Ans:- An electrostatic field line starts from a positive charge and ends at a negative charge, tangent to this line at any point represents the direction of the field at that point since electric field is continuous so the line has to be continuous.

4. Mention the general properties followed by the electric field lines.

Ans:- The general properties followed by the electric field lines are –

a) The field lines start from positive charges and end at negative charges. If there is a single charge, they may start or end at infinity.
b) In a charge-free region, electric field lines can be taken to be continuous curves without any breaks.
c) Two field lines can never cross each other.
d) Electrostatic field lines do not form any closed loops.

5. No two electric field lines can intersect each other. Why?

Ans:- There would be two directions of electric field intensity at the same point i.e., at the point of intersection if two electric lines of force intersect each other, which is not possible. Hence, no two electric field lines can intersect each other.

6. State the principle of superposition of electric fields.

Ans:- Net electric field strength at a point due to a group of charges is equal to the vector sum of all the electric field strength produced due to individual charges at that point.

7. Does a dipole experience a force when placed in the non-uniform electric field?

Ans:- Dipole experiences a net force, because both of its charges experience unequal forces and in different direction.

Problems:-

1. A liquid drop having 6 excess electrons is kept stationary under a uniform electric field of 25.5 kVm^{-1}. The density of liquid is $1.26 \times 10^3\ kgm^{-3}$. Find the radius of the drop.

Soln:- (a) When liquid drop is held stationary, net force acting on it is zero.

Forces acting on the drop –

(i) Weight of the drop vertically downward and
(ii) Force due to the electric field ($F = qE$) vertically upward.

Weight of drop, W = mg

$$\text{But } m = \left(\frac{4}{3}\pi r^3\right)\rho,$$

where $\left(\frac{4}{3}\pi r^3\right)$ is the volume,

ρ is the density of the liquid and
r is the radius of drop

$$\therefore W = \left(\frac{4}{3}\pi r^3\right)\rho g$$

And electric force, $F = qE = 6e \times E$

(b) Since the drop is stationary, so

$W - F = 0$ (or) $W = F$

$$\text{(or)} \left(\frac{4}{3}\pi r^3\right)\rho g = 6eE$$

$$\text{(or)}\ r^3 = \frac{3 \times 6eE}{4\pi\rho g}$$

Here, $e = 1.6 \times 10^{-19}$ C

$E = 25.5 \times 10^3\ Vm^{-1}$

$\rho = 1.26 \times 10^3\ kg\ m^{-3}$

$g = 9.8\ ms^{-2}$

$$\therefore r^3 = \frac{3 \times 6 \times 1.6 \times 10^{-19} \times 25.5 \times 10^3}{4 \times 3.142 \times 1.26 \times 10^3 \times 1.26 \times 10^3}$$

$$= 0.0789 \times 10^{-18}$$

$$\therefore \text{Radius of drop, } r = \left(0.0789 \times 10^{-18}\right)^{1/3}$$

$$= 4.3 \times 10^{-7}\ m$$

ನಿಗಮದ ರಜತ ಮಹೋತ್ಸವದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ

ಬಿಎಂಟಿಸಿ ನೌಕರರಿಗೆ ಕೋಟಿ ವಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ನೌಕರರಿಗೆ ಈಗಾಗಲೇ ₹ 1 ಕೋಟಿ ಅಪಘಾತ ವಿಮೆ ಮಾಡಲಾಗಿದ್ದು, ಬಿಎಂಟಿಸಿ ನೌಕರರಿಗೂ ವಿಸ್ತರಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಸೋಮವಾರ ನಡೆದ ಬಿಎಂಟಿಸಿ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬಿಎಂಟಿಸಿ ನೌಕರರಿಗೆ ₹ 50 ಲಕ್ಷ ವಿಮೆ ಇದೆ. ಅದನ್ನು ₹1 ಕೋಟಿಗೆ ಏರಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದ್ದೇನೆ. ಸೇವೆಯಲ್ಲಿದ್ದಾಗ ಮೃತಪಟ್ಟ ನೌಕರರ ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಆದೇಶಗಳನ್ನು ತ್ವರಿತ ಗತಿಯಲ್ಲಿ ನೀಡಬೇಕು. ತಾಂತ್ರಿಕ ಕಾರಣಗಳಿಂದ ಏಳೆಂಟು ವರ್ಷಗಳಿಂದ ಕಾಯುತ್ತಿದ್ದಾರೆ. ಅವರಿಗೆಲ್ಲ ಹಂತಹಂತವಾಗಿ ನೇಮಕಾತಿ ಆದೇಶಗಳನ್ನು ನೀಡಬೇಕು’ ಎಂದು ತಿಳಿಸಿದರು.

ಸಾರಿಗೆ ನಿಗಮಗಳ ಪುನಶ್ಚೇತನದ ಏಕಸದಸ್ಯ ಸಮಿತಿಯ ಎಂ.ಆರ್. ಶ್ರೀನಿವಾಸಮೂರ್ತಿ ಮಾತನಾಡಿ, ‘ಲಾಭದ ಒತ್ತಡ ಸಾರಿಗೆ ಸಂಸ್ಥೆಗಳಿಗೆ ಇರಬಾರದು. ಸಾರ್ವಜನಿಕರಿಗೆ ಬೇಕಾದಾಗ ಬಸ್ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಬಲವರ್ಧನೆ ಮಾಡಬೇಕು’ ಎಂದರು.

ತೂಕ ಇಳಿಸಿ: ಹತ್ತು ತಿಂಗಳಲ್ಲಿ ಜಯದೇವ ಹೃದ್ರೋಗ, ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಿಂದ 7,635 ಬಿಎಂಟಿಸಿ ನೌಕರರ ಆರೋಗ್ಯ ತಪಾಸಣೆ ಮಾಡಲಾಗಿದ್ದು, ಶೇ 62ರಷ್ಟು ಜನ ಅತಿ ತೂಕ ಹೊಂದಿದ್ದಾರೆ. ತೂಕ ಇಳಿಸುವುದು ಆರೋಗ್ಯಕ್ಕೆ ಒಳ್ಳೆಯದು. ಶೇ 37ರಷ್ಟು ಮಂದಿಗೆ ಮಧುಮೇಹ, ಶೇ 40 ಜನರಿಗೆ ಅಧಿಕ ರಕ್ತದೊತ್ತಡ ಇದೆ. ಶೇ 22 ಧೂಮಪಾನ, ಮದ್ಯಸೇವನೆ ಮಾಡುತ್ತಿರುವುದು ಕಂಡುಬಂದಿದೆ. ಶೇ 3 ನೌಕರರಲ್ಲಿ ಹೃದಯ ಸಂಬಂಧಿ ಕಾಯಿಲೆ ಇದೆ ಎಂದು ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಮಾಹಿತಿ ನೀಡಿದರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ, ಬಿಎಂಟಿಸಿ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಉಪೇಂದ್ರ ತ್ರಿಪಾಠಿ, ನಿವೃತ್ತ ನಿರ್ದೇಶಕ ಶ್ರೀನಿವಾಸ್ ಇದ್ದರು.

ಆ್ಯಪ್ ಸೇವೆ ಆರಂಭ: ‘ನಮ್ಮ ಬಿಎಂಟಿಸಿ’ ಆ್ಯಪ್ ಅನ್ನು ಬಿಎಂಟಿಸಿ ರಜತ ಮಹೋತ್ಸವದ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಪ್ರಯಾಣಿಕರು ತಮ್ಮ ಹತ್ತಿರದ ಬಸ್ ನಿಲುಗಡೆ, ಬಸ್ ಆಗಮನ, ಪ್ರಯಾಣ ದರ ತಿಳಿಯಬಹುದು. ಪ್ರಯಾಣಿಸುವ ಮಾರ್ಗದ ಲೈವ್ ಲೊಕೇಷನ್ ಅನ್ನು ಶೇರ್ ಕೂಡ ಮಾಡಬಹುದು.

6,500 ಬಸ್‌ಗಳ ಪೈಕಿ ಸದ್ಯಕ್ಕೆ 5 ಸಾವಿರ ಬಸ್‌ಗಳನ್ನು ಟ್ರ್ಯಾಕ್ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. ನಿಲ್ದಾಣದ ಸುತ್ತಲಿನ ಎಟಿಎಂ, ರೆಸ್ಟೋರೆಂಟ್, ಆಸ್ಪತ್ರೆ, ಪೊಲೀಸ್ ಠಾಣೆ, ಪಾರ್ಕಿಂಗ್ ವ್ಯವಸ್ಥೆ ಮಾಹಿತಿಯನ್ನೂ ಪಡೆಯಬಹುದು.

ಹಿರಿತನ, ಅಪಘಾತ ರಹಿತ ಬಸ್ ಚಾಲನೆ ವಿಭಾಗಗಳಲ್ಲಿ ಬೆಳ್ಳಿ ಪದಕಕ್ಕೆ ಆಯ್ಕೆಯಾಗಿರುವ ಬಿಎಂಟಿಸಿ ಚಾಲಕ, ನಿರ್ವಾಹಕ, ತಾಂತ್ರಿಕ ಸಿಬ್ಬಂದಿ ಬಿಎಂಟಿಸಿ ರಜತಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕಡಿಮೆಯಾಗದ ‘ಶಕ್ತಿ’

ರಾಜ್ಯ ಸರ್ಕಾರದ ಮಹತ್ವದ ಯೋಜನೆಯಾದ ‘ಶಕ್ತಿ’ ಜಾರಿಯಾದಾಗ ಎರಡು ತಿಂಗಳು ಪ್ರಯಾಣಿಕರ ಪ್ರಮಾಣ ಹೆಚ್ಚಿರುತ್ತದೆ. ಆಮೇಲೆ ಕಡಿಮೆಯಾಗಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ, ಪ್ರಯಾಣಿಕರ ಪ್ರಮಾಣ ಕಡಿಮೆಯಾಗಿಲ್ಲ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬಸ್ ಕೊರತೆ, ಸಿಬ್ಬಂದಿ ಕೊರತೆ ಇದ್ದರೂ ತಾಳ್ಮೆಯಿಂದ ಕಾರ್ಯನಿರ್ವಹಿಸುವ ಮೂಲಕ ಸಾರಿಗೆ ಅಧಿಕಾರಿಗಳು, ಸಿಬ್ಬಂದಿ ಈ ಯೋಜನೆಯನ್ನು ಯಶಸ್ವಿಗೊಳಿಸಿದ್ದಾರೆ ಎಂದು ಶ್ಲಾಘಿಸಿದರು.

ಪ್ರಮುಖ ಅಂಶಗಳು

- ಅಪಘಾತ ರಹಿತ ಸೇವೆ ಸಲ್ಲಿಸಿದ ಚಾಲಕರಿಗೆ ಬೆಳ್ಳಿ ಪದಕ ವಿತರಿಸಲಾಯಿತು.
- ವಾಯವ್ಯ ವಲಯ ಪ್ರಾರಂಭಿಸಲಾಯಿತು. ಇದರಿಂದ ವಲಯಗಳ ಸಂಖ್ಯೆ ಏಳಕ್ಕೆ ಏರಿತು.
- ಅನುಕಂಪದ ಆಧಾರದಲ್ಲಿ 200 ಮಂದಿಗೆ ನೇಮಕಾತಿ ಆದೇಶ ನೀಡಲಾಯಿತು.
- ಸಾಂಸ್ಕೃತಿಕ ಕಾರ್ಯಕ್ರಮಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪ್ರತ್ಯೇಕ ಅಪಘಾತ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ರಾತ್ರಿ ಹಾಗೂ ಸೋಮವಾರ ಬೆಳಿಗ್ಗೆ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಬಾಲಕ ಸೇರಿ ನಾಲ್ವರು ಮೃತಪಟ್ಟಿದ್ದಾರೆ.

ವಿನಯ್ (17), ಜಯಲಿಂಗ (25), ಅತಿಕ್ ರೆಹಮಾನ್ (23) ಹಾಗೂ ಚಂದ್ರಪ್ಪ (32) ಮೃತರು. ಪ್ರತ್ಯೇಕ ಅಪಘಾತಗಳ ಸಂಬಂಧ ಹೈಗ್ರೌಂಡ್ಸ್, ಜಯನಗರ, ದೇವನಹಳ್ಳಿ ಸಂಚಾರ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

ಕಾರು–ದ್ವಿಚಕ್ರ ವಾಹನ ನಡುವೆ ಅಪಘಾತ: ‘ಶಿರೂರು ಪಾರ್ಕ್ ರಸ್ತೆಯಲ್ಲಿ ಕಾರು ಹಾಗೂ ದ್ವಿಚಕ್ರ ವಾಹನ ನಡುವೆ ಭಾನುವಾರ ತಡರಾತ್ರಿ ಅಪಘಾತ ಸಂಭವಿಸಿದೆ. ದ್ವಿಚಕ್ರ ವಾಹನದಲ್ಲಿದ್ದ ಬಾಲಕ ವಿನಯ್ ಮೃತಪಟ್ಟಿದ್ದಾನೆ. ಹಿಂಬದಿಯಲ್ಲಿ ಕುಳಿತಿದ್ದ ಶೇಖರ್ ಗಾಯಗೊಂಡಿದ್ದಾನೆ’ ಎಂದು ಹೈಗ್ರೌಂಡ್ಸ್ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

ಬಿಬಿಎಂಪಿ ಕಸ ಸಾಗಣೆ ಲಾರಿಗೆ ಬೈಕ್ ಡಿಕ್ಕಿ: ‘ಜಯನಗರ ಮೆಟ್ರೊ ನಿಲ್ದಾಣ ಬಳಿ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಬಿಬಿಎಂಪಿ ಕಸದ ಲಾರಿಗೆ ಬೈಕ್ ಡಿಕ್ಕಿಯಾಗಿ ಅಪಘಾತವಾಗಿದೆ. ಬೈಕ್‌ನಲ್ಲಿದ್ದ ಜಯಲಿಂಗ (25) ಮೃತಪಟ್ಟಿದ್ದಾರೆ’ ಎಂದು ಜಯನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

‘ಕನಕಪುರ ತಾಲ್ಲೂಕಿನ ಜಯಲಿಂಗ, ಕೋಣನಕುಂಟೆಯಲ್ಲಿ ವಾಸವಿದ್ದರು. ಗೃಹೋಪಯೋಗಿ ಉತ್ಪನ್ನ ಮಾರಾಟ ಮಳಿಗೆಯಲ್ಲಿ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದರು. ಸ್ನೇಹಿತನ ಮನೆಗೆ ಹೋಗಿದ್ದ ಜಯಲಿಂಗ, ಭಾನುವಾರ ರಾತ್ರಿ ವಾಪಸು ತಮ್ಮ ಮನೆಯತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಹೇಳಿದರು.

ದ್ವಿಚಕ್ರ ವಾಹನ ಸವಾರ ಸಾವು: ‘ವಿದ್ಯಾರಣ್ಯಪುರದ ಹಳೇ ಪೋಸ್ಟ್ ಕಚೇರಿ ರಸ್ತೆಯಲ್ಲಿ ಸೋಮವಾರ ಬೆಳಿಗ್ಗೆ 8.45ರ ಸುಮಾರಿಗೆ ಸಂಭವಿಸಿರುವ ಅಪಘಾತದಲ್ಲಿ ಚಂದ್ರಪ್ಪ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಅಟ್ಟೂರು ಬಡಾವಣೆ ನಿವಾಸಿ ಚಂದ್ರಪ್ಪ, ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಮಾರ್ಗಮಧ್ಯೆ ಏಕಾಏಕಿ ಬ್ರೇಕ್ ಹಾಕಿದ್ದರು. ಇದರಿಂದಾಗಿ ಬೈಕ್ ಸಮೇತ ಉರುಳಿಬಿದ್ದಿದ್ದರು. ಅದೇ ಮಾರ್ಗದಲ್ಲಿ ಬರುತ್ತಿದ್ದ ಬುಲೆಟ್ ಬೈಕ್, ಚಂದ್ರಪ್ಪ ಅವರಿಗೆ ಗುದ್ದಿತ್ತು. ತೀವ್ರ ಗಾಯಗೊಂಡು ಚಂದ್ರಪ್ಪ ಮೃತಪಟ್ಟಿದ್ದಾರೆ. ಅಪಘಾತದ ಬಳಿಕ ಬುಲೆಟ್ ಬೈಕ್ ಸವಾರ ಪರಾರಿಯಾಗಿದ್ದಾನೆ’ ಎಂದರು.

ಪರೀಕ್ಷೆ ಬರೆದು ಮನೆಗೆ ಹೊರಟಿದ್ದ: ‘ಬಳ್ಳಾರಿ ರಸ್ತೆಯ ಕೋಟೆ ಕ್ರಾಸ್ ಬಳಿ ಕಾರು ಹಾಗೂ ಬೈಕ್ ನಡುವೆ ಭಾನುವಾರ ರಾತ್ರಿ ಡಿಕ್ಕಿ ಸಂಭವಿಸಿದೆ. ಬಿ.ಕಾಂ ಪದವೀಧರ ಅತಿಕ್ ರೆಹಮಾನ್ ಮೃತಪಟ್ಟಿದ್ದಾರೆ’ ಎಂದು ದೇವನಹಳ್ಳಿ ಸಂಚಾರ ಪೊಲೀಸರು ತಿಳಿಸಿದರು.

‘ಚಿಕ್ಕಬಳ್ಳಾಪುರದ ಅತಿಕ್, ಎಂಬಿಎ ಪ್ರವೇಶ ಪರೀಕ್ಷೆ ಬರೆಯಲು ಭಾನುವಾರ ಬೆಳಿಗ್ಗೆ ಬೆಂಗಳೂರಿಗೆ ಬಂದಿದ್ದರು. ಪರೀಕ್ಷೆ ಬರೆದು ರಾತ್ರಿ ವಾಪಸು ಬೈಕ್‌ನಲ್ಲಿ ತಮ್ಮೂರಿಗೆ ಹೊರಟಿದ್ದರು. ಇದೇ ಸಂದರ್ಭದಲ್ಲಿ ಬೈಕ್ ಹಾಗೂ ಕಾರು ನಡುವೆ ಅಪಘಾತ ಸಂಭವಿಸಿದೆ. ಕಾರು ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ’ ಎಂದು ಪೊಲೀಸರು ಹೇಳಿದರು.

ಸ್ಮಾರಕಗಳ ದತ್ತು ಯೋಜನೆಗೆ ಉದ್ಯಮಿಗಳ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಮಾರಕಗಳ ರಕ್ಷಣೆ, ಅಭಿವೃದ್ಧಿಗೆ ರಾಜ್ಯ ಸರ್ಕಾರ ರೂಪಿಸಿರುವ ದತ್ತು ಯೋಜನೆಗೆ ಸ್ಪಂದಿಸಿರುವ ಹಲವು ಕೈಗಾರಿಕೋದ್ಯಮಿಗಳು, ಸಂಘ-ಸಂಸ್ಥೆಗಳ ಮುಖ್ಯಸ್ಥರು ಸೋಮವಾರ ಒಪ್ಪಂದಕ್ಕೆ ಸಹಿ ಹಾಕಿದರು.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಹಮ್ಮಿಕೊಂಡಿದ್ದ ‘ನಮ್ಮ ಸ್ಮಾರಕ: ನಮ್ಮ ಪರಂಪರೆ, ನಮ್ಮ ಗುರುತು, ನಮ್ಮ ಹೆಮ್ಮೆ’ ಅಭಿಯಾನದ ಸಂವಾದ ಮತ್ತು ಡಿಜಿಟಲ್ ವೇದಿಕೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಒಪ್ಪಂದ ಮಾಡಿಕೊಳ್ಳಲಾಯಿತು.

ಹೊಯ್ಸಳರ ವಾಸ್ತುಶಿಲ್ಪದ ಸಮಗ್ರ ಭಾಗಗಳನ್ನು ‘ಇನ್‌ಟ್ಯಾಕ್ ಸಂಸ್ಥೆ’, ವೆಂಕಟಪ್ಪ ಚಿತ್ರಶಾಲೆಯ ನವೀಕರಣಕ್ಕೆ ‘ಬ್ರಿಗೇಡ್ ಸಂಸ್ಥೆ’, ಯೋಜನಾ ನಿರ್ವಹಣೆ ಘಟಕದ ಅಭಿವೃದ್ಧಿಗೆ ‘ಕಲ್ಕಿ ಸಂಸ್ಥೆ’ಗಳು ಸಮ್ಮತಿ ನೀಡಿದವು. ಸಂರಕ್ಷಣಾ ಸ್ಮಾರಕಗಳ ಯೋಜನೆಗೆ ಒಳಪಡಲು ಆಸಕ್ತಿ ವ್ಯಕ್ತಪಡಿಸಿದ ಸಂಸ್ಥೆಗಳಿಗೆ ಇಲಾಖೆಯಿಂದ ಆಶಯಪತ್ರ ವಿತರಿಸಲಾಯಿತು. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಸ್ಮಾರಕಗಳ 3ಡಿ ಲೇಸರ್ ಸ್ಕ್ಯಾನಿಂಗ್ ಪ್ರಾತ್ಯಕ್ಷಿಕೆ ನಡೆಸಿಕೊಟ್ಟಿತು.

ಡಿಜಿಟಲ್ ವೇದಿಕೆಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯದಲ್ಲಿ ಪ್ರವಾಸೋದ್ಯಮ ಬೆಳೆದರೆ ನಾಡಿನ ಸಾಂಸ್ಕೃತಿಕ ಹಿರಿಮೆ ಹೆಚ್ಚುತ್ತದೆ. ಆರ್ಥಿಕತೆಗೆ ಚೈತನ್ಯ ಬರುತ್ತದೆ. ಸ್ಮಾರಕಗಳ ರಕ್ಷಣೆಗೆ ಸಾರ್ವಜನಿಕರು ಕೈ ಜೋಡಿಸಿದರೆ ಇತಿಹಾಸ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸಬಹುದು ಎಂದರು.

ಶಕ್ತಿ ಯೋಜನೆಯಿಂದಾಗಿ ಸಾಮಾನ್ಯ ಮಹಿಳೆಯರೂ ದೇವಾಲಯಗಳಿಗೆ ಭೇಟಿ ನೀಡಲು ಸಾಧ್ಯವಾಗಿದೆ. 60 ಲಕ್ಷ ಮಹಿಳೆಯರು ಯೋಜನೆ ಫಲವಾಗಿ ವಿವಿಧ ದೇವಸ್ಥಾನಗಳಿಗೆ ಭೇಟಿ ನೀಡಿದ್ದಾರೆ ಎಂದು ಹೇಳಿದರು.

ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಸ್ಟಾರ್ಟ್ ಅಪ್ ವಿಷನ್ ಗ್ರೂಪ್ ಹಾಗೂ ಕಲ್ಕಿ ಫೌಂಡೇಶನ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್ ಉಪಸ್ಥಿತರಿದ್ದರು.

ವಿಧಾನಸೌಧದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸ್ಮಾರಕಗಳ ದತ್ತು ಯೋಜನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಸ್ಮಾರಕದ ಪ್ರತಿಕೃತಿ ಸ್ವಚ್ಛಗೊಳಿಸಿದರು

ಶ್ರೀರಾಮಸೇನೆಯ ನಾಲ್ವರ ವಿರುದ್ಧ ಡಕಾಯಿತಿ ಪ್ರಕರಣ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ದನದ ಮಾಂಸ ಸಾಗಿಸುತ್ತಿದ್ದ ವಾಹನ ಚಾಲಕರ ಮೇಲೆ ಹಲ್ಲೆ ನಡೆಸಿದ ಶ್ರೀರಾಮ ಸೇನೆಯ ನಾಲ್ವರು ಕಾರ್ಯಕರ್ತರ ವಿರುದ್ಧ ಸೋಮವಾರ ಡಕಾಯಿತಿ ಪ್ರಕರಣ ದಾಖಲಾಗಿದೆ.

ಘಟನೆ ನಡೆದ ದಿನ ಆ ಮಾರ್ಗವಾಗಿ ಹೊರಟಿದ್ದ ಬೇರೊಂದು ವಾಹನವನ್ನು ಸಂಘಟನೆಯ ಕಾರ್ಯಕರ್ತರು ಅಡ್ಡಗಟ್ಟಿ ಹಣ ದೋಚಿದ್ದಾರೆ ಎಂದು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕರ್ನೂಲ್‌ನ ಕೃಷ್ಣ ಐಸ್ ಕ್ರೀಂ ತಯಾರಿಕೆ ಘಟಕದಿಂದ ಭಾನುವಾರ ಬೆಳಗಿನ ಜಾವ ಐಸ್ ಕ್ರೀಂ ತುಂಬಿಕೊಂಡು ಬರುತ್ತಿದ್ದ ವಾಹನವನ್ನು ಶ್ರೀರಾಮಸೇನೆ ಕಾರ್ಯಕರ್ತರು ಪಾಲನಜೋಗಿಹಳ್ಳಿ ಬಳಿ ಅಡ್ಡಗಟ್ಟಿದ್ದಾರೆ. ವಾಹನ ಜಖಂಗೊಳಿಸಿ, ಚಾಲಕನ ಮೇಲೆ ಹಲ್ಲೆ ನಡೆಸಿ ಆತನ ಬಳಿ ಇದ್ದ ₹90 ಸಾವಿರ ನಗದು ದೋಚಿದ್ದಾರೆ.

ಈ ಬಗ್ಗೆ ಐಸ್‌ಕ್ರೀಂ ವಾಹನ ಚಾಲಕ ಕಿಶನ್ ಲಾಲ್ ಜಾಟ್ ದೂರು ನೀಡಿದ್ದಾರೆ. ಪೊಲೀಸರು ತೋರಿಸಿದ ಫೋಟೊ ಮತ್ತು ವಿಡಿಯೊಗಳಲ್ಲಿರುವ ಶ್ರೀರಾಮ ಸೇನೆಯ ಮಂಜುನಾಯ್ಕ, ದೇವರಾಜ್, ಪವನ್ ಹಾಗೂ ಪುನೀತ್ ಎಂಬುವರನ್ನು ಚಾಲಕ ಗುರುತಿಸಿದ್ದಾನೆ.

ಸಾವಿನ ಸಂಖ್ಯೆ ಒಟ್ಟು 23ಕ್ಕೆ ಏರಿಕೆ

ಬನ್ನೇರುಘಟ್ಟದಲ್ಲಿ ಮತ್ತೆ ನಾಲ್ಕು ಜಿಂಕೆ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಉದ್ಯಾನದಲ್ಲಿ ಜಿಂಕೆಗಳ ಸರಣಿ ಸಾವು ಮುಂದುವರಿದಿದ್ದು, ಕಳೆದ ನಾಲ್ಕು ದಿನಗಳಿಂದ ನಾಲ್ಕು ಜಿಂಕೆಗಳು ಮೃತಪಟ್ಟಿವೆ. ಇದರೊಂದಿಗೆ ಜಿಂಕೆಗಳ ಸಾವಿನ ಸಂಖ್ಯೆ 23ಕ್ಕೆ ಏರಿಕೆ ಆಗಿದೆ.

ಬೆಂಗಳೂರಿನ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಉದ್ಯಾನದಿಂದ 37 ಚುಕ್ಕೆ ಜಿಂಕೆಗಳನ್ನು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಆಗಸ್ಟ್ 17ರಂದು ತರಲಾಗಿತ್ತು. ಆಗಸ್ಟ್ 22ರಿಂದ ಸೆಪ್ಟಂಬರ್ 19ರವರೆಗೆ 13 ಜಿಂಕೆ ಮೃತಪಟ್ಟಿದ್ದವು. ಸೆ.21ರ ವೇಳೆಗೆ ಆ ಸಂಖ್ಯೆ 19ಕ್ಕೆ ಏರಿಕೆಯಾಗಿತ್ತು.

ಅರಣ್ಯ ಸಚಿವ ಈಶ್ವರ ಖಂಡ್ರೆ ಉದ್ಯಾನಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸೋಂಕಿನಿಂದ ಬಳಲುತ್ತಿರುವ ಜಿಂಕೆಗಳ ಸ್ಥಿತಿಯನ್ನು ಸುಧಾರಿಸಲು ವಿಶೇಷ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದರು.

ಪಶುವೈದ್ಯಕೀಯ ಆರೈಕೆಯ ಹೊರತಾಗಿಯೂ ನಾಲ್ಕು ಜಿಂಕೆಗಳು ಮೃತಪಟ್ಟಿವೆ. ನುರಿತ ಪಶುವೈದ್ಯರ ತಂಡವು ಕ್ವಾರಂಟೈನ್‌ನಲ್ಲಿರುವ ಉಳಿದ ಜಿಂಕೆಗಳಿಗೆ ಅಗತ್ಯ ವೈದ್ಯೋಪಚಾರ ಮತ್ತು ಆರೈಕೆ ಮಾಡುತ್ತಿದ್ದಾರೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದ್ದಾರೆ.

ವೈರಾಣು ಅಲ್ಲ, ಬ್ಯಾಕ್ಟೀರಿಯಾ ಸೋಂಕು

ಬನ್ನೇರುಘಟ್ಟ ಉದ್ಯಾನಕ್ಕೆ ಸ್ಥಳಾಂತರಿಸುವ ಮುನ್ನ ಜಿಂಕೆಗಳು ರಕ್ತ ಹೀನತೆ ಮತ್ತು ಯಕೃತ್ತಿನ ಸಮಸ್ಯೆಯಿಂದ ಬಳಲುತ್ತಿದ್ದವು. ಜಿಂಕೆಗಳ ರಕ್ತದ ಮಾದರಿ ವಿಶ್ಲೇಷಣೆಯಲ್ಲಿ ಬ್ಯಾಕ್ಟೀರಿಯಾ ಸೋಂಕಿನಿಂದ ಜಿಂಕೆಗಳು ಬಳಲುತ್ತಿರುವುದು ದೃಢಪಟ್ಟಿದೆ. ಈ ಹಿಂದೆ ವೈರಾಣು ಸೋಂಕಿನಿಂದ ಜಿಂಕೆ ಮೃತಪಟ್ಟಿವೆ ಎಂದು ಶಂಕಿಸಲಾಗಿತ್ತು. ಸತ್ತ 19 ಜಿಂಕೆಗಳ ಪೈಕಿ 14 ಜಿಂಕೆಗಳು ‘ಹೆಮರೇಜಿಕ್ ಎಂಟರೈಟಿಸ್’ ಮತ್ತು ‘ಎಂಡೋಕಾರ್ಡಿಟಿಸ್’ನಿಂದ ಮರಣ ಹೊಂದಿವೆ ಎಂದು ಮರಣೋತ್ತರ ಪರೀಕ್ಷೆಯಲ್ಲಿ ತಿಳಿಸಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಸೋಮವಾರದಿಂದ ಆರಂಭವಾದ ವಿಶ್ವ ಕಾಫಿ ಸಮ್ಮೇಳನದಲ್ಲಿ ಸಚಿವ ಪೀಯೂಷ್ ಗೋಯಲ್ ಕಾಫಿಯನ್ನು ಸವಿದರು. ಬಿಜೆಪಿ ಮುಖಂಡ ಸಿ.ಟಿ.ರವಿ ಇದ್ದರು (ಎಡಚಿತ್ರ). ಸಮ್ಮೇಳನದಲ್ಲಿ ನಾಗಾಲ್ಯಾಂಡ್ ಕಲಾವಿದರು ಜನಪದ ನೃತ್ಯ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರಗಳು

ಪರಿಸರ ಸ್ನೇಹಿಯಾಗಿ ಉದ್ಯಮ ವಿಸ್ತರಿಸಿ: ಸಚಿವ ಪೀಯೂಷ್ ಸಲಹೆ

ಕಾಫಿ ಸಮ್ಮೇಳನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಫಿಯ ರಫ್ತು, ಉತ್ಪಾದನೆ, ಸಂಸ್ಕರಣೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವ ಜತೆಗೆ ಮೌಲ್ಯವರ್ಧಿತ ಉತ್ಪನ್ನಗಳಲ್ಲಿ ಶೂನ್ಯ ಹಾನಿ ಪ್ರಮಾಣ ಇರಬೇಕು. ಯಾವುದೇ ಪದಾರ್ಥಗಳು ಬಳಕೆದಾರರಿಗೆ ಮಾರಕ ಆಗಬಾರದು' ಎಂದು ಕೇಂದ್ರ ವಾಣಿಜ್ಯ ಹಾಗೂ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್ ಹೇಳಿದರು.

ಭಾರತೀಯ ಕಾಫಿ ಮಂಡಳಿ, ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವಾಲಯದ ವತಿಯಿಂದ ಆಯೋಜಿಸಿದ್ದ 5ನೇ ವಿಶ್ವ ಕಾಫಿ ಸಮ್ಮೇಳನ ಹಾಗೂ ವಸ್ತು ಪ್ರದರ್ಶನ ವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಕಾಫಿ ಬೆಳೆಯುವ ಪ್ರದೇಶ, ಮಾರುಕಟ್ಟೆ ವಿಸ್ತರಣೆ ಹಾಗೂ ಕಾಫಿ ಉತ್ಪಾದನೆ ಹೆಚ್ಚಿಸುವ ಬಗ್ಗೆಯೂ ಕಾಫಿ ಮಂಡಳಿ ಗಮನ ಹರಿಸಬೇಕು. ಜತೆಗೆ, ತಂತ್ರಜ್ಞಾನ ಅಳವಡಿಕೆಗೂ ಆದ್ಯತೆ ನೀಡಬೇಕು' ಎಂದು ಸಲಹೆ ನೀಡಿದರು.

'ಗುಣಮಟ್ಟದಲ್ಲಿ ಯಾವುದೇ ರಾಜಿ ತೋರಬಾದರು. ಕಾಫಿ ಉತ್ಪಾದನೆಯ-ಲ್ಲಿ ಸುಸ್ಥಿರತೆ ಇರಲಿ. ಕಾಫಿ ಉತ್ಪನ್ನಗಳ ಮೌಲ್ಯವರ್ಧನೆಯ ಜತೆಗೆ ಅದರ ತ್ಯಾಜ್ಯಗಳನ್ನು ಮರುಬಳಕೆಗೂ ಆದ್ಯತೆ

ಮುಖ್ಯಾಂಶಗಳು

- ಮೌಲ್ಯವರ್ಧಿತ ಉತ್ಪನ್ನಗಳಲ್ಲಿ ಶೂನ್ಯ ಹಾನಿ ಪ್ರಮಾಣ ಕಾಯ್ದುಕೊಳ್ಳಬೇಕು
- ಕಾಫಿ ಉದ್ಯಮದಲ್ಲಿ ತಂತ್ರಜ್ಞಾನ ಅಳವಡಿಕೆಗೆ ಒತ್ತು
- ದೇಶದ ಉತ್ಪಾದನೆಯಲ್ಲಿ ಕರ್ನಾಟಕದ ಕೊಡುಗೆ ಶೇ 70ರಷ್ಟಿದೆ

ನೀಡಬೇಕು. ಪರಿಸರಕ್ಕೆ ಪೂರಕವಾಗಿ ಕಾಫಿ ಉದ್ಯಮ ವಿಸ್ತರಣೆ ಆಗಬೇಕಿದೆ. ಮಹಿಳೆಯರು ಈ ಉದ್ಯಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಸಲಹೆ ಮಾಡಿದರು.

'ದೇಶದ ಕಾಫಿ ಉತ್ಪಾದನೆಯಲ್ಲಿ ಕರ್ನಾಟಕದ ಕೊಡುಗೆ ಶೇ 70ರಷ್ಟಿದೆ. ರಾಜ್ಯದ ಕಾಫಿ ಗುಣಮಟ್ಟಕ್ಕೂ ಹೆಸರುವಾಸಿ ಆಗಿದೆ' ಎಂದರು.

'ಕಾಫಿ ಸೇರಿದಂತೆ ಯಾವುದೇ ಉದ್ಯಮವು ಭೂಮಿ, ನದಿಗಳು ಹಾಗೂ ಪರಿಸರಕ್ಕೆ ಹಾನಿ ತರಬಾರದು. ಕಾಫಿಗೆ ಸಂಬಂಧಿಸಿದ ಸಂಶೋಧನಾ ಸಂಸ್ಥೆಗಳ ಅನ್ವೇಷಣೆಗಳು ರೈತರಿಗೆ ಪೂರಕವಾ-ಗಿರಬೇಕು. ಪುನರುತ್ಪಾದಕ ಕೃಷಿಯ ಮೂಲಕ ಸುಸ್ಥಿರತೆ ಕಾಪಾಡಿಕೊಳ್ಳ ಬೇಕಿದೆ' ಎಂದರು.

'ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಕಾಫಿ ರಫ್ತು ಮಾಡುವ ದೇಶದ ಸಾಲಿನಲ್ಲಿದೆ. ಆದರೆ, ನಮಗೆ ಈ ಉದ್ದಿಮೆಯಲ್ಲಿ ಬೆಳೆಯುವ ಇನ್ನಷ್ಟು ಅವಕಾಶಗಳು ಮತ್ತು ಸಾಧ್ಯತೆಗಳು ಇವೆ. ಕಾಫಿಯನ್ನು ಹೆಚ್ಚು ಹೆಚ್ಚು ಜನರಿಗೆ ಪರಿಚಯಿಸುವುದರ ಜೊತೆಗೆ ಕಾಫಿಗೆ ವೈವಿಧ್ಯಮಯ ಸ್ವಾದವನ್ನು ತುಂಬುವ ಪ್ರಯತ್ನ ನಡೆಸಬೇಕು. ಕಾಫಿಯಲ್ಲಿ ಭಾರತೀಯತೆಯನ್ನು ತುಂಬಿ ಕಾಫಿಯ ಘಮವನ್ನು ವಿಶ್ವದ ಮೂಲೆ ಮೂಲೆಗೂ ತಲುಪಿಸುವ ಪ್ರಯತ್ನಗಳು ನಡೆಯಬೇಕು' ಎಂದರು.

'ಕಾಫಿ ಉತ್ಪನ್ನದಲ್ಲಿ ರಾಸಾಯನಿ-ಕವನ್ನು ಆದಷ್ಟು ಕಡಿಮೆ ಬಳಸಿ ಸುಸ್ಥಿರ ಕಾಫಿ ಕೃಷಿಗೆ ಆದ್ಯತೆ ನೀಡಬೇಕು. ಕಾಫಿ ಉದ್ದಿಮೆಯಲ್ಲಿ ನಾವೀನ್ಯತೆ ತರಬೇಕು. ಮರುಬಳಕೆ, ತ್ಯಾಜ್ಯವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಗಮನ ಹರಿಸಬೇಕು' ಎಂದು ಹೇಳಿದರು.

ಅಂತರರಾಷ್ಟ್ರೀಯ ಕಾಫಿ ಮಂಡಳಿ ಮುಖ್ಯಸ್ಥ ಮಾಸಿಮಿಲಿಯಾನೊ ಫಾಬಿಯಾನ್ ಮಾತನಾಡಿ, 'ರಫ್ತುದಾರರು ಹಾಗೂ ಉತ್ಪಾದಕರ ದೃಷ್ಟಿಯಿಂದ ಈ ಸಮ್ಮೇಳನ ಮಹತ್ವದ್ದಾಗಿದೆ. ಮೌಲ್ಯವರ್ಧನೆಯಲ್ಲಿ ಹೊಸ ತಾಂತ್ರಿಕತೆ ಅಳವಡಿಕೆ ಮಾಡಿಕೊಳ್ಳಬೇಕು. ಜಾಗತಿಕ ತಾಪಮಾನವು ಕಾಫಿ ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಇದಕ್ಕೆ ಸಮ್ಮೇಳನದಲ್ಲಿ ಉತ್ತರ ಕಂಡುಕೊ-ಳ್ಳಲಾಗುವುದು. ಅಂತರರಾಷ್ಟ್ರೀಯ ಕಾಫಿ ಮಂಡಳಿಯು 60ನೇ ವರ್ಷದ ಸಂಭ್ರಮದಲ್ಲಿದೆ' ಎಂದು ಹೇಳಿದರು.

ನ್ಯೂಜಿನಿಯಾದ ಕಾಫಿ ಸಚಿವ ಜೋಯ್ ಕುಲಿ, ನೆಸ್ಲೆ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾರಾಯಣ, ಟಾಟಾ ಸಂಸ್ಥೆಯ ಸುನಿಲ್ ಡಿಸೋಜಾ, ಚಲ ಶ್ರೀಶಾಂತ್, ಕಾಫಿ ಮಂಡಳಿ ಸಿಇಒ ಕೆ.ಜಿ. ಜಗದೀಶ ಹಾಜರಿದ್ದರು.

ಸಮ್ಮೇಳನದ ವಿಶೇಷತೆ

- ಏಷ್ಯಾದಲ್ಲಿ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಆಯೋಜನೆ
- ಸಮ್ಮೇಳನದಲ್ಲಿ 80 ದೇಶಗಳ 2,400 ಪ್ರತಿನಿಧಿಗಳು ಭಾಗಿ
- 208 ಪ್ರದರ್ಶಕ ಮಳಿಗೆಗಳ ಸ್ಥಾಪನೆ
- ಕಾಫಿ ಕ್ಯೂರರ್, ರಫ್ತುದಾರರು ಹಾಗೂ ಸಂಶೋಧಕರು ಸಮ್ಮೇಳನದಲ್ಲಿ ಉಪಸ್ಥಿತಿ

ಸ್ಯಾಚೆಟ್‌ನಲ್ಲಿ ಡಿಕಾಕ್ಷನ್: ಕೊಡಗಿನ ವ್ಯಾಪಾರಿಯ ಹೊಸ ಪ್ರಯೋಗ

ಮೌಲ್ಯವರ್ಧಿತ ಕಾಫಿಯ ಘಮ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಇದು ಬೆಲ್ಲದ ಕಾಫಿ ಪುಡಿ ಸರ್. ಜೊತೆಗೆ ಬೆಲ್ಲದ ಟೀ ಪುಡಿಯೂ ಇದೆ. ನಾಲ್ಕು ಫ್ಲೇ-ವರ್‌ಗಳಲ್ಲಿ ಕಾಫಿ, ಐದು ಫ್ಲೇವರ್‌ಗಳಲ್ಲಿ ಟೀ ಪೌಡರ್ ಇದೆ. ಬಿಸಿನೀರಿಗೆ ಪುಡಿ ಹಾಕಿ ಹಾಲು ಬೆರೆಸಿದರೆ ಸಾಕು. ಬಿಸಿ ಬಿಸಿ ಕಾಫಿ ರೆಡಿ.. ಬಿಸಿ ಬೇಡ ಅಂದ್ರೆ.. ಕೋಲ್ಡ್ ಕಾಫಿ ಮಾಡಿ ಕುಡಿಯಬಹುದು...

ನಗರದ ಅರಮನೆ ಮೈದಾನದಲ್ಲಿ ಸೋಮವಾರದಿಂದ ಆರಂಭವಾದ ಐದನೇ ವಿಶ್ವ ಕಾಫಿ ಸಮ್ಮೇಳದ ವಸ್ತು ಪ್ರದರ್ಶನ ವಿಭಾಗದಲ್ಲಿ ಪುಣೆಯ 'ಫೂಡಿಯಾ' ಎಂಬ ಕಂಪನಿಯ ಸದಸ್ಯರು ತಾವು ತಯಾರಿಸಿದ ಬೆಲ್ಲ ಮಿಶ್ರಿತ ಕಾಫಿ–ಟೀ ಪುಡಿ (ಜಾಗರಿ ಕಾಫಿ) ಗ್ರಾಹಕರಿಗೆ ರುಚಿ ಪರಿಚಯಿಸಿದ ಪರಿ ಇದು.

ಐದು ವರ್ಷಗಳಿಂದ ಈ ಉತ್ಪನ್ನಗಳ-ನ್ನು ತಯಾರಿಸುತ್ತಿದೆ. ಕರ್ನಾಟಕದ ಕಾಫಿಗೆ, ಮಹಾರಾಷ್ಟ್ರದ ಸೊಲ್ಲಾಪುರದ ಬೆಲ್ಲ ಬೆರೆಸಿ ಮೌಲ್ಯವರ್ಧಿಸಿ ನಾಲ್ಕು ಫ್ಲೇವರ್‌ಗಳ 'ಜಾಗರಿ ಕಾಫಿ ಪುಡಿ' ತಯಾರಿಸಿದೆ. ಅಸ್ಸಾಂ ಟೀಗೂ ಹೀಗೆ ಬೆಲ್ಲದ ಪುಡಿ ಮಿಶ್ರಮಾಡಿ, ಆರು ಫ್ಲೇವರ್‌ಗಳ ಬೆಲ್ಲದ ಟೀಪುಡಿ ತಯಾರಿಸಿದೆ.

ಕಾಫಿಯಲ್ಲಿ ಕ್ಲಾಸಿಕ್, ವೆನಿಲಾ, ಹೇಜಲ್ ನಟ್ಸ್ ಮತ್ತು ಮೋಕಾ ಮತ್ತು ಟೀನಲ್ಲಿ ಕ್ಲಾಸಿಕ್, ಶುಂಠಿ, ಏಲಕ್ಕಿ, ಮಸಾಲ, ಲೆಮನ್ ಫ್ಲೇವರ್ ಇದೆ. ಇವೆಲ್ಲವನ್ನು ಬಿಸಿನೀರಿಗೆ ಹಾಕಿ, ಹಾಲು ಬೆರೆಸಿ ಕುಡಿಯಬಹುದು ಎಂದು ಕಂಪನಿಯ ಮಾಲೀಕ ನಿತಿನ್ ನಾಗರೆ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಮಹಾರಾಷ್ಟ್ರದ ಸೊಲ್ಲಾಪುರ, ಸತಾರದ ಮೂಲದವನು ನಾನು. ಅಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬು ಬೆಳೆಯುತ್ತಾರೆ. ಗುಣಮಟ್ಟದ ಬೆಲ್ಲ ತಯಾರಿಸುತ್ತಾರೆ. ಕೋವಿಡ್ ನಂತರ ಬೆಲ್ಲದ ಕಾಫಿ,

ಸಮ್ಮೇಳನದ ಪ್ರದರ್ಶನ ಮಳಿಗೆಯಲ್ಲಿ ಇಡಲಾಗಿದ್ದ ಜಾಗರಿ ಕಾಫಿ —ಪ್ರಜಾವಾಣಿ ಚಿತ್ರ

ಟೀ ಕುಡಿಯುವವರ ಸಂಖ್ಯೆ ಹೆಚ್ಚಿತ್ತು. ಆದರೆ, ಟೀ–ಕಾಫಿ ತಯಾರಿಸುವಾಗ ಬೆಲ್ಲ ಬೆರೆಸಿದರೆ ಹಾಲು ಒಡೆಯುತ್ತಿತ್ತು. ಆಗ ಹೊಳೆದಿದ್ದೇ ಬೆಲ್ಲದ ಮೌಲ್ಯ-ವರ್ಧನೆಯ ಟೀ ಪುಡಿ ತಯಾರಿಸುವ ಐಡಿಯಾ. ಈ ಐಡಿಯಾ ಇಟ್ಟುಕೊಂಡು ಒಂದಷ್ಟು ಸಂಶೋಧನೆ ಮಾಡಿ, ಅಂತಿಮವಾಗಿ ಟೀ–ಕಾಫಿ ಎರಡೂ ಉತ್ಪನ್ನಗಳೂ ತಯಾರಾದವು' ಎಂದು ವಿವರಿಸಿದರು ನಿತಿನ್.

'ಸಕ್ಕರೆಗಿಂತ ಬೆಲ್ಲ ಆರೋಗ್ಯಕ್ಕೆ ಉತ್ತಮ. ಬೆಲ್ಲವನ್ನು ಉತ್ತಮ ಸಿಹಿ ಪದಾರ್ಥವಾಗಿ ಗ್ರಾಹಕರಿಗೆ ತಲುಪಿಸುವುದು ನನ್ನ ಉದ್ದೇಶ ವಾಗಿತ್ತು. ಅದು ಹೊಸ ಉತ್ಪನ್ನವಾಗಿ ನೀಡಬೇಕೆನಿಸಿತು. ಈ ಉತ್ಪನ್ನಗಳಿಗೆ ಬೇಡಿಕೆ ಇದೆ.

ಮುಖ್ಯಾಂಶಗಳು

- ಬೆಲ್ಲ ಮಿಶ್ರಿತ ಕಾಫಿ–ಟೀ ಪುಡಿಯ ರುಚಿ ಸವಿದ ಗ್ರಾಹಕರು
- ಆರು ಫ್ಲೇವರ್‌ಗಳ ಬೆಲ್ಲದ ಟೀ ಪುಡಿ ತಯಾರಿಕೆ
- ಬೆಲ್ಲದ ಮೌಲ್ಯವರ್ಧನೆಗೂ ಒತ್ತು

ಇವು ಆನ್‌ಲೈನ್ ಮಾರ್ಕೆಟ್‌ನಲ್ಲಿ ಲಭ್ಯವಿವೆ. ಸದ್ಯ ಕರ್ನಾಟಕದಲ್ಲೂ ವಿತರಕರಿದ್ದಾರೆ' ಎಂದರು ನಿತಿನ್.

'ಹಾಲು ಮಿಕ್ಸ್ ಮಾಡಿರುವ ಜಾಗರಿ ಕಾಫಿ ಮತ್ತು ಟೀ ಪುಡಿ ಕೂಡ ಇದೆ. ಇದನ್ನು ಕಾಫಿ/ಟೀ ವೆಂಡಿಂಗ್ ಮೆಷಿನ್‌ಗೆ ಬಳಸುತ್ತಾರೆ. ಕಾಫಿ ಕವರ್ ಮೇಲೆ ತಯಾರಿಕೆ ಟಿಪ್ಸ್ ಇರುತ್ತದೆ. ಅದನ್ನು ಅನುಸರಿಸಿದರೆ ಸುಲಭವಾಗಿ ಕಾಫಿ–ಟೀ ತಯಾರಿಸಬಹುದು' ಎಂದಿದ್ದು ಈ ಉತ್ಪನ್ನದ ವಿತರಕ ಧಾರವಾಡದ ಶ್ರೀರಾಮ್.

ಸ್ಯಾಚೆಟ್‌ನಲ್ಲಿ ಕಾಫಿ ಡಿಕಾಕ್ಷನ್: ಕೊಡಗಿನ ವಿರಾಜಪೇಟೆ ಸಮೀಪದ ಅಮ್ಮತ್ತಿ ಅಂಗಡಿಯ ಹೋಮಿ ಅಪ್ಪಚ್ಚು, ಪೊಟ್ಟಣದಲ್ಲಿ ಕಾಫಿ ಡಿಕಾಕ್ಷನ್ ಪ್ಯಾಕ್ ಮಾಡಿ ಮಾರುಕಟ್ಟೆಗೆ ಪರಿಚಯಿಸುತ್ತಿದ್ದಾರೆ. ವಸ್ತು ಪ್ರದರ್ಶನದಲ್ಲಿ ಸ್ಯಾಚೆಟ್‌ನಲ್ಲಿಟ್ಟಿದ್ದ ಡಿಕಾಕ್ಷನ್ ವೀಕ್ಷಕರ ಗಮನ ಸೆಳೆದಿತ್ತು.

'100 ಎಂ.ಎಲ್ ಅಳತೆಯ ಸ್ಯಾಚೆಟ್‌ಗಳಲ್ಲಿ ಕಾಫಿ ಡಿಕಾಕ್ಷನ್‌ನಿಂದ 10 ಲೋಟ ಕಾಫಿ ಮಾಡಬಹುದು. ಸ್ಟ್ರಾಂಗ್ ಕಾಫಿ ಬೇಕೆಂದರೆ 8 ಕಪ್ ಮಾಡಬಹುದು. ಡಿಕಾಕ್ಷನ್‌ಗೆ ಹಾಲು ಮಿಶ್ರಮಾಡಿ, ಬಿಸಿ ಮಾಡಿದರೆ ಸಾಕು. ಬಿಸಿ ಬಿಸಿ ಕಾಫಿ ರೆಡಿ' ಎಂದು ವಿವರಿಸಿದರು ಹೋಮಿ.

ಸಮ್ಮೇಳನದಲ್ಲಿ ಗಮನ ಸೆಳೆದ ಮೌಲ್ಯವರ್ಧಿತ ಉತ್ಪನ್ನ

ಪುಡಿ ತ್ಯಾಜ್ಯದಿಂದ ತೈಲೋತ್ಪಾದನೆ

• ಆದಿತ್ಯ ಕೆ.ಎ.

ಬೆಂಗಳೂರು: ಕಾಫಿ ಪುಡಿಯಿಂದ ಡಿಕಾಕ್ಷನ್ ತಯಾರಿಸಿದ ಮೇಲೆ ಉಳಿಯುವ ತ್ಯಾಜ್ಯವನ್ನು (ಚರಟ) ಹೋಟೆಲ್, ರೆಸ್ಟೋರೆಂಟ್‌ಗಳು, ಮನೆಗಳಲ್ಲಿ ಸಹಜವಾಗಿ ಹೊರಕ್ಕೆ ಎಸೆಯಲಾಗುತ್ತದೆ. ಇಲ್ಲವೇ ತೋಟದಲ್ಲಿರುವ ಗಿಡಗಳಿಗೆ ಗೊಬ್ಬರವಾಗಿ ಬಳಸುತ್ತಾರೆ. ಆದರೆ, ಕೋಲ್ಕತ್ತದ ಮಿತ್ರಾ ಎಂಬುವರು ಆ ತ್ಯಾಜ್ಯವನ್ನೇ ಬಳಸಿ ಕಾಫಿ ತೈಲ(ಎಣ್ಣೆ) ಸಂಶೋಧಿಸಿ ಮಾರುಕಟ್ಟೆಗೆ ಪರಿಚಯಿಸಿದ್ದಾರೆ.

ಈ ತೈಲವನ್ನು ಚರ್ಮಕ್ಕೆ ಲೇಪಿಸುವುದರಿಂದ ಕಾಂತಿ ವೃದ್ಧಿಸಲಿದೆ. ಜತೆಗೆ, ತಲೆಗೆ ಹಚ್ಚುವುದರಿಂದ ಕೂದಲು ಸೊಂಪಾಗಿ ಬೆಳೆಯಲು ಸಹಕಾರಿಯಾಗಲಿದೆ. ವಿಟಮಿನ್–ಇ ಹೆಚ್ಚಲಿದೆ ಎಂದು ಹೇಳುತ್ತಾರೆ ಮಿತ್ರಾ. ಅವರು 'ಕಫಾ ಕುವಾ ಕಂಪನಿ' ಸ್ಥಾಪಿಸಿ, ಈ ಕಾಫಿ ಪುಡಿಯ ತ್ಯಾಜ್ಯವನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುತ್ತಿದ್ದಾರೆ.

ನಗರದ ಅರಮನೆ ಆವರಣದಲ್ಲಿ ಆರಂಭವಾಗಿರುವ 5ನೇ ವಿಶ್ವ ಕಾಫಿ ಸಮ್ಮೇಳನದ ವಸ್ತು ಪ್ರದರ್ಶನದ ನವೋದ್ಯಮ ವಿಭಾಗದಲ್ಲಿ ಈ ತೈಲ ಗಮನ ಸೆಳೆಯುತ್ತಿದೆ. ಈ ಉತ್ಪನ್ನಕ್ಕೆ 'ಅರೇಬಿಕಾ ಅಬ್ಸಲ್ಯೂಟ್' ಹಾಗೂ 'ರೋಬಸ್ಟಾ ಅಬ್ಸಲ್ಯೂಟ್' ಎಂಬ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸಲಾಗಿದೆ.

ಮುಖ್ಯಾಂಶಗಳು

- 10 ಕೆ.ಜಿ ತ್ಯಾಜ್ಯ ಬೇಯಿಸಿದರೆ 300ರಿಂದ 500 ಎಂ.ಎಲ್ ತೈಲ ಲಭ್ಯ
- ತೈಲ ಬಳಕೆಯಿಂದ ದೇಹಕ್ಕೆ ಹಾನಿ ಇಲ್ಲ
- ತಲೆ ಕೂದಲಿನ ಕಾಂತಿ ಹೆಚ್ಚಳ, ಉದುರುವಿಕೆಗೆ ಪರಿಹಾರ

'ಕಾಫಿ ಪುಡಿಯನ್ನು ಬಳಸಿದ ಮೇಲೆ ಸಹಜವಾಗಿ ಅದು ನಿಷ್ಪ್ರಯೋಜಕ ಎಂದು ಎಸೆಯುತ್ತೇವೆ. ಅದನ್ನು ಸಂಗ್ರಹಿಸಿ, ಅದರಲ್ಲಿನ ನೀರಿನ ಅಂಶವನ್ನು ಹೊರಹಾಕಿ ಎಣ್ಣೆ ತೆಗೆ-ಯಲಾಗುತ್ತಿದೆ. 10 ಕೆ.ಜಿ ತ್ಯಾಜ್ಯ ಬೇಯಿಸಿದರೆ 300ರಿಂದ 500 ಎಂ.ಎಲ್‌ನಷ್ಟು ತೈಲ ಬರುತ್ತದೆ. ಕೆಲವು ಬಾರಿ ವ್ಯತ್ಯಾಸ ಆಗಲಿದೆ. ಅದನ್ನು ಸಣ್ಣ ಬಾಟಲ್‌ಗಳಿಗೆ ತುಂಬಿ ಮಾರಾಟ ಮಾಡುತ್ತಿದ್ದೇವೆ' ಎಂದು ಮಿತ್ರಾ ಹೇಳುತ್ತಾರೆ.

'ಈ ತೈಲವನ್ನು ಬಳಸುವುದರಿಂದ ದೇಹಕ್ಕೆ ಹಾನಿ ಇಲ್ಲ. ತಲೆಯ ಕೂದಲ ಕಾಂತಿ ಹೆಚ್ಚಲಿದೆ. ಕೂದಲು ಉದುರುವಿಕೆ ಕಡಿಮೆಯಾಗಲಿದೆ. ಬಿಸಿಲಿನ ತಾಪವನ್ನು ತಡೆದುಕೊಳ್ಳುವ ಶಕ್ತಿಯೂ ಬರಲಿದೆ. ಇದು ಶುದ್ಧನೈಸರ್ಗಿಕ ಎಣ್ಣೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸಮ್ಮೇಳನದ ಪ್ರದರ್ಶನದಲ್ಲಿ ಕಂಡು ಬಂದ ಕಾಫಿ ತ್ಯಾಜ್ಯದಿಂದ ತಯಾರಿಸಿದ ತೈಲದ ಬಾಟಲಿಯನ್ನು ಮಿತ್ರಾ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

'ಚರಟವನ್ನೇ ಸಂಸ್ಕರಿಸಿ ರೋಲ್ ಆನ್ ಅಬ್ಸಲ್ಯೂಟ್ ಎಂಬ ಉತ್ಪನ್ನ ಸಹ ತಯಾರಿಸಲಾಗಿದೆ. ಈ ಎಣ್ಣೆಯನ್ನು ಕಾಲಿನ ಹಿಮ್ಮಡಿ ಭಾಗದಲ್ಲಿ ಉಂಟಾಗುವ ಬಿರುಕುಗಳಿಗೆ ಬಳಸಬಹುದು. ಇದು ಹಿಮ್ಮಡಿ ನೋವಿಗೆ ರಾಮಬಾಣ' ಎಂದು ಹೇಳಿದರು.

'ವಿವಿಧ ಅಳತೆಯ ಬಾಟಲಿಗಳಿಗೆ ₹432ರಿಂದ ₹ 550ರ ವರೆಗೆ ದರವಿದೆ. ಎರಡೂ ಉತ್ಪನ್ನಕ್ಕೆ ಪೇಟೆಂಟ್ ಲಭಿಸಿದೆ. ಬೇಡಿಕೆ ಹೆಚ್ಚಿದರೆ ಮಾರುಕಟ್ಟೆ ವಿಸ್ತರಿಸುವ ಆಲೋಚನೆಯಿದೆ. ಎಲ್ಲವೂ ಪರಿಸರ ಸ್ನೇಹಿ ಉತ್ಪನ್ನಗಳು. ತೈಲ ತೆಗೆದ ಮೇಲೆ ಉಳಿಯುವ ಪದಾರ್ಥವನ್ನು ಉರುವಲಾಗಿ ಬಳಸು-ತ್ತಿದ್ದೇವೆ. ಅದನ್ನೂ ಪ್ಯಾಕೆಟ್ ಮಾಡಿ ಮಾರಾಟ ಮಾಡುತ್ತಿದ್ದೇವೆ' ಎಂದು ಹೇಳಿದರು.

ಮುಖ್ಯಮಂತ್ರಿ ಜತೆ ಚರ್ಚಿಸಿ ಸೂಕ್ತ ನಿರ್ಧಾರ: ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್

‘ಬಿಜೆಪಿ, ಜೆಡಿಎಸ್ ನಾಯಕರು ‘ಕೈ’ನತ್ತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ- ಜೆಡಿಎಸ್ ಮೈತ್ರಿಯಿಂದ ಅಸಮಾಧಾನಗೊಂಡಿರುವ ಆ ಎರಡೂ ಪಕ್ಷಗಳ ನಾಯಕರು ಕಾಂಗ್ರೆಸ್ ಸೇರಲು ಬಯಸಿದ್ದಾರೆ. ಈ ಬಗ್ಗೆ ಚರ್ಚೆ ನಡೆಸಿ, ನಿರ್ಧಾರಕ್ಕೆ ಬರಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಬಿಜೆಪಿ, ಜೆಡಿಎಸ್‌ನ ಅನೇಕ ಮಂದಿ ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ. ಮುಖ್ಯಮಂತ್ರಿ ಹಾಗೂ ಸಂಪುಟ ಸಹೋದ್ಯೋಗಿಗಳ ಜತೆ ಈ ಕುರಿತು ಚರ್ಚೆ ನಡೆಸಲಾಗುವುದು’ ಎಂದರು.

‘ಕಾರ್ಯಕರ್ತರ ಮಟ್ಟದಲ್ಲೇ ಪಕ್ಷ ಸೇರ್ಪಡೆ ಕಾರ್ಯಕ್ರಮ ನಡೆಸುವಂತೆ ಸೂಚನೆ ನೀಡಲಾಗಿದೆ. ಪಕ್ಷಾಂತರ ನಿಷೇಧ ಕಾಯ್ದೆಯ ಬಗ್ಗೆಯೂ ಎಚ್ಚರಿಕೆ ವಹಿಸುತ್ತಿದ್ದೇವೆ’ ಎಂದು ಹೇಳಿದರು.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಕುರಿತು ವರದಿ ಸಲ್ಲಿಸಲು ಸಚಿವರನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ. ಸಚಿವರಾದ ಎಂ.ಬಿ. ಪಾಟೀಲ ವಿದೇಶದಲ್ಲಿದ್ದರೆ, ಕೆ.ಜೆ. ಜಾರ್ಜ್ ಅವರು ಪಕ್ಷದ ಕೇಂದ್ರೀಯ ಚುನಾವಣಾ ಸಮಿತಿಯಲ್ಲಿದ್ದಾರೆ. ಈ ಕಾರಣದಿಂದ ಅವರಿಬ್ಬರನ್ನು ವೀಕ್ಷಕರ ಪಟ್ಟಿಯಲ್ಲಿ ಸೇರಿಸಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಎಲ್ಲ ಲೋಕಸಭಾ ಕ್ಷೇತ್ರಗಳ ಸಂಭವನೀಯ ಅಭ್ಯರ್ಥಿಗಳ ಕುರಿತು ಹತ್ತು ದಿನಗಳಲ್ಲಿ ವರದಿಗಳು ಕೈ ಸೇರಲಿವೆ. ಪ್ರತಿ ಕ್ಷೇತ್ರಕ್ಕೆ ಎರಡು ಅಥವಾ ಮೂರು ಮಂದಿಯ ಹೆಸರು ಶಿಫಾರಸು ಮಾಡುವಂತೆ ಸೂಚಿಸಲಾಗಿದೆ. ಜನವರಿಗೂ ಮುನ್ನ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಲಾಗುವುದು’ ಎಂದರು.

ಮೋಡ ಬಿತ್ತನೆಗೆ ಪರಿಶೀಲನೆ: ‘ರಾಜ್ಯದಲ್ಲಿ ಮಳೆ ಕೊರತೆಯಿಂದ ಉಂಟಾಗಿರುವ ಸಮಸ್ಯೆ ಪರಿಹಾರಕ್ಕೆ ಮೋಡ ಬಿತ್ತನೆ ಕುರಿತು ತಜ್ಞರಿಂದ ವರದಿ ಪಡೆಯಲಾಗಿದೆ. ಮೂರು ರೀತಿಯ ಅಭಿಪ್ರಾಯಗಳು ಬಂದಿವೆ. ಈ ಬಗ್ಗೆ ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು’ ಎಂದರು.

‘ಅಸ್ತಿತ್ವಕ್ಕಾಗಿ ಬಿಜೆಪಿ ನಾಯಕರ ಕಾಲಿಗೆ ಬಿದ್ದ ಎಚ್‌ಡಿಕೆ’

ಕಲಬುರಗಿ: ‘ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ದೆಹಲಿಗೆ ಹೋಗಿ ಬಿಜೆಪಿ ನಾಯಕರ ಕಾಲಿಗೆ ಬಿದ್ದಿದ್ದಾರೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.

‘ಇಂಡಿಯಾ ಒಕ್ಕೂಟ ಘೋಷಿಸಿದಾಗ ತಮಿಳುನಾಡಿಗೆ ನೀರು ಹರಿಸಲಾಗಿದೆ’ ಎಂಬ ಕುಮಾರಸ್ವಾಮಿ ಆರೋಪಕ್ಕೆ ಚಿಂಚೋಳಿಯಲ್ಲಿ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಅವರನ್ನು ಕುಮಾರಸ್ವಾಮಿ ಅವರು ಹಾಗೂ ಪ್ರಧಾನಿ ಮೋದಿ ಅವರನ್ನು ಜೆಡಿಎಸ್ ರಾಷ್ಟ್ರೀಯ ಘಟಕದ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಭೇಟಿ ಮಾಡಿದ್ದಾರೆ. ಇವರು ಬರೀ ತಮ್ಮ ಪಕ್ಷದ ರಾಜಕೀಯ ಭವಿಷ್ಯದ ಬಗ್ಗೆ ಚರ್ಚಿಸಿದ್ದಾರೋ ಅಥವಾ ಕರ್ನಾಟಕದ ಜನತೆಯ ಭವಿಷ್ಯದ ಬಗ್ಗೆಯೂ ಮಾತುಕತೆ ನಡೆಸಿದ್ದಾರೆಯೇ? ಕಾವೇರಿ ಬಗ್ಗೆಯೂ ಚರ್ಚೆ ಮಾಡಿ ಬಂದಿದ್ದಾರೆಯೇ’ ಎಂದು ಪ್ರಶ್ನಿಸಿದರು.

‘ದೆಹಲಿಗೆ ಹೋಗಿ 2-3 ದಿನ ಕಾದು ಕುಳಿತರೂ ಕೇಂದ್ರದ ಸಚಿವರು ಭೇಟಿಗೆ ಸಿಗುತ್ತಿಲ್ಲ. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಏಕಪಾತ್ರ ಅಭಿನಯ ಕಾಣಿಸುತ್ತಿದೆ. ಎಲ್ಲ ನಿರ್ಧಾರವನ್ನೂ ಅವರೇ ತೆಗೆದುಕೊಳ್ಳುತ್ತಿದ್ದಾರೆ. ಜನರಿಗೆ ಬೇರೆ ಸಚಿವರ ಹೆಸರೇ ಗೊತ್ತಿಲ್ಲ. ಕೆಲಸ ಇಲ್ಲದೆ ಬಾಗಿಲು ಹಾಕಿಕೊಂಡು ಸುಮ್ಮನೆ ಕುಳಿತಿರುವ ಕೇಂದ್ರ ಸಚಿವರ ಮನೆಯ ಮುಂದೆ ಎಷ್ಟು ದಿನ ಎಂದು ಕಾಯಬೇಕು’ ಎಂದು ಬೇಸರ ವ್ಯಕ್ತಪಡಿಸಿದರು.

ಭೂಮಿ ಕಬಳಿಕೆ: ಜೋಶಿ, ನಿರಾಣಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ಕುಂದಗೋಳ: ‘ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕೆ ಸ್ವಾಧೀನ ಮಾಡಿಕೊಳ್ಳಲು ಹಿಂದಿನ ಬಿಜೆಪಿಯ ರಾಜ್ಯ ಸರ್ಕಾರ ಹುನ್ನಾರ ನಡೆಸಿತ್ತು. ಕೇಂದ್ರ ಸಚಿವ ಮತ್ತು ಈ ಭಾಗದ ಮುಖಂಡ ಪ್ರಲ್ಹಾದ ಜೋಶಿ ಸಹ ರೈತರ ಭೂಮಿ ಕಬಳಿಕೆಗೆ ಪ್ರಯತ್ನ ನಡೆಸಿದ್ದಾರೆ’ ಎಂದು ಮಾಜಿ ಶಾಸಕ ಎಸ್.ಐ. ಚಿಕ್ಕನಗೌಡರ ಆರೋಪಿಸಿದರು.

‘ಹುಬ್ಬಳ್ಳಿ ತಾಲ್ಲೂಕಿನ ಛಬ್ಬಿ, ಬೆಳಗಲಿ, ಅದರಗುಂಚಿ, ಶೆರೇವಾಡ, ನೂಲ್ವಿ ಮತ್ತು ಛಬ್ಬಿ ಭಾಗದಲ್ಲಿನ 2,000 ಎಕರೆ ಕೃಷಿ ಭೂಮಿಯನ್ನು ನಂಬಿ ರೈತರು ಜೀವನ ನಡೆಸಿದ್ದಾರೆ. ಆದರೆ, ಹಿಂದಿನ ಸರ್ಕಾರದಲ್ಲಿನ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿದ್ದ 5 ಜನರ ಸಮಿತಿಯು ಭೂಮಿ ಸ್ವಾಧೀನ ಪ್ರಕ್ರಿಯೆ ಆರಂಭಿಸಿತ್ತು. ಅಲ್ಲಿಯೇ ಜೋಶಿ ಅವರಿಗೆ ಸಂಬಂಧಿಸಿದ ಕಂಪನಿಗಳಿದ್ದು, ಇದಕ್ಕೆ ಪೂರಕವಾಗಿ ಜೋಶಿ ಅವರು ಭೂ ಸ್ವಾಧೀನಕ್ಕೆ ಮುಂದಾಗಿದ್ದರು’ ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

‘ಜಮೀನನ್ನೂ ಬಿಟ್ಟುಕೊಡುವುದಿಲ್ಲ. ಸ್ವಾಧೀನಕ್ಕೆ ಮುಂದಾದರೆ, ಪ್ರತಿಭಟಿಸುತ್ತೇವೆ. ಸ್ಪಂದಿಸದಿದ್ದರೆ, ಕುಟುಂಬದ ಸದಸ್ಯರೊಂದಿಗೆ ಸಂಸದರ ಮನೆ ಎದುರು ಧರಣಿ ನಡೆಸುತ್ತೇವೆ. ಆತ್ಮಹತ್ಯೆಗೂ ಹಿಂಜರಿಯಲ್ಲ’ ಎಂದರು.

‘ಭೂಸ್ವಾಧೀನ ಪ್ರಕ್ರಿಯೆ ಕೈಬಿಡಲು ಕೋರಿ ಸೆ. 5ರಂದು ಜಿಲ್ಲಾಧಿಕಾರಿಗೆ, ಜಿಲ್ಲಾ ಉಸ್ತುವಾರಿ ಸಚಿವರು, ಕೈಗಾರಿಕಾ ಸಚಿವರಿಗೆ ಮನವಿ ಸಲ್ಲಿಸಿದ್ದೇವೆ. ಐದು ಗ್ರಾಮ ಪಂಚಾಯಿತಿಗಳಲ್ಲಿ ಠರಾವು ಪಾಸು ಮಾಡಿದ್ದೇವೆ’ ಎಂದರು.

ಮತ್ತೊಬ್ಬ ತಹಶೀಲ್ದಾರ್ ವಿರುದ್ಧ ಪ್ರಕರಣ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮೂಡಿಗೆರೆ ತಾಲ್ಲೂಕಿನಲ್ಲಿ ನಡೆದಿರುವ ಅಕ್ರಮ ಭೂ ಮಂಜೂರಾತಿ ಪ್ರಕರಣದಲ್ಲಿ ಮತ್ತೊಬ್ಬ ತಹಶೀಲ್ದಾರ್ ಸೇರಿ ನಾಲ್ವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ಕಂದಾಯ ನಿರೀಕ್ಷಕ ಸೇರಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಕಂದಾಯ ಕಾಯ್ದೆ ನಿಯಮ ಪಾಲಿಸದೆ ಕಂದಾಯಭೂಮಿ ಮಂಜೂರು ಮಾಡಿದ ಆರೋಪದಲ್ಲಿ ಕಂದಾಯ ನಿರೀಕ್ಷಕ ಎನ್.ಎಲ್. ಗಿರೀಶ್, ಗ್ರಾಮ ಲೆಕ್ಕಾಧಿಕಾರಿ ನೇತ್ರಾವತಿ ಅವರನ್ನು ಬಂಧಿಸಲಾಗಿದೆ. ತಹಶೀಲ್ದಾರ್ ಆಗಿದ್ದ ಎಚ್.ಎಂ.ರಮೇಶ್, ಹಿಂದಿನ ಶಿರಸ್ತೇದಾರ್ ಪಾಲಯ್ಯ ವಿರುದ್ಧ ಪ್ರಕರಣ ದಾಖಲಾಗಿದೆ. ಗ್ರಾಮ ಲೆಕ್ಕಾಧಿಕಾರಿ ಗಿರೀಶ್ ಹೆಚ್ಚುವರಿಯಾಗಿ ಕಂದಾಯ ನಿರೀಕ್ಷಕರ ಹುದ್ದೆ ನಿಭಾಯಿಸುತ್ತಿದ್ದರು.

ಅಕ್ರಮ ಭೂಮಂಜೂರಾತಿ ಬಗ್ಗೆ ವಿಚಾರಣೆ ನಡೆಸುತ್ತಿದ್ದ ಚಿಕ್ಕಮಗಳೂರು ಉಪವಿಭಾಗಾಧಿಕಾರಿ, ಅಕ್ರಮವಾಗಿ ಏಳು ಜನರ ಹೆಸರಿಗೆ ಮಾಡಿದ್ದ ಖಾತೆಗಳನ್ನು ರದ್ದುಪಡಿಸಿ ಆದೇಶಿಸಿದ್ದಾರೆ. ಇದರಲ್ಲಿ ಭಾಗಿಯಾಗಿರುವ ಅಧಿಕಾರಿ, ನೌಕರರ ವಿರುದ್ಧ ಕ್ರಮಕ್ಕೆ ಸೂಚಿಸಿದ್ದರು. ಅದರಂತೆ ತಹಶೀಲ್ದಾರ್ ಶಿಲ್ಪಶ್ರೀ ಭಾನುವಾರ ದೂರು ನೀಡಿದ್ದು, ನಾಲ್ವರ ಮೇಲೆ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ. ‘ಭೂಮಂಜೂರಾತಿ ಅರ್ಜಿಗಳನ್ನು ಶಾಸಕರ ಅಧ್ಯಕ್ಷತೆಯ ಬಗರ್ ಹುಕುಂ ಸಮಿತಿ ಮುಂದೆ ಮಂಡಿಸಿ ಅನು ಮೋದನೆ ಪಡೆಯಬೇಕು. ಆದರೆ, ನೇರವಾಗಿ ವ್ಯಕ್ತಿಗಳ ಹೆಸರಿಗೆ ಭೂಮಿ ಮಂಜೂರು ಮಾಡಲಾಗಿದೆ.’ ಎಂದು ದೂರಿನಲ್ಲಿ ವಿವರಿಸಿದ್ದಾರೆ. ತಹಶೀಲ್ದಾರ್ ಮತ್ತು ಶಿರಸ್ತೇದಾರ್ ತಲೆಮರೆಸಿಕೊಂಡಿದ್ದು, ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಕೆಎಸ್‌ಒಯು ಪರೀಕ್ಷೆ ಮುಂದಕ್ಕೆ

ಮೈಸೂರು: ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಇದೇ 26, 28 ಹಾಗೂ 29 ರಂದು ನಡೆಯಬೇಕಿದ್ದ ಬಿ.ಎ., ಬಿ.ಕಾಂ., ಪ್ರಥಮ ಎಂ.ಎ. ಹಾಗೂ ಎಂ.ಕಾಂ. ಪರೀಕ್ಷೆ ಮುಂದೂಡಲಾಗಿದೆ. ‘26ರಂದು ಬೆಂಗಳೂರು ಬಂದ್, 29ರಂದು ಕರ್ನಾಟಕ ಬಂದ್ ಕರೆ, 28ರ ಈದ್ ಮಿಲಾದ್ ನಿಮಿತ್ತ ಸರ್ಕಾರಿ ರಜೆಯೇ ಮುಂದೂಡಿಕೆಗೆ ಕಾರಣ ಎಂದು ಕುಲಸಚಿವ ತಿಳಿಸಿದ್ದಾರೆ.

ಹೇಳಿಕೆ ನೀಡದಂತೆ ಸಚಿವ ಕೆ.ಎನ್. ರಾಜಣ್ಣಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕರ್ನಾಟಕದಲ್ಲಿ ಮತ್ತೆ ಮೂರು ಉಪ ಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸಬೇಕು ಎಂದು ಹೇಳಿಕೆ ನೀಡಿರುವ ಸಹಕಾರ ಸಚಿವ ಕೆ.ಎನ್. ರಾಜಣ್ಣ ಜತೆಗೆ ನಾನು ಮಾತನಾಡಿದ್ದೇನೆ. ಈ ವಿಷಯದ ಬಗ್ಗೆ ಮಾಧ್ಯಮಗಳ ಮುಂದೆ ಹೇಳಿಕೆ ನೀಡದಂತೆ ಹೇಳಿದ್ದೇನೆ’ ಎಂದು ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ರಾಜಣ್ಣ ಜತೆಗೆ ಮಾತನಾಡಿದ್ದೇನೆ. ಯಾವ ಕಾರಣಕ್ಕೆ ಈ ಹೇಳಿಕೆ ನೀಡಿದ್ದೀರಿ ಎಂದು ಪ್ರಶ್ನಿಸಿದ್ದೇನೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ ಎಂಬುದಾಗಿ ರಾಜಣ್ಣ ಸ್ಪಷ್ಟಪಡಿಸಿದ್ದಾರೆ. ಈ ಬಗ್ಗೆ ಮತ್ತೆ ಹೇಳಿಕೆ ನೀಡಬೇಡಿ ಎಂಬುದಾಗಿ ಸೂಚಿಸಿದ್ದೇನೆ’ ಎಂದರು.

ಸಾರಾಯಿ ಗ್ಯಾರಂಟಿ ಸರ್ಕಾರ: ಬೊಮ್ಮಾಯಿ

ಬೆಂಗಳೂರು: ‘ಬರಗಾಲವಿರುವಾಗ ಸರ್ಕಾರ ನೀರು ಕೊಡದೇ ಸಾರಾಯಿ ಕುಡಿಸಲು ಹೊರಟಿರುವುದು ದುರಂತ. ಇದು ಸಾರಾಯಿ ಗ್ಯಾರಂಟಿ ಸರ್ಕಾರ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ತಮ್ಮ ‘ಎಕ್ಸ್’ ಖಾತೆಯಲ್ಲಿ ಟೀಕಿಸಿದ್ದಾರೆ.

‘ಹಳ್ಳಿಗಳಲ್ಲಿ ಮದ್ಯದ ಅಕ್ರಮ ಮಾರಾಟ ತಡೆಗೆ ಹೆಚ್ಚಿನ ಮದ್ಯದಂಗಡಿ ತೆರೆಯುವುದಾಗಿ ಅಬಕಾರಿ ಸಚಿವರು ಹೇಳಿದ್ದಾರೆ. ಅಕ್ರಮ ತಡೆಯಲು ಆಗದಿದ್ದರೆ ಅಬಕಾರಿ ಇಲಾಖೆ ಯಾವ ಕೆಲಸ ಮಾಡುತ್ತಿದೆ’ ಎಂದು ಪ್ರಶ್ನಿಸಿದ್ದಾರೆ.

ಸಂಸದ ಬಸವರಾಜು ವಿರುದ್ಧ ಎಚ್‌ಡಿಕೆ ವಾಗ್ದಾಳಿ

ಬೆಂಗಳೂರು: ತುಮಕೂರು ಬಿಜೆಪಿ ಸಂಸದ ಜಿ.ಎಸ್.ಬಸವರಾಜು, ಸಹಕಾರ ಸಚಿವ ಕೆ.ಎನ್.ರಾಜಣ್ಣ ವಿರುದ್ಧ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಸೋಮವಾರ ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಅದ್ಯಾರೋ ಸಂಸದ ಬಸವರಾಜು ಎಂಬ ವ್ಯಕ್ತಿ ‘ತುಮಕೂರು ಜಿಲ್ಲೆಯ ಜನರು ದೇವೇಗೌಡರಿಗೆ ಮತ ಹಾಕಬಾರದು. ಮತ್ತೆ ಅವರನ್ನು ಸೋಲಿಸಬೇಕು’ ಎಂದು ಹೇಳಿಕೆ ನೀಡಿದ್ದಾರೆ. ಇದು ದರ್ಪದ ಹೇಳಿಕೆ. ತುಮಕೂರು ಜಿಲ್ಲೆ ಆ ವ್ಯಕ್ತಿಯ ಕೊಡುಗೆ ಏನು? ದೇವೇಗೌಡರು ಏನೂ ಮಾಡಲಿಲ್ಲ ಎನ್ನುವ ನೀನು ಈಗ ಸಂಸದನಾಗಿದ್ದೀಯಲ್ಲ. ಏನು ಮಾಡಿದ್ದೀಯಾ’ ಎಂದು ಗುಡುಗಿದರು.

‘ದೇವೇಗೌಡರು ಚುನಾವಣೆಗೆ ನಿಲ್ಲಬೇಕು. ನಾವು ಋಣ ತೀರಿಸಬೇಕು’ ಎಂದು ಸಹಕಾರ ಸಚಿವ ರಾಜಣ್ಣ ವ್ಯಂಗ್ಯವಾಗಿ ಹೇಳಿದ್ದಾರೆ. ಇವರೆಲ್ಲಾ ದೇವೇಗೌಡರ ಹೆಸರು ಹೇಳಿಕೊಂಡು ರಾಜಕೀಯಕ್ಕೆ ಬಂದವರು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.

ಇ–ಮೇಲ್:zped_cta@yahoo.com ದೂರವಾಣಿ ಸಂ:08194–222372

ಸಂ.ಕಾಇಂ/ಪಂರಾಜ್‌ಇಂವಿ/ಚಿದು/ಜೆಇ–1/ಟೆಂಡರ್/2023–24/969 ದಿ: 21.09.2023

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

ಸ್ಟ್ಯಾಂಡರ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟಂತೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗ ವ್ಯಾಪ್ತಿಯ 2023–24ನೇ ಸಾಲಿಗೆ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ:460.00 ಲಕ್ಷಗಳಿಗೆ ಅನುಮೋದನೆಯಾದ ಹಾಗೂ ಮುಂದುವರೆದ ಮತ್ತು ಪೂರ್ಣಗೊಂಡ ಕಾಮಗಾರಿಗಳ 3ನೇ ತಂಡದ ತಪಾಸಣಾ ವರದಿ ನೀಡಲು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in OR E-Proc Help desk Phone No: 080-22230960, 080-22234115 ಅಥವಾ ದೂ ಸಂಖ್ಯೆ: 08194–222372 ಗೆ ಸಂಪರ್ಕಿಸಲು ಕೋರಿದೆ.
ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ 07.10.2023 ಸಮಯ: 16.00
ತಾಂತ್ರಿಕ ಬಿಡ್ ತೆರೆಯುವ ಅಂತಿಮ ದಿನಾಂಕ: 09.10.2023ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 10.10.2023 ಸಮಯ 16.00

RO.No.227:DIPR/CTA/KSMCA/2023-24 ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಕರ್ನಾಟಕ ಸರ್ಕಾರ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052.
ದೂರವಾಣಿ ಸಂಖ್ಯೆ: 080–29901193 ಇ–ಮೇಲ್: mdkmvstdc@gmail.com https://kmvstdcl.karnataka.gov.in/

ಸಂಖ್ಯೆ: ಕಮವಾಪಪಂಅನಿ/ಸಿ&ಆ/ಸಿಆರ್–30/2023–24 ದಿನಾಂಕ : 21.09.2023

ಟೆಂಡರ್ ಪ್ರಕಟಣೆ (ಇ-ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕೇಂದ್ರ ಕಚೇರಿ ಹಾಗೂ ಜಿಲ್ಲಾ ಕಚೇರಿಗಳಲ್ಲಿ 'ಸಿ' ಮತ್ತು 'ಡಿ' ಸಮೂಹದ ಹುದ್ದೆಗಳಲ್ಲಿ ಹೊರಸಂಪನ್ಮೂಲದ ಆಧಾರದ ಮೇರೆಗೆ ಕಾರ್ಯನಿರ್ವಹಿಸಲು ಸಿಬ್ಬಂದಿ ಸೇವೆಯನ್ನು ಒದಗಿಸಲು ನೊಂದಾಯಿತ ಹೊರ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಇ–ಪೋರ್ಟಲ್ ಮುಖಾಂತರ ದಿನಾಂಕ : 21.09.2023 ರಂದು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವನ್ನು 04.10.2023 ರ ಸಂಜೆ 4.00 ಗಂಟೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ನೋಡಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

DIPR/CP/1422/Zenkar/2023-24

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕಾಮಗಾರಿ ಇಲಾಖೆ, ಕೇಂದ್ರ ಕಚೇರಿ, ಶಾಂತಿನಗರ, ಬೆಂಗಳೂರು – 560 027.

ಸಂಖ್ಯೆ: ಬೆಮಸಾ/ಕೇಕ/ಕಾಇ/ಕಾನಿಅ/783/2023–24 ದಿನಾಂಕ: 22.09.2023

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 8/2023-24

ಅರ್ಹ ಗುತ್ತಿಗೆದಾರರಿಂದ (1) ''ಬೆಂಗಳೂರು ಹೆಬ್ಬಾಳದಲ್ಲಿರುವ ಬೆಂ.ಮ.ಸಾ.ಸಂಸ್ಥೆಯ ಬಸ್ ಘಟಕ-28ರಲ್ಲಿ ವಿದ್ಯುತ್ ಬಸ್ ಚಾರ್ಜಿಂಗ್‌ಗಾಗಿ ಅಭಿವೃದ್ಧಿ ಕಾಮಗಾರಿ ಕೆಲಸಗಳನ್ನು ನಿರ್ವಹಿಸುವುದು''. ಟೆಂಡರ್‌ಗಿಟ್ಟ ಮೊತ್ತ: ರೂ. 200.00 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ: ರೂ. 3,00,000/-. ಕೆಲಸಕ್ಕೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಭಾಗವಹಿಸುವ ಗುತ್ತಿಗೆದಾರರು ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು. (1) ಟೆಂಡರ್ ಸಲ್ಲಿಸಲು ಕಡೆ ದಿನಾಂಕ: 05.10.2023. (2) ಟೆಂಡರ್ ತೆರೆಯುವ ದಿನಾಂಕ: 09.10.2023.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು. ಬೆಂ.ಮ.ಸಾ.ಸಂಸ್ಥೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

“ಜ್ಞಾನ ಸಂಗಮ”, ಬೆಳಗಾವಿ–590018, ಕರ್ನಾಟಕ, ಭಾರತ

ಕ್ರಮ ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./ಸ.ಅ./ಎಮ್‌ಪಿ/2023–24/ಐ.ಎಫ್.ಟಿ.ನಂ.27/3141 ದಿನಾಂಕ:23 SEP 2023

ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟಿ ಪದ್ಧತಿಯಲ್ಲಿ)–2ನೇ ಕರೆ (ಇ–ಪ್ರೊಕ್ಯೂರಮೆಂಟ್ ಮೂಲಕ)

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999 ನಿಯಮ–2000 ರನ್ವಯ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಕೆಲಸದ ಹೆಸರು:– ವಿತಾವಿ ಪ್ರಾದೇಶಿಕ ಕಛೇರಿಗಳಾದ ಬೆಂಗಳೂರು, ಮೈಸೂರು, ಕಲಬುರಗಿ, ವಿಸ್ತರಣಾ ಕೇಂದ್ರ, ಮಂಗಳೂರು, ಎನ್‌ಎಎಸ್‌ಡಿ., ದಾಂಡೇಲಿ, ಕೌಶಲ್ಯ ಅಭಿವೃದ್ಧಿ ಕೇಂದ್ರ, ತಳಕಲ್ ಮತ್ತು ಸ್ನಾತಕೋತ್ತರ ಕೇಂದ್ರ, ವಿಐಎಟಿ., ಮುದ್ದೇನಹಳ್ಳಿಗೆ ಮಾನವ ಸಂಪನ್ಮೂಲ ಸಿಬ್ಬಂದಿಗಳನ್ನು ಹೊರ ಸಂಪನ್ಮೂಲ ಏಜನ್ಸಿಯಿಂದ ಒದಗಿಸುವ ಕೆಲಸದ ಮೊತ್ತ ರೂ.1,82,67,911/–. ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ:23.09.2023 ರಿಂದ ಪಡೆದುಕೊಳ್ಳಬಹುದು.

ಸಹಿ/–ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,ಬೆಳಗಾವಿ

DIPR/BGM/RO-NO-442/KSMCA/2023-24

ಪುರಸಭಾ ಕಾರ್ಯಾಲಯ ಬೊಮ್ಮಸಂದ್ರ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560 099
ಫೋನ್: 080–27834655, E-Mail: itstaff_ulb_bommasandra@yahoo.com

ಸಂ:TMCB/ENG/MF/06/2023-24 ದಿನಾಂಕ:25.09.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KWರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

2023–24ನೇ ಸಾಲಿನ ಬೊಮ್ಮಸಂದ್ರ ಪುರಸಭಾ ನಿಧಿ ಅನುದಾನದಡಿ, ಒಟ್ಟು 06 ಕಾಮಗಾರಿಗಳ ಒಟ್ಟು ಮೊತ್ತ ರೂ. 146.75 ಲಕ್ಷಗಳಿಗೆ ಐಟಂವಾರು ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನ ಏಕಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12–10–2023ರ ಸಮಯ: 17:00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 13–10–2023ರ ಸಮಯ: 17:30 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ (itstaff_ulb_bommasandra@yahoo.com) ಅಥವಾ ಪುರಸಭೆಯ ಅಭಿಯಂತರರನ್ನು ಸಂಪರ್ಕಿಸುವುದು.

ಸಹಿ/– ಅಧ್ಯಕ್ಷರು ಪುರಸಭೆ, ಬೊಮ್ಮಸಂದ್ರ | ವಾಸಾಸಂಇ/ವಾಪ್ರ/ಜಿಎ/1423/2023–24 | ಸಹಿ/– ಮುಖ್ಯಾಧಿಕಾರಿ ಪುರಸಭೆ, ಬೊಮ್ಮಸಂದ್ರ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ

[ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವಕ್ಫ್ ಕಾಯ್ದೆ 1995 ರ ಅಡಿಯಲ್ಲಿ ರಚಿಸಲಾದ ಶಾಸನಬದ್ಧ ಸಂಸ್ಥೆ (ಕೇಂದ್ರ ಕಾಯಿದೆ –43–1995)]
'ದಾರುಲ್ ವಕ್ಫ್', #6, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560 052, ದೂರವಾಣಿ : 080–22264594/22264595, ಫ್ಯಾಕ್ಸ್ : 080–22255663, ವೆಬ್‌ಸೈಟ್: www.karwakf.org ಇ–ಮೇಲ್ : info@karwakf.org

ಸಂಖ್ಯೆ : ಕರಾವಮಂ/ಇಎನ್‌ಜಿ/ಎಂಯುಆರ್/1/ಕೆಎಲ್‌ಆರ್/2008–09 ದಿನಾಂಕ:25.09.2023

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ, ಮುರುಗಮಲ್ಲದ ಹಜ್ರತ್ ಫಕೀ ಶಾಹ್ ವಾಲಿ ದರ್ಗಾದ ಆವರಣದಲ್ಲಿರುವ ಯಾತ್ರಿ ನಿವಾಸ್ (ಅತಿಥಿ ಗೃಹ) ವನ್ನು ನಡೆಸಲು ಮತ್ತು ನಿರ್ವಹಣೆ ಮಾಡಲು ಅರ್ಹ ಗುತ್ತಿಗೆಗಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಿದೆ. ಆಸಕ್ತ ಗುತ್ತಿಗೆದಾರರು ಇಎಂಡಿ ಮೊತ್ತ ರೂ. 1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ದಿನಾಂಕ 11.10.2023ರ ಸಂಜೆ 3.00 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಿ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಬಿಡ್‌ಗಳನ್ನು ದಿನಾಂಕ : 12.10.2023ರ ಸಂಜೆ 3.00 ಗಂಟೆಗೆ ತೆರೆಯಲಾಗುವುದು.
ಇ–ಟೆಂಡರನ್ನು https://kppp.karnataka.gov.inನಲ್ಲಿ ಮಾತ್ರ ಅಪ್‌ಲೋಡ್ ಮಾಡಬೇಕಾಗಿರುತ್ತದೆ. ಸಂಬಂಧಿತ ದಸ್ತಾವೇಜುಗಳನ್ನು ಸಂಸ್ಥೆಯ ವೆಬ್‌ಸೈಟ್ (karwakf. karnataka.gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಇ–ಮೇಲ್ : karwakf@karnataka.gov.in ಅಥವಾ ಮೊಬೈಲ್ ಸಂಖ್ಯೆ 080–22264594 / 8197693232. ನ್ನು ಸಂಪಕಿಸಬಹುದು.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ವಾಸಾಸಂಇ/ವಾಪ್ರ/ಜಿಎ/1425/2023–24

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ

“ಕುರಿ ಭವನ”, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು–560024.
ದೂರವಾಣಿ: 080–23414295, 23413294, ಇ–ಮೇಲ್: kswdcl@gmail.com

ಸಂಖ್ಯೆ: ಕಕುಉಅನಿನಿ/ಸಿಬ್ಬಂದಿ/ಹೊರಗುತ್ತಿಗೆ/ಟೆಂಡರ್/2023–24 ದಿನಾಂಕ: 22–09–2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ವ್ಯಾಪ್ತಿಯ ಕಛೇರಿಗಳು ಹಾಗೂ ಕ್ಷೇತ್ರಗಳಿಗೆ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆ ಸೇವೆಯ ಆಧಾರದ ಮೇಲೆ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು ಅಂತರ್ಜಾಲ ವಿಳಾಸ: https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಕುರಿ ಭವನ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು – 560024 ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 22–09–2023 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರ್‌ದಾರರು ಅವಶ್ಯಕತೆಯಿರುವ ಪ್ರಮಾಣ ಪತ್ರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ದಿನಾಂಕ: 30–09–2023 ರವರೆಗೆ ಅಪ್‌ಲೋಡ್ ಮಾಡಬಹುದಾಗಿದೆ.

SCHEDULE OF EVENTS
Tender No.: KSWDCL/OUT SOURCE TENDER/2023-24
Date: 22-09-2023

Commencement of Downloading of e-Tender (Website: **https://kppp.karnataka.gov.in**): **22-09-2023 at 5.00 PM onwards**. Pre-Bid Meeting: **25-09-2023 at 3.00 PM** at **The Office of the Karnataka Sheep and Wool Development Corporation Ltd, Hebbal, Bangalore**. Last Date for Queries on or before (only on Karnataka public procurement portal): **26-09-2023 upto 5.00 PM**. Probable date for uploading replies to Queries: **27-09-2023 upto 5.00 PM**. Last Date for Uploading of Tender in Karnataka public procurement portal platform on or before: **30-09-2023 upto 5.30 PM, Karnataka public procurement portal of Government of Karnataka**. Date of Opening of Technical Bids and EMD Reconciliation in the Karnataka public procurement portal: **03-10-2023 at 11.00 AM**, **Office of the Karnataka Sheep and Wool Development Corporation Ltd., Hebbal, Bengaluru**. Probable Date of Opening of Financial Bid: **06-10-2023 at 11.00 AM**.

ಸಹಿ/– ಅಧ್ಯಕ್ಷರು ಹಾಗೂ ಉಪ ನಿರ್ದೇಶಕರು ಟೆಂಡರ್ ಆಹ್ವಾನ ಪ್ರಾಧಿಕಾರ

ವಾಸಾಸಂಇ/ವಾ.ಪ್ರ/1416/ಅಡ್ವಟೋರ್/2023–24

ಕರ್ನಾಟಕ ಸರ್ಕಾರ

(ಸಾರ್ವಜನಿಕ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)

6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.
ದೂರವಾಣಿ: 080–26422238/45, ಇ–ಮೇಲ್: mdktbs.tender@gmail.com
ವೆಬ್‌ಸೈಟ್: https://www.ktbs.kar.nic.in

No: A7/KTBS/KalikaBalavardhane.Pa.Pu.Mu.Sa.Te/02/2023-24 ದಿನಾಂಕ: 25.09.2023

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2023–24ನೇ ಸಾಲಿಗೆ ಕಲಿಕಾಬಲವರ್ಧನೆ ಕಾರ್ಯಕ್ರಮದಡಿ **1ರಿಂದ 9ನೇ ತರಗತಿಯ ಚಟುವಟಿಕೆ ಪುಸ್ತಕ ಹಾಗೂ ಚಟುವಟಿಕೆ ಬ್ಯಾಂಕ್ ಮತ್ತು 1 ರಿಂದ 3ನೇ ತರಗತಿ ಪ್ರಗತಿ ನೋಟ ಮತ್ತು ಹವಾಮಾನ ನಕ್ಷೆ ಮುದ್ರಣ ಹಾಗೂ ಸರಬರಾಜಿಗೆ ಈ ಕಛೇರಿ ವತಿಯಿಂದ ನೀಡಲಾಗುವ ವಿತರಣಾ ಪಟ್ಟಿಯಂತೆ ಮುದ್ರಿಸಿ ತಾಲ್ಲೂಕು ಹಂತಕ್ಕೆ ಸರಬರಾಜು ಮಾಡಲು** ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೂಲಭೂತ ಸೌಲಭ್ಯವುಳ್ಳ ಕರ್ನಾಟಕ ರಾಜ್ಯದಲ್ಲಿ ಮುದ್ರಣಾಲಯಗಳನ್ನು ಹೊಂದಿರುವ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.
ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 09.10.2023 ರಂದು ಸಂಜೆ 5.30 ರವರೆಗೂ** ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ:
https://kppp.karnataka.gov.in
ಸಹಾಯವಾಣಿ: +91–8046010000 / +91–8068948777
ಇಲಾಖೆಯ ವೆಬ್‌ಸೈಟ್: http://www.ktbs.kar.nic.in

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ಕರ್ನಾಟಕ ಸರ್ಕಾರ

ಧಾರ್ಮಿಕ ದತ್ತಿ ಇಲಾಖೆ

ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳು
ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು
Email:eochamunditemple@gmail.com Phone-0821-2590027

ಎಸ್,ಸಿ,ಟಿ/5/ಸಿ,ಆರ್–01/2023–24 ದಿನಾಂಕ: 22.09.2023

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ, 2023–24 ನೇ ಸಾಲಿಗೆ ಈ ಕಛೇರಿಯ ಆದೇಶದಿಂದ ಒಂದು ವರ್ಷದ ಅವಧಿಗೆ ಅವಶ್ಯಕವಾಗಿರುವ ಭದ್ರತಾ ಸಿಬ್ಬಂದಿ (39), ಎಲೆಕ್ಟ್ರೀಷಿಯನ್ (1) , ಕೆಲಸ ಮಾಡಲು ಬೇಕಾದ ಸಿಬ್ಬಂದಿಗಳನ್ನು ಹೊರಗುತ್ತಿಗೆಯಲ್ಲಿ ಒದಗಿಸಲು ಇ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ಗಳನ್ನು ಇ ಪ್ರಕ್ಯೂರ್ ಮೆಂಟ್(https://kppp.karnataka.gov.in/) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical Bid,/ Qualification Criteria)ದ ಮೂಲಕ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಮೂಲಕ ಮಾಹಿತಿ ಪಡೆಯಬಹುದಾಗಿದೆ. ಮಾಹಿತಿಯು ಕೆಳಕಂಡಂತೆ ಇರುತ್ತದೆ. ಇಎಂಡಿ ಟೆಂಡರ್‌ನ ನ್ಯಾಯ ಮಾನ್ಯತಾ ಅವಧಿಗಿಂತ (Validity Period) 45 ನಂತರ ವರೆಗೆ ಮಾನ್ಯತೆ ಇರತಕ್ಕದ್ದು.

ಕ್ರ. ಸಂ.	ಟೆಂಡರ್ ವಿವರ	ಅಂದಾಜು ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಅಗತ್ಯವಾದ 39 ಭದ್ರತಾ ಸಿಬ್ಬಂದಿ, 1 ಎಲೆಕ್ಟ್ರೀಷಿಯನ್ ಒಂದು ವರ್ಷದ ಅವಧಿಗೆ ಹೊರಗುತ್ತಿಗೆಯಲ್ಲಿ ಒದಗಿಸುವ ಗುತ್ತಿಗೆ ಹಕ್ಕು	96,00,000	1,92,000
2	ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಅಗತ್ಯವಾದ, 21 ಜನ ಹೊರಸ್ವಚ್ಛತಾ ಸಿಬ್ಬಂದಿ, 2 ರೂಮ್ ಬಾಯ್, 2 ಗೋಪಾಲಕರು, 1 STP ಪಂಪ್ ಆಪರೇಟರ್, 1 ಬ್ಯಾಟರಿ ವಾಹನ ಚಾಲಕ, 3 ಕಂಪ್ಯೂಟರ್ ಆಪರೇಟರ್, ಒಂದು ವರ್ಷದ ಅವಧಿಗೆ ಹೊರಗುತ್ತಿಗೆಯಲ್ಲಿ ಒದಗಿಸುವ ಗುತ್ತಿಗೆ ಹಕ್ಕು	80,00,000	1,60,000
3	ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನದ ದಾಸೋಹ ಭವನದಲ್ಲಿ ಪ್ರಸಾದ ತಯಾರಿಸಿ, ಬಡಿಸಿ, ಸ್ವಚ್ಛತೆ ಮಾಡಿಕೊಡಲು 23 ಜನ ಅಡುಗೆ ಕೆಲಸಗಾರರನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆಯಲ್ಲಿ ಒದಗಿಸುವ ಗುತ್ತಿಗೆ ಹಕ್ಕು	60,00,000	1,20,000
4	ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಅಗತ್ಯವಾದ ಲಾಡು ಪ್ರಸಾದವನ್ನು ತಯಾರಿಸಿ, ಪ್ಯಾಕ್ ಮಾಡಿ, ಸರಬರಾಜು ಮಾಡಲು ಒಂದು ಲಾಡು ಪ್ರಸಾದ ತಯಾರಿಕೆಗೆ ತಗಲುವ ಮಜೂರಿ ಗುತ್ತಿಗೆ ಹಕ್ಕು	50,00,000	1,00,000
5	ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಅಗತ್ಯವಾದ ಲಾಡು ಪ್ರಸಾದವನ್ನು ಪ್ಯಾಕ್ ಮಾಡಲು ಆಯಿಲ್ ಪ್ರೂಫ್ ಕವರ್ ಸರಬರಾಜು ಮಾಡಲು ಗುತ್ತಿಗೆ ಹಕ್ಕು	20,00,000	40,000
6	ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ, ದಾಸೋಹ, ಮತ್ತು ಲಾಡು ಪ್ರಸಾದ ತಯಾರಿಕೆ ಅಗತ್ಯವಾದ ಸಫಲ್ ಆಯಿಲ್ (15 ಕೆ,ಜಿ,ಟಿನ್) ಗುತ್ತಿಗೆ ಹಕ್ಕು	99,00,000	1,98,000

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

ಕ್ರಸ	ವಿವರ	ದಿನಾಂಕಗಳು (1ರಿಂದ 5)	ಸಮಯ
1.	ಇ–ಪೋರ್ಟಲ್‌ನಲ್ಲಿಟೆಂಡರ್ ದಾಖಲೆಗಳು ಚಾಲ್ತಿಗೆಬರುವುದು	ದಿ: 22/09/2023	ರ ಸಂಜೆ 5–00 ಗಂಟೆಯ ನಂತರ
2	ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ.	ದಿ:21/10/2023	ರ ಸಂಜೆ 5–00 ಗಂಟೆ ವರೆಗೆ
2.	ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ:	ದಿ:25/10/2023	ಬೆಳಿಗ್ಗೆ 11 ಗಂಟೆ ನಂತರ
3.	ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿನಾಂಕ :	ದಿ:30/10/2023	ಬೆಳಿಗ್ಗೆ 11 ಗಂಟೆ ನಂತರ

DIPR/DDMYS/KSMCA/422/2023-24 ಸಹಿ/– ಕಾರ್ಯನಿರ್ವಾಹಕ ಅಧಿಕಾರಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಕಾರ್ಯಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ –581301.
ದೂರವಾಣಿ: 08382–228935 ಫ್ಯಾಕ್ಸ್: 229735 E-mail: eerdwsd.uk@gmail.com
ನಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/ಪಿಬಿ–1/ಅಲ್ಪಾವಧಿ ಟೆಂಡರ/JJM/2023–24/1243 ದಿನಾಂಕ: 20.09.2023

ಇ–ಪ್ರೊಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ / ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document KW-4** ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.

ಕಾಮಗಾರಿ ಹೆಸರು: (1) Part A- Design, Build, Testing and Commissioning: Augmentation of Drinking Water Supply Scheme of Ramnagar Village with additional enroute 15 Villages (39 Habitations) of Joida Taluk, Uttara Kannada District on DBOT basis under Jal Jeevan Mission, **ಇ.ಎಂ.ಡಿ ಮೊತ್ತ:** Rs. 20.52 Lakhs*, **ಕಾಲಮಿತಿ (ಮಳೆಗಾಲ ಸಹಿತ): 11 ತಿಂಗಳು**

(2) Part B – Operation & Maintenance: Operation & maintenance of the facilities created under Part A for a period of 5 years & subsequently transfer the same at the end of tenure in working condition.
ಕಾಲಮಿತಿ (ಮಳೆಗಾಲ ಸಹಿತ): 60 months after successful completion of Part A
ಗುತ್ತಿಗೆದಾರರ ದರ್ಜೆ: Class-I (KPWD/CPWD or any other Government organization) And foreign companies having office in India -having requisite qualification
(1) ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯುರಮೆಂಟ ಮುಖಾಂತರ ಡೌನಲೋಡ ಮಾಡಿಕೊಳ್ಳುವ **ದಿನಾಂಕ: 21.09.2023 ರಿಂದ 05.10.2023 ರ 16.00 ಘಂಟೆ ವರೆಗೆ** (2) ಟೆಂಡರುಗಳನ್ನು ಇ–ಪ್ರೊಕ್ಯುರಮೆಂಟ ಮೂಲಕ ಸಲ್ಲಿಸುವ ಕೊನೆಯ **ದಿನಾಂಕ: 05.10.2023 ರ 16.00 ಗಂಟೆವರೆಗೆ** (3) ಟೆಂಡರಗಳನ್ನು ತೆರೆಯುವ **ದಿನಾಂಕ: 06.10.2023 ರಂದು 17.00 ಘಂಟೆಯ** ನಂತರ. ಉಳಿದ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್ ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಾರವಾರ (ಉ. ಕ. ಜಿಲ್ಲೆ)

DIPR/ADK/KSMCA/224/23-24 dt.22.09.2023

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ–04, ಭೂತರಾಮನಹಟ್ಟಿ, ಬೆಳಗಾವಿ–591156 (ನ್ಯಾಕ್ ಮಾನ್ಯತೆ B+ ಗ್ರೇಡ್–2021)
E-mail: registrar@rcub.ac.in, rti@rcub.ac.in
ಕುಲಸಚಿವರ ಕಾರ್ಯಾಲಯ, Office of the Registrar
Website: www.rcub.ac.in Phone No.: 0831-2565257/34

ಸಂಖ್ಯೆ:ರಾಚವಿಬೆ/ಕುಸಕಾ/ಮಾಹ & ಕಾಫ/2023–24/2417 ದಿನಾಂಕ:23/09/2023

ಅಧಿಸೂಚನೆ

ವಿಷಯ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಲಿಗಲ್ ಎಂಪ್ಯಾನಲ್‌ಮೆಂಟ್‌ಗೆ ನ್ಯಾಯವಾದಿಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:15–09–2023.
ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರವಾಗಿ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಕರ್ನಾಟಕ ಉಚ್ಚ ನ್ಯಾಯಾಲಯದ ಪೀಠಗಳಲ್ಲಿ, ಕರ್ನಾಟಕ ಆಡಳಿತ ನ್ಯಾಯಮಂಡಳಿಗಳಲ್ಲಿ (ಕೆ.ಎ.ಟಿ), ಜಿಲ್ಲಾ ನ್ಯಾಯಾಲಯಗಳಲ್ಲಿ ಹಾಗೂ ಇನ್ನಿತರ ನ್ಯಾಯಾಲಯಗಳಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಸಂಬಂಧಿತ ಪ್ರಕರಣಗಳಲ್ಲಿ ದಾವೆ ನಡೆಸಲು ಹಾಗೂ ದಾವೆ ಹೂಡಲು, ಅವಶ್ಯಕತೆ ಇದ್ದಾಗ ವಿಶ್ವವಿದ್ಯಾಲಯಕ್ಕೆ ಕಾನೂನು ಸಲಹೆ ನೀಡಲು ಲಿಗಲ್ ಎಂಪ್ಯಾನಲ್‌ಮೆಂಟ್‌ಗೆ ತಾತ್ಕಾಲಿಕವಾಗಿ ನ್ಯಾಯವಾದಿಗಳನ್ನು ನೇಮಕ ಮಾಡಿಕೊಳ್ಳಲು ಅರ್ಹ ನ್ಯಾಯವಾದಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು www.rcub.ac.in ನಿಂದ ಡೌನಲೋಡ್ ಮಾಡಿಕೊಂಡು, ಸಂಪೂರ್ಣವಾಗಿ ಭರ್ತಿ ಮಾಡಿ, ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಲಗತ್ತಿಸಿ ಕುಲಸಚಿವರು (ಆಡಳಿತ), ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಭೂತರಾಮನಹಟ್ಟಿ, ಬೆಳಗಾವಿ–591156 ಇವರಿಗೆ ದಿನಾಂಕ:05–10–2023ರ ಒಳಗಾಗಿ ಸಲ್ಲಿಸಲು ತಿಳಿಸಲಾಗಿದೆ.
ಅರ್ಹತೆ: 1.ಅಭ್ಯರ್ಥಿಗಳು ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಹೊಂದಿರಬೇಕು (LLB Special). 2.ಅಭ್ಯರ್ಥಿಗಳು EST (Service matters), Civil, Criminal & Other ವಿಷಯದಲ್ಲಿ ಕನಿಷ್ಠ 10 ವರ್ಷ ನ್ಯಾಯವಾದಿ ವೃತ್ತಿಯಲ್ಲಿ ಅನುಭವ ಹೊಂದಿರಬೇಕು.
ಅಭ್ಯರ್ಥಿಗಳಿಗೆ ಸೂಚನೆಗಳು: 1.ಈ ಎಂಪ್ಯಾನಲ್‌ಮೆಂಟ್ ಹಾಗೂ ಈ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿರುತ್ತವೆ. ಸದರಿ ನೇಮಕಾತಿಯು ಯಾವುದೇ ಖಾಯಂ ಹುದ್ದೆಗಳಿಗೆ ಎದುರಾಗಿರುವುದಿಲ್ಲ. 2.ಈ ಎಮ್‌ಪ್ಯಾನಲ್‌ಮೆಂಟ್ ಹಾಗೂ ನೇಮಕಾತಿಯನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿರುತ್ತದೆ. 3.ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶೇಡ್ಯುಲ್ಡ್ ಆಫ್ ಪೇಮೆಂಟ್ ಪ್ರಕಾರ ನ್ಯಾಯವಾದಿಗಳ ಶುಲ್ಕವನ್ನು ನೀಡಲಾಗುವುದು. 4.ಆಯ್ಕೆಯಾದ ನ್ಯಾಯವಾದಿಗಳಿಗೆ ಮಾಸಿಕವಾಗಲಿ ಅಥವಾ ವಾರ್ಷಿಕವಾಗಲಿ ಯಾವುದೇ ತೆರನಾದ ರಿಟೇನರಶಿಪ್ ಶುಲ್ಕ ನೀಡಲಾಗುವುದಿಲ್ಲ. 5.ಈಗಾಗಲೇ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಲಿಗಲ್ ಎಂಪ್ಯಾನಲ್‌ಮೆಂಟ್‌ನಲ್ಲಿರುವ ನ್ಯಾಯವಾದಿಗಳು ಹೊಸದಾಗಿ ಅರ್ಜಿಗಳನ್ನು ಸಲ್ಲಿಸಬೇಕು. 6.ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ www.rcub.ac.in ದಿಂದ ಪಡೆದುಕೊಳ್ಳಬಹುದಾಗಿದೆ.

DIPR/BGM/RO-NO-439/KSMCA/2023-24 ಸಹಿ/–ಕುಲಸಚಿವರು

ಕಾವೇರಿ ನೀರು ಹಂಚಿಕೆ ಬಿಕ್ಕಟ್ಟು: ಎರಡೂ ರಾಜ್ಯಗಳ ವಾಸ್ತವ ಸ್ಥಿತಿಗತಿ ಪರಿಶೀಲನೆಗೆ ತಜ್ಞರ ಸಮಿತಿ ರಚನೆಗೆ ಸಲಹೆ

ಪ್ರಧಾನಿ ಮಧ್ಯಪ್ರವೇಶಕ್ಕೆ ದೇವೇಗೌಡ ಪತ್ರ

ಪ್ರಜಾವಾಣಿ ವಾರ್ತೆ

ದೇವೇಗೌಡ

ಬೆಂಗಳೂರು: ಕಾವೇರಿ ನೀರು ಹಂಚಿಕೆ ಬಿಕ್ಕಟ್ಟು ಬಗೆಹರಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶಿಸ ಬೇಕು ಎಂದು ಒತ್ತಾಯಿಸಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಪತ್ರ ಬರೆದಿದ್ದಾರೆ.

ಎರಡೂ ರಾಜ್ಯಗಳ ವಾಸ್ತವ ಸ್ಥಿತಿಗತಿ ಪರಿಶೀಲಿಸಲು ನೀರಾವರಿ ತಜ್ಞರನ್ನು ಒಳಗೊಂಡ ಐವರು ಸದಸ್ಯರ ತಜ್ಞರ ಸಮಿತಿಯನ್ನು ನೇಮಿಸಬೇಕು. ಸುಪ್ರೀಂಕೋರ್ಟ್ ಮುಂದೆ ಮರು ಪರಿಶೀಲನಾ ಅರ್ಜಿ ಸಲ್ಲಿಸಲು ಜಲಶಕ್ತಿ ಸಚಿವಾಲಯಕ್ಕೆ ಸೂಚಿಸಬೇಕು. ಕರ್ನಾಟಕ ಮತ್ತು ತಮಿಳುನಾಡು ಹೊರತುಪಡಿಸಿ, ತಟಸ್ಥ ಸದಸ್ಯರನ್ನೇ ಆಯ್ಕೆ ಮಾಡಬೇಕು ಎಂದು ಪತ್ರದಲ್ಲಿ ವಿವರಿಸಿರುವುದಾಗಿ ಸೋಮವಾರ ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮಳೆ ಕೊರತೆ, ಒಳಹರಿವು, ಜಲಾಶಯದಮಟ್ಟ, ಸಂಗ್ರಹ ಪ್ರಮಾಣ, ಬೆಳೆ ಮತ್ತು ಕುಡಿಯುವ ನೀರಿನ ಅಗತ್ಯತೆ, ಕರ್ನಾಟಕ ಮತ್ತು ತಮಿಳುನಾಡಿನ ವಿವಿಧ ಮಳೆ ಮಾರುತಗಳು ಮತ್ತಿತರ ವಸ್ತುನಿಷ್ಠ ಅಂಶಗಳನ್ನು ಪರಿಗಣಿಸಿ ಸೂಕ್ತವಾದ ಸಂಕಷ್ಟಸೂತ್ರವನ್ನು ರೂಪಿಸುವ ಹೊಣೆಗಾರಿಕೆಯನ್ನು ಸ್ವತಂತ್ರ ಸಮಿತಿ ನಿರ್ವಹಿಸಬೇಕು. ಸಮಿತಿ ನೀಡುವ ವರದಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಕಾವೇರಿ ನೀರು ನಿಯಂತ್ರಣ ಸಮಿತಿ, ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯದ ಜಲಾಶಯಗಳಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಕುಸಿತವಾಗಿದೆ. 40 ಟಿಎಂಸಿ ಅಡಿಗೂ ಹೆಚ್ಚು ನೀರಿಗೆ ಬೇಡಿಕೆ ಇಟ್ಟಿರುವ ತಮಿಳುನಾಡಿಗೆ ವಾಸ್ತವಸ್ಥಿತಿಯ ಅರಿವಿಲ್ಲ. ಕಾವೇರಿ ನದಿ ನೀರು ಪ್ರಾಧಿಕಾರ ಹಾಗೂ ಸುಪ್ರೀಂಕೋರ್ಟ್ ಸಹ ತಮಿಳುನಾಡಿಗೆ ನೀರು ಹರಿಸುವಂತೆ ಆದೇಶಿಸಿವೆ. ಇದು ರಾಜ್ಯದ ಸಂಕಷ್ಟಕ್ಕೆ, ಕಾವೇರಿ ಭಾಗದ ಜನರ ಆಕ್ರೋಶಕ್ಕೆ ಕಾರಣವಾಗಿದೆ. ರಾಜ್ಯ ಸರ್ಕಾರವೂ ಈ ವಿಷಯದಲ್ಲಿ ಸಂಪೂರ್ಣ ವಿಫಲವಾಗಿದೆ ಎಂದರು.

ತಮಿಳುನಾಡಿನ ಬೇಡಿಕೆ ಸಮಾನತೆ ಮತ್ತು ನೈಸರ್ಗಿಕ ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ. ರಾಜ್ಯದಲ್ಲೇ ಕುಡಿಯುವ ನೀರಿಗೆ ಸಮಸ್ಯೆ ಇರುವಾಗ ಇನ್ನೊಂದು ರಾಜ್ಯದ ಬೆಳೆಗಳಿಗೆ ನೀರು ಹರಿಸುವುದು ಸರಿಯಲ್ಲ. ಕುಡಿಯುವ ನೀರು ಸಂವಿಧಾನದ ಅಡಿಯಲ್ಲಿ ಮೂಲಭೂತ ಹಕ್ಕು. ರಾಷ್ಟ್ರೀಯ ಜಲನೀತಿಯಲ್ಲೂ ಹೆಚ್ಚಿನ ಆದ್ಯತೆ ಪಡೆಯುತ್ತದೆ ಎಂದು ಹೇಳಿದರು.

ಈ ವರ್ಷ ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಸುರಿದ ಮಳೆ 123 ವರ್ಷಗಳಲ್ಲೇ ಅತ್ಯಂತ ಕಡಿಮೆ. ಈ ಅಂಶವನ್ನು ಪ್ರಾಧಿಕಾರ, ಕೋರ್ಟ್‌ಗಳು ಪರಿಗಣಿಸಬೇಕು ಎಂದರು.

ಎಚ್.ಡಿ.ಕುಮಾರಸ್ವಾಮಿ, ಜಿ.ಟಿ. ದೇವೇಗೌಡ, ವಿಧಾನಪರಿಷತ್ ಸದಸ್ಯರಾದ ಬಿ.ಎಂ.ಫಾರೂಖ್, ಕೆ.ಎ.ತಿಪ್ಪೇಸ್ವಾಮಿ ಇದ್ದರು.

ಸ್ಥಿತಿಗತಿ ಏಕೆ ನೋಡಿಲ್ಲ?

ರಾಜ್ಯ ಸರ್ಕಾರ ಜಲಾಶಯದ ವಾಸ್ತವ ಸ್ಥಿತಿಗತಿ ಪರಿಶೀಲಿಸಿಲ್ಲ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಅವರು ಸ್ಥಳ ಪರಿಶೀಲನೆ ಮಾಡಬೇಕಿತ್ತಾ? ಸರ್ಕಾರಕ್ಕೆ ಏಕೆ ಸಾಧ್ಯವಾಗಲಿಲ್ಲ? ಕುಮಾರಸ್ವಾಮಿ ಕೆಆರ್‌ಎಸ್‌ಗೆ ಭೇಟಿ ನೀಡಿ ಒಂದು ಗಂಟೆಯ ಒಳಗೆ ಮಾಹಿತಿ ಕೊಡಲಾಗಿದೆ. ಕಾಂಗ್ರೆಸ್ ಮೊದಲಿನಿಂದಲೂ ಕಾವೇರಿ ವಿಷಯದಲ್ಲಿ ರಾಜ್ಯಕ್ಕೆ ಅನ್ಯಾಯ ಮಾಡಿದೆ ಎಂದು ದೇವೇಗೌಡರು ಹೇಳಿದರು.

ಬಿಜೆಪಿಯವರೂ ಗೌಡರ ನಡೆ ಅನುಕರಿಸಲಿ: ಸಿದ್ದರಾಮಯ್ಯ

ಬೆಂಗಳೂರು: ‘ಕಾವೇರಿ ನೀರು ಹಂಚಿಕೆ ಸಮಸ್ಯೆ ಪರಿಹಾರಕ್ಕೆ ಪ್ರಧಾನಿಯವರ ಮಧ್ಯ ಪ್ರವೇಶಕ್ಕೆ ಒತ್ತಾಯಿಸಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು ಪತ್ರ ಬರೆದಿರುವುದನ್ನು ಸ್ವಾಗತಿಸುತ್ತೇನೆ. ಬಿಜೆಪಿಯ ರಾಜ್ಯ ನಾಯಕರು ಮತ್ತು ಸಂಸದರೂ ಗೌಡರ ನಡೆ ಅನುಕರಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ತಮ್ಮ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಗಳ ಮೂಲಕ ಪ್ರತಿಕ್ರಿಯಿಸಿರುವ ಅವರು, ‘ಈ ಸಂದರ್ಭದಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ತಪ್ಪಿಸಲು ಪ್ರಧಾನಿ ನರೇಂದ್ರ ಮೋದಿಯವರು ಮಧ್ಯಸ್ಥಿಕೆ ವಹಿಸಿ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸುವುದೊಂದೇ ಪರಿಣಾಮಕಾರಿ ಹಾಗೂ ಸಮಯೋಚಿತ ಪರಿಹಾರ ಮಾರ್ಗ’ ಎಂದಿದ್ದಾರೆ.

‘ದೇವೇಗೌಡರ ಮನವಿಯನ್ನು ಪುರಸ್ಕರಿಸಿ ಪ್ರಧಾನಿಯವರು ಕೂಡಲೇ ಮಾತುಕತೆಗೆ ಆಹ್ವಾನಿಸ ಬಹುದು ಎಂಬ ನಂಬಿಕೆ ಇದೆ. ದೇವೇಗೌಡರ ನಿರ್ಧಾರದಿಂದಲಾದರೂ ಪ್ರೇರಣೆ ಪಡೆದು ರಾಜ್ಯದ ಬಿಜೆಪಿ ನಾಯಕರು ಮತ್ತು ಸಂಸದರು ಪ್ರಧಾನಿ ಮಧ್ಯ ಪ್ರವೇಶಕ್ಕೆ ಒತ್ತಡ ಹೇರಬೇಕು. ರಾಜ್ಯದ ಸರ್ವಪಕ್ಷಗಳ ನಿಯೋಗವನ್ನು ಪ್ರಧಾನಿ ಭೇಟಿಮಾಡುವಂತೆ ವ್ಯವಸ್ಥೆ ಮಾಡಬೇಕು’ ಎಂದು ಆಗ್ರಹಿಸಿದ್ದಾರೆ. ರಾಜ್ಯದ ಹಿತಾಸಕ್ತಿಯ ವಿಚಾರ ಬಂದಾಗ ರಾಜಕೀಯ ಭಿನ್ನಮತ ಮರೆತು ರಾಜಕೀಯ ಪಕ್ಷಗಳು ಒಟ್ಟಾಗಿ ಹೋರಾಡಿದ ಇತಿಹಾಸವಿದೆ. ಈ ಪರಂಪರೆಯನ್ನು ಜೆಡಿಎಸ್ ಪಕ್ಷದಂತೆ ಬಿಜೆಪಿಯೂ ಪಾಲಿಸಬೇಕು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

> ಪ್ರಧಾನಿಯವರಿಗೆ ಎಚ್.ಡಿ. ದೇವೇಗೌಡ ಅವರು ಪತ್ರ ಬರೆದಿರುವುದು ಗೊತ್ತಿದೆ. ಆ ಬಗ್ಗೆ ಈಗ ಮಾತನಾಡುವುದಿಲ್ಲ
> **ಬಿ.ಎಸ್. ಯಡಿಯೂರಪ್ಪ**
> ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಸುದ್ದಿ 2 ನಿಮಿಷ

ಖಾಸಗಿ ವಿವಿಗಳ ಮೇಲೆ ನಿಯಂತ್ರಣ: ಸುಧಾಕರ್ ಪತ್ರ

ಬೆಂಗಳೂರು: ಖಾಸಗಿ, ಡೀಮ್ಡ್ ವಿಶ್ವವಿದ್ಯಾಲಯಗಳು ಹೊಸ ಕಾಲೇಜು, ಕೋರ್ಸ್‌ಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರದ ಅನುಮತಿ ಪಡೆಯುವ ನಿಯಮಗಳನ್ನು ರೂಪಿಸಬೇಕು ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಗೆ (ಎಐಸಿಟಿಇ) ಪತ್ರ ಬರೆದಿದ್ದಾರೆ.

ರಾಜ್ಯದಲ್ಲಿ ಎಂಜಿನಿಯರಿಂಗ್ ಕಾಲೇಜುಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿವೆ. ರಾಜ್ಯದಲ್ಲಿನ 211 ಎಂಜಿನಿಯರಿಂಗ್ ಕಾಲೇಜುಗಳಲ್ಲಿ 185 ಕಾಲೇಜುಗಳು ಖಾಸಗಿ ಒಡೆತನದಲ್ಲಿವೆ. ಖಾಸಗಿ ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯಗಳು ಗಣನೀಯವಾಗಿ ಸೀಟು ಹೆಚ್ಚಳ ಮಾಡಿವೆ. ಇದರಿಂದ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ ಎಂದು ಸುಧಾಕರ್ ಹೇಳಿದ್ದಾರೆ.

ನಗರ ಪ್ರದೇಶಗಳ ವ್ಯಾಪ್ತಿಯ ಎಂಜಿನಿಯರಿಂಗ್ ಕಾಲೇಜುಗಳ ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಬಹುತೇಕ ಅಧ್ಯಾಪಕರು ಕಾಲೇಜು ತೊರೆಯುತ್ತಿದ್ದಾರೆ. ಗ್ರಾಮೀಣ ವ್ಯಾಪ್ತಿಯ ಕಾಲೇಜುಗಳು ಬಾಗಿಲು ಮುಚ್ಚುತ್ತಿವೆ. ಹಾಗಾಗಿ, ಕನಿಷ್ಠ ಎರಡು-ಮೂರು ವರ್ಷ ಹೊಸ ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡಬಾರದು ಎಂದು ಮನವಿ ಮಾಡಿದ್ದಾರೆ.

ಸುಧಾಕರ್ ಪತ್ರಕ್ಕೆ ಉತ್ತರ ನೀಡಿರುವ ಎಐಸಿಟಿಇ, ಖಾಸಗಿ ವಿ.ವಿಗಳು ತನ್ನ ವ್ಯಾಪ್ತಿಗೆ ಬರುವುದಿಲ್ಲ. ಅವುಗಳ ಮೇಲೆ ನಿಯಂತ್ರಣಗಳನ್ನು ಚಲಾಯಿಸಲು ಸಾಧ್ಯವಿಲ್ಲ ಎಂದು ಹೇಳಿದೆ.

ಅಮೃತ್ ಪೌಲ್‌ಗೆ ಜಾಮೀನು

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ 35ನೇ ಆರೋಪಿ, ಐಪಿಎಸ್ ಅಧಿಕಾರಿ ಅಮೃತ್ ಪೌಲ್‌ಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ಅಮೃತ್ ಪೌಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ಕಲಬುರಗಿ ಪೀಠದಲ್ಲಿರುವ ನ್ಯಾಯಮೂರ್ತಿ ಪಿ.ಎಂ.ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಿದೆ.

‘ಅರ್ಜಿದಾರರು ₹ 5 ಲಕ್ಷ ಮೊತ್ತದ ಬಾಂಡ್ ಮತ್ತು ಇಬ್ಬರ ಭದ್ರತೆ ನೀಡಬೇಕು. ತನಿಖೆಗೆ ಸಹಕರಿಸಬೇಕು. ಸಾಕ್ಷ್ಯನಾಶಕ್ಕೆ ಮುಂದಾಗಬಾರದು. ತನಿಖಾಧಿಕಾರಿಗಳ ಮೇಲೆ ಪ್ರಭಾವ ಬೀರಬಾರದು. ವಿದೇಶಕ್ಕೆ ಪ್ರಯಾಣಿಸಬಾರದು’ ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ಅರ್ಜಿದಾರರ ಪರ ಹಿರಿಯ ವಕೀಲ ಎಂ.ಎಸ್.ಶ್ಯಾಮಸುಂದರ್ ಹಾಗೂ ಪ್ರಾಸಿಕ್ಯೂಷನ್ ಪರ ಪಿ.ಪ್ರಸನ್ನಕುಮಾರ್ ವಾದ ಮಂಡಿಸಿದ್ದರು.

ಲೀಲಾವತಿ, ವಿನೋದ್ ರಾಜ್ ಭಾಗಿ

ಹೋರಾಟದಲ್ಲಿ ನಟಿ ಲೀಲಾವತಿ, ನಟ ವಿನೋದ್ ರಾಜ್ ಪಾಲ್ಗೊಂಡಿದ್ದರು. ಶಾಸಕ ದರ್ಶನ್ ಪುಟ್ಟಣ್ಣಯ್ಯ ಇದ್ದರು

ಮಂಡ್ಯ: ಹಿರಿಯ ನಟಿ ಲೀಲಾವತಿ, ನಟ ವಿನೋದ್ ರಾಜ್ ಕಾವೇರಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ‘ಕಾವೇರಿ ಎಂದಿಗೂ ಕಣ್ಣೀರು ಆಗಬಾರದು, ನೀರಿಗೆ ಬರ ಬರಬಾರದು. ಕಾವೇರಿ ನೀರು ರೈತರ ಆನಂದಭಾಷ್ಪವಾಗಬೇಕು’ ಎಂದು ಲೀಲಾವತಿ ಹೇಳಿದರು.

‘ನಾನೂ ಕೃಷಿಕನಾಗಿದ್ದು ನೀರಿನ ಮಹತ್ವ ಅರಿತಿದ್ದೇನೆ. ನಾವು ಕ್ಷೇಮವಾಗಿದ್ದರೆ ಇನ್ನೊಬ್ಬರ ಕ್ಷೇಮದ ಬಗ್ಗೆ ಯೋಚಿಸಬಹುದು. ಹೀಗಾಗಿ ಸಂಕಷ್ಟ ಸೂತ್ರ ರಚನೆಯಾಗಬೇಕು. ಪ್ರಾಧಿಕಾರ, ಸುಪ್ರೀಂ ಕೋರ್ಟ್ ತಜ್ಞರ ಮೂಲಕ ವಾಸ್ತವ ಸ್ಥಿತಿ ಅಧ್ಯಯನ ಮಾಡಿಸಬೇಕು’ ಎಂದು ವಿನೋದ್ ರಾಜ್ ಹೇಳಿದರು.

ತಮಿಳುನಾಡಿಗೆ ನೀರು ಹೆಚ್ಚಳ

ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರಿನ ಪ್ರಮಾಣವನ್ನು ದಿನೇ ದಿನೇ ಹೆಚ್ಚಿಸಲಾಗುತ್ತಿದೆ. ಸೆ.23ರಂದು ನದಿಗೆ ಹರಿಸುತ್ತಿದ್ದ ನೀರಿನ ಪ್ರಮಾಣ 2,973 ಕ್ಯೂಸೆಕ್ ಇತ್ತು, ಸೆ.24ರಂದು 3,838 ಕ್ಯೂಸೆಕ್‌ಗೆ ಹೆಚ್ಚಿಸಲಾಗಿದ್ದು ಸೆ.25ರಂದು 4,015 ಕ್ಯೂಸೆಕ್‌ಗೆ ಹೆಚ್ಚಿಸಲಾಗಿದೆ.

ಸದ್ಯ ಜಲಾಶಯದ ನೀರಿನ ಮಟ್ಟ 96.70 ಅಡಿ ಇದೆ. 5,993 ಕ್ಯೂಸೆಕ್ ಒಳಹರಿವು, 6,716 ಕ್ಯೂಸೆಕ್ ಹೊರಹರಿವು ದಾಖಲಾಗಿದೆ.

ಬಿಜೆಪಿ ಕಾರ್ಯಕರ್ತರಿಂದ ಚಡ್ಡಿ ಚಳವಳಿ • ಕರ್ನಾಟಕ ಬಂದ್‌ಗೆ ಬೆಂಬಲ

ಮೈಸೂರು: ಹೋರಾಟದ ಕಿಚ್ಚು ಹೆಚ್ಚು

ಪ್ರಜಾವಾಣಿ ವಾರ್ತೆ

ಮೈಸೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ಖಂಡಿಸಿ ಮೈಸೂರು ಭಾಗದ ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನದಲ್ಲಿ ಪ್ರತಿಭಟನೆ ತೀವ್ರಗೊಂಡಿದೆ. ಮೈಸೂರಿನಲ್ಲಿ ಸೋಮವಾರದಿಂದ ನಿರಂತರ ಧರಣಿ ಶುರುವಾಗಿದೆ. ಚಾಮರಾಜನಗರದಲ್ಲಿ ಮಂಗಳವಾರದಿಂದ ಶುರುವಾಗಲಿದೆ.

ಮಂಡ್ಯದಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಪಟಾಪಟಾ ಚಡ್ಡಿ ಧರಿಸಿ ಜೆ.ಸಿ.ವೃತ್ತದಿಂದ ಸರ್ ಎಂ.ವಿ ಪ್ರತಿಮೆವರೆಗೂ ಮೆರವಣಿಗೆ ನಡೆಸಿದರು. ನಂತರ ಜಿಲ್ಲಾ ರೈತಹಿತ ರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿಗೆ ಸಾಥ್ ಕೊಟ್ಟರು.

ಜಾನುವಾರು, ಎತ್ತಿನಗಾಡಿಗಳೂ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು, ಹಳ್ಳಿಕಾರ್ ತಳಿಯ ಜೋಡೆತ್ತುಗಳು ಗಮನ ಸೆಳೆದವು. ಶ್ರೀರಂಗಪಟ್ಟಣದ ಬಂಗಾರದೊಡ್ಡಿ ಅಣೆಕಟ್ಟೆ ಮೇಲೆ ನಿಂತ ರೈತಸಂಘ ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಒಂದು ತಾಸಿಗೂ ಹೆಚ್ಚು ಕಾಲ ಪ್ರತಿಭಟಿಸಿದರು.

ಚಾಮರಾಜನಗರ ಜಿಲ್ಲೆಯಲ್ಲಿ ಸೋಮವಾರವೂ ಪ್ರತಿಭಟನೆ ಮುಂದುವರಿದಿದ್ದು, ಹೋರಾಟ ತೀವ್ರಗೊಳಿಸಲು ನಿರ್ಧರಿಸಿರುವ ವಿವಿಧ ಸಂಘಟನೆಗಳ ಮುಖಂಡರು 29ರಂದು ಕರೆ ನೀಡಲಾಗಿರುವ ಅಖಂಡ ಕರ್ನಾಟಕ ಬಂದ್ ಅನ್ನು ಬೆಂಬಲಿಸಿದ್ದಾರೆ.

ಹೋರಾಟವನ್ನು ಮುನ್ನಡೆಸಲು ಕಾವೇರಿ ಕ್ರಿಯಾ ಸಮಿತಿ ರಚಿಸಲು ನಿರ್ಧರಿಸಿದ್ದು, ಸಮಿತಿಯ ನೇತೃತ್ವದಲ್ಲೇ ಜಿಲ್ಲಾಡಳಿತ ಭವನದ ಮುಂದೆ ಮಂಗಳವಾರದಿಂದ ಅನಿರ್ದಿಷ್ಟಾವಧಿ ಧರಣಿ ನಡೆಯಲಿದೆ. ಕರ್ನಾಟಕ ಸೇನಾ ಪಡೆಯ ಕಾರ್ಯಕರ್ತರು ಗಂಟೆ ಬಾರಿಸುವ ಚಳವಳಿ ನಡೆಸಿದರೆ, ಕಬ್ಬು ಬೆಳೆಗಾರರ ಸಂಘದವರು ಖಾಲಿ ಮಡಕೆ ಪ್ರದರ್ಶಿಸಿದರು.

ಸಚಿವರ ಕಾರಿಗೆ ಮುತ್ತಿಗೆ: ಜನತಾ ದರ್ಶನ ಸಲುವಾಗಿ ಮೈಸೂರಿನ ಜಿಲ್ಲಾ ಪಂಚಾಯಿತಿಗೆ ಬಂದ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ಕಾರನ್ನು ಅಡ್ಡಗಟ್ಟಿದ ರೈತ ಸಂಘದ ಮುಖಂಡರು, ತಮಿಳುನಾಡಿಗೆ ನೀರು ಹರಿಸಬಾರದೆಂದು ಒತ್ತಾಯಿಸಿ ಹಕ್ಕೊತ್ತಾಯ ಪತ್ರ ಸಲ್ಲಿಸಿದರು.

ಕಾವೇರಿ ಕ್ರಿಯಾ ಸಮಿತಿ ಸದಸ್ಯರು ಕೃಷ್ಣರಾಜ ವೃತ್ತದಲ್ಲಿ ಕೃಷ್ಣರಾಜ ಒಡೆಯರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಿರಂತರ ಧರಣಿ ಸತ್ಯಾಗ್ರಹ ಆರಂಭಿಸಿದರು. ಜಿಲ್ಲಾ ಕನ್ನಡ ಚಳವಳಿಗಾರರ ಸಂಘದ ಸದಸ್ಯರು ಕಾಡಾ ಕಚೇರಿ ಬಳಿ ತೆಂಗಿನ ಚಿಪ್ಪು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ-ರಾಂಪುರ ಕಪಿಲಾ ನದಿ ಸೇತುವೆ ಮೇಲೆ ಮಲಗಿ ರೈತ ಸಂಘದ ಕಾರ್ಯಕರ್ತರು ರಸ್ತೆ ತಡೆ ನಡೆಸಿದರು. ಹುಣಸೂರು ನಗರದ ಸಂವಿಧಾನ ವೃತ್ತದಲ್ಲಿ ಹಾಗೂ ಎಚ್.ಡಿ.ಕೋಟೆ ತಾಲ್ಲೂಕಿನ ಮಿನಿ ವಿಧಾನ ಸೌಧದ ಮುಂದೆಯೂ ಧರಣಿ ನಡೆಸಿದರು.

ಮೈಸೂರಿನ ಜಿಲ್ಲಾ ಪಂಚಾಯಿತಿ ಮುಂಭಾಗ ರೈತ ಸಂಘದ ಧರಣಿ ಸಂದರ್ಭದಲ್ಲಿ ಮೈಸೂರು ತಾಲ್ಲೂಕಿನ ಕೆಂಚನಹಳ್ಳಿಯ ಶಿವಮ್ಮ ಅವರು ರಸ್ತೆಯಲ್ಲಿ ಉರುಳಾಡಿ ‘ಕಾವೇರಿ ನೀರು ನಮಗೆ ಕೊಡಿ’ ಎಂದು ಅಲವತ್ತುಕೊಂಡರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	96.70	5,993	6,716
ಹಾರಂಗಿ	2,859	2,855.42	796	2,800
ಕಬಿನಿ	2,284	2,274.24	2,126	4,890
ಹೇಮಾವತಿ	2,922	2,897.35	3,030	1,360
ಲಿಂಗನಮಕ್ಕಿ	1,819	1,787.30	5,031	2,729.83
ಸೂಪಾ (ಮೀ)	564	545.45	2,039	2,727
ಮಾಣಿ	595	580.78	730	-
ತುಂಗಭದ್ರಾ	1,633	1,619.61	2,170	9,802
ಮಲಪ್ರಭಾ	2079.50	2,065.26	00	1,019
ಘಟಪ್ರಭಾ	2175	2,165.10	1,200	180
ಭದ್ರಾ	186	160.5	721	490
ಆಲಮಟ್ಟಿ (ಮೀ)	519.60	518.88	4,717	23,386
ನಾರಾಯಣಪುರ (ಮೀ)	492.25	491.18	22,377	9,677

* ನೆಲಮಟ್ಟದಿಂದ

ಸರ್ಕಾರ ಹೋರಾಟ ಹತ್ತಿಕ್ಕುವುದಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ‘ಬಂದ್, ಪ್ರತಿಭಟನೆ ನಡೆಸುವ ರೈತರು ಮತ್ತು ಕನ್ನಡ ಹೋರಾಟಗಾರರ ಹಕ್ಕನ್ನು ನಾನು ಗೌರವಿಸುತ್ತೇನೆ. ಅವರ ಹೋರಾಟ ವನ್ನು ಹತ್ತಿಕ್ಕುವ ಕೆಲಸವನ್ನು ನಮ್ಮ ಸರ್ಕಾರ ಮಾಡುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮಂಗಳವಾರದ ಬೆಂಗಳೂರು ಬಂದ್ ಕರೆ ಕುರಿತು ಸೋಮವಾರ ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿರುವ ಅವರು, ‘ರೈತರ ಆಕ್ರೋಶವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಇದೇ ಸಮಯದಲ್ಲಿ ಕೆಲವು ರಾಜಕೀಯ ನಾಯಕರು ತಪ್ಪು ಮಾಹಿತಿ ಮೂಲಕ ಜನರನ್ನು ಪ್ರಚೋದಿಸುವ ಕೆಲಸವನ್ನು ಮಾಡುತ್ತಿರುವುದೂ ಸರ್ಕಾರದ ಗಮನಕ್ಕೆ ಬಂದಿದೆ’ ಎಂದಿದ್ದಾರೆ.

ರಾಜ್ಯದ ಪ್ರಜ್ಞಾವಂತ ರೈತ ಮತ್ತು ಕನ್ನಡ ಹೋರಾಟಗಾರರು ರಾಜಕೀಯ ದುರುದ್ದೇಶಪೂರಿತ ಅಪಪ್ರಚಾರಕ್ಕೆ ಬಲಿಯಾಗಬಾರದು. ಸಾರ್ವಜನಿಕರಿಗೆ ತೊಂದರೆಯಾಗದಂತೆ ಶಾಂತಿಯುತವಾಗಿ ಬಂದ್, ಪ್ರತಿಭಟನೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ.

ನೆಲ, ಜಲ, ಭಾಷೆಯ ವಿಚಾರದಲ್ಲಿ ರಾಜಕೀಯ ಬದಿಗಿಟ್ಟು ಒಮ್ಮತದಿಂದ ರಾಜ್ಯದ ಪರ ಹೋರಾಟ ನಡೆಸುವ ಪರಂಪರೆ ಕರ್ನಾಟಕದಲ್ಲಿ ಇದೆ. ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮೇಲಿದೆ ಎಂದು ಹೇಳಿದ್ದಾರೆ.

‘ಸಂಪೂರ್ಣ ಬಂದ್ ಆಗಲೇಬೇಕು’

ಯಡಿಯೂರಪ್ಪ

ಬೆಂಗಳೂರು: ಕಾವೇರಿ ನೀರಿಗಾಗಿ ಬೆಂಗಳೂರು ಬಂದ್ ನಡೆಸುವ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ. ಮಂಗಳವಾರ ಬೆಂಗಳೂರು ಸಂಪೂರ್ಣವಾಗಿ ಬಂದ್ ಆಗಲೇಬೇಕು ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಹೋಟೆಲ್, ಅಂಗಡಿ, ಮುಂಗಟ್ಟುಗಳ ಮಾಲೀಕರು ವಹಿವಾಟು ಸ್ಥಗಿತಗೊಳಿಸಿ ಬಂದ್‌ಗೆ ಬೆಂಬಲ ನೀಡಬೇಕು. ಯಾರಾದರೂ ಬಾಗಿಲು ತೆರೆದು ವ್ಯವಹಾರ ನಡೆಸಲು ಪ್ರಯತ್ನಿಸಿದರೆ ಮುಂದಾಗುವ ತೊಂದರೆಗಳಿಗೆ ನೀವೇ ಹೊಣೆಯಾಗುತ್ತೀರಿ’ ಎಂದರು.

ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರದಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಕಾವೇರಿ ಕಣಿವೆಯ ಜಲಾಶಯಗಳಲ್ಲಿ 59 ಟಿಎಂಸಿ ಅಡಿ ನೀರು ಮಾತ್ರ ಲಭ್ಯವಿದೆ. ಈಗ ರಾಜ್ಯದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ತಮಿಳುನಾಡಿನ ಏಜೆಂಟರಂತೆ ವರ್ತಿಸುವುದನ್ನು ನಿಲ್ಲಿಸಬೇಕು. ಒಂದು ಹನಿ ನೀರು ಕೂಡ ತಮಿಳುನಾಡಿಗೆ ಹರಿಯದಂತೆ ತಡೆಯಬೇಕು ಎಂದು ಆಗ್ರಹಿಸಿದರು.

ಬಂದ್ ಬೆಂಬಲಿಸಿ ಬಿಜೆಪಿ ಶಾಸಕರು ಮತ್ತು ಸಂಸದರು ವಿಧಾನಸೌಧದ ಆವರಣದಲ್ಲಿನ ಮಹಾತ್ಮ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಲಿದ್ದಾರೆ ಎಂದು ತಿಳಿಸಿದರು.

ಪ್ರತಿಭಟನೆಗೆ ಸಹಕಾರ: ಡಿಕೆಶಿ

ಶಿವಕುಮಾರ್

ಬೆಂಗಳೂರು: ‘ರಾಜ್ಯದ ಹಿತರಕ್ಷಣೆಗಾಗಿ ಪ್ರತಿಭಟನೆ ನಡೆಸಲು ನಾವು ಸಹಕಾರ ನೀಡುತ್ತೇವೆ. ಯಾವ ಹೋರಾಟಗಳಿಗೂ ಸರ್ಕಾರ ಅಡ್ಡಿಪಡಿಸುವುದಿಲ್ಲ. ಆದರೆ, ಜನರಿಗೆ ತೊಂದರೆ ಆಗಬಾರದು’ ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಯ ಹಕ್ಕಿದೆ. ನಾವು ಕೂಡ ನಮ್ಮ ಹಕ್ಕು ಉಳಿಸಿಕೊಳ್ಳಲು ಹೋರಾಡುತ್ತಿದ್ದೇವೆ. ನಮ್ಮ ಪಕ್ಷದವರೂ ಕೂಡ ಅಭಿಪ್ರಾಯ ಕೇಳಿದರು. ಹಕ್ಕು ಉಳಿಸಿಕೊಳ್ಳಲು ಹೋರಾಟ ಮಾಡಿ ಎಂದು ತಿಳಿಸಿದ್ದೇವೆ’ ಎಂದರು. ಸುಪ್ರೀಂ ಕೋರ್ಟ್, ಹೈಕೋರ್ಟ್ ತೀರ್ಪುಗಳಿವೆ. ಮಾಧ್ಯಮಗಳಲ್ಲಿ ಹೆಸರು ಪ್ರಕಟವಾಗುತ್ತದೆ ಎಂದು ಹೋರಾಟಕ್ಕೆ ಕರೆ ನೀಡಿದರೆ ಏನು ಲಾಭ? ನ್ಯಾಯಾಲಯದಿಂದ ಪ್ರತಿಕೂಲ ಪರಿಣಾಮಗಳಾಗುವ ಬಗ್ಗೆಯೂ ಯೋಚಿಸಬೇಕಲ್ಲವೆ ಎಂದು ಪ್ರಶ್ನಿಸಿದರು.

ಹೋರಾಟದಿಂದ ಕಾನೂನು ತೊಂದರೆ ಉದ್ಭವಿಸುವುದಿಲ್ಲವೆ ಎಂಬ ಪ್ರಶ್ನೆಗೆ ‘ಮಂತ್ರಿಯಾಗಿ ನಾನು ಈ ಪ್ರಶ್ನೆಗೆ ಉತ್ತರ ಕೊಡಲು ಆಗುವುದಿಲ್ಲ. ನ್ಯಾಯಾಲಯ, ಜನ ಇಬ್ಬರಿಗೂ ಗೌರವ ನೀಡಬೇಕು. ಜನರು ಸಹಕಾರ ಕೊಡದಿದ್ದರೆ ‘ಬಂದ್’ಗೆ ಅರ್ಥವೇ ಇರುವುದಿಲ್ಲ’ ಎಂದರು.

ಚಿತ್ರರಂಗದಿಂದ ನೈತಿಕ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ವಿಚಾರವಾಗಿ ಯಾವುದೇ ಸಂಘಟನೆಗಳು ಬಂದ್ ಮಾಡಲಿ, ನಮ್ಮ ನೈತಿಕ ಬೆಂಬಲ ಇದ್ದೇ ಇರುತ್ತದೆ. ಪರಿಸ್ಥಿತಿ ನೋಡಿಕೊಂಡು ನಗರದಲ್ಲಿ ಚಿತ್ರಮಂದಿರಗಳು ಕಾರ್ಯ-ನಿರ್ವಹಿಸಲಿವೆ’ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ (ಕೆಎಫ್‌ಸಿಸಿ) ಅಧ್ಯಕ್ಷ ಎನ್.ಎಂ.ಸುರೇಶ್ ತಿಳಿಸಿದ್ದಾರೆ.

‘ಕನ್ನಡದ ನೆಲ, ಜಲ ಹಾಗೂ ಭಾಷೆ ವಿಚಾರ ಬಂದಾಗ ಬೆಂಬಲ ನೀಡುವುದು ನಮ್ಮ ಧರ್ಮ. ಸಂಘಟನೆಗಳು ಎರಡು ದಿನ ಬಂದ್‌ಗೆ ಕರೆ ನೀಡಿವೆ. ಎರಡು ದಿನ ಚಿತ್ರರಂಗದ ಚಟುವಟಿಕೆಗಳನ್ನು ಸ್ಥಗಿತಗೊಳಿಸುವುದು ಸಾಧ್ಯವಿಲ್ಲ. ಮಂಗಳವಾರ (ಸೆ.26) ಬೆಂಗಳೂರಿನಲ್ಲಿನ ಪರಿಸ್ಥಿತಿ ನೋಡಿಕೊಂಡು ಚಿತ್ರಮಂದಿರಗಳು ತೆರೆಯಲಿವೆ. ಸೆಕ್ಷನ್ 144 ಜಾರಿ ಯಾಗುವ ಕಾರಣದಿಂದ ಸಂಜೆ ಯವರೆಗೆ ಬಹುತೇಕ ಚಿತ್ರಮಂದಿರಗಳು ತೆರೆಯುವುದು ಅನುಮಾನ. ಚಿತ್ರಮಂದಿರಗಳ ಮಾಲೀಕರು ನಿರ್ಧಾರ ತೆಗೆದುಕೊಳ್ಳಲಿದ್ದಾರೆ’ ಎಂದು ಹೇಳಿದ್ದಾರೆ.

ಮಸೀದಿಗೆ ನುಗ್ಗಿ ‘ಜೈ ಶ್ರೀರಾಮ್’ ಘೋಷಣೆ: ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಕಡಬ ತಾಲ್ಲೂಕಿನ ಮರ್ಧಾಳದಲ್ಲಿ ಮಸೀದಿ ಕಾಂಪೌಂಡ್ ಒಳಗೆ ನುಗ್ಗಿ ‘ಜೈ ಶ್ರೀರಾಮ್’ ಘೋಷಣೆ ಕೂಗಿರುವ ಆರೋಪದಲ್ಲಿ ಇಬ್ಬರು ಯುವಕರನ್ನು ಬಂಧಿಸಲಾಗಿದೆ.

ಬಿಳಿನೆಲೆ ಸೂಡ್ಲು ನಿವಾಸಿ ಕೀರ್ತನ್ (25), ಕೈಕಂಬ ನಡ್ಡೋಟ ನಿವಾಸಿ ಸಚಿನ್ (26) ಬಂಧಿತ ಆರೋಪಿಗಳು.

ಕೀರ್ತನ್ ಹಾಗೂ ಸಚಿನ್ ಭಾನುವಾರ ರಾತ್ರಿ ಬೈಕ್‌ನಲ್ಲಿ ಬಂದು, ಮರ್ಧಾಳ ಬದ್ರಿಯಾ ಜುಮ್ಮಾ ಮಸೀದಿಯ ಕಾಂಪೌಂಡ್ ಒಳಗೆ ನುಗ್ಗಿ ವರಾಂಡದಲ್ಲಿ ನಿಂತು ‘ಜೈಶ್ರೀರಾಮ್’ ಘೋಷಣೆ ಕೂಗಿದ್ದಾರೆ. ಈ ವೇಳೆ ಮೌಲ್ವಿಯನ್ನು ನೋಡಿದ ಆರೋಪಿಗಳು ಅಲ್ಲಿಂದ ಪರಾರಿಯಾಗಿದ್ದಾರೆ ಎಂದು ಠಾಣೆಯಲ್ಲಿ ದಾಖಲಿಸಿರುವ ದೂರಿನಲ್ಲಿ ತಿಳಿಸಲಾಗಿದೆ.

ಆರೋಪಿಗಳು ಬೈಕ್‌ನಲ್ಲಿ ಕಾಂಪೌಂಡ್ ಒಳಗೆ ಬಂದು ತೆರಳಿರುವ ದೃಶ್ಯ ಸಿ.ಸಿ.ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜನತಾ ದರ್ಶನ: ಅರ್ಜಿ ಕೊಡಲು ಮುಗಿಬಿದ್ದ ಜನ

ಪ್ರಜಾವಾಣಿ ವಾರ್ತೆ

ಹಾವೇರಿ: ತಾಲ್ಲೂಕಿನ ದೇವಗಿರಿ ಸಮೀಪದ ಜಿಲ್ಲಾಡಳಿತ ಭವನದಲ್ಲಿ ಸೋಮವಾರ ಜಿಲ್ಲಾ ಮಟ್ಟದ ‘ಜನತಾ ದರ್ಶನ’ಕ್ಕೆ ಐದು ಸಾವಿರಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಲು ಬಂದ ಕಾರಣ ನೂಕುನುಗ್ಗಲು ಉಂಟಾಗಿ, ಗದ್ದಲದ ಗೂಡಾಯಿತು.

ಬೆಳಿಗ್ಗೆಯಿಂದ ಜಿಲ್ಲಾಡಳಿತ ಭವನದತ್ತ ಜನಸಾಗರ ಹರಿದು ಬಂತು. 13 ಕೌಂಟರ್‌ಗಳಲ್ಲೂ ಅರ್ಜಿ ಕೊಡಲು ಜನ ಕಿಕ್ಕಿರಿದು ಸೇರಿದ್ದರು.

ಪೋರ್ಟಲ್‌ನಲ್ಲಿ ನೋಂದಣಿ ಪ್ರಕ್ರಿಯೆ ತಡವಾದಂತೆ ಗದ್ದಲ ಜೋರಾಯಿತು. ಆಗ ಸಿಬ್ಬಂದಿ, ಜನರು ತಂದಿದ್ದ ಎರಡು ಪ್ರತಿಗಳಲ್ಲಿ ಒಂದು ಪ್ರತಿಗೆ ‘ಮುದ್ರೆ’ ಹಾಕಿ ಕೊಟ್ಟು, ಮತ್ತೊಂದು ಪ್ರತಿಯನ್ನು ಸಂಗ್ರಹಿಸಲು ಆರಂಭಿಸಿದರು. ಎಲ್ಲರೂ ಒಮ್ಮೆಲೇ ಮುಗಿಬಿದ್ದ ಕಾರಣ, ಕಂಪ್ಯೂಟರ್ ಮತ್ತು ಇತರ ಪರಿಕರಗಳೊಂದಿಗೆ ಇಲಾಖೆಯ ಸಿಬ್ಬಂದಿ ಸ್ಥಳದಿಂದ ಬೇಗಬೇಗನೇ ನಿರ್ಗಮಿಸಿದರು. ಮಹಿಳೆಯರು, ವಯೋವೃದ್ಧರು, ಅಂಗವಿಕಲರು ಅರ್ಜಿಗಳನ್ನು ಕೊಡಲು ಸಾಧ್ಯವಾಗದೇ ಬೇಸರದಿಂದ ಹಿಂತಿರುಗಿದರು.

ಎರಡೂವರೆ ಗಂಟೆ ತಡ: ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ನಗರದ ಪ್ರವಾಸಿ ಮಂದಿರದ ಬಳಿ ರೈತರು ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ತೆರಳಿ, ಅಹವಾಲು ಸ್ವೀಕರಿಸಿ ಜನತಾ ದರ್ಶನಕ್ಕೆ ಬರುವ ವೇಳೆಗೆ ಮಧ್ಯಾಹ್ನ 1.30 ಆಗಿತ್ತು. ಎರಡೂವರೆ ಗಂಟೆ ತಡವಾಗಿ ಬಂದ ಕಾರಣ ಸಚಿವರಿಗೆ ಅರ್ಜಿ ಕೊಡಲು ಮುಗಿಬಿದ್ದ ನೂರಾರು ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು.

16,028 ಅರ್ಜಿ ಸ್ವೀಕಾರ: ಜನತಾ ದರ್ಶನದಲ್ಲಿ ಸಾರ್ವಜನಿಕರ ಕುಂದುಕೊರತೆಗೆ ಸಂಬಂಧಿಸಿದಂತೆ 140 ಅರ್ಜಿಗಳು ಸಲ್ಲಿಕೆಯಾಗಿವೆ. ಬೆಳೆ ಪರಿಹಾರ ಮೊತ್ತವನ್ನು ಹೆಚ್ಚಿಸುವ ಬೇಡಿಕೆ ಕುರಿತಂತೆ 16,028 ಅರ್ಜಿಗಳು ರೈತರಿಂದ ಸ್ವೀಕೃತವಾಗಿವೆ ಎಂದು ಜಿಲ್ಲಾಧಿಕಾರಿ ರಘುನಂದನ ಮೂರ್ತಿ ತಿಳಿಸಿದರು.

ಕ್ಷಮೆ ಕೇಳಿದ ಸಚಿವ

‘₹5 ಲಕ್ಷ ಪರಿಹಾರಕ್ಕಾಗಿ ರೈತರ ಆತ್ಮಹತ್ಯೆ ಪ್ರಕರಣ ಹೆಚ್ಚುತ್ತಿವೆ ಎಂದು ಹೇಳಿರುವ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲರು ಬೇಷರತ್ ಕ್ಷಮೆ ಯಾಚಿಸಬೇಕು’ ಎಂದು ರೈತರು ಹಾವೇರಿ ನಗರದಪ್ರವಾಸಿ ಮಂದಿರದ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು.

‘ರೈತ ಸಂಘದಿಂದ ₹50 ಲಕ್ಷ ಕೊಡುತ್ತೇವೆ. ಸಚಿವರು ಆತ್ಮಹತ್ಯೆ ಮಾಡಿಕೊಳ್ಳಲಿ’ ಎಂದು ರೈತರು ಗುಡುಗಿದರು. ಪ್ರತಿಭಟನಾ ಸ್ಥಳಕ್ಕೆ ಬಂದ ಸಚಿವ ಶಿವಾನಂದ ಪಾಟೀಲ ರೈತರ ಅಹವಾಲು ಆಲಿಸಿದರು.

ನಂತರ ಸಚಿವ ಮಾತನಾಡಿ, ‘ನನ್ನ ಹೇಳಿಕೆಯನ್ನು ಕೆಲ ಮಾಧ್ಯಮದವರು ತಪ್ಪಾಗಿ ಬಿಂಬಿಸಿದ್ದಾರೆ. ಆದರೂ, ನಿಮ್ಮ ಮನಸ್ಸಿಗೆ ನೋವಾಗಿದ್ದರೆ, ನಾನು ಕ್ಷಮೆ ಯಾಚಿಸುವೆ’ ಎಂದರು.

ಹಾವೇರಿಯಲ್ಲಿ ಸೋಮವಾರ ರೈತಸಂಘದವರು ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಬಂದ ಸಚಿವ ಶಿವಾನಂದ ಪಾಟೀಲ ಅವರು ‘ರೈತರ ಆತ್ಮಹತ್ಯೆ’ ಬಗ್ಗೆ ನೀಡಿದ್ದ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿ, ಕ್ಷಮೆ ಕೋರಿದರು – ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಜಲ ವಿವಾದ: ವಾದ ಮಂಡಿಸಿದವರಿಗೆ ಅಪಾರ ಹಣ

ವಕೀಲರ ಶುಲ್ಕ ₹122.75 ಕೋಟಿ

ಪ್ರಜಾವಾಣಿ ವಾರ್ತೆ

ಭೀಮಪ್ಪ ಗಡಾದ

ಬೆಳಗಾವಿ: ‘ಕಾವೇರಿ, ಕೃಷ್ಣಾ ಹಾಗೂ ಮಹದಾಯಿ ನದಿಗಳ ವಿವಾದ ಬಗೆಹರಿಸಲು ರಚಿಸಲಾದ ಕಾವೇರಿ ಜಲವಿವಾದ ನ್ಯಾಯಮಂಡಳಿ, ಕೃಷ್ಣಾ ಜಲವಿವಾದ ನ್ಯಾಯಮಂಡಳಿ ಹಾಗೂ ಮಹದಾಯಿ ಜಲವಿವಾದ ನ್ಯಾಯಮಂಡಳಿ ವಿಚಾರಣೆ ಸಮಯದಲ್ಲಿ ರಾಜ್ಯದ ಪರವಾಗಿ ವಾದ ಮಂಡಿಸಲು ವಕೀಲರ ಶುಲ್ಕಕ್ಕಾಗಿ ರಾಜ್ಯ ಸರ್ಕಾರವು ₹122.76 ಕೋಟಿ ಪಾವತಿಸಿದೆ’ ಎಂದು ಮಾಹಿತಿ ಹಕ್ಕು ಕಾರ್ಯಕರ್ತ ಭೀಮಪ್ಪ ಗಡಾದ ಹೇಳಿದರು.

ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಕರ್ನಾಟಕ, ತಮಿಳನಾಡು, ಕೇರಳ ಮತ್ತು ಪುದುಚೇರಿ ರಾಜ್ಯಗಳ ನಡುವಣ ಜಲವಿವಾದದ ಇತ್ಯರ್ಥಕ್ಕೆ 1990ರಲ್ಲಿ ಕಾವೇರಿ ಜಲವಿವಾದ ನ್ಯಾಯಮಂಡಳಿ ರಚಿಸಲಾಗಿದೆ. ಪ್ರಾರಂಭದಿಂದ 2017ರ ಜುಲೈ 10ರವರೆಗೆ ಒಟ್ಟು 580 ಸಿಟ್ಟಿಂಗ್‌ಗಳು ನಡೆದಿವೆ. ಈ ಪ್ರಕರಣದಲ್ಲಿ ರಾಜ್ಯದ ಪರ ವಾದ ಮಂಡಿಸಿದ ವಕೀಲರಿಗೆ ₹54.13 ಕೋಟಿಗೂ ಅಧಿಕ ಶುಲ್ಕ ಪಾವತಿಸಲಾಗಿದೆ’ ಎಂದರು.

‘ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳ ನಡುವಣ ಜಲವಿವಾದದ ಇತ್ಯರ್ಥಕ್ಕೆ 2004ರಲ್ಲಿ ಕೃಷ್ಣಾ ಜಲವಿವಾದ ನ್ಯಾಯಮಂಡಳಿ ರಚಿಸಲಾಗಿದೆ. 2013ರ ನವೆಂಬರ್ 23ರವರೆಗೆ 295 ಸಿಟ್ಟಿಂಗ್ ನಡೆದಿವೆ. ಇದರಲ್ಲಿ ರಾಜ್ಯದ ಪರವಾಗಿ ವಾದ ಮಂಡಿಸಿದ ವಕೀಲರ ಶುಲ್ಕ ಮೊತ್ತ ₹43.24 ಕೋಟಿ ದಾಟಿದೆ’ ಎಂದು ಅವರು ವಿವರಿಸಿದರು.

‘ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳ ಜಲವಿವಾದದ ಇತ್ಯರ್ಥಕ್ಕೆ 2010ರಲ್ಲಿ ಮಹದಾಯಿ ನ್ಯಾಯಮಂಡಳಿ ರಚಿಸಲಾಗಿದೆ. 2017ರವರೆಗೆ 97 ಸಿಟ್ಟಿಂಗ್‌ಗಳು ನಡೆದಿವೆ. ₹25.38 ಕೋಟಿಗೂ ಅಧಿಕ ಹಣವನ್ನು ವಕೀಲರ ಶುಲ್ಕ ಪಾವತಿಸಲಾಗಿದೆ’ ಎಂದರು.

‘ರಾಜ್ಯದ ಪರ ವಾದ ಮಂಡಿಸಲು ನೇಮಕ ಮಾಡಿಕೊಂಡ ವಕೀಲರಲ್ಲಿ ಹೆಚ್ಚಿನವರು ಹೊರಗಿನವರು. ಅವರು ರಾಜ್ಯದ ಹಿತ ಕಾಯುವುದಿಲ್ಲ ಎಂದು ದೂರಿದರು.

ಯಾರಿಗೆ ಹೆಚ್ಚು ಶುಲ್ಕ?

ಈ ಮೂರೂ ನ್ಯಾಯಮಂಡಳಿಗಳಲ್ಲಿ ಒಟ್ಟು 41 ಹಿರಿಯ ವಕೀಲರಿಗೆ ಶುಲ್ಕ ಪಾವತಿಸಲಾಗಿದೆ. ಪ್ರಮುಖವಾಗಿ ಅನಿಲ ಬಿ. ದಿವಾನ್ ಅವರಿಗೆ ₹29.78 ಕೋಟಿ, ಎಫ್.ಎಸ್.ನಾರಿಮನ್ ಅವರಿಗೆ ₹27.45 ಕೋಟಿ, ಎಸ್.ಎಸ್. ಜವಳಿ ಅವರಿಗೆ ₹12.61 ಕೋಟಿ, ಮೋಹನ ಕಾತರಕಿ ಅವರಿಗೆ ₹13.39 ಕೋಟಿ ಶುಲ್ಕ ಸಂದಾಯ ಮಾಡಲಾಗಿದೆ ಎಂದು ಅವರು ದಾಖಲೆ ನೀಡಿದರು.

‘ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಬಳಿಯ ಚಿನ್ನಾಭರಣಗಳನ್ನು ಮಾರಾಟ ಮಾಡಿ ₹10.50 ಕೋಟಿ ವೆಚ್ಚದಲ್ಲಿ ಕೆಆರ್‌ಎಸ್ ಜಲಾಶಯ ನಿರ್ಮಿಸಿದರು. ಆದರೆ, ಅದರ ನೀರನ್ನು ಬಳಸಿಕೊಳ್ಳಲು ಸರ್ಕಾರ ಕೊಟ್ಟಂತರ ಹಣವನ್ನು ವಕೀಲರಿಗೆ ನೀಡಿದೆ’ ಎಂದರು.

ಬಡತನ, ಭ್ರಷ್ಟಾಚಾರ ಮತ್ತು ಓಲೈಕೆ ರಾಜಕಾರಣಕ್ಕೆ ಉತ್ತೇಜನ: ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

‘ಕಾಂಗ್ರೆಸ್ ಪಕ್ಷ ತುಕ್ಕು ಹಿಡಿದ ಕಬ್ಬಿಣ’

ಮುಖ್ಯಾಂಶಗಳು

- ಕಾಂಗ್ರೆಸ್ ಪಕ್ಷವನ್ನು ಹೊರಗುತ್ತಿಗೆಗೆ ನೀಡಲಾಗಿದೆ
- ಕಾಂಗ್ರೆಸ್ ಪಕ್ಷದ ಗುತ್ತಿಗೆ ಪಡೆದ ನಗರ ನಕ್ಸಲರು
- ನಾಯಕರುಗಳಿಂದ ಆ ಪಕ್ಷ ನಡೆಯುತ್ತಿಲ್ಲ: ಟೀಕೆ

ಭೋಪಾಲ್ (ಪಿಟಿಐ): ಇಷ್ಟವಿಲ್ಲದಿದ್ದರೂ ಬೇರೆ ದಾರಿ ಇಲ್ಲದೆ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಹೊಸ ‘ಘಮಂಡಿಯಾ‘ (ಅಹಂಕಾರದ) ಮೈತ್ರಿಕೂಟ, ಮಹಿಳಾ ಮೀಸಲು ಮಸೂದೆಗೆ ಸಂಸತ್ತಿನಲ್ಲಿ ಬೆಂಬಲ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಇಲ್ಲಿ ಆರೋಪಿಸಿದರು. ಅವಕಾಶ ಸಿಕ್ಕರೆ, ಅದು ಬೆಂಬಲವನ್ನು ಹಿಂದಕ್ಕೆ ಪಡೆಯಲೂ ಬಹುದು ಎಂದು ಹೇಳಿದರು.

ಬಿಜೆಪಿಯ ‘ಕಾರ್ಯಕರ್ತ ಮಹಾಕುಂಭ್‘ ಬೃಹತ್ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ‘ಕಾಂಗ್ರೆಸ್, ತುಕ್ಕು ಹಿಡಿದ ಕಬ್ಬಿಣದಂತೆ. ಈ ಪಕ್ಷ ನಾಯಕರುಗಳಿಂದ ನಡೆಯುತ್ತಿಲ್ಲ. ಪಕ್ಷವನ್ನು ಹೊರಗುತ್ತಿಗೆಗೆ ನೀಡಲಾಗಿದೆ. ನಗರ ನಕ್ಸಲರು ಈ ಪಕ್ಷದ ಗುತ್ತಿಗೆ ಪಡೆದುಕೊಂಡಿದ್ದಾರೆ ’ ಎಂದು ತೀವ್ರ ವಾಗ್ದಾಳಿ ನಡೆಸಿದರು.

ಬಡತನ, ಭ್ರಷ್ಟಾಚಾರ ಮತ್ತು ಓಲೈಕೆ ರಾಜಕಾರಣ ಉತ್ತೇಜಿಸಿದ

ಭೋಪಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರಿಗೆ ಮಹಿಳೆಯರು ಹೂವಿನ ಹಾರ ಹಾಕಿ ಗೌರವಿಸಿದರು –ಪಿಟಿಐ ಚಿತ್ರ

> **ಹೊಸ ಸಂಸತ್ ಭವನ ನಿರ್ಮಾಣ, ಗುಣಮಟ್ಟದ ರಸ್ತೆಗಳ ಬಗ್ಗೆ ಬಿಜೆಪಿಯನ್ನು ಕಾಂಗ್ರೆಸ್ ಟೀಕಿಸುತ್ತದೆ. ಆ ಪಕ್ಷ ನಕಾರಾತ್ಮಕ ಭಾವನೆಗಳನ್ನು ಹರಡುತ್ತದೆ**
> **ನರೇಂದ್ರ ಮೋದಿ,** ಪ್ರಧಾನಿ

ಕಾಂಗ್ರೆಸ್ ಸಂಕಲ್ಪ ಶಕ್ತಿಯನ್ನು ಕಳೆದುಕೊಂಡಿದೆ ಮತ್ತು ಪಕ್ಷದ ಕಾರ್ಯಕರ್ತರು ಮೌನ ವಹಿಸಿದ್ದಾರೆ. ಮೊದಲು ಕಾಂಗ್ರೆಸ್ ಚುನಾವಣೆಯಲ್ಲಿ ನಾಶವಾಯಿತು ಬಳಿಕ ಅದು ದಿವಾಳಿಯಾಯಿತು ಎಂದು ಜರಿದರು.

‘ಕಾಂಗ್ರೆಸ್ ನಾಯಕರು ಬೆಳ್ಳಿ ಚಮಚದೊಂದಿಗೆ ಜನಿಸಿದ್ದಾರೆ. ಬಡಜನರ ಜೀವನ ಅವರಿಗೆ ಸಾಹಸ ಪ್ರವಾಸೋದ್ಯಮ ಮತ್ತು ಪಿಕ್‌ನಿಕ್ ಇದ್ದಂತೆ. ಬಡವನ ಜಮೀನು ಇವರಿಗೆ ವಿಡಿಯೊ ಚಿತ್ರೀಕರಿಸುವ ಮತ್ತು ಫೋಟೊ ತೆಗೆಸಿಕೊಳ್ಳುವ ತಾಣ‘ ಎಂದು ರಾಹುಲ್‌ಗಾಂಧಿ ಹೆಸರು ಪ್ರಸ್ತಾಪಿಸದೆ ಅವರನ್ನು ಕುಟುಕಿದರು.

‘ಮಧ್ಯಪ್ರದೇಶದಲ್ಲಿ ಮೊದಲ ಬಾರಿಗೆ ಮತ ಹಾಕಿದ ಯುವಜನತೆ ರಾಜ್ಯದಲ್ಲಿ ಬಿಜೆಪಿ ಆಡಳಿತವನ್ನು ಮಾತ್ರ ನೋಡಿದ್ದಾರೆ. ಇದು ಅವರ ಅದೃಷ್ಟ. ಭಾರತದ ಅಭಿವೃದ್ಧಿಯ ದೂರದೃಷ್ಟಿಯಲ್ಲಿ ಈ ರಾಜ್ಯವು ಪ್ರಮುಖ ಕೇಂದ್ರ’ ಎಂದರು.

‘ಈ ಹಿಂದೆ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಮಧ್ಯಪ್ರದೇಶದ ಹಿನ್ನಡೆಗೆ ಕಾರಣವಾಯಿತು. ಆದರೆ, ಬಿಜೆಪಿ ಆಡಳಿತದಲ್ಲಿ ಕಳೆದ ಐದು ವರ್ಷಗಳಲ್ಲಿ 13.5 ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ. ದೇಶದ ಸಾಧನೆಗಳನ್ನು ಅವರು ಇಷ್ಟಪಡುವುದಿಲ್ಲ. ದೇಶವನ್ನು 20ನೇ ಶತಮಾನಕ್ಕೆ ಕೊಂಡೊಯ್ಯಲು ಬಯಸುತ್ತಾರೆ’ ಎಂದು ಅವರು ಆರೋಪಿಸಿದರು.

ಡಿಜಿಟಲ್ ಪಾವತಿ ಪದ್ಧತಿಯನ್ನು ಕಾಂಗ್ರೆಸ್ ವಿರೋಧಿಸುತ್ತದೆ. ಆದರೆ ವಿಶ್ವ ಇದಕ್ಕೆ ಮಾರು ಹೋಗಿದೆ ಎಂದರು.

ಬಿಜೆಪಿ ಮಹಿಳಾ ಘಟಕದ ಸದಸ್ಯರು ಮೋದಿ ಅವರಿಗೆ ಭಾರಿ ಗಾತ್ರದ ಹೂವಿನ ಹಾರ ಹಾಕಿ ಗೌರವಿಸಿದರು. ಮಹಿಳಾ ಮಸೂದೆ ಅಂಗೀಕರಿಸಿದ್ದಕ್ಕೆ ಅಭಿನಂದಿಸಿದರು.

ಈ ಪಕ್ಷಕ್ಕೆ ಮತ್ತೆ ಅವಕಾಶ ನೀಡಿದರೆ ಮಧ್ಯಪ್ರದೇಶವು ಅಭಿವೃದ್ಧಿಯಲ್ಲಿ ಹಿಂದೆ ಬೀಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜನಸಂಘದ ಸಹ ಸಂಸ್ಥಾಪಕ ದೀನ್‌ದಯಾಳ್ ಉಪಾಧ್ಯಾಯ ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ರಾಜ್ಯದಾದ್ಯಂತ ನಡೆದ ಬಿಜೆಪಿಯ ಜನ ಆಶೀರ್ವಾದ್ ಯಾತ್ರೆಗಳ ಮುಕ್ತಾಯದ ಅಂಗವಾಗಿ ಈ ಕಾರ್ಯಕ್ರಮ ನಡೆಯಿತು.

‘ಮಹಿಳಾ ಶಕ್ತಿಯ ಬಗ್ಗೆ ಈಗ ಅವರಿಗೆ ತಿಳಿದಿದೆ. ಹೀಗಾಗಿಯೇ ಇಷ್ಟವಿಲ್ಲದೆ ಇದ್ದರೂ ಕಾಂಗ್ರೆಸ್ ಮತ್ತು ‘ಘಮಂಡಿಯಾ’ ಮೈತ್ರಿಕೂಟದಲ್ಲಿನ ಅದರ ಮಿತ್ರಪಕ್ಷಗಳು ಮಸೂದೆ ಬೆಂಬಲಿಸಿದವು. ಕಾಂಗ್ರೆಸ್ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಈ ಮಸೂದೆ ಅಂಗೀಕಾರವಾಗಲಿಲ್ಲ. ಅದರ ಮಿತ್ರಪಕ್ಷಗಳು ಕಳೆದ 30 ವರ್ಷಗಳಲ್ಲಿ ಮಸೂದೆಯ ಅಂಗೀಕಾರಕ್ಕೆ ಅಡ್ಡಿ ಉಂಟು ಮಾಡಿದವು. ಬಹುಮತದೊಂದಿಗೆ ಅವರು ಅಧಿಕಾರ ನಡೆಸಿದರು. ಆದರೆ ಮಸೂದೆ ಅಂಗೀಕಾರ ಅವರಿಗೆ ಸಾಧ್ಯವಾಗಲಿಲ್ಲ ಏಕೆ?’ ಎಂದು ಪ್ರಶ್ನಿಸಿದರು.

‘ಸಂಸತ್ತಿನಲ್ಲಿ ಮುಸ್ಲಿಮರನ್ನು ಥಳಿಸುವ ದಿನ ದೂರವಿಲ್ಲ’

ಅಸದುದ್ದೀನ್ ಓವೈಸಿ

ಹೈದರಾಬಾದ್ (ಪಿಟಿಐ): ‘ಮುಸ್ಲಿಂ ಸಂಸದರನ್ನು ಸಂಸತ್ತಿನಲ್ಲೇ ಥಳಿಸುವ ದಿನವೂ ದೂರವಿಲ್ಲ. ನನ್ನ ಮಾತನ್ನು ನೆನಪಿಟ್ಟುಕೊಳ್ಳಿ’ ಎಂದು ಎಐಎಂಐಎಂ ಅಧ್ಯಕ್ಷ ಅಸದುದ್ದೀನ್ ಓವೈಸಿ ಹೇಳಿದ್ದಾರೆ. ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ವಿರುದ್ಧ ಬಿಜೆಪಿ ಸಂಸದ ರಮೇಶ್ ಬಿಧೂಢಿ ಅವರು ಸಂಸತ್ತಿನಲ್ಲಿ ಆಕ್ಷೇಪಾರ್ಹ ಹೇಳಿಕೆ ನೀಡಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿ ಅವರು ಹೀಗೆ ಹೇಳಿದ್ದಾರೆ.

ಹೈದರಾಬಾದ್‌ನಲ್ಲಿ ಭಾನುವಾರ ನಡೆದ ಸಮಾವೇಶದಲ್ಲಿ ಓವೈಸಿ ಅವರು ಮಾತನಾಡಿದರು. ‘ಬಿಜೆಪಿಯ ಸಂಸದರೊಬ್ಬರು ಮುಸ್ಲಿಂ ಸಂಸದರ ವಿರುದ್ಧ ಕೀಳುಮಟ್ಟದ ಹೇಳಿಕೆ ನೀಡುತ್ತಾರೆ. ಅವರ ಹೇಳಿಕೆ ಸರಿಯಿಲ್ಲ, ಅವರು ಸಂಸತ್ತಿನಲ್ಲಿ ಹೀಗೆ ಮಾತನಾಡಬಾರದಿತ್ತು ಎಂದು ಜನ ಹೇಳುತ್ತಾರೆ. ಆ ಸಂಸದರು ಜನರ ಪ್ರತಿನಿಧಿ, ಜನರೇ ಅವರನ್ನು ಆರಿಸಿ ಕಳುಹಿಸಿರುವುದು’ ಎಂದಿದ್ದಾರೆ.

ಗೋವು ಕಳ್ಳಸಾಗಣೆ ಮತ್ತು ಇತರ ಪ್ರಕರಣಗಳಲ್ಲಿ ಮುಸ್ಲಿಮರನ್ನು ಥಳಿಸಿರುವ ಹಲವು ಘಟನೆಗಳನ್ನು ಉದಹರಿಸಿ ಅವರು ಈ ವೇಳೆ ಮಾತನಾಡಿದ್ದಾರೆ.

ಹರಿಯಾಣದ ನೂಹ್‌ನಲ್ಲಿ ಕೋಮುಗಲಭೆ ನಡೆದ ವೇಳೆ ಕಾನೂನು ಪ್ರಕ್ರಿಯೆಗಳನ್ನು ಸಮರ್ಪಕವಾಗಿ ನಡೆಸದೆಯೇ ಹಲವರ ಮನೆಗಳನ್ನು ಕೆಡವಲಾಯಿತು. ಉತ್ತರಾಖಂಡದ ಹರಿದ್ವಾರದಲ್ಲಿ ನಡೆದ ‘ಧರ್ಮ ಸಂಸತ್’ನಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ದ್ವೇಷ ಭಾಷಣ ಮಾಡಲಾಯಿತು ಎಂದು ಹೇಳಿದ್ದಾರೆ.

‘ಎಲ್ಲರ ಜೊತೆ, ಎಲ್ಲರ ವಿಕಾಸ, ಎಲ್ಲರ ವಿಶ್ವಾಸ (ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್) ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಘೋಷಣೆ ಎಲ್ಲಿ ಹೋಯಿತು. ಬಿಧೂಢಿ ಅವರ ಭಾಷಣವನ್ನು ಮೋದಿ ಅವರು ಅರೇಬಿಕ್ ಭಾಷೆಗೆ ಭಾಷಾಂತರಿಸಿ ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯೆದ್ ಅವರಿಗೆ ಕಳುಹಿಸುತ್ತಾರಾ?’ ಎಂದು ಪ್ರಶ್ನಿಸಿದ್ದಾರೆ.

ಮತ ಗಳಿಕೆಗಾಗಿ ಮೋದಿ ಅವರು ದ್ವೇಷದ ವಾತಾವರಣವನ್ನು ದೇಶದಲ್ಲಿ ಸೃಷ್ಟಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಎಂಇಎಂಇ: ಭಾರತದಲ್ಲಿ ಸಮಸ್ಯೆ ಸಾಧ್ಯತೆ

ಕೋರ್ಸ್‌ಗೆ ಸೇರ್ಪಡೆ, ಕೋರ್ಸ್‌ನಿಂದ ನಿರ್ಗಮನಕ್ಕೆ ಬಹುಬಗೆಯ ಆಯ್ಕೆ ವ್ಯವಸ್ಥೆ ಬಗ್ಗೆ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಸ್ತಾವಿಸಲಾಗಿರುವ, ಕೋರ್ಸ್‌ಗಳಿಗೆ ಪ್ರವೇಶ ಹಾಗೂ ಕೋರ್ಸ್‌ಗಳಿಂದ ನಿರ್ಗಮನದ ವಿಚಾರದಲ್ಲಿ ವಿದ್ಯಾರ್ಥಿಗಳಿಗೆ ಇರುವ ಬಹುಬಗೆಯ ಆಯ್ಕೆ ಪದ್ಧತಿಯ (ಎಂಇಎಂಇ – ಮಲ್ಟಿ ಎಂಟ್ರಿ ಮಲ್ಟಿ ಎಕ್ಸಿಟ್) ಅನುಷ್ಠಾನದಲ್ಲಿ ಭಾರತದ ಶಿಕ್ಷಣ ಸಂಸ್ಥೆಗಳು ಹಲವು ಸಮಸ್ಯೆಗಳನ್ನು ಎದುರಿಸುವ ಸಾಧ್ಯತೆ ಇದೆ ಎಂದು ಸಂಸತ್ತಿನ ಸ್ಥಾಯಿ ಸಮಿತಿಯೊಂದು ಹೇಳಿದೆ.

ಶಿಕ್ಷಣ, ಮಹಿಳೆಯರು, ಮಕ್ಕಳು, ಯುವಕರು ಮತ್ತು ಕ್ರೀಡೆಗೆ ಸಂಬಂಧಿಸಿದ ಸಂಸತ್ತಿನ ಈ ಸ್ಥಾಯಿ ಸಮಿತಿಗೆ ಬಿಜೆಪಿ ಸಂಸದ ವಿವೇಕ್ ಠಾಕೂರ್ ಅಧ್ಯಕ್ಷರಾಗಿದ್ದಾರೆ. ಸಮಿತಿಯ ವರದಿಯನ್ನು ರಾಜ್ಯಸಭೆಯಲ್ಲಿ ಈಚೆಗೆ ಮಂಡಿಸಲಾಗಿದೆ.

‘ಈ ವ್ಯವಸ್ಥೆಯನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ರೂಪಿಸಿರುವಂತೆ ಕಾಣುತ್ತದೆ. ಇದನ್ನು ಪಾಶ್ಚಾತ್ಯ ದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳು ಬಹಳ ಪರಿಣಾಮಕಾರಿಯಾಗಿ ಬಳಸಿಕೊಂಡಿವೆ’ ಎಂದು ಸಮಿತಿಯ ವರದಿಯು ಉಲ್ಲೇಖಿಸಿದೆ.

ಆದರೆ, ಭಾರತದಲ್ಲಿ ಜನಸಂಖ್ಯೆ ಹೆಚ್ಚಿರುವ ಕಾರಣ, ಪ್ರತಿ ವರ್ಷ ಕೋರ್ಸ್‌ಗೆ ಸೇರ್ಪಡೆ ಆಗುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುತ್ತದೆ. ಎಂಇಎಂಇ ವ್ಯವಸ್ಥೆಯನ್ನು ಶಿಕ್ಷಣ ಸಂಸ್ಥೆಗಳು ಜಾರಿಗೆ ತಂದಲ್ಲಿ, ಪ್ರತಿ ವರ್ಷ ಎಷ್ಟು ವಿದ್ಯಾರ್ಥಿಗಳು ಕೋರ್ಸ್‌ನಿಂದ ಹೊರನಡೆಯುತ್ತಾರೆ ಹಾಗೂ ಎಷ್ಟು ಮಂದಿ ಕೋರ್ಸ್‌ನ ನಡುವಿನಲ್ಲಿ ಬಂದು ಸೇರಿಕೊಳ್ಳುತ್ತಾರೆ ಎಂಬುದನ್ನು ಅಂದಾಜಿಸುವುದು ಬಹಳ ಕಷ್ಟವಾಗುತ್ತದೆ ಎಂದು ವರದಿಯು ವಿವರಿಸಿದೆ.

ಕೋರ್ಸ್ ತೊರೆಯುವ ಹಾಗೂ ಕೋರ್ಸ್‌ಗೆ ಮಧ್ಯದಲ್ಲಿ ಬಂದು ಸೇರಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಶಿಕ್ಷಣ ಸಂಸ್ಥೆಗಳಿಗೆ ಗೊತ್ತಿರುವುದಿಲ್ಲ. ಈ ಕಾರಣದಿಂದ, ವಿದ್ಯಾರ್ಥಿ–ಬೋಧಕ ಅನುಪಾತದಲ್ಲಿ ಖಂಡಿತವಾಗಿಯೂ ವ್ಯತ್ಯಾಸ ಉಂಟಾಗುತ್ತದೆ. ದೇಶದಲ್ಲಿ ಭೌಗೋಳಿಕವಾಗಿ ಉನ್ನತ ಶಿಕ್ಷಣ ಸಂಸ್ಥೆಗಳು ಸಮಾನ ಸಂಖ್ಯೆಯಲ್ಲಿ ಇಲ್ಲ. ಇದು ಕೂಡ ಹಲವು ಪ್ರದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ನಗರ ಪ್ರದೇಶಗಳ ಹೊರಗೆ, ಎಂಇಎಂಇ ವ್ಯವಸ್ಥೆಯನ್ನು ನಿರ್ವಹಿಸುವುದು ಕಷ್ಟಕರ ಆಗುತ್ತದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ವಿದ್ಯಾರ್ಥಿಗಳು ಶಿಕ್ಷಣವನ್ನು ಮಧ್ಯದಲ್ಲಿಯೇ ತೊರೆಯುವುದನ್ನು ತಗ್ಗಿಸುವುದು ಎಂಇಎಂಇ ವ್ಯವಸ್ಥೆಯ ಉದ್ದೇಶ ಎಂದು ವಿಶ್ವವಿದ್ಯಾಲಯಗಳ ಅನುದಾನ ಆಯೋಗ (ಯುಜಿಸಿ) ಸಿದ್ಧಪಡಿಸಿರುವ ಮಾರ್ಗಸೂಚಿ ಕೈಪಿಡಿಯೊಂದರಲ್ಲಿ ಹೇಳಲಾಗಿದೆ.

ಸಮಿತಿ ಸಲಹೆಗಳು

- ಎನ್‌ಇಪಿ ಚೌಕಟ್ಟಿನೊಳಗೆ, ಎಂಇಎಂಇ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರುವುದು ಬಹಳ ಮಹತ್ವದ್ದು. ಈ ವ್ಯವಸ್ಥೆಯು ಸುಲಲಿತವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಸಮಗ್ರ ಮಾರ್ಗಸೂಚಿಯನ್ನು ರೂಪಿಸಬೇಕು.
- ವಿದ್ಯಾರ್ಥಿಗಳಿಗೆ ತಾವು ಗಳಿಸಿದ ಶ್ರೇಯಾಂಕವನ್ನು ಒಂದು ಶಿಕ್ಷಣ ಸಂಸ್ಥೆಯಿಂದ ಇನ್ನೊಂದು ಶಿಕ್ಷಣ ಸಂಸ್ಥೆಗೆ ಸುಲಭವಾಗಿ ವರ್ಗಾವಣೆ ಮಾಡಿಕೊಳ್ಳಲು ಅನುಕೂಲ ಕಲ್ಪಿಸುವ ಶ್ರೇಯಾಂಕ ಗಳಿಕೆ ಮತ್ತು ವರ್ಗಾವಣೆ (ಸಿಎಟಿ) ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಬೇಕು.
- ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ ವ್ಯವಸ್ಥೆಯ ವ್ಯಾಪ್ತಿಗೆ ಶೇಕಡ 50ರಷ್ಟಕ್ಕಿಂತ ಹೆಚ್ಚಿನ ವಿಶ್ವವಿದ್ಯಾಲಯಗಳು ಸೇರ್ಪಡೆ ಆಗಿವೆ. ಇದು ಮೆಚ್ಚತಕ್ಕದ್ದು. ಇನ್ನುಳಿದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಹಾಗೂ ವಿಶ್ವವಿದ್ಯಾಲಯಗಳನ್ನು ಕೂಡ ಈ ವ್ಯವಸ್ಥೆಯ ಅಡಿಯಲ್ಲಿ ತರಲು ಶ್ರಮವಹಿಸಬೇಕು.
- ಎಂಇಎಂಇ ವ್ಯವಸ್ಥೆಯ ಅನುಷ್ಠಾನದಲ್ಲಿ ಇರುವ ಕಷ್ಟಗಳನ್ನು ಸಮಿತಿಯು ಗುರುತಿಸಿದೆ. ಹೀಗಾಗಿ, ಬೇರೆ ಬೇರೆ ವಿಶ್ವವಿದ್ಯಾಲಯಗಳು, ಸಂಸ್ಥೆಗಳು, ಅವುಗಳ ನಿಯಂತ್ರಣ ಸಂಸ್ಥೆಗಳು ಮತ್ತು ಇತರ ಪಾಲುದಾರರ ಜೊತೆ ಎಂಇಎಂಇ ಅನುಷ್ಠಾನದಲ್ಲಿನ ಸಮಸ್ಯೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಬೇಕು ಎಂದು ಸಮಿತಿಯು ಶಿಫಾರಸು ಮಾಡುತ್ತಿದೆ.

ಪ್ರತಿಭಟನೆ ಸನಾತನ ಧರ್ಮವನ್ನು ಕುರಿತು ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಅವರು ನೀಡಿದ್ದ ಹೇಳಿಕೆಯನ್ನು ಖಂಡಿಸಿ ವಿವಿಧ ಸಂತರು ಸೋಮವಾರ ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಪತ್ರಕರ್ತರಿಗೆ ಆತಿಥ್ಯದ ಆಮಿಷ

ಒಂದನೇ ಪುಟದಿಂದ

‘ಸಣ್ಣ ಪೋರ್ಟಲ್ ನಡೆಸುವ, ನಿಮ್ಮ ಮತಗಟ್ಟೆ ಪ್ರದೇಶದಲ್ಲಿಯೇ ವಾಸಿಸುವ ಪತ್ರಕರ್ತರು ಸಣ್ಣ ವಿಚಾರಗಳನ್ನು ದೊಡ್ಡದಾಗಿ ಮಾಡಬಹುದು. ಅಂಥವರ ಕುರಿತು ಎಚ್ಚರ ಇರಲಿ. ಹೀಗೆ ಸಮಸ್ಯೆ ಸೃಷ್ಟಿಸುವ ಎಲೆಕ್ಟ್ರಾನಿಕ್ ಮಾಧ್ಯಮ ಮತ್ತು ಮುದ್ರಣ ಮಾಧ್ಯಮದ ಪತ್ರಕರ್ತರ ಪಟ್ಟಿ ತಯಾರಿಸಿ. ಅವರನ್ನು ಢಾಬಾಕ್ಕೆ ಕರೆದು ಚಹಾ ಕೊಡಿಸಿ. ಹಾಗೆ ಮಾಡಿದರೆ, 2024ರ ಮಹಾವಿಜಯಕ್ಕೆ ಮುನ್ನಾ ದಿನಗಳಲ್ಲಿ ಅವರು ನಮ್ಮ ವಿರುದ್ಧ ಏನನ್ನೂ ಬರೆಯುವುದಿಲ್ಲ. ನಾನು ಹೇಳಿದ್ದು ಅರ್ಥವಾಯಿತೇ, ಅವರನ್ನು ಚಹಾಕ್ಕೆ ಆಹ್ವಾನಿಸಬೇಕು’ ಎಂದು ಚಂದ್ರಶೇಖರ ಅವರು ಹೇಳಿರುವುದು ಆಡಿಯೊದಲ್ಲಿ ದಾಖಲಾಗಿದೆ.

‘ಏನೇ ಸಮಸ್ಯೆ ಬಂದರೂ ಸ್ಥಳೀಯ ಶಾಸಕ ಸುಜಯ್ ವಿಖೆ ಪಾಟೀಲ್ ನೋಡಿಕೊಳ್ಳುತ್ತಾರೆ. ನಮ್ಮ ಕುರಿತು ನಕಾರಾತ್ಮಕ ಸುದ್ದಿ ಬರಲೇಬಾರದು. ಮೊದಲಿಗೆ ನಿಮ್ಮ ಮತಗಟ್ಟೆ ರಕ್ಷಿಸಿಕೊಳ್ಳಿ’ ಎಂದು ಅವರು ಹೇಳಿದ್ದೂ ಆಡಿಯೊದಲ್ಲಿ ಇದೆ.

‘ಎಲ್ಲ ಪತ್ರಕರ್ತರು ಬಿಕರಿಯಾಗಿಲ್ಲ’

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಮಹಾರಾಷ್ಟ್ರ ವಿಧಾನಸಭೆ ಪ್ರತಿಪಕ್ಷದ ನಾಯಕ, ಕಾಂಗ್ರೆಸ್‌ನ ವಿಜಯ್ ವಾಡೆಟ್ಟಿವಾರ್, ‘ಎಲ್ಲ ಪತ್ರಕರ್ತರು ಬಿಕರಿಯಾಗಿಲ್ಲ. ಪತ್ರಕರ್ತರು ಆಮಿಷಕ್ಕೆ ಒಳಗಾಗುತ್ತಾರೆ ಎಂದು ಭಾವಿಸುವಿರಾ’ ಎಂದು ಪ್ರಶ್ನಿಸಿದ್ದಾರೆ.

‘ನಿಮ್ಮ ಪಕ್ಷದ ಉನ್ನತ ಮತ್ತು ಕೆಳಮಟ್ಟದ ನಾಯಕರ ತಾಕಲಾಟ ನನಗರ್ಥವಾಗುತ್ತದೆ. ನಿಮಗೆ ಜನರ ಧ್ವನಿಯನ್ನು ಅಡಗಿಸಲು ಆಗುತ್ತಿಲ್ಲ. ಹೀಗಾಗಿ, ನೇರವಾಗಿ ಪತ್ರಕರ್ತರಿಗೆ ಆಮಿಷ ಒಡ್ಡುತ್ತಿದ್ದೀರಾ’ ಎಂದು ಬಿಜೆಪಿಯವರನ್ನು ಪ್ರಶ್ನಿಸಿದ್ದಾರೆ.

ಮಹಾರಾಷ್ಟ್ರ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಅವರು, ಬಾವನಕುಳೆ ಅವರ ಹೇಳಿಕೆಯು ಇಡೀ ಮಾಧ್ಯಮ ಸಮುದಾಯಕ್ಕೆ ಅಪಮಾನಕರವಾಗಿದೆ ಎಂದು ಹೇಳಿದ್ದಾರೆ.

ಎನ್‌ಸಿಪಿ (ಶರದ್ ಪವಾರ್ ಬಣ) ರಾಷ್ಟ್ರೀಯ ವಕ್ತಾರ ಕ್ಲೈಡ್ ಕ್ರಾಸ್ಟೊ, ‘ಇದು, ಸತ್ಯ ನುಡಿಯುವ ಪತ್ರಕರ್ತರಿಗೆ ಆತಿಥ್ಯ ನೀಡಿ ಎಂದು ಕಾರ್ಯಕರ್ತರಿಗೆ ಸಲಹೆಯೊ, ಅಥವಾ ನಿಜವಾದ ಪತ್ರಕರ್ತರಿಗೆ ನೀಡಿರುವ ಬೆದರಿಕೆಯೊ’ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿಯಿಂದ ಸಿ.ಎನ್. ಅಣ್ಣಾದೊರೈ, ಜಯಲಲಿತಾಗೆ ಅವಮಾನ ಆರೋಪ

ಎನ್‌ಡಿಎ ಮೈತ್ರಿ ಕಡಿದುಕೊಂಡ ಎಐಎಡಿಎಂಕೆ

ಚೆನ್ನೈ (ಪಿಟಿಐ): ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದಿಂದ (ಎನ್‌ಡಿಎ) ಹೊರನಡೆದಿರುವುದಾಗಿ ತಮಿಳುನಾಡಿನ ಪ್ರಮುಖ ಪಕ್ಷ ಎಐಎಡಿಎಂಕೆ ಸೋಮವಾರ ಪ್ರಕಟಿಸಿದೆ.

ಪಕ್ಷದ ಮುಖ್ಯಸ್ಥ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರ ನೇತೃತ್ವದಲ್ಲಿ ಇಲ್ಲಿ ನಡೆದ ಉನ್ನತ ಮಟ್ಟದ ಸಭೆಯು ಎನ್‌ಡಿಎ ಮೈತ್ರಿ ಕಡಿದುಕೊಳ್ಳುವ ನಿರ್ಣಯ ಕೈಗೊಂಡಿತು. 2024ರ ಲೋಕಸಭಾ ಚುನಾವಣೆಯಲ್ಲಿ ಸ್ವತಃ ಪ್ರತ್ಯೇಕ ರಂಗದ ನೇತೃತ್ವವನ್ನು ವಹಿಸಲು ಪಕ್ಷವು ತೀರ್ಮಾನಿಸಿತು.

ಸಭೆಯ ವಿವರಗಳನ್ನು ಸುದ್ದಿಗಾರರಿಗೆ ನೀಡಿದ ಮಾಜಿ ಸಚಿವ ಕೆ.ಪಿ. ಮುನುಸ್ವಾಮಿ ಅವರು, 'ಎನ್‌ಡಿಎಯಿಂದ ಹೊರನಡೆಯುವ ಹಾಗೂ ಮುಂದಿನ ಚುನಾವಣೆಯಲ್ಲಿ ಸಮಾನ ಮನಸ್ಕ ಪಕ್ಷಗಳ ಜೊತೆಗೆ ಕೈಜೋಡಿಸುವ ತೀರ್ಮಾನವನ್ನು ಸರ್ವಾನುಮತದಿಂದ ಕೈಗೊಳ್ಳಲಾಯಿತು‘ ಎಂದು ತಿಳಿಸಿದರು.

‘ಈ ಸರ್ವಾನುಮತದ ನಿರ್ಣಯವು ಪಕ್ಷದ ಎರಡು ಕೋಟಿಗೂ ಹೆಚ್ಚು ಕಾರ್ಯಕರ್ತರ ಆಶಯ ಮತ್ತು ಭಾವನೆಗಳನ್ನು ಗೌರವಿಸಿದ್ದಾಗಿದೆ‘ ಎಂದರು.

‘ಬಿಜೆಪಿಯ ರಾಜ್ಯ ನಾಯಕತ್ವವು ದ್ರಾವಿಡ ನಾಯಕ ಸಿ.ಎನ್.ಅಣ್ಣಾದೊರೈ ಮತ್ತು ಮಾಜಿ ಮುಖ್ಯಮಂತ್ರಿ ಜೆ.ಜಯಜಲಿತಾ ಅವರನ್ನು ಅವಮಾನಿಸಿದೆ. ಅಲ್ಲದೆ, ಪಕ್ಷದ ನೀತಿಗಳನ್ನು ಟೀಕಿಸಿದೆ‘ ಎಂದು ಸಭೆಯು ನಿರ್ಣಯ ಅಂಗೀಕರಿಸಿತು. ಆದರೆ, ನಿರ್ಣಯದಲ್ಲಿ ಬಿಜೆಪಿಯ ಯಾವುದೇ ಮುಖಂಡರ ಹೆಸರು ಉಲ್ಲೇಖಿಸಿಲ್ಲ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರು ಈಚೆಗೆ ಅಣ್ಣಾದೊರೈ ಅವರ ಕುರಿತು ಹೇಳಿಕೆ ನೀಡಿದ್ದು, ಉಭಯ ಪಕ್ಷಗಳ ನಡುವೆ ಭಿನ್ನಮತಕ್ಕೆ ಕಾರಣವಾಗಿತ್ತು.

ಎನ್‌ಡಿಎಗೆ ಮತ್ತೆ ಸೇರಲ್ಲ: ನಿತೀಶ್

ನಿತೀಶ್ ಕುಮಾರ್

ಪಟ್ನಾ (ಪಿಟಿಐ): ‘ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟಕ್ಕೆ (ಎನ್‌ಡಿಎ) ಮತ್ತೆ ಮರಳುವ ಪ್ರಶ್ನೆಯೇ ಇಲ್ಲ’ ಎಂದು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ನಿತೀಶ್ ನೇತೃತ್ವದ ಜೆಡಿ(ಯು) ಕಳೆದ ವರ್ಷ ಎನ್‌ಡಿಎ ಕೂಟದ ಮೈತ್ರಿಯನ್ನು ಕಡಿದುಕೊಂಡಿತ್ತು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಪ್ರತಿಪಕ್ಷಗಳನ್ನು ಒಗ್ಗೂಡಿಸುವಲ್ಲಿ ಅವರು ಮುಂಚೂಣಿ ನಾಯಕರಾಗಿದ್ದಾರೆ. ‘ಇಂಡಿಯಾ’ ಮೈತ್ರಿಕೂಟದ ಬಗ್ಗೆ ಅಸಮಾಧಾನ ಹೊಂದಿರುವ ನಿತೀಶ್ ಮರಳಿ ಎನ್‌ಡಿಎ ತೆಕ್ಕೆಗೆ ಸೇರುತ್ತಾರೆ ಎಂಬ ವದಂತಿ ನಡುವೆಯೇ ಅವರು ಸೋಮವಾರ ನಡೆದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಜನ್ಮದಿನಾಚರಣೆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಅವಕಾಶ ಇಲ್ಲ: ‘ನಿತೀಶ್ ಎಷ್ಟೇ ಬೇಡಿಕೊಂಡರೂ ಎನ್‌ಡಿಎ ಮೈತ್ರಿಕೂಟಕ್ಕೆ ಅವರನ್ನು ಮತ್ತೆ ಸೇರಿಸಿಕೊಳ್ಳುವುದಿಲ್ಲ’ ಎಂದು ಬಿಜೆಪಿ ನಾಯಕ ಸುಶೀಲ್ ಕುಮಾರ್ ಮೋದಿ ಪ್ರತಿಕ್ರಿಯಿಸಿದ್ದಾರೆ.

ಮಧ್ಯಪ್ರದೇಶ: 39 ಸದಸ್ಯರ ಬಿಜೆಪಿಯ 2ನೇ ಪಟ್ಟಿ ಪ್ರಕಟ

ನವದೆಹಲಿ (ಪಿಟಿಐ): ಮಧ್ಯಪ್ರದೇಶ ವಿಧಾನಸಭೆ ಚುನಾವಣೆಗೆ ಬಿಜೆಪಿ ಸೋಮವಾರ 39 ಸದಸ್ಯರ ಎರಡನೇ ಪಟ್ಟಿ ಪ್ರಕಟಿಸಿದ್ದು, ಮೂವರು ಕೇಂದ್ರ ಸಚಿವರನ್ನು ಕಣಕ್ಕಿಳಿಸಲು ತೀರ್ಮಾನಿಸಿದೆ.

ಕೇಂದ್ರ ಸಚಿವರಾದ ನರೇಂದ್ರ ಸಿಂಗ್ ತೋಮರ್, ಪ್ರಹ್ಲಾದ ಸಿಂಗ್ ಪಟೇಲ್, ಪ್ರಜ್ಞಾನ್ ಸಿಂಗ್ ಕುಲಸ್ತೆ, ಸಂಸದರಾದ ರಾಕೇಶ್ ಸಿಂಗ್, ಗಣೇಶ್ ಸಿಂಗ್, ರಿತಿ ಪಾಠಕ್, ಉದಯ್ ಪ್ರತಾಪ್ ಸಿಂಗ್ 2ನೇ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ ಅವರು ಇಂದೋರ್–1 ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಎರಡನೇ ಪಟ್ಟಿ ಪ್ರಕಟಣೆಯೊಂದಿಗೆ ಬಿಜೆಪಿಯು 230 ಸದಸ್ಯ ಬಲದ ವಿಧಾನಸಭೆ ಚುನಾವಣೆಗೆ ಒಟ್ಟು 78 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದಂತಾಗಿದೆ.

ಕಪಾಳಕ್ಕೆ ಏಟು ಪ್ರಕರಣ: ಶಿಕ್ಷಣದ ಗುಣಮಟ್ಟದ ಬಗ್ಗೆ ‘ಸುಪ್ರೀಂ’ ಪ್ರಶ್ನೆ

ನವದೆಹಲಿ: ಉತ್ತರಪ್ರದೇಶದ ಮುಜಫ್ಫರ ನಗರದ ಶಾಲೆಯೊಂದರಲ್ಲಿ ಶಿಕ್ಷಕಿಯು ಮುಸ್ಲಿಂ ವಿದ್ಯಾರ್ಥಿಯೊಬ್ಬನ ಕೆನ್ನೆಗೆ ಸಹಪಾಠಿಗಳಿಂದ ಹೊಡೆಸಿದ ಮತ್ತು ಕೋಮುವಿರೋಧಿ ಹೇಳಿಕೆ ನೀಡಿದ್ದ ಪ್ರಕರಣದ ಕುರಿತು ವಿಷಾದ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಶಾಲೆಗಳಲ್ಲಿ ನೀಡಲಾಗುತ್ತಿರುವ ಶಿಕ್ಷಣದ ಗುಣಮಟ್ಟ ಕುರಿತು ಪ್ರಶ್ನೆ ಎತ್ತಿದೆ.

ಈ ಪ್ರಕರಣದ ತನಿಖೆಯ ಮೇಲ್ವಿಚಾರಣೆ ವಹಿಸಲು ಹಿರಿಯ ಐಪಿಎಸ್ ಅಧಿಕಾರಿಯನ್ನು ನೇಮಿಸುವಂತೆ ಉತ್ತರಪ್ರದೇಶ ಸರ್ಕಾರಕ್ಕೆ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಪಂಕಜ್ ಮಿತ್ತಲ್ ಅವರಿದ್ದ ನ್ಯಾಯಪೀಠವು ಈ ಪ್ರಕರಣದ ವಿಚಾರಣೆ ನಡೆಸಿದೆ. ‘ಶಿಕ್ಷಣ ಹಕ್ಕು ಕಾಯ್ದೆಯ ಕಡ್ಡಾಯ ಜಾರಿ ಮತ್ತು ಮಕ್ಕಳ ಮೇಲೆ ದೈಹಿಕ ಅಥವಾ ಮಾನಸಿಕ ದೌರ್ಜನ್ಯ ನಡೆಸುವುದನ್ನು ನಿಷೇಧಿಸುವ ನೀತಿಗೆ ರಾಜ್ಯ ಸರ್ಕಾರವು ಬದ್ಧವಾಗಿಲ್ಲ ಎಂದು ಮೇಲ್ನೋಟಕ್ಕೆ ಸಾಬೀತಾಗಿದೆ ಎಂದು ನ್ಯಾಯಪೀಠ ಹೇಳಿದೆ.

‘ಶಿಕ್ಷಣದ ಗುಣಮಟ್ಟವು ಸೂಕ್ಷ್ಮ ಸಂವೇದನೆಯನ್ನೂ ಒಳಗೊಂಡಿರುತ್ತದೆ. ಮುಜಫ್ಫರನಗರದ ಶಾಲೆಯೊಂದರಲ್ಲಿ ನಡೆದಿರುವ ಕೃತ್ಯವು ರಾಜ್ಯದ ಅಂತಃಸಾಕ್ಷಿಯನ್ನು ಕಲಕುವಂತಿದೆ’ ಎಂದಿದೆ.

ಸಂಜ್ಞೆಯ ಭಾಷಾ ವ್ಯಾಖ್ಯಾನಕಾರರ ನೇಮಕ

ನವದೆಹಲಿ (ಪಿಟಿಐ): ಮಕ್ಕಳ ರಕ್ಷಣೆಯ ಬಗ್ಗೆ ಎರಡು ದಿನಗಳ ರಾಷ್ಟ್ರೀಯ ಮಧ್ಯಸ್ಥಗಾರರ ಸಮಾಲೋಚನೆಗಾಗಿ ಸುಪ್ರೀಂ ಕೋರ್ಟ್ ಮೊದಲ ಬಾರಿಗೆ ಸಂಜ್ಞೆಯ ಭಾಷಾ ವ್ಯಾಖ್ಯಾನಕಾರರನ್ನು ಬಳಸಿದೆ.

ಕಾರ್ಯಕ್ರಮದ ವಿವರಗಳನ್ನು ದೃಷ್ಟಿಹೀನರ ಸಹಾಯಕ್ಕಾಗಿ ಮೊದಲ ಬಾರಿಗೆ ಬ್ರೈಲ್ ಲಿಪಿಯಲ್ಲಿ ನೀಡಲಾಯಿತು.

ಬಾಲ ನ್ಯಾಯ ಮತ್ತು ಮಕ್ಕಳ ಕಲ್ಯಾಣ ಕುರಿತ ಸುಪ್ರೀಂ ಕೋರ್ಟ್ ಸಮಿತಿ ಆಯೋಜಿಸಿದ್ದ ವಾರ್ಷಿಕ ಕಾರ್ಯಕ್ರಮ ಭಾನುವಾರ ಮುಕ್ತಾಯಗೊಂಡಿತು.

ವಿಶೇಷ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಅರಿತು, ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಕಳೆದ ವರ್ಷ ಸಮಿತಿ ರಚಿಸಿದ್ದರು.

ಸುಪ್ರೀಂ ಕೋರ್ಟ್‌ನ ಬಾಲನ್ಯಾಯ ಮತ್ತು ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ರವೀಂದ್ರಭಟ್, ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ಸುಧಾರಣೆಯು ಸಾಮೂಹಿಕ ಪ್ರಯತ್ನಗಳ ಕೇಂದ್ರಬಿಂದುವಾಗಿರಬೇಕು ಎಂದು ಹೇಳಿದರು.

ಶನಿವಾರ ಉದ್ಘಾಟನಾ ಸಮಾರಂಭ ದಲ್ಲಿ ಮಾತನಾಡಿದ ನ್ಯಾಯಮೂರ್ತಿ ಬಿ.ವಿ.ನಾಗರತ್ನ, ಹುಟ್ಟಿನಿಂದ ಯಾರೂ ಅಪರಾಧಿಗಳಲ್ಲ. ಆದರೆ, ಕೆಲವರು ಪೋಷಕರ ಅಥವಾ ಸಾಮಾಜಿಕ ನಿರ್ಲಕ್ಷ್ಯಕ್ಕೆ ಬಲಿಯಾಗುತ್ತಾರೆ. ಆದ್ದರಿಂದ ಪ್ರತಿಯೊಬ್ಬ ನಾಗರಿಕನು ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳಿಗೆ ಸಹಾಯ ಮಾಡುವ ಪ್ರತಿಜ್ಞೆ ಮಾಡಬೇಕು ಎಂದರು.

ಮುಂಗಾರು ಮಾರುತ ಇಳಿಮುಖ

ನವದೆಹಲಿ (ಪಿಟಿಐ): ಮುಂಗಾರು ಮಾರುತಗಳು ವಾಡಿಕೆಗಿಂತ ಎಂಟು ದಿನ ತಡವಾಗಿ ಹಿಂದೆ ಸರಿಯಲಾರಂಭಿಸಿವೆ ಎಂದು ಕೇಂದ್ರ ಹವಾಮಾನ ಇಲಾಖೆ ಹೇಳಿದೆ.

‘ನೈಋತ್ಯ ಮಾರುತಗಳು ರಾಜಸ್ಥಾನದ ನೈಋತ್ಯ ಭಾಗದಿಂದ ಸೋಮವಾರ ಹಿಂದೆ ಸರಿದಿವೆ. ವಾಡಿಕೆಯ ಪ್ರಕಾರ ಅವು ಸೆಪ್ಟೆಂಬರ್ 17ರಂದೇ ಹಿಂದೆ ಸರಿಯಬೇಕಿತ್ತು’ ಎಂದು ಇಲಾಖೆಯು ಹೇಳಿದೆ. ಮುಂಗಾರು ಮಾರುತಗಳು ಈಗ ಸತತ 13 ವರ್ಷಗಳಿಂದ ವಾಡಿಕೆಗಿಂತ ತಡವಾಗಿ ಹಿಂದೆ ಸರಿಯುತ್ತಿವೆ.

ಮುಂಗಾರು ಮಾರುತಗಳು ದೇಶದ ವಾಯವ್ಯ ಭಾಗದಿಂದ ಹಿಂದೆ ಸರಿಯಲು ಆರಂಭವಾಗುವುದು, ಮಾರುತಗಳು ಇಡೀ ಭಾರತ ಉಪಖಂಡದಿಂದ ಹಿಂದೆ ಸರಿಯುವುದರ ಆರಂಭವನ್ನು ಸೂಚಿಸುತ್ತದೆ. ಮುಂಗಾರು ಮಾರುತ ಹಿಂದಕ್ಕೆ ಸರಿಯುವುದು ವಿಳಂಬವಾದರೆ ಮಳೆಗಾಲ ಇನ್ನಷ್ಟು ಕಾಲ ಮುಂದುವರಿಯುತ್ತದೆ. ಇದು ಕೃಷಿ ಉತ್ಪಾದನೆಯ ಮೇಲೆ ಗಣನೀಯ ಪರಿಣಾಮ ಉಂಟುಮಾಡುತ್ತದೆ.

ಈ ವರ್ಷದ ಮುಂಗಾರಿನ ಅವಧಿಯಲ್ಲಿ ದೇಶದಲ್ಲಿ 796.4 ಮಿ.ಮೀ. ಮಳೆಯಾಗಿದೆ. ಇದು ವಾಡಿಕೆಯ 843.2 ಮಿ.ಮೀ.ಗಿಂತ ಶೇಕಡ 6ರಷ್ಟು ಕಡಿಮೆ. ದೀರ್ಘಾವಧಿಯ ಸರಾಸರಿಯ ಶೇಕಡ 6ರಷ್ಟು ಕಡಿಮೆ ಅಥವಾ ಶೇ 6ರಷ್ಟು ಹೆಚ್ಚು ಮಳೆಯಾಗುವುದನ್ನು ಸಹಜ ಎಂದು ಪರಿಗಣಿಸಲಾಗಿದೆ.

ಲಿಂಗ ಪರಿವರ್ತನೆಗೆ ಅನುಮತಿ ಕೋರಿದ ಐವರು ಮಹಿಳಾ ಪೊಲೀಸರು

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದಲ್ಲಿ ಐವರು ಮಹಿಳಾ ಕಾನ್‌ಸ್ಟೆಬಲ್‌ಗಳು ಲಿಂಗ ಪರಿವರ್ತನೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದು, ರಾಜ್ಯ ಪೊಲೀಸ್ ಇಲಾಖೆಯು ಉಭಯ ಸಂಕಟಕ್ಕೆ ಸಿಲುಕಿದೆ.

ಇತ್ತೀಚೆಗೆ ಮಧ್ಯಪ್ರದೇಶದಲ್ಲಿ ಲಿಂಗ ಗುರುತಿನ ಯಾತನೆ ಅನುಭವಿಸುತ್ತಿದ್ದ ಮಹಿಳಾ ಕಾನ್‌ಸ್ಟೆಬಲ್‌ವೊಬ್ಬರು ಲಿಂಗ ಪರಿವರ್ತನೆಗೆ ಅನುಮತಿ ಕೋರಿದ್ದರು. ಸುಪ್ರೀಂ ಕೋರ್ಟ್‌ನ ನಿರ್ದೇಶನ ಹಾಗೂ ಮನೋವೈದ್ಯರ ಸಲಹೆ ಮೇರೆಗೆ ಅಲ್ಲಿನ ಪೊಲೀಸ್ ಇಲಾಖೆಯು ಇದಕ್ಕೆ ಒಪ್ಪಿಗೆ ನೀಡಿದೆ. ಈ ನಿಟ್ಟಿನಲ್ಲಿ ಮಧ್ಯಪ್ರದೇಶದ ಪೊಲೀಸರ ಅಭಿಪ್ರಾಯ ಪಡೆಯಲು ಉತ್ತರ ಪ್ರದೇಶದ ಪೊಲೀಸರು ಮುಂದಾಗಿದ್ದಾರೆ.

‘ಮಹಿಳಾ ಕಾನ್‌ಸ್ಟೆಬಲ್‌ಗಳಿಗೆ ಲಿಂಗ ಪರಿವರ್ತನೆಗೆ ಅನುಮತಿ ಸಿಗಬಹುದು. ಆದರೆ, ಭವಿಷ್ಯದಲ್ಲಿ ಮಹಿಳೆಯರಿಗೆ ಇಲಾಖೆಯಿಂದ ನಿಗದಿಪಡಿಸಿರುವ ಯಾವುದೇ ಸೌಲಭ್ಯಗಳು ಅವರಿಗೆ ಲಭಿಸುವುದಿಲ್ಲ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಈಗಾಗಲೇ, ಇಬ್ಬರು ಕಾನ್‌ಸ್ಟೆಬಲ್‌ಗಳು ಈ ವಿಷಯಕ್ಕೆ ಸಂಬಂಧಿಸಿ ಹೈಕೋರ್ಟ್‌ನ ಮೊರೆ ಹೋಗಿದ್ದಾರೆ. ಅರ್ಹತೆಯ ಮೇಲೆ ಈ ವಿಷಯವನ್ನು ಪರಿಗಣಿಸುವಂತೆ ಉತ್ತರ ಪ್ರದೇಶದ ಪೊಲೀಸ್ ಇಲಾಖೆಗೆ ನ್ಯಾಯಾಲಯವು ಸೂಚಿಸಿದೆ. ಅಲ್ಲದೇ, ಈ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ನೀತಿಯೊಂದನ್ನು ರೂಪಿಸುವಂತೆಯೂ ನಿರ್ದೇಶನ ನೀಡಿದೆ.

‘ನಾವು ಹೆಣ್ಣು ಅಥವಾ ಗಂಡು ಎಂದು ಲಿಂಗ ಗುರುತಿಸುವಿಕೆಯಲ್ಲಿ ಮುಜುಗರ ಅನುಭವಿಸುತ್ತಿದ್ದೇವೆ. ಇದು ನಮ್ಮನ್ನು ಆತಂಕ ಹಾಗೂ ಖಿನ್ನತೆಗೆ ದೂಡಿದೆ. ಹಾಗಾಗಿ, ಲಿಂಗ ಪರಿವರ್ತನೆಗೆ ಅನುಮತಿ ನೀಡಬೇಕು’ ಎಂದು ಕಾನ್‌ಸ್ಟೆಬಲ್‌ವೊಬ್ಬರು ಅರ್ಜಿಯಲ್ಲಿ ಕೋರಿದ್ದಾರೆ.

‘ಈ ಬೆಳವಣಿಗೆಯಿಂದ ಭವಿಷ್ಯದಲ್ಲಿ ಇಂತಹ ಸಮಸ್ಯೆಗಳು ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ. ಹಾಗಾಗಿ, ತನ್ನ ನೇಮಕಾತಿ ನೀತಿಯಲ್ಲಿ ಬದಲಾವಣೆಗೆ ತರಲು ಪೊಲೀಸ್ ಇಲಾಖೆಯು ಮುಂದಾಗಿದೆ’ ಎಂದು ಮೂಲಗಳು ತಿಳಿಸಿವೆ.

₹ 1,500 ಸಾಲ ತೀರಿಸಿದ ಬಳಿಕವೂ ಕಿರುಕುಳ

ದಲಿತ ಮಹಿಳೆ ಬೆತ್ತಲಾಗಿಸಿ, ಮೂತ್ರ ವಿಸರ್ಜನೆ

ಪಟ್ನಾ (ಪಿಟಿಐ): ಸಾಲ ನೀಡಿದ್ದ ವ್ಯಕ್ತಿ ಮತ್ತು ಆತನ ಸಹಚರರು ದಲಿತ ಮಹಿಳೆಯನ್ನು ಬೆತ್ತಲೆಗೊಳಿಸಿ, ಥಳಿಸಿ, ಆಕೆಯ ಬಾಯಿಯಲ್ಲಿ ಮೂತ್ರ ವಿಸರ್ಜನೆ ಮಾಡಿರುವ ಪ್ರಕರಣವು ಬಿಹಾರದ ಪಟ್ನಾ ಜಿಲ್ಲೆಯಲ್ಲಿ ನಡೆದಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಜಿಲ್ಲೆಯ ಖುಸ್ರುಪುರ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ ಶನಿವಾರ (ಸೆ. 23) ಈ ಪ್ರಕರಣ ನಡೆದಿದೆ.

ಪಡೆದಿದ್ದ ಸಾಲದ ಮೊತ್ತವನ್ನು ಹಿಂದಿರುಗಿಸಿದ ಬಳಿಕವೂ ಹೆಚ್ಚಿನ ಹಣಕ್ಕೆ ಸಾಲಗಾರ ಪ್ರಮೋದ್ ಬೇಡಿಕೆ ಇಟ್ಟಿದ್ದ. ಹಣ ನೀಡದಿದ್ದರೆ ಗ್ರಾಮದಲ್ಲಿ ಬೆತ್ತಲೆ ಮೆರವಣಿಗೆ ಮಾಡುವುದಾಗಿ

ಬೆದರಿಕೆ ಒಡ್ಡಿದ್ದ. ಆತ ಕಿರುಕುಳ ನೀಡುತ್ತಿರುವ ಕುರಿತು ಮಹಿಳೆಯು ಪೊಲೀಸರಿಗೆ ದೂರವಾಣಿ ಮೂಲಕ ದೂರು ನೀಡಿದ್ದರು. ಇದರಿಂದ ಕುಪಿತಗೊಂಡ ಸಾಲಗಾರನು ಮಹಿಳೆ ಮೇಲೆ ದೌರ್ಜನ್ಯ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿಗಳಾದ ಪ್ರಮೋದ್ ಸಿಂಗ್ ಮತ್ತು ಆತನ ಮಗ ಅನ್ಶು ಸಿಂಗ್ ನಾಪತ್ತೆಯಾಗಿದ್ದಾರೆ. ಈ ಕುರಿತು ದೂರು ದಾಖಲಿಸಲಾಗಿದೆ. ಆರೋಪಿಗಳಿಗಾಗಿ ಶೋಧ ನಡೆದಿದೆ. ಗಾಯಗೊಂಡಿರುವ ಮಹಿಳೆಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

‘ನನ್ನ ಬಾಯಿಗೆ ಮೂತ್ರ ವಿಸರ್ಜಿಸಲು ಪ್ರಮೋದ್ ತನ್ನ ಮಗನಿಗೆ ಹೇಳಿದ. ಆತ ಹಾಗೆಯೇ ಮಾಡಿದ. ಬಳಿಕ ನಾನು ಅಲ್ಲಿಂದ ತಪ್ಪಿಸಿಕೊಂಡು ಮನೆಗೆ ಮರಳಿದೆ’ ಎಂದು ಸಂತ್ರಸ್ತೆ ಪೊಲೀಸರಿಗೆ ತಿಳಿಸಿದ್ದಾರೆ.

‘ಪ್ರಮೋದ್ ಸಿಂಗ್‌ನಿಂದ ನನ್ನ ಗಂಡ ಕೆಲವು ತಿಂಗಳ ಹಿಂದೆ ₹1,500 ಸಾಲ ಪಡೆದಿದ್ದ. ಬಡ್ಡಿ ಸಮೇತ ಸಾಲವನ್ನು ಹಿಂದಿರುಗಿಸಿದ್ದೆವು. ಆದರೂ ಅವರು ನನಗೆ ಇಂಥ ಪರಿಸ್ಥಿತಿ ತಂದೊಡ್ಡಿದ್ದಾರೆ’ ಎಂದು ಸಂತ್ರಸ್ತೆ ಬೇಸರ ವ್ಯಕ್ತಪಡಿಸಿದ್ದಾರೆ.

‘ಕಿರುಕುಳದ ಕುರಿತು ದೂರು ನೀಡಿದ ಬಳಿಕ ಪೊಲೀಸರ ತಂಡವು ಶನಿವಾರ ಸಂಜೆ ಗ್ರಾಮಕ್ಕೆ ಭೇಟಿ ನೀಡಿ ದೂರಿನ ಕುರಿತು ಪರಿಶೀಲಿಸಿತು. ಇದರಿಂದ ಕುಪಿತಗೊಂಡ ಪ್ರಮೋದ್ ಮತ್ತು ಆತನ ಸಹಚರರು, ಅದೇ ರಾತ್ರಿ ಸುಮಾರು 10 ಗಂಟೆಗೆ ಮನೆಗೆ ಬಂದು ಸಂತ್ರಸ್ತೆಯನ್ನು ಒತ್ತಾಯವಾಗಿ ತಮ್ಮ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಆಕೆಯ ಮೇಲೆ ದೌರ್ಜನ್ಯ ಎಸಗಿದ್ದಾರೆ’ ಎಂದು ಸಂತ್ರಸ್ತೆಯ ಕುಟುಂಬ ಸದಸ್ಯರೊಬ್ಬರು ವರದಿಗಾರರಿಗೆ ತಿಳಿಸಿದ್ದಾರೆ.

ಕಠಿಣ ಕ್ರಮಕ್ಕೆ ಆದೇಶ

ದೌರ್ಜನ್ಯ ನಡೆಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಭರವಸೆ ನೀಡಿದ್ದಾರೆ.

‘ಈ ರೀತಿಯ ಘಟನೆಗಳನ್ನು ಆದ್ಯತೆಯ ಮೇರೆಗೆ ನಿರ್ವಹಿಸಬೇಕು ಎಂದು ಪೊಲೀಸರು ಮತ್ತು ಆಡಳಿತಕ್ಕೆ ಸೂಚನೆ ನೀಡಿದ್ದೇನೆ’ ಎಂದು ನಿತೀಶ್ ಕುಮಾರ್ ಅವರು ಹೇಳಿದ್ದಾರೆ.

ಸುಭಾಷಿತ

ಹಳೆಯ ರೂಢಿ, ಪರಂಪರೆಗಳಿಗೆ ಜೋತುಬೀಳದಿರಿ. ಹೊಸ ಹಲಗೆಯ ಮೇಲೆ ಹೊಸ ಪಾಠ ಬರೆಯಿರಿ.

–ಬಿ.ಆರ್. ಅಂಬೇಡ್ಕರ್

'ನಮ್ಮ ಕ್ಲಿನಿಕ್'ಗಳ ಅನಾರೋಗ್ಯ ಸರ್ಕಾರದ ನಿರ್ಲಕ್ಷ್ಯ ಸಲ್ಲದು

ನಗರ ಪ್ರದೇಶಗಳಲ್ಲಿನ ಆರ್ಥಿಕವಾಗಿ ಹಿಂದುಳಿದ ಎಲ್ಲ ವರ್ಗಗಳ ಜನರಿಗೆ ಉಚಿತ ಆರೋಗ್ಯ ಸೇವೆ ಒದಗಿಸುವ 'ನಮ್ಮ ಕ್ಲಿನಿಕ್' ಯೋಜನೆ ಆರಂಭವಾದ ಹತ್ತು ತಿಂಗಳಲ್ಲೇ ಅನಾರೋಗ್ಯಕ್ಕೆ ತುತ್ತಾಗಿದೆ. ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರವು 2022ರ ಡಿಸೆಂಬರ್‌ನಲ್ಲಿ ಆರಂಭಿಸಿದ ಈ ಯೋಜನೆಯನ್ನು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮದ ರೂಪದಲ್ಲಿ ಬಿಂಬಿಸಲಾಗಿತ್ತು. 'ನಮ್ಮ ಆರೋಗ್ಯ, ನಮ್ಮ ಸಮೃದ್ಧಿ' ಎನ್ನುವ ಘೋಷವಾಕ್ಯದಡಿ 114 ಕ್ಲಿನಿಕ್‌ಗಳು ಮೊದಲ ಹಂತದಲ್ಲೇ ಕಾರ್ಯಾರಂಭ ಮಾಡಿದ್ದವು. ಪ್ರಸ್ತುತ 415 'ನಮ್ಮ ಕ್ಲಿನಿಕ್'ಗಳು ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಸರ್ಕಾರದ ಹೇಳಿಕೆಯ ಪ್ರಕಾರ, ಜನಸಾಮಾನ್ಯರ ಪಾಲಿಗೆ ಆರೋಗ್ಯಭಾಗ್ಯವನ್ನು ಖಾತರಿಪಡಿಸುವ ಸಂಜೀವಿನಿಯ ರೂಪದಲ್ಲಿ ಈ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸಬೇಕಾಗಿತ್ತು. ಆದರೆ, ವೈದ್ಯಾಧಿಕಾರಿ ಹಾಗೂ ಶುಶ್ರೂಷಕರ ಹುದ್ದೆಗಳನ್ನು ತುಂಬದಿರುವುದರಿಂದ ಹೆಚ್ಚಿನ ಸಂಖ್ಯೆಯ 'ನಮ್ಮ ಕ್ಲಿನಿಕ್'ಗಳು ಹೆಸರಿಗಷ್ಟೇ ಉಳಿದಿವೆ. ನಗರ ಪ್ರದೇಶಗಳಲ್ಲಿನ ಕೊಳೆಗೇರಿ ನಿವಾಸಿಗಳು, ದಿನಗೂಲಿ ಕಾರ್ಮಿಕರು ಹಾಗೂ ದುರ್ಬಲ ವರ್ಗದವರಿಗೆ ಸುಲಭವಾಗಿ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸುವ 'ನಮ್ಮ ಕ್ಲಿನಿಕ್'ನ ಪರಿಕಲ್ಪನೆ ಚೆನ್ನಾಗಿಯೇ ಇದೆ. ವೈದ್ಯಾಧಿಕಾರಿ, ನರ್ಸ್, ಲ್ಯಾಬ್ ಟೆಕ್ನಿಷಿಯನ್ ಹಾಗೂ ಡಿ ದರ್ಜೆಯ ನೌಕರನನ್ನು ಹೊಂದುವ ಮೂಲಕ ಈ ಕ್ಲಿನಿಕ್‌ಗಳು ಕಾರ್ಯನಿರ್ವಹಿಸಬೇಕು. ರಕ್ತ ಪರೀಕ್ಷೆ ಸೇರಿದಂತೆ ವಿವಿಧ ಪರೀಕ್ಷೆಗಳು, ತುರ್ತು ವೈದ್ಯಕೀಯ ಸೇವೆಗಳನ್ನು ಒದಗಿಸಬೇಕಾದ 'ನಮ್ಮ ಕ್ಲಿನಿಕ್'ಗಳನ್ನು ಜನವಸತಿ ಪ್ರದೇಶಗಳ ಸಮೀಪದಲ್ಲೇ ಸ್ಥಾಪಿಸುವ ಮೂಲಕ ಜನಸಾಮಾನ್ಯರಿಗೆ ಆರೋಗ್ಯ ಸೇವೆಗಳು ಸುಲಭವಾಗಿ ದೊರೆಯುವಂತೆ ಮಾಡುವ ಉದ್ದೇಶ ಸರ್ಕಾರದ್ದಾಗಿತ್ತು. ಗರ್ಭಿಣಿಯರ ಆರೈಕೆ, ಶಿಶುವಿನ ಆರೈಕೆ, ಮಕ್ಕಳ ಸೇವೆ, ಮಧುಮೇಹ ಮತ್ತು ರಕ್ತದೊತ್ತಡದ ಪರೀಕ್ಷೆ, ಸಾಂಕ್ರಾಮಿಕ ರೋಗಗಳ ನಿರ್ವಹಣೆ, ತುರ್ತು ವೈದ್ಯಕೀಯ ಚಿಕಿತ್ಸೆ ಸೇರಿದಂತೆ 12 ಪ್ರಮುಖ ಆರೋಗ್ಯ ಸೇವೆಗಳು 'ನಮ್ಮ ಕ್ಲಿನಿಕ್'ನಲ್ಲಿ ಲಭ್ಯ ಎಂದು ಹೇಳಲಾಗಿತ್ತು. ಈ ಕ್ಲಿನಿಕ್‌ಗಳಿಂದಾಗಿ ಸರ್ಕಾರಿ ಆಸ್ಪತ್ರೆಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆಂದೂ ನಿರೀಕ್ಷಿಸಲಾಗಿತ್ತು. ದುರದೃಷ್ಟವಶಾತ್, ಸಿಬ್ಬಂದಿಯ ಕೊರತೆಯಿಂದಾಗಿ 'ನಮ್ಮ ಕ್ಲಿನಿಕ್'ಗಳ ಸ್ಥಾಪನೆಯ ಪ್ರಾಥಮಿಕ ಉದ್ದೇಶವೇ ವಿಫಲವಾಗಿದೆ. 'ನಮ್ಮ ಕ್ಲಿನಿಕ್'ಗಳಲ್ಲಿ ಕಾರ್ಯನಿರ್ವಹಿಸಲು ವೈದ್ಯರು, ಶುಶ್ರೂಷಕರು ಹಾಗೂ ಪ್ರಯೋಗಾಲಯ ತಂತ್ರಜ್ಞರು ನಿರಾಸಕ್ತಿ ಹೊಂದಿದ್ದು, ಅನೇಕ ಕ್ಲಿನಿಕ್‌ಗಳಲ್ಲಿ ಅವರ ನೇಮಕಾತಿಯೇ ನಡೆದಿಲ್ಲ. ಇದರಿಂದಾಗಿ ಕ್ಲಿನಿಕ್‌ಗಳಿಗೆ ಬರುವ ಜನರಿಗೆ ಸಮರ್ಪಕ ವೈದ್ಯಕೀಯ ಸೇವೆ ದೊರೆಯುತ್ತಿಲ್ಲ.

ಜನಸಾಮಾನ್ಯರ ಆರೋಗ್ಯದ ವಿಷಯದಲ್ಲಿ ಸರ್ಕಾರ ಉದಾಸೀನದಿಂದ ನಡೆದುಕೊಳ್ಳಬಾರದು. 'ನಮ್ಮ ಕ್ಲಿನಿಕ್'ಗಳನ್ನು ಬಲಪಡಿಸುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು

ಗಟ್ಟಿಯಾದ ತಳಹದಿಯಿಲ್ಲದ ಚುನಾವಣಾ ಸಮಯದ ಕಾರ್ಯಕ್ರಮದಂತೆ ಆರಂಭವಾದ 'ನಮ್ಮ ಕ್ಲಿನಿಕ್' ಯೋಜನೆಯನ್ನು ಬಲಪಡಿಸುವ ಗೋಜಿಗೆ ಈ ಹಿಂದಿನ ಸರ್ಕಾರ ಹೋಗಲಿಲ್ಲ. ಚುನಾವಣೆಯ ನಂತರ ಚುಕ್ಕಾಣಿ ಹಿಡಿದ ಕಾಂಗ್ರೆಸ್ ನೇತೃತ್ವದ ಸರ್ಕಾರವೂ ಆವರೆಗೆ 'ನಮ್ಮ ಕ್ಲಿನಿಕ್'ಗಳನ್ನು ಉತ್ತಮಗೊಳಿಸುವ ಪ್ರಯತ್ನ ನಡೆಸಿದಂತಿಲ್ಲ. ಕಡಿಮೆ ವೇತನ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲು ವೈದ್ಯರು ಹಿಂದೇಟು ಹಾಕುತ್ತಾರೆ ಎನ್ನುವ ನೆಪ ಈ ಬಾರಿಯೂ ಕೇಳಿಬಂದಿದೆ. ನಿಜವಾದ ಸಮಸ್ಯೆ ಇರುವುದು ಕಾರ್ಯಕ್ರಮವನ್ನು ಜಾರಿಗೊಳಿಸುವಲ್ಲಿ ಸರ್ಕಾರಕ್ಕಿರುವ ಇಚ್ಛಾಶಕ್ತಿಯ ಕೊರತೆಯಲ್ಲಿ. ಜನಸಾಮಾನ್ಯರ ಆರೋಗ್ಯದ ವಿಷಯದಲ್ಲಿ ಸರ್ಕಾರ ಉದಾಸೀನದಿಂದ ನಡೆದುಕೊಳ್ಳಬಾರದು. ವೈದ್ಯರ ಕೊರತೆಗೆ ಕ್ರಮ ಕೈಗೊಳ್ಳಲಾಗುವುದು; ಕ್ಲಿನಿಕ್‌ಗಳಲ್ಲಿ ಸಂಜೆಯೂ ಸೇವೆ ಒದಗಿಸಲಾಗುತ್ತದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ತಮ್ಮ ಮಾತನ್ನು ಸಚಿವರು ವಿಳಂಬವಿಲ್ಲದೆ ಕಾರ್ಯರೂಪಕ್ಕೆ ತರಬೇಕಾಗಿದೆ. ವೈದ್ಯರ ಗೈರುಹಾಜರಿಯಲ್ಲಿ ಕೆಲವು ಕ್ಲಿನಿಕ್‌ಗಳಲ್ಲಿ ಶುಶ್ರೂಷಕರೇ ಪರೀಕ್ಷೆ ನಡೆಸಿ ಔಷಧಗಳನ್ನು ನೀಡುತ್ತಿದ್ದಾರೆ ಎನ್ನುವ ವರದಿಗಳು ಆತಂಕ ಹುಟ್ಟಿಸುವಂತಹವು. ಬಡವರ ಆರೋಗ್ಯದೊಂದಿಗೆ ಆಟವಾಡುವ ಕೆಲಸವನ್ನು ಯಾರೂ ಮಾಡಬಾರದು. 'ನಮ್ಮ ಕ್ಲಿನಿಕ್'ಗಳಲ್ಲಿ ವೈದ್ಯರಿಂದಲೇ ಚಿಕಿತ್ಸೆ ದೊರೆಯುವ ಖಾತರಿಯನ್ನು ಸರ್ಕಾರ ನೀಡಬೇಕು. ಮೂಲಭೂತ ಸೌಕರ್ಯಗಳಿಲ್ಲದ ಹಳೆಯ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಲಿನಿಕ್‌ಗಳನ್ನು ಸುಸಜ್ಜಿತ ಕಟ್ಟಡಗಳಿಗೆ ಸ್ಥಳಾಂತರಿಸಬೇಕು. ಯಾವುದೇ ಕ್ಲಿನಿಕ್‌ನಲ್ಲಿ ಔಷಧಗಳ ಕೊರತೆ ಎದುರಾಗದಂತೆ ನಿಗಾ ವಹಿಸಬೇಕು. ಡೆಂಗಿ ಹಾಗೂ ಮಲೇರಿಯಾ ಪ್ರಕರಣಗಳು ರಾಜ್ಯದಲ್ಲಿ ವ್ಯಾಪಕವಾಗಿರುವ ಸಂದರ್ಭದಲ್ಲಿ 'ನಮ್ಮ ಕ್ಲಿನಿಕ್'ಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಕೆಲಸವನ್ನು ಸರ್ಕಾರ ಮಾಡಬೇಕು. ಆರೋಗ್ಯಸೇವೆಗಳ ವಿಕೇಂದ್ರೀಕರಣದ ರೂಪದಲ್ಲಿ ಬಹು ಮುಖ್ಯವಾದ ಈ ಕ್ಲಿನಿಕ್‌ಗಳನ್ನು ಬಲಪಡಿಸುವ ದಿಸೆಯಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಬೇಕಾಗಿದೆ. ಆರೋಗ್ಯ ಸೇವೆಗಳಿಗಾಗಿ ಜನ ಪರದಾಡುವಂತಹ ಸ್ಥಿತಿಯನ್ನು ಸರ್ಕಾರ ಸೃಷ್ಟಿಸಬಾರದು.

ಗಡಿ ತಕರಾರನ್ನು ಕ್ರೀಡೆಗೂ ವಿಸ್ತರಿಸಿ ಚೀನಾ ಖ್ಯಾತೆ ತೆಗೆದದ್ದು ಏಕೆ?

ಚೀನಾ ಗುಟ್ಟು, ಬಿಕ್ಕಟ್ಟಿನ ಕಮಟು



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಚೀನಾದ ಹಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್ ಘೋಷವಾಕ್ಯ 'Heart to Heart, @future' ಎಂಬುದಾಗಿದೆ. ಎರಡನೇ ವಿಶ್ವ ಸಮರದ ಬಳಿಕ, ಏಷ್ಯಾದ ರಾಷ್ಟ್ರಗಳ ಏಕತೆ ಮತ್ತು ಕ್ರೀಡಾ ಸಾಮರ್ಥ್ಯ ಪ್ರದರ್ಶಿಸುವ ಉದ್ದೇಶದಿಂದ ಕ್ರೀಡಾಕೂಟವನ್ನು ಆಯೋಜಿಸುವ ಆಲೋಚನೆಯು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯಲ್ಲಿ ಭಾರತದ ಪ್ರತಿನಿಧಿಯಾಗಿದ್ದ ಗುರುದತ್ ಸೋಂಧಿ ಅವರಲ್ಲಿ ಟಿಸಿಲೊಡೆದಿತ್ತು. 1951ರಲ್ಲಿ ಭಾರತ ಮೊದಲ ಏಷ್ಯನ್ ಗೇಮ್ಸ್ ಆಯೋಜಿಸಿತು. ನಂತರ ವಿವಿಧ ದೇಶಗಳು ಕ್ರೀಡಾಕೂಟವನ್ನು ಯಶಸ್ವಿಯಾಗಿ ಆಯೋಜಿಸಿದವು. ಒಲಿಂಪಿಕ್ಸ್ ನಂತರದ ದೊಡ್ಡ ಕ್ರೀಡಾಕೂಟ ಎಂಬ ಹೆಗ್ಗಳಿಕೆಯನ್ನು ಏಷ್ಯನ್ ಗೇಮ್ಸ್ ಪಡೆಯಿತು.

ಗಡಿ, ಸಂಸ್ಕೃತಿ ಮತ್ತು ಧರ್ಮಗಳ ಆಚೆಗೆ ಜನರನ್ನು ಒಟ್ಟುಗೂಡಿಸುವ, ಶಾಂತಿ ಮತ್ತು ಸಹಿಷ್ಣುತೆಯನ್ನು ಉತ್ತೇಜಿಸುವ ಗುಣ ಕ್ರೀಡೆಗೆ ಇರುತ್ತದೆ. ಆದರೆ ಈ ಬಾರಿ ಏಷ್ಯನ್ ಗೇಮ್ಸ್ ಆಯೋಜಿಸಿರುವ ಚೀನಾ ಮಾತ್ರ ಭಾರತದೊಂದಿಗಿನ ಗಡಿ ತಕರಾರನ್ನು ಕ್ರೀಡೆಗೂ ವಿಸ್ತರಿಸಿ ಖ್ಯಾತೆ ತೆಗೆದ ಪ್ರಸಂಗ ನಡೆದಿದೆ. ಅರುಣಾಚಲ ಪ್ರದೇಶದ ಕ್ರೀಡಾಪಟುಗಳನ್ನು ಭಾರತದ ಉಳಿದ ಕ್ರೀಡಾಪಟುಗಳಿಂದ ಪ್ರತ್ಯೇಕಿಸಿ ಅವರಿಗೆ ಬೇರೆಯದೇ ಬಗೆಯ ವೀಸಾ (ಸ್ಟೇಪಲ್ಡ್ ವೀಸಾ) ನೀಡುತ್ತೇವೆ ಎಂದು ಚೀನಾ ವರಾತ ತೆಗೆಯಿತು. ಅಂತಹ ವೀಸಾವನ್ನು ನಾವು ಒಪ್ಪುವುದಿಲ್ಲ ಎಂದು ಭಾರತ ತೀಕ್ಷ್ಣವಾಗಿ ಪ್ರತಿಕ್ರಿಯಿಸಿತು. ಭಾರತದ ಕ್ರೀಡಾ ಮಂತ್ರಿ ಅನುರಾಗ್ ಠಾಕೂರ್ ಅವರು ಏಷ್ಯನ್ ಗೇಮ್ಸ್ ಉದ್ಘಾಟನಾ ಸಮಾರಂಭಕ್ಕೆ ಗೈರುಹಾಜರಾದರು.

ಹಾಗಂತ ಇಂತಹ ನಡವಳಿಕೆ ಚೀನಾದಿಂದ ಅನಪೇಕ್ಷಿತವಾಗಿರಲಿಲ್ಲ. ಈ ಒಂದು ವರ್ಷದಲ್ಲಿ ನಡೆದ ವಿದ್ಯಮಾನಗಳನ್ನೇ ಗಮನಿಸಿ, ಭಾರತ ಜಿ-20 ಸಭೆಗಳನ್ನು ದೇಶದಾದ್ಯಂತ ವಿವಿಧ ನಗರಗಳಲ್ಲಿ ಆಯೋಜಿಸಿತು. ಅಂತೆಯೇ ಕಾಶ್ಮೀರ ಮತ್ತು ಅರುಣಾಚಲ ಪ್ರದೇಶದಲ್ಲಿ ಸಭೆಗಳು ನಡೆದವು. ಇದರಿಂದ ಸಿಟ್ಟಾದ ಚೀನಾ, ಆ ಸಭೆಗಳಿಗೆ ಹಾಜರಾಗಲಿಲ್ಲ.

ನಂತರ ಅರುಣಾಚಲ ಪ್ರದೇಶದ ಕೆಲವು ಗ್ರಾಮ, ನದಿ, ಪರ್ವತಗಳಿಗೆ ಮರುನಾಮಕರಣ ಮಾಡಿ, ತನ್ನ ಹಕ್ಕು ಚಲಾಯಿಸುವ ನಡೆ ಪ್ರದರ್ಶಿಸಿತು. ಜೊಹಾನೆಸ್‌ಬರ್ಗ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯ ವೇಳೆ ಪ್ರಧಾನಿ ಮೋದಿ ಮತ್ತು ಚೀನಾ ವರಿಷ್ಠ ಷಿ ಜಿನ್‌ಪಿಂಗ್ ಅವರು ಅನೌಪಚಾರಿಕ ಮಾತುಕತೆ ನಡೆಸಿದರು. ಭಾರತದ ಕೋರಿಕೆಯ ಮೇರೆಗೆ ಈ ಮಾತುಕತೆ ನಡೆಯಿತು ಎಂದು ಚೀನಾ ಹೇಳಿಕೊಂಡಿತು. ಅದನ್ನು ತಿರಸ್ಕರಿಸಿದ ಭಾರತದ ವಿದೇಶಾಂಗ ಸಚಿವಾಲಯವು ಮಾತುಕತೆಗೆ ಚೀನಾ ಅಪೇಕ್ಷಿಸಿದ್ದ ಕಾರಣ, ಇಬ್ಬರು ನಾಯಕರ ನಡುವೆ ಮಾತುಕತೆ ನಡೆದಿದೆ ಎಂದು ಸ್ಪಷ್ಟಪಡಿಸಿತು. ಚೀನಾಕ್ಕೆ ಕಸಿವಿಸಿಯಾಯಿತು.

ಆ ಕಸಿವಿಸಿಯು ಚೀನಾ ಪ್ರಕಟಿಸಿದ ಭೂಪಟದಲ್ಲಿ ಎದ್ದುಕಂಡಿತು. ತಾವು ಚೀನಾದ ಮುಖ್ಯಸ್ಥನಾದ ದಿನದಿಂದ ಯಾವುದೇ ಜಿ-20 ಶೃಂಗಸಭೆಗೆ ಬರುವುದನ್ನು ತಪ್ಪಿಸಿಕೊಳ್ಳದ ಷಿ ಜಿನ್‌ಪಿಂಗ್, ದೆಹಲಿಯಲ್ಲಿ ನಡೆದ ಜಿ-20 ರಾಷ್ಟ್ರಗಳ ಶೃಂಗಸಭೆಗೆ ಹಾಜರಾಗಲಿಲ್ಲ!

ಜಗತ್ತಿನ ಎರಡನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿರುವ ಚೀನಾ, ಮಹತ್ವದ ಜಿ-20 ಶೃಂಗಸಭೆಗೆ ಗೈರುಹಾಜರಾಗಲು ಕಾರಣವೇನು ಎಂಬ ಪ್ರಶ್ನೆ ಎದ್ದಿತು. ಭಾರತ-ಚೀನಾ ನಡುವಿನ ಗಡಿ ಬಿಕ್ಕಟ್ಟು ಕಾರಣವಿರಬಹುದು, ಅಮೆರಿಕದ ಅಧ್ಯಕ್ಷ ಬೈಡನ್ ಜೊತೆಗಿನ ಮುಖಾಮುಖಿ ತಪ್ಪಿಸಲು ಷಿ ಜಿನ್‌ಪಿಂಗ್ ಗೈರುಹಾಜರಾಗಿರಬಹುದು, ಷಿ ಅವರ ಅನಾರೋಗ್ಯ, ಉಕ್ರೇನ್ ಯುದ್ಧದ ವಿಷಯ ಅವರನ್ನು ದೆಹಲಿಗೆ ಬಾರದಂತೆ ಮಾಡಿರಬಹುದು ಎಂಬ ಕಾರಣಗಳು ಚರ್ಚೆಗೆ ಒಳಪಟ್ಟವು. ಆದರೆ ಇದೆಲ್ಲಕ್ಕಿಂತ ಮುಖ್ಯವಾದ ಕಾರಣವೊಂದಿತ್ತು. ಅದು ಚೀನಾದ ಆಂತರಿಕ ಬಿಕ್ಕಟ್ಟು.

ಚೀನಾದಂತಹ ನಿರಂಕುಶ ಪ್ರಭುತ್ವವಿರುವ ದೇಶ ತನ್ನ ಒಳಗಿನ ಸುದ್ದಿಯನ್ನು ಸುಲಭಕ್ಕೆ ಬಿಟ್ಟುಕೊಡುವುದಿಲ್ಲ. ಆದರೆ ಆಂತರಿಕ ಬಿಕ್ಕಟ್ಟಿನ ಕಮಟು ಹೆಚ್ಚುದಿನ ಗುಟ್ಟಾಗಿ ಉಳಿಯುವುದಿಲ್ಲ. ಕೊರೊನಾದ ವಿಷಯದಲ್ಲಿ ಮೊದಲಿಗೆ ಚೀನಾ ಜಗತ್ತಿನ ನಂಬಿಕೆಯನ್ನು ಕಳೆದುಕೊಂಡಿತು. ಅದು ಅನುಸರಿಸಿದ ಶೂನ್ಯ ಕೋವಿಡ್ ಧೋರಣೆ ತಿರುಗುಬಾಣವಾಯಿತು. ಕೊರೊನಾದ ಬಳಿಕ ನಿರುದ್ಯೋಗ ಸಮಸ್ಯೆ ತಾರಕಕ್ಕೇರಿತು.

ಇದಾಗುವ ಹೊತ್ತಿಗೆ ಚೀನಾದ ವಿದೇಶಾಂಗ ಸಚಿವ ಕ್ವಿನ್ ಗಾಂಗ್ ಅವರನ್ನು ವಜಾ ಮಾಡಲಾಯಿತು. ವಜಾಕ್ಕೆ ಅವರ ಜೀವನಕ್ರಮ ಕಾರಣ ಎನ್ನಲಾಯಿತು. ಇದೀಗ ಅಮೆರಿಕದ ವಾಲ್‌ಸ್ಟ್ರೀಟ್ ಜರ್ನಲ್ ಪತ್ರಿಕೆ, ಅಮೆರಿಕದ ರಾಯಭಾರಿಯಾಗಿದ್ದ ಅವಧಿಯಲ್ಲಿ ಕ್ವಿನ್ ಗಾಂಗ್ ಅವರು ಅಮೆರಿಕದಲ್ಲಿ ಮಗುವೊಂದಕ್ಕೆ ತಂದೆಯಾಗಿದ್ದರು ಮತ್ತು ಈ ವಿಷಯವನ್ನು ಗೋಪ್ಯವಾಗಿ ಇಡಲಾಗಿತ್ತು ಎಂಬ ಸುದ್ದಿ ಪ್ರಕಟಿಸಿದೆ.

ಇದೀಗ ಚೀನಾದ ರಕ್ಷಣಾ ಸಚಿವ ಲೀ ಶಾಂಗ್ಫು ಅವರ ಕುರಿತು ಪುಕಾರು ಹಬ್ಬಿದೆ. ರಕ್ಷಣಾ ಸಚಿವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳದೇ ಹಲವು ದಿನಗಳೇ ಆಗಿವೆ. ಹಾಗಾಗಿ ಲೀ ಅವರನ್ನು ಆ ಹುದ್ದೆಯಿಂದ ವಜಾ ಮಾಡಲಾಗಿದೆಯೇ, ಗೃಹಬಂಧನದಲ್ಲಿ ಇಡಲಾಗಿದೆಯೇ, ಮತ್ತೇನಾದರೂ ಅವಘಡ ಸಂಭವಿಸಿದೆಯೇ ಎಂಬ ಪ್ರಶ್ನೆಗಳು ಎದ್ದಿವೆ.

ಚೀನಾದಂತಹ ದೇಶದಲ್ಲಿ ಪ್ರತಿಭಟನಕಾರರು, ಉದ್ಯಮಿ, ಅಧಿಕಾರಿ ಅಥವಾ ಸಚಿವರ ಅಚಾನಕ್ ಕಣ್ಮರೆ ಮತ್ತು ಗೃಹಬಂಧನ ಅಪರೂಪವೇನಲ್ಲ. ಉದ್ಯಮಿ ಜಾಕ್ ಮಾ ಒಂದಿಷ್ಟು ದಿನ ಕಣ್ಮರೆಯಾಗಿದ್ದರು. ನಂತರ ಸಾರ್ವಜನಿಕವಾಗಿ ಕಾಣಿಸಿಕೊಂಡರೂ ಮೌನಕ್ಕೆ ಜಾರಿದ ಪ್ರಸಂಗ ಚೀನಾದಲ್ಲಿ ನಡೆದಿದೆ.

ಆದರೆ ಈಗಿನ ವಿದ್ಯಮಾನಗಳು ಬೇರೆಯದೇ ಕತೆ ಹೇಳುತ್ತಿವೆ. ಮುಖ್ಯವಾಗಿ ಭ್ರಷ್ಟಾಚಾರವು ಚೀನಾದ ಬಹುದೊಡ್ಡ ಸಮಸ್ಯೆಯಾಗಿದೆ. ಅದರ ವ್ಯಾಪ್ತಿ ಎಷ್ಟು ದೊಡ್ಡದು ಎಂದು ಹೇಳುವುದು ಕಷ್ಟ. ತಿಂಗಳ ಹಿಂದೆ ಚೀನಾದ ರಾಕೆಟ್ ಫೋರ್ಸ್‌ನ ಹಿರಿಯ ಸೇನಾಧಿಕಾರಿಗಳನ್ನು ಷಿ ಜಿನ್‌ಪಿಂಗ್ ವಜಾ ಮಾಡಿದ್ದರು. 2022ರ ಅಕ್ಟೋಬರ್‌ನಲ್ಲಿ ನಡೆದ ಚೀನಾದ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಅಧಿವೇಶನದ ಬಳಿಕ ಸೇನೆಯ 39 ಹಿರಿಯ ಅಧಿಕಾರಿಗಳನ್ನು ಬಂಧಿಸಲಾಗಿದೆ ಎಂದು ಚೀನಾದ ಆಂತರಿಕ ಕಾವಲುಗಾರ ಸಂಸ್ಥೆ ಸಿಸಿಡಿಐ ತನ್ನ ವರದಿಯಲ್ಲಿ ಹೇಳಿರುವುದನ್ನು ಅಮೆರಿಕದ ಪತ್ರಿಕೆಗಳು ವರದಿ ಮಾಡಿವೆ.

ಷಿ ಜಿನ್‌ಪಿಂಗ್ ಅವರಿಂದ ನೇರವಾಗಿ ನೇಮಕಾತಿಯಾದವರ ಹೆಸರು ಭ್ರಷ್ಟಾಚಾರ ಪ್ರಕರಣಗಳಲ್ಲಿ ಕೇಳಿಬರುತ್ತಿರುವುದರಿಂದ, ಜಿನ್‌ಪಿಂಗ್ ಅವರ ಜನಪ್ರಿಯತೆ ಕುಗ್ಗುತ್ತಿದೆ ಮತ್ತು ಆಡಳಿತದ ಮೇಲಿನ ಅವರ ಹಿಡಿತ ಸಡಿಲಾಗುತ್ತಿದೆ ಎಂಬ ಸುದ್ದಿಯೂ ಇದೆ.

ಮತ್ತೊಂದೆಡೆ, ಚೀನಾದ ರಿಯಲ್ ಎಸ್ಟೇಟ್ ವಲಯ ಪಾತಾಳ ಕಂಡಿದೆ. ಅರ್ಥವ್ಯವಸ್ಥೆ ಚೇತರಿಸಿಕೊಳ್ಳಲು ತಿಣುಕಾಡುತ್ತಿದೆ. ಚೀನಾದ ಜನ ಹಣವನ್ನು ಕೂಡಿಡುವತ್ತ ಗಮನ ಹರಿಸುತ್ತಿದ್ದಾರೆ ಮತ್ತು ಉಳಿತಾಯ ಖಾತೆಗಳಿಗೆ ಜಮಾ ಆಗುತ್ತಿರುವ ಹಣದ ಪ್ರಮಾಣ ಹೆಚ್ಚಿದೆ. ಆಡಳಿತದ ಮೇಲೆ ಜನ ನಂಬಿಕೆ ಕಳೆದುಕೊಂಡಾಗ ಇಂತಹ ವರ್ತನೆಯನ್ನು ಸಮಾಜ ತೋರುತ್ತದೆ ಎಂಬ ವ್ಯಾಖ್ಯಾನ ಕೇಳಿಬರುತ್ತಿದೆ.

ಆಂತರಿಕ ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟು ಉಲ್ಬಣಿಸಿರುವುದರಿಂದಲೇ ಷಿ ಜಿನ್‌ಪಿಂಗ್ ಕೆಲ ದಿನಗಳ ಮಟ್ಟಿಗೂ ದೇಶ ತೊರೆಯುವ ಸಾಹಸ ಮಾಡುತ್ತಿಲ್ಲ ಎಂಬ ಸುದ್ದಿ ದಟ್ಟವಾಗಿದೆ. ಒಳಗಿನ ವಿಪ್ಲವ ಮರೆಮಾಚಲು, ಚೀನಾದ ಜನರ ಮತ್ತು ಜಗತ್ತಿನ ಗಮನ ಬೇರೆಡೆ ಸೆಳೆಯಲು, ಭಾರತದೊಂದಿಗೆ ಗಡಿಯಲ್ಲಿ ಚಕಮಕಿಗೆ ಚೀನಾ ಇಳಿದರೆ ಅಥವಾ ತೈವಾನ್ ಮೇಲೆರಗುವ ಸಾಹಸ ಮಾಡಿದರೆ ಅಚ್ಚರಿಯಿಲ್ಲ.

ಮುಖ್ಯವಾಗಿ ಕ್ರೀಡಾಪಟುಗಳ ವೀಸಾಕ್ಕೆ ಸಂಬಂಧಿಸಿದಂತೆ ಚೀನಾ ತಳೆದಿರುವ ಧೋರಣೆ ಗಂಭೀರವಾದದ್ದು. 2008 ಮತ್ತು 2009ರಲ್ಲೂ ಅರುಣಾಚಲ ಪ್ರದೇಶ, ಜಮ್ಮು ಕಾಶ್ಮೀರ ಮತ್ತು ಲಡಾಕ್ ನಾಗರಿಕರಿಗೆ 'ಸ್ಟೇಪಲ್ಡ್ ವೀಸಾ' ನೀಡುವ ಕೆಲಸವನ್ನು ಚೀನಾ ಮಾಡಿತ್ತು. ಆಗಲೂ ಚೀನಾದ ಧೋರಣೆಯನ್ನು ಭಾರತ ವಿರೋಧಿಸಿತ್ತು. ಆದರೆ ಚೀನಾದ ಉದ್ಧಟತನಕ್ಕೆ, ಅಷ್ಟು ಸಾಲದೆನಿಸುತ್ತದೆ. ಟಿಬೆಟ್, ತೈವಾನ್ ಮತ್ತು ಒಂದು ಚೀನಾ ನೀತಿಗೆ ಸಂಬಂಧಿಸಿದ ತನ್ನ ಸ್ಥಾಪಿತ ನಿಲುವಿನ ಕುರಿತು ಮರುಯೋಚಿಸಲು ಭಾರತ ಅಳುಕಬಾರದು.

ಚುರುಮುರಿ



ದೇವರು ನಕ್ಕನು

• ಲಿಂಗರಾಜು ಡಿ.ಎಸ್.

ರಾಜಕಾರಣಿಗಳು ದೇವರ ಅಡ್ಡೆಯಲ್ಲೂ ಹ್ಯಂಗೆಂಗಾಡ್ತರೆ ಅನ್ನದ್ಕೆ ತುರೇಮಣೆ ಒಂದು ಕಥೆ ಹೇಳಿದರು. ರಾಜಕಾರಣಿಗಳು ತಾವು ಊರೊಟ್ಟಿನ ಕೆಲಸ ಮಾಡದ್ರಿಂದ ಸ್ವರ್ಗ ಗ್ಯಾರಂಟಿ ಅಂತ ಕೊಚ್ಚಿಗ್ಯತರಲ್ಲ! ದೇವರ ಟೈಮಾಫೀಸಲ್ಲಿ ಜನರ ನಿರಾಧಾರ್ ನಂಬರಿಗೆ ಲಾಗಿನ್ ಆಗಿ ಹಣೆಬರಹ ಸ್ಕ್ಯಾನ್ ಮಾಡಿ, ಜ್ಞಾನ್ ನಂಬರ್ ಇದ್ದೋರನ್ನ ಸ್ವರ್ಗಕ್ಕೆ ಇಲ್ಲದೋರನ್ನ ನರಕಕ್ಕೆ ಕಳಗುಸ್ತಿದ್ದರಂತೆ. ಆದರೆ ರಾಜಕಾರಣಿಗಳಿಗೆ ಜ್ಞಾನ್ ನಂಬರೇ ಇಲ್ಲದೆ ಡೈರೆಕ್ಟಾಗಿ ನರಕಕ್ಕೆ ಹೋಯ್ತಿದ್ದರಂತೆ!

ಪಕ್ಕದಲ್ಲಿದ್ದ ನರಕದ ವರ್ಕ್‌ಶಾಪಲ್ಲಿ ನರಕವಾಸಿಗಳನ್ನ ಯಮದೋರು ದಿನಾ ಸುಟ್ಟು ಚಾಕಣ ಮಾಡ್ತಿದ್ದರು. 'ಅಷ್ಟೊಂದು ದೇವರ ಪೂಜೆ ಮಾಡ್ತಿದ್ದೆ! ಬಂದ ಕಾಸಲ್ಲಿ ದೇವರಿಗೂ ಕಮೀಷನ್ ಕೊಡ್ತಿದ್ದೆ. ಆದರೂ ದೇವರು ನನ್ನನ್ನ ಇಲ್ಲಿಗೆ ಕಳಿಸವನೆ' ಅಂತ ನರಕವಾಸಿಗಳು ದೇವರನ್ನ ಬೈಕಂದೇ ಕಾಲಕಳೆಯವು.

ನರಕದಲ್ಲಿದ್ದ ರಾಜಕಾರಣಿಯೊಬ್ಬರು 'ನಮಗೆ ಮೀಸಲಾತಿ ಕೊಟ್ಟಿಲ್ಲ. ರಾಜಕಾರಣಿಗಳಿಗೆ ಸ್ವರ್ಗಕ್ಕೆ ಸ್ಪೆಶಲ್ ಎಂಟ್ರಿ ಕೊಡಬಕು. ನರಕದಲ್ಲಿ ನಮ್ಮನ್ನ ಕ್ಯಾಬಿನೆಟ್ ಮಂತ್ರಿ ಮಾಡಬಕು. ಸರ್ಕಾರಿ ಮದ್ಯದಂಗಡಿ ತೆರೆದು ಇಲ್ಲಿರೋ ಕುಡುಕರಿಗೆಲ್ಲಾ ಮದ್ಯಶಾಂತಿ ಯೋಜನೆಯಲ್ಲಿ ದಿನಾ ಎರಡು ಪೆಗ್ಗು ಫ್ರೀ ಕೊಡಬಕು. ನರಕದ ಹೆಸರನ್ನ ನರಕನಸ್ವರ್ಗ ಅಂತ ಬದಲಾಯಿಸಿ ಬೋರ್ಡ್ ಹಾಕಬಕು' ಅಂತ ದೇವರಿಗೆ ಡಿಮ್ಯಾಂಡ್ ಇಟ್ಟರು. 'ಆಯ್ತು ಕಾ ಬುಡ್ರಯ್ಯ, ನಿಮ್ಮ ಯೋಗ್ತೇಗೆ ತಕ್ಕದ್ದೇ ಕೊಡಮು' ಅಂತ ದೇವರು ಒಪ್ಪಿಕ್ಯಂದ್ರು. ಆಮೇಲೆ ಬರುತ್ತಿದ್ದ ರಾಜಕೀಯ ಪಕ್ಷಿಗಳು, ಕಳ್ಳ-ಸುಳ್ಳರು ಬೋರ್ಡು ನೋಡಿ 'ನಮಗೆ ನರಕನಸ್ವರ್ಗವೇ ಕೊಡ್ರಿ ಸ್ವಾಮೇ!' ಅಂತ ಕೇಳಿ ನರಕ ಸೇರೋರು! ದೇವರು ಇವರ ಆಟಗುಳಿ ನೋಡ್ತಾ ನಸುನಗತಿದ್ದ.

ನರಕದ ಎದುರಿಗೇ ಸ್ವರ್ಗ ಇತ್ತು. 'ನಮ್ಮಪ್ಪ ಕುಲಸ್ವಾಮಿ ಭೂಲೋಕದಲ್ಲೇ ನರಕ ಕಂಡುದವಿ. ಈಗ ನೀನು ಕೊಟ್ಟದ್ದೇ ಪ್ರಸಾದ' ಅಂತಿದ್ದ ಜನಸಾಮಾನ್ಯರು ಸ್ವರ್ಗಕ್ಕೆ ಹೋಯ್ತಿದ್ದರು. ದೇವರು ಜನರ ನಿಯತ್ತು, ರಾಜಕಾರಣಿಗಳ ಚಾಳಿ ನೋಡಿ ನಸುನಗತಿದ್ದ.

ದಿನದ ಟ್ವೀಟ್

ಅಪೂರ್ವ ಸಾಧನೆ

ನಮ್ಮ ಮಹಿಳಾ ಕ್ರಿಕೆಟ್ ತಂಡದ ಅಪೂರ್ವ ಸಾಧನೆ ಇದು. ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಜಯಿಸುವುದು ಅಸಾಮಾನ್ಯವಾದದ್ದು. ಮತ್ತಷ್ಟು ಉನ್ನತವಾದ ಸಾಧನೆಗಳನ್ನು ಮಾಡಲಿ.

ಸಚಿನ್ ತೆಂಡೂಲ್ಕರ್, ಕ್ರಿಕೆಟಿಗ

ಕಿಡಿನುಡಿ



ಒಂದೆಡೆ ಗ್ಯಾರಂಟಿ ಹೆಸರಿನಲ್ಲಿ ಮಹಿಳೆಯರಿಗೆ ತಿಂಗಳಿಗೆ ₹ 2 ಸಾವಿರ ನೀಡುತ್ತಿರುವ ರಾಜ್ಯ ಸರ್ಕಾರ, ಅದೇ ಹಣವನ್ನು ಗಂಡಂದಿರ ಮೂಲಕ ವಸೂಲಿ ಮಾಡಲು ಮದ್ಯ ಮಾರಾಟದ ಮಾರ್ಗ ಹುಡುಕಿಕೊಂಡಂತಿದೆ. ಕೊಟ್ಟ ದುಡ್ಡನ್ನು ಗಂಡಂದಿರಿಂದ ವಾಪಸ್ ಪಡೆಯುವ 'ಮನಿ ರಿಟರ್ನ್' ನೀತಿ ರೂಪಿಸುತ್ತಿದೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಶನಿವಾರ, 26-9-1998

• ಕೇಂದ್ರ ಶಿಫಾರಸು ಮರು ಪರಿಶೀಲನೆಗೆ ಸೂಚನೆ

ನವದೆಹಲಿ, ಸೆ. 25– ಬಿಹಾರದ ರಾಬ್ಡಿದೇವಿ ನೇತೃತ್ವದ ರಾಷ್ಟ್ರೀಯ ಜನತಾದಳ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸುವಂತೆ ಮಾಡಿದ್ದ ಶಿಫಾರಸನ್ನು ಪುನರ್ ಪರಿಶೀಲಿಸುವಂತೆ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರು ಇಂದು ರಾತ್ರಿ ಕೇಂದ್ರ ಸರ್ಕಾರಕ್ಕೆ ಸೂಚಿಸಿದ್ದಾರೆ.

ರಾಷ್ಟ್ರಪತಿ ನಿರ್ಧಾರದ ಹಿನ್ನೆಲೆಯಲ್ಲಿ ಉದ್ಭವಿಸಿರುವ ಪರಿಸ್ಥಿತಿ ಕುರಿತು ಚರ್ಚಿಸಲು ನಾಳೆ ಸಂಪುಟದ ಅನೌಪಚಾರಿಕ ಸಭೆ ನಡೆಯಲಿದೆ. ಆದರೆ ವಿದೇಶ ಪ್ರವಾಸದಲ್ಲಿರುವ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಮುಂದಿನ ವಾರ ವಾಪಸಾದ ಬಳಿಕವಷ್ಟೇ ನಾರಾಯಣನ್ ಅವರಿಗೆ ಕೇಂದ್ರದ ಔಪಚಾರಿಕ ತೀರ್ಮಾನ ಕಳುಹಿಸುವುದಾಗಿ ಬಿಜೆಪಿ ತಿಳಿಸಿದೆ.

• ಮೈಸೂರು ಅರಮನೆ ಸ್ವಾಧೀನ ಮಸೂದೆ ವಿಳಂಬ

ಬೆಂಗಳೂರು, ಸೆ.25– ಮೈಸೂರು ಅರಮನೆಯನ್ನು ಸ್ವಾಧೀನಪಡಿಸಿಕೊಳ್ಳುವ ಮಸೂದೆಗೆ ರಾಷ್ಟ್ರಪತಿಯವರು ಅಂಕಿತ ನೀಡಿದ್ದರೂ ಕೇಂದ್ರ ಸರ್ಕಾರ ಮಸೂದೆಯನ್ನು ತಡೆಹಿಡಿದಿರುವುದಕ್ಕೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಂ.ಸಿ.ನಾಣಯ್ಯ ಇಂದು ಇಲ್ಲಿ ತೀವ್ರವಾಗಿ ಆಕ್ಷೇಪಿಸಿದ್ದಾರೆ.

'ಇದು ಕಾನೂನುಬಾಹಿರ ಕ್ರಮವಾಗಿದೆ ಮತ್ತು ಭಾರತದ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ' ಎಂದು ಟೀಕಿಸಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 26-9-1973

• ಬೆಂಗಳೂರು ಅರಮನೆ ಸ್ವಾಧೀನ ಮೈಸೂರಿನದಕ್ಕೆ ಟ್ರಸ್ಟ್ ರಚನೆ

ಬೆಂಗಳೂರು, ಸೆ.25– ಮಾಜಿ ಮಹಾರಾಜರಿಗೆ ಸೇರಿರುವ ಬೆಂಗಳೂರು ಅರಮನೆಯನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಬೇಕೆಂಬ ಉದ್ದೇಶವಿದೆಯೆಂದು ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಮೈಸೂರಿನಲ್ಲಿನ ಅರಮನೆಯ ಸಂಬಂಧದಲ್ಲಿ ಒಂದು ಟ್ರಸ್ಟ್ ಮಾಡಲು ಯೋಚಿಸಲಾಗಿದ್ದು, ಅದರ ಸಂಬಂಧದ ಡ್ರಾಫ್ಟ್ ಆಗಿದೆ ಎಂದೂ, ಅದನ್ನು ಅಂತಿಮಗೊಳಿಸಲಾಗುವುದೆಂದೂ ಅವರು ಹೇಳಿದರು.

ಎಚ್.ಟಿ.ಕೃಷ್ಣಪ್ಪ ಅವರ ಅಲ್ಪ ಕಾಲಾವಧಿ ಪ್ರಶ್ನೆಗೆ ಉತ್ತರ ನೀಡಿದ ಅರಸು ಅವರು, ಮಹಾರಾಜರು ಉದಕಮಂಡಲ, ಮೈಸೂರು ಹಾಗೂ ಬೆಂಗಳೂರಿನಲ್ಲಿನ ಅರಮನೆಗಳನ್ನು ಪರಭಾರೆ ಮಾಡದಂತೆ ಮಹಾರಾಜರಿಗೂ ಹಾಗೂ ಕೇಂದ್ರ ಸರ್ಕಾರದ ನಡುವೆ ಆದ ವಿಲೀನ ಒಪ್ಪಂದದಲ್ಲಿ ಷರತ್ತುಗಳಿವೆ ಎಂದರು.

• ಕರ್ನಾಟಕ ವಿ.ವಿ. ಉಪಕುಲಪತಿ ಜಯಲಕ್ಷ್ಮಮ್ಮಣ್ಣಿ

ಬೆಂಗಳೂರು, ಸೆ.25– ಪ್ರಪ್ರಥಮ ಬಾರಿ ಮಹಿಳೆ ಒಬ್ಬರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಕವಾಗಿದ್ದಾರೆ.

ಕಾಲೇಜು ಶಿಕ್ಷಣ ಡೈರೆಕ್ಟರ್ ಎಂ.ಜಯಲಕ್ಷ್ಮಮ್ಮಣ್ಣಿ ಅವರು ಸೆ.27ರಿಂದ ನೂತನ ಉಪಕುಲಪತಿಗಳು ಆಯ್ಕೆ ಆಗುವವರೆವಿಗೂ, ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಕ ಹೊಂದಿದ್ದಾರೆ.

ಸಂಗತ

ಕಸವಲ್ಲ... ಅದು ಸಂಪನ್ಮೂಲ

ನಾವು ಬಿಸಾಕುವ ಕಸ ನಮ್ಮ ಪರಿಸರವನ್ನು ಕೆಡಿಸುತ್ತಿದೆ. ಅದನ್ನು ಪರಿವರ್ತಿಸಿ, ಪುನಃ ಬಳಸಲು ಹೇರಳ ಅವಕಾಶಗಳಿವೆ

• ಶಿಶಿರ ವಸಿಷ್ಠ

ಇಡೀ ವಿಶ್ವವನ್ನೇ ಬೆಚ್ಚಿ ಬೀಳಿಸಿದ್ದ ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್‌ನ ಕಟ್ಟಡಗಳ ಮೇಲಿನ ವಿಮಾನ ದಾಳಿಯ ಕೃತ್ಯ ಯಾರಿಗೆ ತಾನೆ ನೆನಪಿಲ್ಲ. ಎರಡು ವಿಮಾನಗಳು ನುಗ್ಗಿ ಬೃಹತ್ ಕಟ್ಟಡದ ಬಹುಭಾಗ ನೆಲಸಮವಾದಾಗ ಧ್ವಂಸಗೊಂಡ ಕಟ್ಟಡಗಳಿಂದ ಅಪಾರ ಪ್ರಮಾಣದ ದೂಳು, ಬೆಲೆಬಾಳುವ ಉಕ್ಕು, ತಾಮ್ರ, ಸಿಮೆಂಟು, ಗಾಜು, ಕರಗಿದ ಪ್ಲಾಸ್ಟಿಕ್ಕು, ಸೀಸ, ಫೈಬರ್‌ಗ್ಲಾಸು, ಪಾದರಸ, ಮುರಿದ ಪಿವಿಸಿ ಪೈಪು, ಅಲ್ಯುಮಿನಿಯಂ ತುಂಡು ಹೀಗೆ ಕಟ್ಟಡದೆತ್ತರದ ಕಸದ ರಾಶಿಯೇ ಸೃಷ್ಟಿಯಾಗಿತ್ತು. ಅದನ್ನು ಎತ್ತಿ ಎಲ್ಲಿಗಾದರೂ ದೂರ ಸಾಗಿಸಬೇಕಲ್ಲವೇ? ಅಮೆರಿಕದ ಐವತ್ತು ರಾಜ್ಯಗಳ ಯಾವ ಊರಿನವರೂ ಕಸ ಸ್ವೀಕರಿಸಲು ತಯಾರಿರಲಿಲ್ಲ. ಖುಷಿಯಿಂದ ಸ್ವೀಕರಿಸಲು ಅದೇನು ಉಡುಗೊರೆಯೇ? 'ನಮಗೆ ಬೇಡ' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟವು. ಮತ್ತೆ ಆ ಕಸ ಕೊನೆಗೆ ಹೋದದ್ದೆಲ್ಲಿಗೆ?

ಅಲ್ಲೆಲ್ಲೂ ಹೋಗದೆ ಸೀದಾ ಹಡಗುಗಳ ಮೂಲಕ ನಮಗೇ ಬಂತು. ಸ್ವಲ್ಪಭಾಗ ಚೀನಾ, ಕೊರಿಯಾಕ್ಕೂ ಹೋಯಿತು. ಕಡಿಮೆ ರೇಟಿಗೆ ನಾವೇ ಅದನ್ನು ಖರೀದಿಸಿ, ಒಂದೊಂದನ್ನೂ ಬೇರ್ಪಡಿಸಿ, ಕೆಲವನ್ನು ಇಡಿ ಇಡಿಯಾಗಿ, ಇನ್ನು ಕೆಲವನ್ನು ಮೂಟೆಗಟ್ಟಲೆ ಮಾರಿ ಹೆಚ್ಚಿನ ಲಾಭ ಮಾಡಿಕೊಂಡೆವು, ಕಸ ಬರೀ ಕಸವಲ್ಲ ಅದೊಂದು ಸಂಪನ್ಮೂಲ ಎಂಬ ಮಾತು ಅಕ್ಷರಶಃ ನಿಜವಾಗಿತ್ತು.

ಕೃಷಿ, ಕಟ್ಟಡ, ಇ-ತ್ಯಾಜ್ಯ, ಬಾಹ್ಯಾಕಾಶ, ಅಡುಗೆ- ತರಕಾರಿ, ಕೇಶಮುಂಡನ, ಕ್ಷೌರ, ಪ್ಲಾಸ್ಟಿಕ್ ಕಂಪ್ಯೂಟರ್ ಕಸ, ಸಿ.ಡಿ-ಡಿವಿಡಿ, ಕೇಬಲ್, ಆಸ್ಪತ್ರೆ, ಪ್ಯಾಕಿಂಗ್ ಉದ್ಯಮ, ಶಾಲೆ, ಕಲ್ಯಾಣಮಂಟಪ, ಆಟದ ಮೈದಾನ, ದೇವಸ್ಥಾನ, ದಾಸೋಹ ಕ್ಷೇತ್ರ, ಹಾಸ್ಟೆಲ್, ಅಂಗಡಿ, ಹೋಟೆಲ್, ಬಂದರು, ಬಸ್- ರೈಲು ನಿಲ್ದಾಣ, ಕೈಮಗ್ಗ, ಗಾರ್ಮೆಂಟ್, ಔಷಧ ಕಾರ್ಖಾನೆ, ಆ್ಯಸಿಡ್ ಬ್ಯಾಟರಿ, ಸೋಲಾರ್ ಪ್ಯಾನೆಲ್, ನ್ಯೂಕ್ಲಿಯರ್ ಘಟಕ, ಗೃಹೋಪಯೋಗಿ ಉತ್ಪನ್ನ ತಯಾರಿಕೆ, ಡಿಸ್ಟಿಲರೀಸ್, ತಂಪುಪಾನೀಯ ತಯಾರಿಕೆ, ಸಿಮೆಂಟು, ಕಾಂಕ್ರೀಟು, ಮರದ ಉತ್ಪನ್ನ, ಗಣಿಗಾರಿಕೆ, ರಸ್ತೆ ನಿರ್ಮಾಣ, ವಿದ್ಯುತ್ ಸ್ಥಾವರ ಹೀಗೆ ಮನುಷ್ಯಕೇಂದ್ರಿತ ಪ್ರತಿ ಕೆಲಸದಿಂದಲೂ ಕಸ ಸೃಷ್ಟಿಯಾಗುತ್ತದೆ. ಕಳೇಬರ, ಪ್ರಾಣಿಗಳ ತುಪ್ಪಳ, ಹಿಕ್ಕೆ, ಸಗಣಿ, ಮನುಷ್ಯನ ಮಲ-ಮೂತ್ರ ಕಸ ಅನುದಿನವೂ ಹೆಚ್ಚುತ್ತಿದೆ.

ನೀರು, ನೆಲಕ್ಕಷ್ಟೇ ಅಲ್ಲ, ಸುತ್ತಲಿನ ಗಾಳಿಗೂ ಕಸ ತುಂಬುತ್ತಿದ್ದೇವೆ. ನಾವು ಪ್ರತಿ ಗಂಟೆಗೆ ಹನ್ನೊಂದು ಲಕ್ಷ ಕೆ.ಜಿ. ತೂಕದ ಪ್ಲಾಸ್ಟಿಕ್ ಅನ್ನು ಸಮುದ್ರದ ತಳಕ್ಕೆ ತಳ್ಳುತ್ತಿದ್ದೇವೆ. ನ್ಯಾನೊ ಹಾಗೂ ಮೈಕ್ರೊ ಪ್ಲಾಸ್ಟಿಕ್ ಕಸ ಭೂಮಿ, ಆಕಾಶ, ಗಾಳಿ, ನೀರು, ಆಹಾರವನ್ನು ಸೇರುತ್ತಿವೆ. ಹಡಗುಗಳಿಂದ ಸೋರುವ ತೈಲ, ನಾವು ಬಿಸಾಕಿರುವ ಪ್ಲಾಸ್ಟಿಕ್ ಕಸಗಳು ಸಾಗರಜೀವಿ ಮತ್ತು ಸಮುದ್ರಹಕ್ಕಿಗಳ ಪಾಲಿಗೆ ಮಾರಣಾಂತಿಕವಾಗಿವೆ. ಸ್ವಚ್ಛಭಾರತ ಅಭಿಯಾನವು ನಗರಗಳ ರಸ್ತೆ, ಸುಸಜ್ಜಿತ ಬಡಾವಣೆಗಳಿಗೆ ಮಾತ್ರ ಸೀಮಿತವಾಗಿದೆ. ಊರೊಳಗಿನ ಕಸ ಹೊರವಲಯಕ್ಕೆ ಬಂದು ಬೀಳುತ್ತಿದೆ.

ಪರಿಸರ ಸಚಿವಾಲಯದ ಮಾಹಿತಿಯಂತೆ ದೇಶ ವರ್ಷಕ್ಕೆ 6.2 ಕೋಟಿ ಟನ್ ಕಸ ಉತ್ಪತ್ತಿ ಮಾಡುತ್ತದೆ ಮತ್ತೆ ಅದರ ಪ್ರಮಾಣ ಶೇ 4 ರಷ್ಟು ಪ್ರತಿವರ್ಷ ಹೆಚ್ಚುತ್ತಿದೆ. ಪ್ರಸ್ತುತ ನಾವು ಹೊಮ್ಮಿಸುತ್ತಿರುವ ನಗರ ಘನ ತ್ಯಾಜ್ಯದ ಪ್ರಮಾಣದಲ್ಲಿ ಶೇ 20ರಷ್ಟು ಮಾತ್ರ ಸಂಸ್ಕರಣಗೊಳ್ಳುತ್ತದೆ, ಉಳಿದದ್ದು ಭೂಭರ್ತಿತಾಣ ಮತ್ತು ನದಿ-ಸಾಗರಗಳಿಗೆ ಸೇರುತ್ತದೆ. ಭಾರತದ ಕಸ ಸಂಸ್ಕರಣೆ ಉದ್ಯಮಗಳಿಗೆ 1,500 ಕೋಟಿ ಡಾಲರ್‌ಗಳ (ಅಂದಾಜು ₹ 1.24 ಲಕ್ಷ ಕೋಟಿ) ವ್ಯವಹಾರ ಸಾಧ್ಯವಿದೆ. ವಿಶ್ವ ಕಸ ಸಂಸ್ಕರಣೆ ಉದ್ಯಮದ ವಹಿವಾಟು ಕಳೆದ ವರ್ಷ 6,300 ಕೋಟಿ ಡಾಲರ್ (ಅಂದಾಜು ₹ 5.2 ಲಕ್ಷ ಕೋಟಿ) ನಷ್ಟಿತ್ತು.

ಉತ್ಪತ್ತಿಯಾಗುವ ಒಟ್ಟು ಕಸದಲ್ಲಿ ಕಾಲು ಭಾಗ ಒಣಕಸವಾಗಿದ್ದು ಅದನ್ನು ಸಂಸ್ಕರಿಸಿ ಮರುಬಳಕೆ ಮಾಡಬಹುದಾಗಿದೆ. ವಾರ್ಷಿಕ 20 ಲಕ್ಷ ಟನ್ ಇ-ತ್ಯಾಜ್ಯ ನಮ್ಮಲ್ಲಿ ಉತ್ಪತ್ತಿಯಾಗುತ್ತಿದ್ದು ಇದರಲ್ಲಿ ಅರ್ಧದಷ್ಟನ್ನು ನೇರವಾಗಿ ಮರುಬಳಕೆ ಮಾಡಬಹುದು. ಮೂರು ವರ್ಷದ ಹಿಂದೆ ₹ 8,100 ಕೋಟಿ ಮೌಲ್ಯದ ಪೇಪರ್ ಮತ್ತದರ ತಿರುಳಿನ ತ್ಯಾಜ್ಯವನ್ನು ಆಮದು ಮಾಡಿಕೊಂಡಿದ್ದೆವು. ಅದಕ್ಕಿಂತ ಹೆಚ್ಚು ತ್ಯಾಜ್ಯ ನಮ್ಮಲ್ಲೇ ಉತ್ಪತ್ತಿಯಾಗುತ್ತದೆ. ಆದರೆ ಶೇ 20ರಷ್ಟು ಮಾತ್ರ ಸಂಗ್ರಹಗೊಳ್ಳುತ್ತದೆ. ಉಳಿದದ್ದು ಭೂಭರ್ತಿತಾಣಕ್ಕೆ ಸೇರುತ್ತದೆ. ಗಾಜು ಮತ್ತು ಲೋಹದ ತ್ಯಾಜ್ಯಕ್ಕೂ ಇದೇ ಗತಿಯಾಗುತ್ತದೆ. ಬಾಹ್ಯಾಕಾಶದ ಉಪಗ್ರಹಗಳ ಕಸ ತೆಗೆಯಲು 'ನಾಸಾ' ಟ್ರಾನ್ಸ್ ಅಸ್ತ್ರ ಎಂಬ ಕಂಪನಿಯೊಂದಿಗೆ ಕರಾರು ಮಾಡಿಕೊಂಡಿದೆ.

ಮನುಷ್ಯ-ಪ್ರಾಣಿ-ಕ್ರಿಮಿ-ಕೀಟಗಳಿಂದ ಹೊಮ್ಮುವ ಎಲ್ಲ ಬಗೆಯ ಕಸವನ್ನೂ ಪರಿವರ್ತಿಸಿ ಪುನರ್ ಬಳಕೆಗೆ ಯೋಗ್ಯವನ್ನಾಗಿಸುವ ಅನೇಕ ಉದ್ಯಮಗಳು ವಿಶ್ವದಾದ್ಯಂತ ಇವೆ. ಕಸವನ್ನೇ ರಸವನ್ನಾಗಿ ಪರಿವರ್ತಿಸುವವರ ಸಂಖ್ಯೆ ಅಗಾಧವಾಗಿದೆ. ರೀ ಸೈಕಲಿಂಗ್ ಘಟಕಗಳು ಸಾವಿರಾರು ಕೋಟಿ ರೂಪಾಯಿ ಬಂಡವಾಳ ಹೂಡಿ ಅಷ್ಟೇ ದೊಡ್ಡ ಲಾಭವನ್ನೂ ಗಳಿಸುತ್ತಿವೆ. ಶಾಲೆ- ಕಾಲೇಜಿನ ವಿದ್ಯಾರ್ಥಿಗಳು, ಗೃಹಿಣಿಯರು, ಸ್ವತಂತ್ರ ಚಿಂತಕರು ವಿನೂತನ ರೀತಿಯಲ್ಲಿ ಯೋಚಿಸಿ, ಬಿಸಾಡಿದ ಕಸಕ್ಕೆ ಮರುಜೀವ ನೀಡಿದ್ದಾರೆ. ಫಿಲಿಪೀನ್ಸ್‌ನಂತಹ ಚಿಕ್ಕ ದೇಶದಲ್ಲಿ ಕೊಳವೆಬಾವಿ ಪೈಪುಗಳನ್ನೇ ಬಳಸಿ ಕಸದ ರಾಶಿಯಿಂದ ನೇರವಾಗಿ ಮೀಥೇನ್ ಅನಿಲ ಪಡೆದು ಅದನ್ನೇ ಅಡುಗೆ ಮನೆಗಳಲ್ಲಿ ಬಳಸಲಾಗುತ್ತಿದೆ. ವಿಜ್ಞಾನ ತಂತ್ರಜ್ಞಾನದಲ್ಲಿ ಬಹಳಷ್ಟು ಸಾಧನೆ ಮಾಡುತ್ತಿರುವ ನಮಗೆ ಇದೇಕೆ ಹೊಳೆಯುವುದಿಲ್ಲ? ಅಂದಹಾಗೆ, ಸೆ. 26, ವಿಶ್ವ ಪರಿಸರ ಆರೋಗ್ಯ ದಿನ.

ವಾಚಕರ ವಾಣಿ

ಪಕ್ಷಗಳಿಗೆ ಇಲ್ಲ ಬದ್ಧತೆ

ನೀರಿನ ವಿಚಾರದಲ್ಲಿ ಕರ್ನಾಟಕಕ್ಕೆ ಯಾವಾಗಲೂ ಅನ್ಯಾಯವಾಗುತ್ತಿದೆ. ತಮಿಳುನಾಡಿನಲ್ಲಿ ಇರುವಂತೆ ಕರ್ನಾಟಕದಲ್ಲೂ ಪ್ರಾದೇಶಿಕ ಪಕ್ಷವು ಅಧಿಕಾರದಲ್ಲಿ ಇದ್ದಿದ್ದರೆ ಹೀಗಾಗುತ್ತಿತ್ತೇ ಎನ್ನುವ ಮಾತು ಕೇಳಿಬರತೊಡಗಿದೆ.

ಕರ್ನಾಟಕದಲ್ಲಿ ರಾಷ್ಟ್ರೀಯ ಪಕ್ಷಗಳು ಅಧಿಕಾರ ನಡೆಸುತ್ತಿದ್ದು, ನಾಡು, ನುಡಿ, ಜಲದ ಬಗ್ಗೆ ಆ ಪಕ್ಷಗಳ ಬದ್ಧತೆ ಕೆಸರುಗದ್ದೆಯಲ್ಲಿನ ಗೂಟದಂತೆ ಅಲುಗಾಡುತ್ತಿದೆ. ಅವುಗಳ ನಿಲುವು ಅಧಿಕಾರದಲ್ಲಿ ಇದ್ದಾಗ ಒಂದು ಬಗೆ ಇದ್ದರೆ, ವಿರೋಧ ಪಕ್ಷದಲ್ಲಿ ಇದ್ದಾಗ ಅದಕ್ಕೆ ವ್ಯತಿರಿಕ್ತವಾಗಿರುತ್ತದೆ. ಅವುಗಳಿಗೆ ರಾಜ್ಯದ ಹಿತಕ್ಕಿಂತ ಪಕ್ಷದ ನಿಲುವು ಮುಖ್ಯ. ರಾಜ್ಯದ ಹಿತದ ದೃಷ್ಟಿಯಲ್ಲೂ ಒಂದಾಗದೇ ರಾಜಕೀಯ ಮಾಡುವುದು ಕನ್ನಡಿಗರ ದೌರ್ಭಾಗ್ಯ. ದೆಹಲಿಯಲ್ಲಿ ಕನ್ನಡಿಗರ ಧ್ವನಿ ಕೇಳಿಸುತ್ತಿಲ್ಲ ಎನ್ನುವುದು ಮಾತ್ರ ಸತ್ಯ.

ರಮಾನಂದ ಶರ್ಮಾ, ಬೆಂಗಳೂರು

ಅಸಹನೀಯ ಕಿರಿಕಿರಿಗೆ ಕೊನೆ ಎಂದು?

ಹದಿನೈದು ದಿನದ ಹಿಂದೆ ನಡೆದ ಪ್ರಸಂಗ. ಬೆಂಗಳೂರಿನ ಗಿರಿನಗರದಲ್ಲಿನ ನಮ್ಮ ಮನೆಯ ಗೃಹಪ್ರವೇಶವನ್ನು ಸರಳವಾಗಿ 10 ಜನರ ಸಮ್ಮುಖದಲ್ಲಿ ಆಚರಿಸುತ್ತಿದ್ದೆವು. ಮನೆಯ ಯಜಮಾನ ನಿಧನ ಹೊಂದಿದ್ದರಿಂದ ಒಂದು ಮುಖ್ಯವಾದ ಹೋಮ ಮಾಡುತ್ತಿದ್ದೆವು. ಎಲ್ಲರೂ ತಲ್ಲೀನರಾಗಿದ್ದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಲಿಂಗತ್ವ ಅಲ್ಪಸಂಖ್ಯಾತರು 10 ಮಂದಿ ಅಬ್ಬರ ಮಾಡಿಕೊಂಡು ಒಳನುಗ್ಗಿದರು. ಬಂದ ಕಾರಣ ಅರಿತ ನಾವು ₹ 1,000 ಕೊಟ್ಟು ಕಳುಹಿಸೋಣವೆಂದರೆ, ಅದಕ್ಕೆ ಒಪ್ಪದ ಅವರು ₹ 5,000 ಕೊಡುವಂತೆ ಆಗ್ರಹಿಸಿದರು.

ನಾವು ಕೈ ಮುಗಿದು, 'ಹೋಗಿ, ನಮ್ಮ ಬಳಿ ಹಣವಿಲ್ಲ' ಎಂದರೂ ಅರ್ಥ ಮಾಡಿಕೊಳ್ಳದ ಅವರು ಕೆಟ್ಟದಾಗಿ ಕಿರುಚಲು ಶುರು ಮಾಡಿದರು. ಅವರಲ್ಲಿ ಮುಖ್ಯವಾದ ಒಬ್ಬರು ತನ್ನ ಉಡುಪನ್ನೇ ತೆಗೆದು ಇನ್ನಷ್ಟು ಅಸಹ್ಯವಾಗಿ ವರ್ತಿಸಿದರು. ಪೊಲೀಸರಿಗೆ ಹೇಳುತ್ತೇವೆ ಅಂದರೆ 'ನಮಗೆ ಯಾರ ಭಯವೂ ಇಲ್ಲ' ಎನ್ನುವ ಮಾತು. ತೀರಾ ಸಾಮಾನ್ಯ ಆಗಿರುವ ಇಂತಹ ಪರಿಪಾಟಕ್ಕೆ ಪೊಲೀಸರ ಬೆಂಬಲವಿದೆ ಎಂದು ನಮಗೆ ಬಹಳಷ್ಟು ಮಂದಿ ಹೇಳಿದರು. ಎಲ್ಲ ತರಹದ ದಂಧೆಗಳಲ್ಲಿ ಇದೂ ಒಂದು. ಇದಕ್ಕೆ ಪರಿಹಾರವೂ ಇಲ್ಲವೇನೊ. ಬೇಲಿಯೇ ಎದ್ದು ಹೊಲ ಮೇಯಲು ಜಾಗ ಮಾಡಿಕೊಟ್ಟರೆ ನಮ್ಮಂಥವರ ಸಮಸ್ಯೆ ಹಾಗೇ ಉಳಿಯುತ್ತದೆ.

ಸಂಜೀವಿನಿ, ಬೆಂಗಳೂರು

ಈ ದ್ವಂದ್ವ ಸರಿಯಲ್ಲ

ಹಳ್ಳಿ, ಪಟ್ಟಣ, ನಗರಗಳಲ್ಲಿ ಹೊಸದಾಗಿ ಸಾವಿರ ಮದ್ಯದಂಗಡಿ ತೆರೆಯಲು ರಾಜ್ಯದ ಅಬಕಾರಿ ಇಲಾಖೆ ತಯಾರಿ ನಡೆಸಿದೆ ಎಂಬ ವರದಿ ಓದಿ (ಪ್ರ.ವಾ., ಸೆ.25) ಗಾಬರಿಯಾಯಿತು. ಊರೂರಿನಲ್ಲೂ ಮದ್ಯದ ಅಂಗಡಿ ತೆರೆಸುವುದು ಯಾವ ಅಭಿವೃದ್ಧಿ ಕೆಲಸ? ಮನೆಮನೆಗೆ ಈ ಚಟ ಹತ್ತಿಸಿದರೆ ಸಾಮಾಜಿಕ ಸಂಬಂಧಗಳ ಗತಿಯೇನು? ದೇಶದ ಆಂತರಿಕ ಶಕ್ತಿ ಹೇಗೆ ಬೆಳೆದೀತು? ಒಂದು ಕಡೆ ಮದ್ಯಪಾನ ಆರೋಗ್ಯಕ್ಕೆ ಹಾನಿಕರ ಎಂಬ ನೀತಿಬೋಧೆ, ಇನ್ನೊಂದು ಕಡೆ ಹೆಚ್ಚುಹೆಚ್ಚು ಮಾರಾಟಕ್ಕೆ ಕುಮ್ಮಕ್ಕು. ಯಾವುದೇ ಆಡಳಿತ ಪಕ್ಷಕ್ಕೆ ಈ ದ್ವಂದ್ವ ಸರಿಯಲ್ಲ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ರೈತ–ಕನ್ನಡ ಸಂಘಟನೆಗಳಲ್ಲಿ ಇರಲಿ ಒಗ್ಗಟ್ಟು

ಕನ್ನಡ ನುಡಿ, ನೆಲ, ಜಲಕ್ಕೆ ಅಪಾಯ ಬಂದಾಗ ಕನ್ನಡಪರ ಸಂಘಟನೆಗಳು, ರೈತ ಸಂಘಟನೆಗಳು ಒಗ್ಗಟ್ಟಾಗಿ ಹೋರಾಡಿದರೆ ಫಲ ಸಿಗುತ್ತದೆ. ಒಗ್ಗಟ್ಟಿನಲ್ಲಿ ಬಲ ಇದೆ ಎಂಬ ಮಾತಿದೆ. ಪ್ರತ್ಯೇಕವಾಗಿ ಹೋರಾಡಿದರೆ ಪ್ರಯೋಜನವಿಲ್ಲ. ಈಗ ಕಾವೇರಿ ನದಿ ನೀರು ವಿಚಾರದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಹಾಗೂ ರಾಜ್ಯದ ವಿವಿಧೆಡೆ ಸಂಘಟನೆಗಳು ಬೇರೆ ಬೇರೆಯಾಗಿ ಚಳವಳಿ ನಡೆಸುವ ಬದಲು ಒಟ್ಟುಗೂಡಿ ನಡೆಸುವುದು ಅಗತ್ಯವಿದೆ. ಬಂದ್ ವಿಚಾರದಲ್ಲೂ ಎಲ್ಲಾ ರೈತ ಹಾಗೂ ಕನ್ನಡಪರ ಸಂಘಟನೆಗಳಿಂದ ಒಂದೇ ನಿಲುವು– ಒಂದೇ ಧ್ವನಿ ಮೊಳಗಬೇಕಿತ್ತು.

ವಿವಿಧ ಸಂಘಟನೆಗಳ ಮುಖಂಡರು ಪ್ರತಿಷ್ಠೆಗೆ ಅಂಟಿಕೊಂಡು ಜಿಲ್ಲಾ ಬಂದ್, ಬೆಂಗಳೂರು ಬಂದ್, ಕರ್ನಾಟಕ ಬಂದ್ ಎಂದು ಭಿನ್ನ ಧ್ವನಿಗಳಲ್ಲಿ ಕರೆ ನೀಡುವುದು ಸರಿಯೇ? ಈ ಕುರಿತು ಯೋಚಿಸುವ ಅಗತ್ಯವಿದೆ. ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯ ಸಂಕಷ್ಟಕ್ಕೆ ಸಿಲುಕಿದೆ. ರಾಜ್ಯದ ಎಲ್ಲಾ ರೈತ, ಕನ್ನಡಪರ ಸಂಘಟನೆಗಳು, ಮಠಾಧಿಪತಿಗಳು, ರಾಜಕೀಯ ಪಕ್ಷಗಳು ಒಗ್ಗಟ್ಟು ಪ್ರದರ್ಶಿಸಿ ನ್ಯಾಯ ಪಡೆಯುವುದೊಂದೇ ಈಗ ಉಳಿದಿರುವ ಮಾರ್ಗ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

'ಜನತಾ ದರ್ಶನ' ಆರಂಭಶೂರತ್ವ ಆಗದಿರಲಿ

ಜನರ ಸ್ಥಳೀಯ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ಉದ್ದೇಶದಿಂದ 'ಜನತಾದರ್ಶನ' ಕಾರ್ಯಕ್ರಮವನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರ ಹಮ್ಮಿಕೊಂಡಿರುವುದು ಸಂತಸದ ವಿಚಾರ. ರಾಜ್ಯದಲ್ಲಿ ಜನಸಾಮಾನ್ಯರು ಅನೇಕ ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪರಿಹಾರಕ್ಕಾಗಿ ಪರದಾಡುತ್ತಿದ್ದಾರೆ. ಈ ಮೂಲಕವಾದರೂ ಸಮಸ್ಯೆಗಳಿಗೆ ತ್ವರಿತ ಸ್ಪಂದನ ದೊರೆತು ಪರಿಹಾರ ಸಿಕ್ಕಿದರೆ ಕಾರ್ಯಕ್ರಮ ಸಾರ್ಥಕ್ಯ ಪಡೆಯುತ್ತದೆ.

ಯಾವುದೇ ಕಾರ್ಯಕ್ರಮ ಹೊಸದಾಗಿ ಶುರುವಾದಾಗ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಆರಂಭದಲ್ಲಿ ಹುರುಪು-ಉತ್ಸಾಹ ಇರುತ್ತದೆ. ಆ ಬಳಿಕ ಅದು ಉಡುಗುತ್ತದೆ. ಈ ಕಾರ್ಯಕ್ರಮವೂ ಆರಂಭಶೂರತ್ವ ಎನಿಸಬಾರದು.

ಶ್ರೀಧರ್ ಡಿ.ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ರಾಜಕೀಯ ಬೆರೆಸುವುದು ಬೇಡ

ಕಾವೇರಿ ನೀರಿನ ವಿಷಯ ರಾಜ್ಯದ ಯಾವುದೇ ಒಂದು ಪ್ರಾಂತ್ಯ, ಜಿಲ್ಲೆಗೆ ಸಂಬಂಧಿಸಿದ ವಿಚಾರವಲ್ಲ. ಅಖಂಡ ಕರ್ನಾಟಕಕ್ಕೆ ಸಂಬಂಧಿಸಿದ ವಿಷಯ. ರಾಜಕೀಯ ಲಾಭಕ್ಕಾಗಿ ನೀರಿನ ವಿಚಾರವನ್ನು ಯಾರೊಬ್ಬರೂ ಬಳಕೆ ಮಾಡಿಕೊಳ್ಳಬಾರದು. ಹಾಗೆ ಮಾಡಿದರೆ ಅದು ಅಕ್ಷಮ್ಯ. ರಾಜಕೀಯ, ಧಾರ್ಮಿಕ, ಚಲನಚಿತ್ರರಂಗ ಸೇರಿದಂತೆ ಎಲ್ಲ ಕ್ಷೇತ್ರಗಳ ಗಣ್ಯರೂ ಒಗ್ಗಟ್ಟಾಗಿ ಹೋರಾಡಬೇಕು. ನೀರಿನ ಕೊರತೆ ಎದುರಿಸುತ್ತಿರುವ ಸಂಕಷ್ಟದ ಈ ಸಂದರ್ಭದಲ್ಲಿ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡಬೇಕು.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೆರೆಜಾಲ ಅಭಿವೃದ್ಧಿಯಲ್ಲಿ ಜೀವಸೆಲೆ

ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳು ಕೆರೆ ಮತ್ತು ಕೆರೆಜಾಲಗಳ ಅಭಿವೃದ್ಧಿಯ ಮೂಲಕ ಬರದ ಸಮಸ್ಯೆಗೆ ಪರಿಹಾರ ಕಂಡುಕೊಂಡಿವೆ. ಇವುಗಳ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಜನಸಮುದಾಯವನ್ನೇ ಪ್ರಮುಖ ಭಾಗೀದಾರರನ್ನಾಗಿ ಮಾಡಿದ್ದರಲ್ಲಿ ಈ ಯೋಜನೆಗಳ ಯಶಸ್ಸು ಅಡಗಿದೆ ಎಂದು ವಿಶ್ವ ಬ್ಯಾಂಕ್ ಅಭಿಪ್ರಾಯಪಟ್ಟಿದೆ. ಬರದ ವರ್ಷಗಳಲ್ಲಿ ನೀರಿನ ಕೊರತೆ ಎದುರಿಸುವ ಕರ್ನಾಟಕಕ್ಕೂ, ಕೆರೆಗಳ ಅಭಿವೃದ್ಧಿಯ ಈ ಯೋಜನೆಗಳು ಮಾದರಿಯಾಗಬಲ್ಲವು

ಪ್ರಜಾವಾಣಿ ವಾರ್ತೆ

ಅವಿಭಜಿತ ಆಂಧ್ರಪ್ರದೇಶವು ದೇಶದಲ್ಲೇ ಅತಿಹೆಚ್ಚು ಕೆರೆಗಳಿದ್ದ ರಾಜ್ಯ ಎನಿಸಿಕೊಂಡಿತ್ತು. 1995ರ ಲೆಕ್ಕಾಚಾರದ ಪ್ರಕಾರ ಅವಿಭಜಿತ ಆಂಧ್ರಪ್ರದೇಶದಲ್ಲಿ 74,000ಕ್ಕೂ ಹೆಚ್ಚು ಕೆರೆಗಳಿದ್ದವು. ರಾಜ್ಯದ ಶೇ 24ರಷ್ಟು (10 ಲಕ್ಷ ಹೆಕ್ಟೇರ್) ಕೃಷಿ ಭೂಮಿಗೆ ಈ ಕೆರೆಗಳೇ ನೀರನ್ನು ಒದಗಿಸುತ್ತಿದ್ದವು. ಆದರೆ ನಂತರದ ವರ್ಷಗಳಲ್ಲಿ ಕೆರೆ ಮೇಲಿನ ಅವಲಂಬನೆ ಕಡಿಮೆಯಾಯಿತು. ಜತೆಗೆ ಕೊಳವೆ ಬಾವಿಗಳ ಬಳಕೆಯೂ ಹೆಚ್ಚಾಯಿತು. ಹತ್ತೇ ವರ್ಷಗಳಲ್ಲಿ ರಾಜ್ಯದಲ್ಲಿನ ಅಂತರ್ಜಲದ ಮಟ್ಟ 1,000 ಅಡಿಗಿಂತಲೂ ಕೆಳಗೆ ಇಳಿಯಿತು. 2005ರ ವೇಳೆಗೆ ನೀರಾವರಿಗೆ ಕೆರೆಗಳನ್ನು ಅವಲಂಬಿಸಿದ್ದ ಕೃಷಿ ಜಮೀನಿನ ವಿಸ್ತೀರ್ಣ 5 ಲಕ್ಷ ಹೆಕ್ಟೇರ್‌ಗೆ ಕುಸಿದಿತ್ತು. ಜಲಸಂರಕ್ಷಣೆಗೆ ಆಂಧ್ರಪ್ರದೇಶ ಮುಂದಾಗಲು ಅನಿವಾರ್ಯವಾದ ಸನ್ನಿವೇಶ ಬಂದೊದಗಿತ್ತು.

ಒಂದೆಡೆ ಈ ಹಿಂದಿನಂತೆ ನೀರು ಒದಗಿಸಲಾಗದ ಕೆರೆಗಳು. ಮತ್ತೊಂದೆಡೆ ಕುಸಿದ ಅಂತರ್ಜಲದ ಮಟ್ಟ. ಆಗ ಅಧಿಕಾರದಲ್ಲಿದ್ದ ವೈ.ಎಸ್.ರಾಜಶೇಖರ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದಕ್ಕೆ ಪರಿಹಾರ ಕಂಡುಕೊಳ್ಳಲು ಮುಂದಾಯಿತು. ಇದಕ್ಕಾಗಿ ಒಂದು ಯೋಜನೆಯನ್ನು ತಯಾರಿಸಿತು. ಯೋಜನೆ ಅನುಷ್ಠಾನಕ್ಕೆ ಅಗತ್ಯವಿದ್ದ ಹಣಕಾಸು ನೆರವು ಪಡೆದುಕೊಳ್ಳಲು ಸರ್ಕಾರವು ವಿಶ್ವಬ್ಯಾಂಕ್ ಅನ್ನು ಸಂಪರ್ಕಿಸಿತು. ಯೋಜನೆಗೆ ಹಣಕಾಸು ನೆರವು ನೀಡಲು ವಿಶ್ವಬ್ಯಾಂಕ್ ಒಪ್ಪಿಗೆ ನೀಡಿತು. ಜತೆಗೆ, ‘ಬೇರೆಲ್ಲಾ ನೀರು ಸಂರಕ್ಷಣೆ ಯೋಜನೆಗಳಿಗಿಂತ ಈ ಯೋಜನೆ ಭಿನ್ನವಾಗಿದೆ. ಇದು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗುತ್ತದೆ ಎಂಬುದನ್ನು ನೋಡಬೇಕಿದೆ’ ಎಂದು ಯೋಜನೆಗೆ ಒಪ್ಪಿಗೆ ಕೊಡುವಾಗ ಹೇಳಿತ್ತು.

ತೀವ್ರ ನೀರಿನ ಕೊರತೆ ಎದುರಿಸುತ್ತಿರುವ ರಾಯಲಸೀಮಾ ಮತ್ತು ಇತರ ಪ್ರದೇಶಗಳಲ್ಲಿನ ಒಟ್ಟು 3,000 ಕೆರೆಗಳನ್ನು ಈ ಯೋಜನೆಗೆ ಆಯ್ಕೆಮಾಡಿಕೊಳ್ಳಲಾಗಿತ್ತು. ಕೆರೆಗಳ ಹೂಳೆತ್ತುವುದಕ್ಕೆ ಮಾತ್ರ ಈ ಯೋಜನೆ ಸೀಮಿತವಾಗಿರಲಿಲ್ಲ. ಕೆರೆಗಳನ್ನು ಪರಿಪೂರ್ಣವಾಗಿ ಪುನಶ್ಚೇತನಗೊಳಿಸಲಾಯಿತು. ಮೊದಲಿಗೆ ಕೆರೆಗಳ ಏರಿಗಳನ್ನು ಸರಿಪಡಿಸಲಾಯಿತು. ಹೂಳನ್ನು ತೆಗೆಯುವ ಮೂಲಕ ಕೆರೆಗಳ ನೀರು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಯಿತು. ಕೆರೆಗಳಿಗೆ ನೀರು ಹರಿದುಬರುವ ಹೊಳೆ–ತೊರೆಗಳ ಪಾತ್ರಗಳ ಒತ್ತುವರಿಯನ್ನು ತೆರವು ಮಾಡಲಾಯಿತು. ಮಳೆ ಬಂದಾಗ ನೀರು ಸರಾಗವಾಗಿ ಕೆರೆಗಳಿಗೆ ಹರಿದುಬರುವಂತೆ ಮಾಡಲಾಯಿತು. ಜತೆಗೆ ಒಂದು ಕೆರೆ ತುಂಬಿದರೆ, ನೀರು ಮುಂದಿನ ಕೆರೆಗೆ ಹರಿದುಹೋಗುವಂತೆ ಮಾಡಲಾಯಿತು. ಕೆರೆಯ ನೀರು ಕೃಷಿ ಜಮೀನುಗಳಿಗೆ ಹರಿದುಹೋಗುವಂತೆ ಮಾಡಲು ಕಿರುಗಾಲುವೆಗಳನ್ನು ನಿರ್ಮಿಸಲಾಯಿತು.

ಈ ಎಲ್ಲಾ ಕಾಮಗಾರಿಗಳನ್ನು ಈ ಹಿಂದೆ ಗುತ್ತಿಗೆ ನೀಡಲಾಗುತ್ತಿತ್ತು. ಆದರೆ ಈ ಯೋಜನೆ ಅಡಿಯಲ್ಲಿ ಒಂದು ಕೆರೆಯ ಜಲಾನಯನ ಮತ್ತು ಅಚ್ಚುಕಟ್ಟು ಪ್ರದೇಶದ ಗ್ರಾಮಗಳ ನಿವಾಸಿಗಳು, ಪಂಚಾಯಿತಿಯನ್ನು ಒಳಗೊಂಡ ಬಳಕೆದಾರರ ಗುಂಪನ್ನು ರಚಿಸಲಾಯಿತು. ಕಾಮಗಾರಿಯನ್ನು ಆ ಗುಂಪಿಗೇ ವಹಿಸಲಾಯಿತು. ಗ್ರಾಮಸ್ಥರನ್ನೇ ಕೆಲಸಗಾರರನ್ನಾಗಿ ನೇಮಕ ಮಾಡಿಕೊಳ್ಳಲಾಯಿತು. ಗ್ರಾಮಸ್ಥರು ನೀಡಿದ ಶ್ರಮದಾನಕ್ಕೆ ಪ್ರತಿಯಾಗಿ ಹೂಳನ್ನು ಅವರ ಹೊಲಗಳಿಗೆ ಸಾಗಿಸಲಾಯಿತು, ಸಾಗಣೆ ವೆಚ್ಚವನ್ನು ಸರ್ಕಾರವೇ ಭರಿಸಿತ್ತು. ನಂತರ ಕೆರೆ–ಕಾಲುವೆಗಳ ನಿರ್ವಹಣೆಯನ್ನು ಬಳಕೆದಾರರ ಗುಂಪುಗಳಿಗೇ ನೀಡಲಾಯಿತು. ಕೆರೆಗಳಲ್ಲಿ ಮೀನುಸಾಕಣೆ ಹೊಣೆಯನ್ನು ಈ ಗುಂಪುಗಳಿಗೇ ವಹಿಸಲಾಯಿತು. ಈ ಎಲ್ಲವೂ ಜನರ ಹಣಕಾಸು ಸ್ಥಿತಿಯನ್ನು ಸುಧಾರಿಸಿದವು.

ಯೋಜನೆ ಪ್ರಕಾರ ಕಾಮಗಾರಿಯು 2012ಕ್ಕೇ ಪೂರ್ಣಗೊಳ್ಳಬೇಕಿತ್ತಾದರೂ ಪೂರ್ಣಗೊಂಡಿದ್ದು 2016ಕ್ಕೆ. ಆದರೆ, 2014ರಲ್ಲಿ ಆಂಧ್ರಪ್ರದೇಶವನ್ನು ವಿಭಜಿಸಿ, ತೆಲಂಗಾಣ ಮತ್ತು ಆಂಧ್ರಪ್ರದೇಶ ಎಂದು ಎರಡು ರಾಜ್ಯಗಳನ್ನು ರಚಿಸಲಾಯಿತು. ನೂತನ ಆಂಧ್ರಪ್ರದೇಶದ ಟಿಡಿಪಿ ಸರ್ಕಾರ ಮತ್ತು ತೆಲಂಗಾಣದ ಟಿಆರ್‌ಎಸ್ (ಈಗ ಬಿಆರ್‌ಎಸ್) ಸರ್ಕಾರವು ಯೋಜನೆಯನ್ನು ಮುಂದುವರಿಸಿದವು. ಈ ಯೋಜನೆಯಂತೆಯೇ ಎರಡೂ ರಾಜ್ಯಗಳು ತಮ್ಮದೇ ಪ್ರತ್ಯೇಕ ಯೋಜನೆಗಳನ್ನು ರೂಪಿಸಿ, ಇಡೀ ರಾಜ್ಯದಲ್ಲಿ ಅನುಷ್ಠಾನಕ್ಕೆ ತಂದವು. ಈ ಯೋಜನೆಗಳ ಪರಿಶೀಲನೆ ನಡೆಸಿದ ವಿಶ್ವಬ್ಯಾಂಕ್, ‘ಈ ಯೋಜನೆಗಳು ಬಹುತೇಕ ಯಶಸ್ವಿಯಾಗಿವೆ. ಸಮುದಾಯವನ್ನು ಒಳಗೊಂಡು ಜಲಸಂರಕ್ಷಣೆಯನ್ನು ಹೇಗೆ ಪರಿಣಾಮಕಾರಿಯಾಗಿ ಸಾಧಿಸಬಹುದು ಎಂಬುದಕ್ಕೆ ಇದು ಉದಾಹರಣೆ’ ಎಂದು 2019ರಲ್ಲಿ ವರದಿ ನೀಡಿತು.

ಬೃಹತ್ ಜಲಾಶಯಗಳು

ಆಂಧ್ರಪ್ರದೇಶದಲ್ಲಿ ಭಾರಿ ಪ್ರಮಾಣದ ನೀರು ಸಂಗ್ರಹ ಸಾಮರ್ಥ್ಯ ಇರುವ ನಾಗಾರ್ಜುನ ಸಾಗರ (408 ಟಿಎಂಸಿ ಅಡಿ), ಪೋಲವರಂ (194 ಟಿಎಂಸಿ ಅಡಿ), ಶ್ರೀಶೈಲ (216 ಟಿಎಂಸಿ) ಬೃಹತ್ ಜಲಾಶಯಗಳಿವೆ. ಇವುಗಳ ನೀರನ್ನು ತೆಲಂಗಾಣದ ಜತೆಗೂ ಹಂಚಿಕೊಳ್ಳಲಾಗುತ್ತದೆ. ಇವುಗಳು ಅರ್ಧದಷ್ಟು ಭರ್ತಿಯಾದರೂ ಎರಡೂ ರಾಜ್ಯಗಳಲ್ಲಿ ಕೃಷಿ, ಕೈಗಾರಿಕೆ ಮತ್ತು ಕುಡಿಯುವ ನೀರಿನ ಅಗತ್ಯವನ್ನು ಪೂರೈಸುತ್ತವೆ. ಬರದ ವರ್ಷಗಳಲ್ಲೂ ನೀರಿನ ಕೊರತೆ ಉಂಟಾಗದೇ ಇರಲು ಇಂತಹ ಬೃಹತ್ ಜಲಾಶಯಗಳೂ ಕಾರಣ ಎನ್ನಲಾಗಿದೆ.

‘ನನ್ನ ಊರು, ನನ್ನ ಕೆರೆ’

ತೆಲಂಗಾಣಕ್ಕೆ ಕೆರೆಗಳೇ ಆಧಾರ. ನೀರನ್ನು ಸಂರಕ್ಷಿಸಿಕೊಂಡರೆ ಮಾತ್ರವೇ ಇಲ್ಲಿನ ಕೃಷಿ, ಜೀವನಾಡಿಗಳಿಗೆ ನೀರುಣಿಸಲು ಸಾಧ್ಯವಾಗುತ್ತದೆ. ಆಂಧ್ರಪ್ರದೇಶದಿಂದ ಬೇರ್ಪಟ್ಟ ತೆಲಂಗಾಣವು ನೀರಿನ ಮೂಲಾಧಾರವಾಗಿರುವ ಕೆರೆಗಳ ಅಭಿವೃದ್ಧಿಗೆ ಒತ್ತು ನೀಡಿತ್ತು. ಕೆರೆಗಳ ಅಭಿವೃದ್ಧಿಯೇ ಹೊಸ ರಾಜ್ಯದ ಆದ್ಯತೆಯಾಯಿತು. ಈ ಹಿನ್ನೆಲೆಯಲ್ಲಿಯೇ 2015ರಲ್ಲಿ ಮಿಷನ್ ಕಾಕತೀಯ (ನನ್ನ ಊರು, ನನ್ನ ಕೆರೆ) ಯೋಜನೆಯನ್ನು ತೆಲಂಗಾಣ ಜಾರಿ ಮಾಡಿದೆ.

ಕಿರು ಜಲಮೂಲಗಳಾದ ಕೆರೆ, ಕಿರು ಅಣೆಕಟ್ಟೆ ಹಾಗೂ ಚೆಕ್‌ಡ್ಯಾಂ ಮುಂತಾದವುಗಳ ಅಭಿವೃದ್ಧಿಯ ಮೂಲಕ ಸಣ್ಣ ರೈತರ ಆದಾಯವನ್ನು ಹೆಚ್ಚಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿತ್ತು. ಇದಕ್ಕಾಗಿ ಯೋಜನೆ ಜಾರಿಗೆ ಮೊದಲು ರಾಜ್ಯದಲ್ಲಿರುವ ಕಿರು ಜಲಮೂಲಗಳ ಗಣತಿಯನ್ನು ಕೈಗೊಳ್ಳಲಾಯಿತು. ಗಣತಿಯಲ್ಲಿ ಒಟ್ಟು 46,000ಕ್ಕೂ ಹೆಚ್ಚು ಕಿರು ಜಲಮೂಲಗಳನ್ನು ಪತ್ತೆ ಮಾಡಲಾಯಿತು. ಪ್ರತಿ ವರ್ಷ ಶೇ 20ರಷ್ಟು ಅಂದರೆ, 9,306 ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಮುಂದಾಯಿತು.

ಕಿರು ಜಲಮೂಲಗಳ ಅಚ್ಚುಕಟ್ಟು ಪ್ರದೇಶಗಳ ವ್ಯಾಪ್ತಿಯನ್ನು ವಿಸ್ತರಿಸುವುದನ್ನು ಯೋಜನೆಯ ಮುಖ್ಯ ಕಾರ್ಯೋದ್ದೇಶವನ್ನಾಗಿ ಮಾಡಿಕೊಳ್ಳಲಾಗಿತ್ತು. ಕಿರು ಜಲಮೂಲಗಳಲ್ಲಿ ಸುಮಾರು 255 ಟಿಎಂಸಿ ಅಡಿಯಷ್ಟು ನೀರು ಸಂಗ್ರಹವಾಗಬೇಕು. ಈ ಮೂಲಕ ಸುಮಾರು 20 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ವ್ಯವಸ್ಥೆ ಮಾಡುವುದು ಯೋಜನೆಯ ಉದ್ದೇಶವಾಗಿತ್ತು.

ಕಾಕತೀಯ ರಾಜಮನೆತನದ ಕಾಲದಿಂದಲೂ ತೆಲಂಗಾಣ ಪ್ರದೇಶದಲ್ಲಿ ಕೆರೆಗಳ ನಿರ್ಮಾಣಕ್ಕೆ ಒತ್ತು ನೀಡಲಾಗಿತ್ತು. ಹಾಗಿದ್ದರೂ ಕಾಲಾಂತರದಲ್ಲಿ ಇವುಗಳ ನಿರ್ವಹಣೆಯ ವಿಷಯದಲ್ಲಿ ನಿರ್ಲಕ್ಷ್ಯ ತೋರಲಾಗಿತ್ತು. ಈ ಕಾರಣದಿಂದಲೇ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯು ಕಡಿತಗೊಳ್ಳುತ್ತಾ ಬಂದಿತ್ತು. 2014ರಲ್ಲಿ ಸರ್ಕಾರವು ಕಿರು ಜಲಮೂಲಗಳ ಗಣತಿ ಕೈಗೊಂಡಾಗ, 46,531 ಕಿರು ಜಲಮೂಲಗಳ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿ 9ರಿಂದ 10 ಲಕ್ಷ ಎಕರೆಯಷ್ಟಿತ್ತು.

ಕಿರು ಜಲಮೂಲಗಳ ನಿರ್ವಹಣೆ: ಕೆರೆಗಳಲ್ಲಿ ದೊಡ್ಡ ಪ್ರಮಾಣದ ಹೂಳು ತುಂಬಿಕೊಂಡಿದ್ದರಿಂದ ಕೆರೆಗಳ ನೀರಿನ ಸಂಗ್ರಹಣ ಸಾಮರ್ಥ್ಯವು ಕಡಿಮೆಯಾಗಿತ್ತು. ಜೊತೆಗೆ, ಕೆರೆಗಳ ತಡೆಗೋಡೆಗಳಲ್ಲಿ ಬಿರುಕು, ನೀರು ಸರಾಗವಾಗಿ ಸಾಗಲು ಕಾಲುವೆಗಳು ಇಲ್ಲದಿರುವುದು ಸೇರಿದಂತೆ ಹಲವು ಸಮಸ್ಯೆಗಳು ಇದ್ದವು. ಮಿಷನ್ ಕಾಕತೀಯ ಈ ಎಲ್ಲ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಮುಂದಾಯಿತು.

ಕೆರೆಗಳ ಹೂಳೆತ್ತುವುದು, ತಡೆಗೋಡೆ ಮತ್ತು ಕಾಲುವೆಗಳ ದುರಸ್ತಿ, ಅಗತ್ಯ ಇದ್ದಲ್ಲಿ ದೊಡ್ಡ ಅಥವಾ ಮಾಧ್ಯಮ ಗಾತ್ರದ ಜಲಮೂಲಗಳಿಂದ ಕಿರು ಜಲಮೂಲಗಳಿಗೆ ನೀರುಣಿಸುವುದು ಸೇರಿದಂತೆ ಸಮಸ್ಯೆಗೆ ಹಲವು ಪರಿಹಾರಗಳನ್ನು ಯೋಜನೆಯಲ್ಲಿ ವಿವರಿಸಲಾಗಿತ್ತು.

ಮಿಷನ್ ಕಾಕತೀಯವು ಜಾರಿಯಾದ ಎಂಟು ವರ್ಷಗಳ ನಂತರವೂ ಯಶಸ್ವಿಯಾಗಿ ತೆಲಂಗಾಣದಲ್ಲಿ ಮುಂದುವರಿಯುತ್ತಿದೆ. ಅಚ್ಚುಕಟ್ಟು ಪ್ರದೇಶಗಳ ವ್ಯಾಪ್ತಿ ವಿಸ್ತರಣೆಯಾಗಿದೆ, ಅಂತರ್ಜಲ ಮಟ್ಟದಲ್ಲಿ ಕೂಡ ಏರಿಕೆಯಾಗಿದೆ ಹಾಗೂ ಸಣ್ಣ ರೈತರ ಆದಾಯದಲ್ಲಿ ಕೂಡ ಏರಿಕೆ ಕಂಡುಬಂದಿದೆ. ಮೀನುಗಾರಿಕೆ ಕೂಡ ಚೇತರಿಸಿಕೊಂಡಿದೆ. ಹೊಸದಾಗಿ ಅಭಿವೃದ್ಧಿಪಡಿಸಿದ ಕೆರೆಗಳೊಂದಿಗೆ ಹಳೆಯ ಕೆರೆಗಳ ನಿರ್ವಹಣೆಯನ್ನೂ ಸರ್ಕಾರ ಮಾಡುತ್ತಿದೆ.

ಹೈದರಾಬಾದ್‌ನಲ್ಲಿರುವ ಹುಸೇನ್ ಸಾಗರ ಕೆರೆ

46,531
ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಲಾದ ಕೆರೆಗಳ ಸಂಖ್ಯೆ

40,817
ಈ ಯೋಜನೆ ಅಡಿಯಲ್ಲಿ ಅಭಿವೃದ್ಧಿ ಪಡಿಸಲಾದ ಕೆರೆಗಳ ಸಂಖ್ಯೆ

ಆಂಧ್ರದಲ್ಲಿ ನೀರು–ಚೆಟ್ಟು

ನೂತನ ಆಂಧ್ರಪ್ರದೇಶ ರಚನೆಯಾದ ನಂತರ, 2015ರಲ್ಲಿ ಅಂದಿನ ಸರ್ಕಾರವು ಆಂಧ್ರವನ್ನು ‘ಬರ ಪರಿಣಾಮ ನಿರೋಧಕ’ ರಾಜ್ಯವನ್ನಾಗಿ ರೂಪಿಸಲು ಯೋಜನೆ ಹಾಕಿಕೊಂಡಿತು. ವಿಶ್ವ ಬ್ಯಾಂಕ್ ಯೋಜನೆಯ ಮಾದರಿಯಲ್ಲೇ, ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಯೋಜನೆಯನ್ನು ರೂಪಿಸಿತು. ಈ ಯೋಜನೆಗೆ ಆಂಧ್ರಪ್ರದೇಶ ಸರ್ಕಾರ ಇಟ್ಟ ಹೆಸರು ‘ನೀರು–ಚೆಟ್ಟು’.

ರಾಜ್ಯದ ಕಡಿಮೆ ಮಳೆಯ ಮತ್ತು ಬರಪೀಡಿತ ಪ್ರದೇಶಗಳ ಕೃಷಿ ಜಮೀನುಗಳಿಗೆ ನೀರಾವರಿ, ಕುಡಿಯುವ ಮತ್ತು ಕೈಗಾರಿಕೆಯ ಉದ್ದೇಶಕ್ಕೆ ಅಗತ್ಯವಾದ ನೀರನ್ನು ಒದಗಿಸುವುದು ಈ ಯೋಜನೆಯ ಮೂಲ ಉದ್ದೇಶವಾಗಿತ್ತು. ಇಡೀ ರಾಜ್ಯಕ್ಕೆ ಯೋಜನೆಯನ್ನು ವಿಸ್ತರಿಸುವುದರಿಂದ ಆಯಾ ಪ್ರದೇಶವು ನೀರಿನ ಅಗತ್ಯಕ್ಕಾಗಿ ಸ್ವಾವಲಂಬನೆ ಸಾಧಿಸುವುದು ಯೋಜನೆಯ ಉದ್ದೇಶವಾಗಿತ್ತು. ದೊಡ್ಡ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳ ವ್ಯಾಪ್ತಿಯಿಂದ ಹೊರಗೆ ಉಳಿದ ಪ್ರದೇಶಗಳಿಗೂ ನೀರಾವರಿ ಒದಗಿಸುವುದು, ರಾಜ್ಯದಲ್ಲಿ ಹಸಿರಿನ ಪ್ರಮಾಣವನ್ನು ಹೆಚ್ಚಿಸುವುದು ಮತ್ತು ಕಡಿಮೆ ನೀರನ್ನು ಬಳಸಿಕೊಂಡು ಹೆಚ್ಚು ಇಳುವರಿ ಪಡೆಯುವುದೂ ಈ ಯೋಜನೆಯ ಪ್ರಮುಖ ಗುರಿಗಳಾಗಿದ್ದವು.

ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಚೆಕ್‌ಡ್ಯಾಂಗಳು, ನದಿ–ತೊರೆ ಪಾತ್ರಗಳಲ್ಲಿ ಇಂಗು ಗುಂಡಿಗಳನ್ನು ನಿರ್ಮಿಸಲಾಯಿತು. ಎಲ್ಲಾ ಕೆರೆಗಳ ಏರಿಗಳನ್ನು ಸರಿಪಡಿಸಲಾಯಿತು. ಹೂಳು ತೆಗೆದು ಕೆರೆಯ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಯಿತು. ಎಲ್ಲಾ ಕೆರೆಗಳ ಮಧ್ಯೆ ಸಂಪರ್ಕ ಕಲ್ಪಿಸುವ ಕಾಲುವೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಯಿತು. ಕಾಲುವೆಗಳ ಒತ್ತುವರಿಯನ್ನು ತೆರವು ಮಾಡಲಾಯಿತು. ನೀರು ಹೆಚ್ಚು ಇರುವ ಪ್ರದೇಶದಲ್ಲಿನ ನೀರನ್ನು ಕಡಿಮೆ ನೀರಿನ ಪ್ರದೇಶದ ಕೆರೆಗಳಿಗೆ ಹರಿಸಲು ಹೊಸ ಕಾಲುವೆಗಳನ್ನು ನಿರ್ಮಿಸಲಾಯಿತು. ಯೋಜನೆಯ ಭಾಗವಾಗಿ ಈಗ 40,000ಕ್ಕೂ ಹೆಚ್ಚು ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಜತೆಗೆ ಬಾವಿ, ಕಟ್ಟೆ, ಕಲ್ಯಾಣಿಗಳನ್ನು ಪುನಶ್ಚೇತನಗೊಳಿಸಲಾಗಿದೆ.

2015ರ ನಂತರ ಬಂದ ಎಲ್ಲಾ ಸರ್ಕಾರಗಳೂ ಈ ಯೋಜನೆಯನ್ನು ಮುಂದುವರಿಸಿಕೊಂಡು ಬಂದಿವೆ. ಈಗಿನ ಸರ್ಕಾರವು ಗೋದಾವರಿ ನದಿಯಿಂದ ಕೃಷ್ಣಾ ನದಿಗೆ ನೀರು ಹರಿಸುವ ಯೋಜನೆಯನ್ನು ಅನುಷ್ಠಾನ ಮಾಡಿದೆ.

ಆಧಾರ: ವಿಶ್ವಬ್ಯಾಂಕ್ ವರದಿ, ಕೇಂದ್ರ ಸರ್ಕಾರದ ಜಲಮೂಲ ಗಣತಿ ವರದಿ, ತೆಲಂಗಾಣ ಜಲಸಂಪನ್ಮೂಲ ಇಲಾಖೆ ವರದಿಗಳು, ಆಂಧ್ರಪ್ರದೇಶ ಜಲಸಂಪನ್ಮೂಲ ಇಲಾಖೆ ವರದಿಗಳು

ಸಿನಿ ಬಿಟ್ಸ್

ನಾಗಶ್ರೀ ಬೇಗಾರ್

ಅ.6ಕ್ಕೆ ಜಲಪಾತ ಬಿಡುಗಡೆ

ರಜನೀಶ್ ಹಾಗೂ ನಾಗಶ್ರೀ ಬೇಗಾರ್ ನಟಿಸಿರುವ ‘ಜಲಪಾತ’ ಸಿನಿಮಾ ಅ.6ರಂದು ಬಿಡುಗಡೆಯಾಗಲಿದೆ. ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಗಿದೆ.

‘ಪದವಿ ಪೂರ್ವ’ ಸಿನಿಮಾದಲ್ಲಿ ಪ್ರಮುಖ ಪಾತ್ರವೊಂದರಲ್ಲಿ ರಜನೀಶ್ ನಟಿಸಿದ್ದರು. ಅದೇ ಸಿನಿಮಾದಲ್ಲಿ ನಾಯಕನಾಗಿ ನಟಿಸಿದ್ದ ಪೃಥ್ವಿ ಶಾಮನೂರು ಟ್ರೈಲರ್ ಅನಾವರಣಗೊಳಿಸಿದ್ದು ವಿಶೇಷವಾಗಿತ್ತು. ‘ಜಲಪಾತ’ ಸಿನಿಮಾ ಮೂಲಕ ರಜನೀಶ್ ನಾಯಕನಾಗಿ ಬೆಳ್ಳಿಪರದೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಚಿತ್ರವನ್ನು ರಮೇಶ್ ಬೇಗಾರ್ ನಿರ್ದೇಶಿಸಿದ್ದಾರೆ. ಟಿ.ಎಸ್. ರವೀಂದ್ರ ತುಂಬರಮನೆ ನಿರ್ಮಿಸಿದ್ದಾರೆ. ಮಲೆನಾಡ ಪರಿಸರ ಹಾಗೂ ಅಲ್ಲಿನ ಸಮಸ್ಯೆಗಳನ್ನು ಸಿನಿಮಾ ಪ್ರದರ್ಶಿಸಲಿದ್ದು, ‘ನನಗೆ ಪರಿಸರದ ಬಗ್ಗೆ ಕಾಳಜಿ ಹೆಚ್ಚು. ರಮೇಶ್ ಬೇಗಾರ್ ಅವರ ಕಥೆ ಇಷ್ಟವಾಗಿ ಈ ಸಿನಿಮಾ ನಿರ್ಮಾಣ ಮಾಡಿದ್ದೇನೆ’ ಎನ್ನುತ್ತಾರೆ ರವೀಂದ್ರ.

‘ಮಲೆನಾಡನ್ನು ಕೇವಲ ಪ್ರವಾಸಿ ತಾಣವಾಗಷ್ಟೇ ನೋಡುತ್ತಿದ್ದೇವೆ. ಆದರೆ ಅಲ್ಲಿನ ಸಂಸ್ಕೃತಿಯ ಪರಿಚಯದ ಜೊತೆಗೆ ಸಮಸ್ಯೆಗಳನ್ನು ತೋರಿಸುವ ಪ್ರಯತ್ನ ಈ ಚಿತ್ರದಲ್ಲಾಗಿದೆ’ ಎನ್ನುತ್ತಾರೆ ನಾಗಶ್ರೀ. ನಟ ಪ್ರಮೋದ್ ಶೆಟ್ಟಿ ಅವರೂ ಈ ಸಿನಿಮಾದಲ್ಲಿ ಬಣ್ಣಹಚ್ಚಿದ್ದಾರೆ. ಸಾಧ್ವಿನಿ ಕೊಪ್ಪ ಅವರ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ತ್ರಿಕೋನ ಪ್ರೇಮಕಥೆಯ ‘ಅಭಿರಾಮಚಂದ್ರ’

ನಾಗೇಂದ್ರ ಗಾಣಿಗ ನಿರ್ದೇಶನ ‘ಅಭಿರಾಮಚಂದ್ರ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದ್ದು, ಅ.6ರಂದು ಚಿತ್ರ ತೆರೆಕಾಣುತ್ತಿದೆ. ನಟರಾದ ಪ್ರಮೋದ್ ಶೆಟ್ಟಿ ಹಾಗೂ ದೀಕ್ಷಿತ್ ಶೆಟ್ಟಿ ಇತ್ತೀಚೆಗೆ ಸಿನಿಮಾದ ಟ್ರೈಲರ್ ಬಿಡುಗಡೆಗೊಳಿಸಿದರು.

ಬಾಲ್ಯದ ಸ್ನೇಹ, ಪ್ರೀತಿ ಹಾಗೂ ತ್ರಿಕೋನ ಪ್ರೇಮಕಥೆಯನ್ನು ಚಿತ್ರ ಒಳಗೊಂಡಿದೆ. ‘ಕಿರಿಕ್ ಪಾರ್ಟಿ’ ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದ ನಾಗೇಂದ್ರ ಅವರ ನಿರ್ದೇಶನದ ಚೊಚ್ಚಲ ಸಿನಿಮಾ ಇದು.

‘ಈ ಚಿತ್ರ ಆರಂಭದಿಂದ ಇಲ್ಲಿಯವರೆಗೂ ಬೆನ್ನೆಲುಬಾಗಿ ನಿಂತವರು ಸಂಗೀತ ನಿರ್ದೇಶಕ ರವಿ ಬಸ್ರೂರ್. ಅವರು ಈ ಚಿತ್ರಕ್ಕೆ ಹಣ ಹಾಕಿದ್ದಾರೆ. ಸಂಗೀತ ಒದಗಿಸಿದ್ದಾರೆ. ಪ್ರಮೋದ್ ಶೆಟ್ಟಿ, ರಿಷಬ್ ಶೆಟ್ಟಿ ಅವರು ನಮಗೆ ಜೊತೆಯಾಗಿದ್ದಾರೆ. ನಾನು ‘ಅಭಿ’ ಎಂಬ ಪಾತ್ರ ಮಾಡಿದ್ದು, ನನ್ನ ಬಾಲ್ಯದ ಪಾತ್ರವನ್ನು ರವಿ ಬಸ್ರೂರ್ ಅವರ ಮಗ ಮಾಡಿದ್ದಾನೆ’ ಎಂದರು ನಟ ರಥ ಕಿರಣ್. ಚಿತ್ರದಲ್ಲಿ ನಾಯಕಿಯಾಗಿ ಶಿವಾನಿ ರೈ ನಟಿಸಿದ್ದು, ಇದು ಅವರ ಮೊದಲ ಸಿನಿಮಾ. ಸಿನಿಮಾದಲ್ಲಿ ರಥ ಕಿರಣ್, ಸಿದ್ದು ಮೂಲಿಮನಿ, ನಾಟ್ಯರಂಗ ಮುಖ್ಯ ಭೂಮಿಕೆಯಲ್ಲಿದ್ದಾರೆ. ವೀಣಾ ಸುಂದರ್, ಸುಂದರ್, ಎಸ್. ನಾರಾಯಣ್, ಪ್ರಕಾಶ್ ತುಮ್ಮಿನಾಡು ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘**ಭಾರತದಲ್ಲಿ** ಮಾತ್ರವೇ ದೇವಾಲಯಗಳಿಗೆ ತೆರಿಗೆ ವಿಧಿಸಲಾಗುತ್ತದೆ ಮತ್ತು ಮಸೀದಿ, ಚರ್ಚ್‌ಗಳಿಗೆ ಯಾವುದೇ ರೀತಿಯ ತೆರಿಗೆ ವಿಧಿಸುವುದಿಲ್ಲ. ಈ ತೆರಿಗೆ ರಾಜಕಾರಣದಿಂದ ನಮ್ಮ ದೇವಾಲಯಗಳನ್ನು ಮುಕ್ತಗೊಳಿಸಿ’ ಎಂದು ಕರೆ ನೀಡುವ ಸಂದೇಶ ಸಾಮಾಜಿಕ ಜಾಲತಣಗಳಲ್ಲಿ ಹರಿದಾಡುತ್ತಿದೆ. ಇದರ ಜತೆಯಲ್ಲಿ ಪೋಸ್ಟರ್‌ಗಳನ್ನೂ ಹಂಚಿಕೊಳ್ಳಲಾಗುತ್ತಿದೆ. ಆದರೆ ಇದು ಸುಳ್ಳು ಸುದ್ದಿ.

ಕೇಂದ್ರ ನೇರ ತೆರಿಗೆ ಮಂಡಳಿಯು ದೇಶದ ಯಾವುದೇ ಧಾರ್ಮಿಕ ಟ್ರಸ್ಟ್ ಮತ್ತು ಸಂಸ್ಥೆಗಳಿಗೂ ಜಿಎಸ್‌ಟಿಯಿಂದ ವಿನಾಯಿತಿ ಇಲ್ಲ ಎಂದು ಘೋಷಿಸಿದೆ. ಯಾವುದೇ ಧಾರ್ಮಿಕ ಸಂಸ್ಥೆ ಅಥವಾ ಟ್ರಸ್ಟ್ ಯಾವುದಾದರೂ ಸೇವೆಯನ್ನು ನೀಡುತ್ತಿದ್ದರೆ, ಭಕ್ತರಿಗೆ ಸಾರಿಗೆ ಸೇವೆಯನ್ನು ಒದಗಿಸುತ್ತಿದ್ದರೆ, ಶುಲ್ಕ ಪಡೆದು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಿದ್ದರೆ ಅದರಲ್ಲಿ ಬರುವ ವರಮಾನದ ಮೇಲೆ ಜಿಎಸ್‌ಟಿ ಕಟ್ಟಬೇಕು. ಧಾರ್ಮಿಕ ಸಂಸ್ಥೆಗಳು ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಿ ಮಳಿಗೆಗಳನ್ನು ಬಾಡಿಗೆಗೆ ನೀಡಿದ್ದರೆ, ಲಾಡ್ಜ್‌ಗಳನ್ನು ನಿರ್ಮಿಸಿ ಕೊಠಡಿಗಳನ್ನು ಬಾಡಿಗೆಗೆ (ದಿನಕ್ಕೆ ಕನಿಷ್ಠ ₹1,000 ಬಾಡಿಗೆ) ಮತ್ತು ಸಭಾಂಗಣಗಳನ್ನು ನಿರ್ಮಿಸಿ ಬಾಡಿಗೆಗೆ (ದಿನದ ಕಾರ್ಯಕ್ರಮವೊಂದಕ್ಕೆ ₹10,000ಕ್ಕಿಂತಲೂ ಹೆಚ್ಚು ಬಾಡಿಗೆ) ನೀಡುತ್ತಿದ್ದರೆ ಆ ವರಮಾನದ ಮೇಲೆ ಜಿಎಸ್‌ಟಿ ಪಾವತಿಸಬೇಕು ಎಂದು ಜಿಎಸ್‌ಟಿ ಮಂಡಳಿ ಹೇಳುತ್ತದೆ. ದೇವಾಲಯಗಳಿಗೆ ಮಾತ್ರ ತೆರಿಗೆ, ಮಸೀದಿ ಮತ್ತು ಚರ್ಚ್‌ಗಳಿಗೆ ತೆರಿಗೆ ವಿಧಿಸುತ್ತಿಲ್ಲ ಎಂಬುದು ಸುಳ್ಳುಸುದ್ದಿ. ಇಂತಹ ಸುಳ್ಳುಸುದ್ದಿಯನ್ನು ಹಂಚಿಕೊಳ್ಳಬೇಡಿ ಎಂದು ಕೇಂದ್ರ ಹಣಕಾಸು ಸಚಿವಾಲಯ ಸಹ ಪ್ರಕಟಣೆ ಹೊರಡಿಸಿದೆ. ಈ ಸಂಬಂಧ ದಿ ಕ್ವಿಂಟ್, ಆಲ್ಟ್‌ನ್ಯೂಸ್, ಕೇಂದ್ರ ಸರ್ಕಾರದ ಪಿಐಬಿ ಸಹ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.

ಗುಂಡಣ್ಣ

ನುಡಿ ಬೆಳಗು

ಒಳಿತಿನ ಆಯ್ಕೆ



ಪಿ. ಚಂದ್ರಿಕಾ

ಪರಿವರ್ತನಾ ಶಿಬಿರದಲ್ಲಿ ಅಪರಾಧಿಯೊಬ್ಬ ತಾನು ಮಾಡಿದ ಎಲ್ಲ ತಪ್ಪುಗಳು ತಾನು ಹುಡುಕಿ ಹೋಗಿ ಮಾಡಿದ್ದಲ್ಲ, ಅವೇ ತನ್ನನ್ನು ಹುಡುಕಿ ಬಂದದ್ದು ಎಂದ ಜೈಲಿನ ಅಧಿಕಾರಿಯ ಮುಂದೆ. ‘ನಿಜ ಅವು ನಿನ್ನ ಹುಡುಕಿ ಬಂದರೆ ನೀನು ಅದನ್ನು ತಿರಸ್ಕರಿಸಬಹುದಿತ್ತಲ್ಲ’ ಎಂದ ಅಧಿಕಾರಿ. ಅಪರಾಧಿ ಹೇಳಿದ ‘ಅದು ಹೇಳುವಷ್ಟು ಸುಲಭ ಅಲ್ಲ’. ಅಧಿಕಾರಿ ಹೇಳಿದ ‘ನಿಜ ಅದು ಸುಲಭವಲ್ಲ, ಯಾಕೆಂದರೆ ಯಾವುದು ಬೇಕು ಮತ್ತು ಯಾವುದು ಬೇಡ ಎನ್ನುವುದು ನಮ್ಮದೇ ಆಯ್ಕೆ’.

‘ಅದು ಹೇಗೆ? ನೀವು ಹೇಳುವಷ್ಟು ಸರಳ ಯಾವುದೂ ಅಲ್ಲ’ ಎಂದ ಅಪರಾಧಿ ತನ್ನನ್ನು ಸಮರ್ಥಿಸಿಕೊಳ್ಳುವ ರೀತಿಯಲ್ಲಿ. ಅಧಿಕಾರಿ ನಕ್ಕ. ‘ಏಳಂತಸ್ತಿನ ಮಹಡಿಯ ಅಡುಗೆ ಮನೆಯಲ್ಲಿ ಒಂದು ಬೆಲ್ಲದ ತುಂಡಿದೆ. ನೆಲದ ಮೇಲಿದ್ದ ಇರುವೆಗೆ ಅಲ್ಲೊಂದು ಬೆಲ್ಲದ ತುಂಡಿದೆ ಎಂದು ತಿಳಿಯಬಲ್ಲದೇ’ ಎಂದ ಅಧಿಕಾರಿ. ಅಪರಾಧಿ ಹೇಳಿದ ‘ಹೌದು ತಿಳಿಯಬಲ್ಲದು’ ಎಂದು.

ಅಧಿಕಾರಿ ಕೇಳಿದ ‘ಹಾಗಾದರೆ ಆ ಇರುವೆ ಏಳಂತಸ್ತನ್ನು ಏರಿ ಅದನ್ನು ತಿನ್ನಬಲ್ಲದೇ’ ಎಂದು. ‘ಹೌದು ಹೌದು ಅದು ತನ್ನ ಪ್ರಯತ್ನದಿಂದ ಏಳಂತಸ್ತನ್ನು ಏರಿ ಅದನ್ನು ತಿನ್ನಬಲ್ಲದು ಎನ್ನುವುದನ್ನು ಪುಟ್ಟ ಹುಡುಗನೂ ಹೇಳಬಲ್ಲ’ ಎಂದ ಅಪರಾಧಿ.

‘ಒಂದು ಇರುವೆಗೆ ಏಳಂತಸ್ತಿನ ಮಹಡಿಯ ಅಡುಗೆ ಮನೆಯಲ್ಲಿ ಸಿಹಿಯಿದೆ. ಅದನ್ನು ತನ್ನ ಪ್ರಯತ್ನದಿಂದ ಹುಡುಕಿ ತಿನ್ನಬಲ್ಲೆ, ದಕ್ಕಿಸಿಕೊಳ್ಳಬಲ್ಲೆ ಎಂಬುದು ಸಾಧ್ಯವಾಗುತ್ತದೆ ಎಂದಾದರೆ ಇಷ್ಟೆಲ್ಲ ತಿಳಿವಳಿಕೆ ಇರುವ ನೀನು ಒಳಿತನ್ನು ಹುಡುಕಿ ಹೋಗಿ, ಅದನ್ನು ನಿನ್ನದನ್ನಾಗಿ ಮಾಡಿಕೊಳ್ಳಲಾರೆಯಾ’ ಎಂದ ಅಧಿಕಾರಿಯ ಮಾತಿಗೆ ಅಪರಾಧಿ ತಲೆ ತಗ್ಗಿಸಿದ.

ಒಳ್ಳೆಯದಾಗಿ ಬದುಕಬೇಕು ಎಂದರೆ ಅದು ನಮ್ಮ ಬಳಿ ಬಾರದೇ ಹೋಗಬಹುದು, ಆದರೆ ನಾವು ಅದನ್ನು ಹುಡುಕಬಹುದು. ವಿವೇಚನೆಯ ಶಕ್ತಿ ದೊಡ್ಡದು ಎಂದ ಅಧಿಕಾರಿಯ ಮಾತಿಗೆ ಅಪರಾಧಿ ತಲೆತಗ್ಗಿಸಿದ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಸೆಪ್ಟೆಂಬರ್ 26, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದ್ವಾದಶಿ ಗಂ. 25-46 ನಕ್ಷತ್ರ: ಶ್ರವಣ ಗಂ. 09-42 ಯೋಗ: ಸುಕರ್ಮ ಗಂ. 11-45 ಕರಣ: ಬವ ಗಂ. 15-26, ಕನ್ಯಾ ಮಾಸದ 09 ನೇ ದಿನ, ಮಳೆನಕ್ಷತ್ರ: ಉತ್ತರ ಫಲ್ಗುಣಿ 4. ರಾಹುಕಾಲ : ಮಧ್ಯಾಹ್ನ 03-00 – 04-30, ಸೂರ್ಯೋದಯ : 06-23 ಸೂರ್ಯಾಸ್ತ : 06-21, ಮುಸ್ಲಿಂ ದಿನಾಂಕ : 10 ರಬೀಉಲ್ಲಾವಲ್, ದಿನ ವಿಶೇಷ : ಪಾರ್ಶ್ವ ಪರಿವರ್ತಿನಿ ಏಕಾದಶಿ (ವೈಷ್ಣವ ಮತ್ತು ವಿಧವಾ), ಹೈಕ್ರ ಹಿಟುಂಬ (ಮಣಿಪುರ), ಶ್ರವಣ ದ್ವಾದಶಿ, ವಾಮನ ಜಯಂತಿ, ಸಕ್ರೋತ್ಥಾನ, ಅದೃಷ್ಟ ಸಂಖ್ಯೆ : 5, 4

ಮೇಷ: ಸೌಜನ್ಯತೆ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರುಗು ನೀಡಲಿದೆ. ಕೋರ್ಟಿನಲ್ಲಿರುವ ಹಳೆಯ ವಾಜ್ಯಗಳು ಇಂದು ಮುಕ್ತಾಯಗೊಳ್ಳುವ ಸಂಭವ ಹೆಚ್ಚಾಗಿರುವುದು. ಮಕ್ಕಳಿಗೆ ವಿದೇಶದಲ್ಲಿ ಶಿಕ್ಷಣ ಕೊಡಿಸಲು ಸಂಘಗಳು ನೆರವಾಗುವುದು.

ವೃಷಭ: ಬಹಳ ದಿನದ ಉಳಿತಾಯದ ಹಣವನ್ನು ಸುವ್ಯವಸ್ಥಿತವಾಗಿ ಇರಿಸಲು ಬೇಕಾದ ಮಾರ್ಗ ತಿಳಿದುಕೊಳ್ಳಿ. ನಿಶ್ಚಿತ ಗುರಿ ಸಾಧಿಸಲು ಬಹಳ ಶ್ರಮಪಡ ಬೇಕಾಗಿಲ್ಲ. ಮಕ್ಕಳೊಡನೆ ಉಪಯುಕ್ತ ಸಮಯ ಕಳೆಯುವಿರಿ.

ಮಿಥುನ: ತೋಟ ಮತ್ತು ಎಸ್ಟೇಟ್ ಕೆಲಸಗಾರರಿಗೆ ಉದ್ಯೋಗದಲ್ಲಿ ಭಯ ಹುಟ್ಟುವಂಥ ಘಟನೆ ಈ ದಿನ ನಡೆಯಬಹುದು. ಯತ್ನಿಸಿದ ಕಾರ್ಯಗಳೆಲ್ಲ ಸಿದ್ಧಿಸುವುದರಿಂದ ಸಂತೋಷ ಇರಲಿದೆ. ಆರ್ಥಿಕ ಕಷ್ಟ ನಿವಾರಣೆಯಾಗಲಿದೆ.

ಕರ್ಕಾಟಕ: ಸೂಕ್ಷ್ಮವಾಗಿ ಯೋಚಿಸಿ ಅಥವಾ ಮಾರ್ಗದರ್ಶನ ಪಡೆದು ಕಾರ್ಯದಲ್ಲಿ ಮುನ್ನುಗ್ಗಿ. ಮಿತ್ರರೊಡನೆ ಸಂತಸ ಕ್ಷಣಗಳನ್ನು ಹಂಚಿಕೊಳ್ಳುವಿರಿ. ದುರ್ಗಾಪರಮೇಶ್ವರಿಯ ದರ್ಶನದಿಂದ ಎಲ್ಲಾ ಒಳ್ಳೆಯದಾಗುವುದು.

ಸಿಂಹ: ಲೇವಾದೇವಿ ವ್ಯವಹಾರ ಮಾಡುವವರು ಸಾಲ ಕೊಡುವ ಬಗ್ಗೆ ಯೋಚಿಸಿ ಮುಂದುವರಿಯುವುದು ಉತ್ತಮವೆನಿಸುವುದು. ಸತ್ಫಲಗಳನ್ನು ಅನುಭವಿಸಲು ಶ್ರೀಲಕ್ಷ್ಮಿನರಸಿಂಹಸ್ವಾಮಿಯ ಸೇವೆಯು ಅನುಕೂಲವಾಗಲಿದೆ.

ಕನ್ಯಾ: ಮಿತ್ರರಲ್ಲಿ ಸ್ನೇಹವೂ, ಬಂಧುಗಳಲ್ಲಿ ಸಂಬಂಧವನ್ನು ಉಳಿಸಿಕೊಂಡು ಹೋಗುವುದು ಇಹಕ್ಕೂ ಹಾಗೂ ಪರಕ್ಕೂ ಒಳಿತು ಉಂಟು ಮಾಡುತ್ತದೆ. ಬ್ಯಾಂಕಿನ ಕೆಲಸಗಾರರು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿ.

ತುಲಾ: ಕಾರ್ಖಾನೆ ಮತ್ತು ಭೂ ಸಂಬಂಧಿತ ವ್ಯವಹಾರ ನಡೆಸುವವರಿಗೆ ಕಾರ್ಯ ಚುರುಕು ಗತಿಯಲ್ಲಿ ಸಾಗಲಿದೆ. ಬಂಧುಮಿತ್ರರೊಡನೆ ಸಂತೋಷದ ಕ್ಷಣಗಳನ್ನು ಹಂಚಿಕೊಳ್ಳುವ ಅವಕಾಶ ಸಿಗಲಿದೆ. ರೇಷ್ಮೆ ಬೆಳೆಗಾರರಿಗೆ ಲಾಭ ಆಗುತ್ತದೆ.

ವೃಶ್ಚಿಕ: ಲೇಖನ ಬರಹಗಾರರಿಗೆ ಕೀರ್ತಿ ಅರಸಿ ಬರುವುದು, ಆದರೂ ಬದುಕಿನಲ್ಲಿ ಸ್ಥಿರತೆಯ ಅಭಾವ ಕಾಣಲಿದೆ. ವ್ಯಾಪಾರ ವಾಣಿಜ್ಯ ಸಂಬಂಧ ಹೆಚ್ಚಿಸಿಕೊಳ್ಳಲು ಪ್ರಯಾಣ ಬೆಳೆಸುವಿರಿ. ವೈವಾಹಿಕ ಜೀವನದಲ್ಲಿ ನೆಮ್ಮದಿ ಇರಲಿದೆ.

ಧನು: ರಾಜಕೀಯ ಭವಿಷ್ಯಕ್ಕೆ ಪಕ್ಷದ ಧುರೀಣರ ಮಾತಿನಂತೆ ನಡೆಯುವುದರಿಂದ ಅನುಕೂಲ ಕಾಣುವಿರಿ. ಕೋರ್ಟು ಕಚೇರಿಗಳಲ್ಲಿ ಕೆಲಸಗಳಿಗೆ ಅಲೆದಾಟ ಕಡಿಮೆಯಾಗುವುದು.

ಮಕರ: ಪಾತ್ರೆ ಮಾರಾಟ ಮಾಡುವವರಿಗೆ, ಅದರಲ್ಲೂ ತಾಮ್ರ, ಹಿತ್ತಾಳೆಯ ದೇವರ ಪೂಜಾ ಪಾತ್ರೆಯ ಮಾರಾಟಗಾರರಿಗೆ ಅಧಿಕ ಲಾಭವಿರುವುದು. ಕ್ರೀಡಾಪಟುಗಳಿಗೆ ಅಭ್ಯಾಸದ ಕೊರತೆಯು ವೈಫಲ್ಯಕ್ಕೆ ಕಾರಣವಾಗುವುದು.

ಕುಂಭ: ರಾಜಕೀಯದಲ್ಲಿ ತಮ್ಮವರಿಂದಲೇ ತೋರಿ ಬರುವ ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಸೂಕ್ತ. ನೂತನ ವಾಹನ ಕೊಳ್ಳುವುದನ್ನು ಮುಂದೂಡಿ.

ಮೀನ: ಕುಟುಂಬದಲ್ಲಿ ನೆಮ್ಮದಿ ಕಾಪಾಡಿಕೊಳ್ಳಲು ಹೆಂಡತಿಯ ಮಾತುಗಳಿಗೆ ಪ್ರಾಮುಖ್ಯ ನೀಡಿರಿ. ಉದ್ಯೋಗದಲ್ಲಿ ನಿಮ್ಮ ಕ್ರಿಯಾಶೀಲತೆಯಿಂದ ಹೆಚ್ಚು ಮೆರೆಯುವಿರಿ. ಪ್ರವೃತ್ತಿಯಾಗಿ ಕೃಷಿ ಮಾಡುವ ಬಗ್ಗೆ ಒಲವು ಹೆಚ್ಚಲಿದೆ.

ಪದಬಂಧ 5452

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಪೈರು ಕೊಯ್ಯುವುದು(3)
4.ಕೊನೆಗೆ ವೃಕ್ಷವಿದ್ದಾಗ ಕ್ಷಾಮ ಆವರಿಸಿತಲ್ಲಾ!(3)
5.ಸ್ವಂತ ಅನುಭವಕ್ಕೆ ಬಂದಿರುವ ತಿಳಿವು(4)
6.ನಡುವೆ ಪತ್ರ ಬಂದದಕ್ಕೇ ಈ ತೊಂದರೆ!(4)
7.ನಡುಗುವುದನ್ನ ನೋಡಿದಾಗ ಉಕ್ಕಿದ ಮಂದಹಾಸ(2)
9.ತರತಮ ಮಾಡಿದಾಗ ಆವರಿಸಿದ ಕತ್ತಲು(2)
13.ಕಳವಳ ಹೀಗೆ ಬಂದಿದೆ (4)
14.ಹಾರ ಹಿಡಿದುಕೊಂಡಿರುವ ದ್ವಾರಪಾಲಕ (4)
15.ದನಕರುಗಳ ಮೂತ್ರ(3)
16.ಹದ್ದಿನ ಜಾತಿಗೆ ಸೇರಿದ ಪಕ್ಷಿ(3)

ಮೇಲಿಂದ ಕೆಳಕ್ಕೆ
1.ಗಾದೆಯಂತೆ ಗಡಿಗೆ ತುಪ್ಪ ತಿನ್ನಲು ಮಾಡಬೇಕಾದ್ದು! (4)
2.ಕೈಯನ್ನು ತಟ್ಟುವಿಕೆ(5)
3.ಅನುಭೂತಿಗಾಗಿ ಧರಿಸಿರುವ ಭಸ್ಮ!(3)
5.ಕಬ್ಬಿಣವನ್ನು ಆಕರ್ಷಿಸುವ ಗುಣ ಇದಕ್ಕಿದೆ(4)
8.ಆಚಾರ್ಯನಿಂದ ಮಹತ್ತರವಾದುದು ಬಂದಿದೆ (4)
10.ಅಳಿಯನನ್ನು ಹೀಗೆನ್ನಿ(5)
11.ಮರ ಬಳ್ಳಿ ಇಲ್ಲಿ ಕಾಣುತ್ತಿವೆ(4)
12.ಇದು ಗುರುತು(3)

5451ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆನಂದ 5.ಶತಮಾನ
6.ರಥೋತ್ಸವ 8.ಶಕುನಿ
11.ಕದಪು 13.ವನಸುಮ
17.ದನಗಾಹಿ 18.ತರಂಗ

ಮೇಲಿಂದ ಕೆಳಕ್ಕೆ:
1.ಆಚಾರ್ಯ 2.ದಶಮಾಂಶ
3.ವಾನರ 4.ಭೀಭತ್ಸ 7.ವರ್ಣನೆ
9.ನಿಷೇಕ 10.ಬಡವ
12.ಪುರೋಹಿತ
14.ನಲ್ನುಡಿ 15.ಮದನ
16.ಉರಗ

ಸುಡೊಕು 5838

8		2		4		1		5
	1		8		9		6	
9		6			7	2		4
			1	6				
	2			7	3	8		6
				8				
		8		9	2	5		1
1	9	5	7				4	
2		3		5	1	9		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5837 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ಷೇರುಪೇಟೆ ವಹಿವಾಟು

ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	19,674.25
ಇಂದಿನ ಅಂತ್ಯ	19,674.55
▲	0.30
ದಿನದ ಗರಿಷ್ಠ	19,734

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1770 (-)
ಸೋಯಾ (ರಿಫೈನ್ಡ್)	₹870 (-)
ಸೂರ್ಯಕಾಂತಿ (ರಿಫೈನ್ಡ್)	₹870 (-)
ಪಾಮೋಲಿನ್	₹810 (-)

ವಿನಿಮಯ ದರ

$	ಡಾಲರ್	83.13
£	ಪೌಂಡ್	101.55
€	ಯುರೊ	88.35
¥	ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹7200-8226
ತುರುವೇಕೆರೆ	₹8200-8200

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹142.50
ಆರ್‌ಎಸ್‌ಎಸ್-5	₹136.50
ಗುಡ್ ಲಾಟ್	₹125

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹263-508
ದ್ವಿತಳಿ (ಬಿ.ವಿ)	₹288-612

ನಗರ ಸಹಕಾರ ಬ್ಯಾಂಕ್ ಎನ್‌ಪಿಎ: ದಾಸ್ ಅತೃಪ್ತಿ

ಮುಂಬೈ (ಪಿಟಿಐ): ನಗರ ಸಹಕಾರ ಬ್ಯಾಂಕ್‌ಗಳಲ್ಲಿ ಇರುವ ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 8.7ರಷ್ಟು ಇದ್ದು, ಸಹಿಸಿಕೊಳ್ಳಬಹುದಾದ ಮಟ್ಟದಲ್ಲಿ ಇಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಸೋಮವಾರ ಹೇಳಿದ್ದಾರೆ.

ಆರ್‌ಬಿಐ ಆಯೋಜಿಸಿದ್ದ ಸಮಾವೇಶದಲ್ಲಿ ನಗರ ಸಹಕಾರಿ ಬ್ಯಾಂಕ್‌ಗಳ ನಿರ್ದೇಶಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಜಿಎನ್‌ಪಿಎ ಹೆಚ್ಚಿಗೆ ಇರುವ ಬ್ಯಾಂಕ್‌ಗಳು ಆಡಳಿತದಲ್ಲಿ ಸುಧಾರಣೆ ತಂದುಕೊಳ್ಳುವಂತೆ ಮತ್ತು ಸಾಲ ವಸೂಲಿ ಮಾಡುವ ಕಡೆಗೆ ಗಮನ ಹರಿಸುವಂತೆ ಸಲಹೆ ನೀಡಿದ್ದಾರೆ.

ವಾಣಿಜ್ಯ ಬ್ಯಾಂಕ್‌ಗಳ ಜಿಎನ್‌ಪಿಎ 2023ರ ಮಾರ್ಚ್ ಅಂತ್ಯದ ವೇಳೆಗೆ ಶೇ 3.9ರಷ್ಟು ಇದ್ದು, ದಶಕದಲ್ಲೇ ಅತ್ಯಂತ ಕಡಿಮೆ ಪ್ರಮಾಣ ಇದಾಗಿದೆ. ಈ ಪ್ರಮಾಣವು ಇನ್ನಷ್ಟು ಇಳಿಕೆ ಕಾಣುವ ಅಂದಾಜು ಮಾಡಲಾಗಿದೆ.

ಸಾಲಗಾರ ಸಾಲ ಮರುಪಾವತಿಸದೇ ಇದ್ದರೆ ಬ್ಯಾಂಕ್‌ಗೆ ಆರ್ಥಿಕ ನಷ್ಟ ಆಗುತ್ತದೆ. ಹೀಗಾಗಿ ಸಕಾಲಕ್ಕೆ ಸಾಲ ವಸೂಲಿ ಮಾಡುವ ಮೂಲಕ ಎನ್‌ಪಿಎ ಪ್ರಮಾಣ ಕಡಿಮೆ ಮಾಡಲು ಗಮನ ಹರಿಸುವಂತೆ ನಗರ ಸಹಕಾರ ಬ್ಯಾಂಕ್‌ಗಳಿಗೆ ದಾಸ್ ಸಲಹೆ ನೀಡಿದ್ದಾರೆ.

ಒಟ್ಟು ಬಾಕಿ ಇರುವ ಸಾಲದಲ್ಲಿ ಶೇ 60ರಷ್ಟು ಪಾಲು ಪ್ರಮುಖ 20 ಖಾತೆಗಳದ್ದಾಗಿದೆ. ಇದನ್ನು ವಸೂಲಿ ಮಾಡಲು ಗಮನ ಹರಿಸುವುದರಿಂದ ಒಟ್ಟಾರೆಯಾಗಿ ಎನ್‌ಪಿಎ ಸುಧಾರಿಸಲು ನೆರವಾಗುತ್ತದೆ ಎಂದು ಹೇಳಿದ್ದಾರೆ.

ಹಲವು ಸಂದರ್ಭಗಳಲ್ಲಿ ನಿಯಮಗಳ ಅನುಸರಣೆಯು ಕೇವಲ ಪುಸ್ತಕದಲ್ಲಿ ಇರುವುದು ಕಂಡುಬಂದಿದೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಯಾವುದೇ ನಿಯಮಗಳ ಅನುಸರಣೆ ಆಗುತ್ತಿರುವುದು ಕಂಡುಬರುತ್ತಿಲ್ಲ ಎಂದು ಅವರು ತಿಳಿಸಿದ್ದಾರೆ. ಆಂತರಿಕ ಲೆಕ್ಕಪರಿಶೋಧನೆ ಕಡೆಗೂ ಬ್ಯಾಂಕ್‌ಗಳು ಗಮನ ಹರಿಸಬೇಕಿದೆ ಎಂದು ಅವರು ಒತ್ತಿ ಹೇಳಿದ್ದಾರೆ.

‘ಠೇವಣಿ ರಕ್ಷಣೆ ಹೆಚ್ಚು ಪವಿತ್ರವಾದುದು’

ಜನರು ಕಷ್ಟಪಟ್ಟು ಗಳಿಸಿ ಬ್ಯಾಂಕ್‌ನಲ್ಲಿ ಇಡುವ ಠೇವಣಿ ಹಣವನ್ನು ರಕ್ಷಣೆ ಮಾಡುವುದು ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುವುದಕ್ಕಿಂತಲೂ ಹೆಚ್ಚು ಪವಿತ್ರವಾದ ಕೆಲಸ ಎಂದು ದಾಸ್ ಅಭಿಪ್ರಾಯಪಟ್ಟಿದ್ದಾರೆ.

ಠೇವಣಿ ರಕ್ಷಣೆಯು ಹೆಚ್ಚು ಮುಖ್ಯವಾಗಿದೆ. ಏಕೆಂದರೆ ಬ್ಯಾಂಕಿಂಗ್ ವ್ಯವಸ್ಥೆಯು ನಡೆಯುತ್ತಿರುವುದೇ ಠೇವಣಿಗಳಿಂದಾಗಿ. ಸಣ್ಣ ಉಳಿತಾಯಗಾರರು, ಮಧ್ಯಮ ವರ್ಗ ಮತ್ತು ನಿವೃತ್ತಿಯಾದವರು ಠೇವಣಿ ಇಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಠೇವಣಿದಾರರ ಹಣ ರಕ್ಷಿಸುವುದು ಬ್ಯಾಂಕ್‌ಗಳ ಅತಿ ಮುಖ್ಯವಾದ ಜವಾಬ್ದಾರಿ ಆಗಿದೆ. ಇದೊಂದು ಪವಿತ್ರವಾದ ಕೆಲಸ. ದೇವಸ್ಥಾನ ಅಥವಾ ಮಸೀದಿ ಅಥವಾ ಗುರುದ್ವಾರಕ್ಕೆ ಭೇಟಿ ನೀಡಿ ನಮಸ್ಕರಿಸುವ ರೀತಿಯಲ್ಲಿ ಇದು ಕೂಡಾ ಪವಿತ್ರವಾದ ಕೆಲಸ. ಅದಕ್ಕಿಂತಲೂ ಹೆಚ್ಚು ಪವಿತ್ರ ಎಂದು ಹೇಳಲು ಬಯಸುತ್ತೇನೆ ಎಂದಿದ್ದಾರೆ.

ಸಹಕಾರಿ ಬ್ಯಾಂಕ್‌ಗಳಲ್ಲಿ ಆಡಳಿತ ಮಂಡಳಿಯ ಅವ್ಯವಸ್ಥೆಯಿಂದಾಗಿ ಠೇವಣಿದಾರರು ಬ್ಯಾಂಕ್‌ನಿಂದ ತಮ್ಮ ಹಣ ಪಡೆಯಲು ಆಗುತ್ತಿಲ್ಲ. ಇಂತಹ ಹಲವು ಪ್ರಕರಣಗಳಾಗಿವೆ ಎಂದು ದಾಸ್ ಹೇಳಿದ್ದಾರೆ.

₹59,760 ಕೋಟಿ ಮೊತ್ತದ ಬಡ್ಡಿ ಸಹಾಯಧನ: ಮೂಲಗಳ ಮಾಹಿತಿ

ಕೇಂದ್ರದಿಂದ ಗೃಹ ಸಾಲ ಯೋಜನೆ?

ನವದೆಹಲಿ/ಮುಂಬೈ (ರಾಯಿಟರ್ಸ್): ನಗರ ಪ್ರದೇಶಗಳಲ್ಲಿ ಸಣ್ಣ ಮನೆಗಳ ನಿರ್ಮಾಣಕ್ಕಾಗಿ ಮುಂದಿನ ಐದು ವರ್ಷಗಳಲ್ಲಿ ₹59,760 ಕೋಟಿ ಮೊತ್ತದ ಬಡ್ಡಿ ಸಹಾಯಧನದ ಗೃಹ ಸಾಲ ಯೋಜನೆ ಜಾರಿಗೊಳಿಸಲು ಕೇಂದ್ರ ಸರ್ಕಾರ ಆಲೋಚಿಸಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

ಹಲವು ಪ್ರಮುಖ ರಾಜ್ಯಗಳಲ್ಲಿ ಚುನಾವಣೆ ಹತ್ತಿರವಾಗುತ್ತಿದೆ. 2024ರ ಮಧ್ಯಭಾಗದಲ್ಲಿ ಲೋಕಸಭಾ ಚುನಾವಣೆ ಸಹ ಇರುವುದರಿಂದ ಬ್ಯಾಂಕ್‌ಗಳು ಕೆಲವೇ ತಿಂಗಳುಗಳಲ್ಲಿ ಯೋಜನೆ ಜಾರಿಗೊಳಿಸುವ ಸಾಧ್ಯತೆ ಇದೆ ಎಂದು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ಆಗಸ್ಟ್ 15ರಂದು ದೇಶವನ್ನು ಉದ್ದೇಶಿಸಿ ಮಾತನಾಡುವಾಗ ತಮ್ಮ ಭಾಷಣದಲ್ಲಿ ಈ ಯೋಜನೆಯನ್ನು ಘೋಷಿಸಿದ್ದರು. ಆದರೆ, ಈ ವಿವರಗಳು ಪ್ರಕಟವಾಗಿರಲಿಲ್ಲ.

ಒಟ್ಟು ಸಾಲದಲ್ಲಿ ₹9 ಲಕ್ಷದವರೆಗಿನ ಮೊತ್ತಕ್ಕೆ ವಾರ್ಷಿಕ ಶೇ 3ರಿಂದ ಶೇ 6.5ರವರೆಗೆ ಬಡ್ಡಿ ಸಹಾಯಧನ ಸಿಗಲಿದೆ. ₹50 ಲಕ್ಷಕ್ಕಿಂತ ಕಡಿಮೆ ಮೊತ್ತದ ಗೃಹ ಸಾಲವನ್ನು 20 ವರ್ಷಗಳ ಅವಧಿಗೆ ಪಡೆದಿರುವವರು ಪ್ರಸ್ತಾಪಿತ ಯೋಜನೆಗೆ ಅರ್ಹರಾಗಿರುತ್ತಾರೆ ಎಂದು ಮೂಲಗಳು ತಿಳಿಸಿವೆ.

ಯೋಜನೆಯು ಅಂತಿಮ ಹಂತದಲ್ಲಿದೆ. ಯೋಜನೆಗೆ ಸಂಸತ್ ಒಪ್ಪಿಗೆಯ ಅಗತ್ಯ ಇದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ನಗರ ಪ್ರದೇಶಗಳಲ್ಲಿ ಕಡಿಮೆ ಆದಾಯ ಇರುವ ವರ್ಗದ 25 ಲಕ್ಷ ಜನರಿಗೆ ಇದರಿಂದ ಪ್ರಯೋಜನ ಆಗುವ ಅಂದಾಜು ಮಾಡಲಾಗಿದೆ. ಆದರೆ, ಬಡ್ಡಿ ಸಹಾಯಧನದ ಮೊತ್ತವು ಮನೆಗಳ ಬೇಡಿಕೆಗೆ ಅನುಗುಣವಾಗಿ ನಿರ್ಧಾರವಾಗಲಿದೆ ಎಂದು ತಿಳಿಸಿದ್ದಾರೆ.

ನಾವು ಮುಂಬರುವ ವರ್ಷಗಳಲ್ಲಿ ಹೊಸ ಯೋಜನೆಯೊಂದನ್ನು ತರುತ್ತಿದ್ದೇವೆ. ಅದರಿಂದ ನಗರ ಪ್ರದೇಶಗಳಲ್ಲಿ ಬಾಡಿಗೆ ಮನೆಗಳಲ್ಲಿ ಅಥವಾ ಕೊಳೇಗೇರಿಗಳಲ್ಲಿ ಅಥವಾ ಅನಧಿಕೃತ ಕಾಲೊನಿಗಳಲ್ಲಿ ವಾಸವಾಗಿರುವ ಕುಟುಂಬಗಳಿಗೆ ಇದರಿಂದ ಪ್ರಯೋಜನ ಆಗಲಿದೆ ಎಂದು ಮೋದಿ ಅವರು ಆಗಸ್ಟ್ 15ರಂದು ಮಾಡಿದ್ದ ಭಾಷಣದಲ್ಲಿ ಹೇಳಿದ್ದರು.

ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯ ಮತ್ತು ಹಣಕಾಸು ಸಚಿವಾಲಯವು ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಬ್ಯಾಂಕ್‌ಗಳಿಗೆ ಸಾಲ ನೀಡುವ ಸಂಬಂಧ ಯಾವುದೇ ನಿರ್ದಿಷ್ಟ ಗುರಿ ನೀಡಲಾಗಿಲ್ಲ. ಆದರೆ ಶೀಘ್ರದಲ್ಲೇ ಸರ್ಕಾರದ ಅಧಿಕಾರಿಗಳೊಂದಿಗೆ ಸಭೆ ನಡೆಯಲಿದೆ ಎಂದು ಹೆಸರು ಬಹಿರಂಗಪಡಿಸಬಾರದು ಎನ್ನುವ ಷರತ್ತಿನೊಂದಿಗೆ ಇಬ್ಬರು ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದಾರೆ.

ಬ್ಯಾಂಕ್‌ಗಳು ಫಲಾನುಭವಿಗಳನ್ನು ಗುರುತಿಸುವ ಪ್ರಕ್ರಿಯೆ ಆರಂಭಿಸಿವೆ. ಈ ಯೋಜನೆಯಿಂದಾಗಿ ಕೈಗೆಟಕುವ ಮನೆಗಳಿಗೆ ಸಾಲ ನೀಡಿಕೆಯು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಕಡಿಮೆ ಆದಾಯ ಹೊಂದಿರುವ ನಗರ ಪ್ರದೇಶದ ಜನರಿಗೆ ಈ ಹಿಂದೆ 2017–22ರ ಅವಧಿಯಲ್ಲಿ ಇದೇ ರೀತಿಯ ಯೋಜನೆ ಜಾರಿಗೊಳಿಸಲಾಗಿತ್ತು. 1.22 ಕೋಟಿ ಮನೆಗಳನ್ನು ಮಂಜೂರು ಮಾಡಲಾಗಿತ್ತು.

ಮುಖ್ಯಾಂಶಗಳು

- ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಸ್ತಾಪಿಸಿದ್ದ ಮೋದಿ
- ಕೆಲವೇ ತಿಂಗಳಲ್ಲಿ ಬ್ಯಾಂಕ್‌ಗಳಿಂದ ಯೋಜನೆ ಜಾರಿ ಸಂಭವ

ರೂಪಾಯಿ 19 ಪೈಸೆ ಇಳಿಕೆ

ನವದೆಹಲಿ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರ 19 ಪೈಸೆ ಇಳಿಕೆ ಕಂಡು ₹83.13ರಂತೆ ವಿನಿಮಯಗೊಂಡಿತು.

ಏರ್‌ಬಸ್ ಡಿಫೆನ್ಸ್ – ಸ್ಪೇಸ್ ಕಂಪನಿ ನಿರ್ಮಿಸಿರುವ ಸರಕು ಸಾಗಣೆ ವಿಮಾನ

ವಾಯುಪಡೆಗೆ ಸಿ295 ವಿಮಾನ ಸೇರ್ಪಡೆ

ಹಿಂಡನ್ ವಾಯುನೆಲೆಯಲ್ಲಿ ನಡೆದ ಸಮಾರಂಭದಲ್ಲಿ ಸಿ295 ಸರಕು ಸಾಗಣೆ ವಿಮಾನವನ್ನು ವಾಯುಪಡೆಗೆ ಸೇರ್ಪಡೆ ಮಾಡಲಾಯಿತು. ರಕ್ಷಣಾ ಸಚಿವ ರಾಜನಾಥ ಸಿಂಗ್, ಏರ್ ಚೀಫ್ ಮಾರ್ಷಲ್ ವಿ.ಆರ್.ಚೌಧರಿ, ವಿ.ಕೆ.ಸಿಂಗ್ ಹಾಗೂ ಇತರರು ಇದ್ದಾರೆ —ಪಿಟಿಐ ಚಿತ್ರ

ಗಾಜಿಯಾಬಾದ್ (ಪಿಟಿಐ): ಹೊಸ ತಲೆಮಾರಿನ ತಂತ್ರಜ್ಞಾನ ಹೊಂದಿದ ಸರಕು ಸಾಗಣೆ ವಿಮಾನ ಸಿ 295 ಅನ್ನು ಭಾರತೀಯ ವಾಯುಪಡೆಗೆ ಸೋಮವಾರ ಸೇರ್ಪಡೆ ಮಾಡಲಾಯಿತು.

ಹಿಂಡನ್ ವಾಯುನೆಲೆಯಲ್ಲಿ ನಡೆದ ಸಮಾರಂಭದಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್, ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ವಿ.ಆರ್.ಚೌಧರಿ, ವಾಯುಪಡೆ ಮತ್ತು ಏರ್‌ಬಸ್‌ನ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಭಾರತೀಯ ವಾಯುಪಡೆಯ (ಐಎಎಫ್) ಅತ್ಯಂತ ಹಳೆಯ ಘಟಕ ಸ್ಕ್ವಾಡ್ರನ್ 11ಕ್ಕೆ ಈ ವಿಮಾನವನ್ನು ಸೇರಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಕ್ವಾಡ್ರನ್ ಲಾಂಛನ ಖಡ್ಗಮೃಗದ ಚಿತ್ರದ ಫಲಕ ಹಾಕಲಾಗಿತ್ತು.

ಏರ್‌ಬಸ್ ಡಿಫೆನ್ಸ್ ಆ್ಯಂಡ್ ಸ್ಪೇಸ್ ಕಂಪನಿಯೊಂದಿಗೆ ಮಿಲಿಟರಿ ಸರಕು ಸಾಗಣೆಯ 56 ವಿಮಾನಗಳನ್ನು (ಸಿ-295) ₹ 21,935 ಕೋಟಿ ಮೊತ್ತಕ್ಕೆ ಖರೀದಿಸಲು ರಕ್ಷಣಾ ಸಚಿವಾಲಯವು ಎರಡು ವರ್ಷಗಳ ಹಿಂದೆ ಒಪ್ಪಂದ ಮಾಡಿಕೊಂಡಿತ್ತು.

ಸ್ಪೇನ್‌ನ ಸೆವಿಲ್ಲೆಯಲ್ಲಿ ಈ ವಿಮಾನವನ್ನು ಐಎಎಫ್‌ಗೆ ಹಸ್ತಾಂತರಿಸಿದ ಬಳಿಕ ಸೆಪ್ಟೆಂಬರ್ 20 ರಂದು ವಡೋದರಾ ತಲುಪಿತು.

ಯುರೋಪ್‌ನ ಏರ್‌ಬಸ್ ಸಂಸ್ಥೆ 2025 ರ ವೇಳೆಗೆ 16 ಸಿದ್ಧ ವಿಮಾನಗಳನ್ನು ಪೂರೈಸಲಿದೆ.ಉಳಿದ 40 ವಿಮಾನಗಳನ್ನು ಭಾರತದಲ್ಲಿ ಕೈಗಾರಿಕಾ ಪಾಲುದಾರಿಕೆಯ ಭಾಗವಾಗಿ ವಡೋದರಾದಲ್ಲಿರುವ ಟಾಟಾ–ಏರ್‌ಬಸ್ ಸಹಭಾಗಿತ್ವದ ಘಟಕದಲ್ಲಿ ತಯಾರಿಸಲಾಗುತ್ತದೆ.

ಹೊಸದಾಗಿ ಸೇರ್ಪಡೆಗೊಂಡ ವಿಮಾನವು ಅ. 8 ರಂದು ಉತ್ತರ ಪ್ರದೇಶದ ಪ್ರಯಾಗಾರಾಜ್‌ನಲ್ಲಿ ನಡೆಯಲಿ ರುವ ವಾಯುಪಡೆ ದಿನಾಚರಣೆಯಲ್ಲಿ ಹಾರಾಟ ನಡೆಸಬಹುದು ಎಂದು ಮೂಲಗಳು ತಿಳಿಸಿವೆ.

ಗುಜರಾತ್‌ನ ವಡೋದರಾದಲ್ಲಿ ಕಳೆದ ಅಕ್ಟೋಬರ್‌ನಲ್ಲಿ ಸಿ–295 ಸರಕು ಸಾಗಣೆ ವಿಮಾನ ತಯಾರಿಕಾ ಘಟಕಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸಿದ್ದರು.

ಖಾಸಗಿ ಸಹಭಾಗಿತ್ವದಲ್ಲಿ ಭಾರತದಲ್ಲಿ ತಯಾರಾಗುತ್ತಿರುವ ಮೊದಲ ವಿಮಾನ ಇದಾಗಿದೆ. ಆರು ದಶಕಗಳಿಂದ ಬಳಕೆಯಲ್ಲಿದ್ದ ಎವಿಆರ್‌ಒ 748 ವಿಮಾನದ ಬದಲು ಸಿ–295 ವಿಮಾನಗಳು ಕಾರ್ಯಾಚರಣೆಗೆ ಬರಲಿವೆ.

> **ಸಿ295 ವಿಮಾನ ಸೇರ್ಪಡೆಯಿಂದ ವಾಯುಪಡೆಯಲ್ಲಿ ಹೊಸ ಯುಗ ಆರಂಭವಾದಂತಾಗಿದೆ. ಮುಂದಿನ ದಿನಗಳಲ್ಲಿ ಇದು ವಾಯುಪಡೆಯ ಬೆನ್ನೆಲುಬು ಆಗಲಿದೆ**
> **ಆರ್‌ಕೆಎಸ್ ಭದೌರಿಯಾ**
> ವಾಯುಪಡೆ ಮಾಜಿ ಮುಖ್ಯಸ್ಥ

ವಿಶೇಷಗಳು

- ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ಸೇವೆ ಒದಗಿಸುವ ಉದ್ದೇಶಕ್ಕೆ ಬಳಕೆ
- ವಿಶೇಷ ಕಾರ್ಯಾಚರಣೆ, ಕಡಲ ಗಸ್ತು ಕರ್ತವ್ಯ ನಿರ್ವಹಣೆ
- ಅಧಿಕ ತೂಕದ ವಿಮಾನಗಳು ಸುಲಭವಾಗಿ ತೆರಳಲು ಆಗದ ಸ್ಥಳಗಳಿಗೂ ಸಾಗಣೆಗೆ ಅನುಕೂಲಕರ
- 9 ಟನ್ ಭಾರ ಹೊರುವ ಸಾಮರ್ಥ್ಯ
- 71 ತುಕಡಿ ಅಥವಾ 50 ಅರೆಸೇನಾ ತುಕಡಿ ಕರೆದೊಯ್ಯಬಹುದು

ಆರೋಪ ಸಾಬೀತಾದರೆ ಹಗುರವಾಗಿ ಪರಿಗಣಿಸುವಂತಿಲ್ಲ

ಭಾರತ ಸಂಬಂಧ ಮಹತ್ವದ್ದು: ಕೆನಡಾ ಸಚಿವ

ಟೊರಂಟೊ (ಪಿಟಿಐ): ಭಾರತದ ಜೊತೆ ಕೆನಡಾ ಹೊಂದಿರುವ ಸಂಬಂಧವನ್ನು ‘ಮಹತ್ವದ್ದು’ ಎಂದು ಬಣ್ಣಿಸಿರುವ ಕೆನಡಾ ರಕ್ಷಣಾ ಸಚಿವ ಬಿಲ್ ಬ್ಲೇರ್ ಅವರು, ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯ ತನಿಖೆ ನಡೆಯುತ್ತಿರುವ ವೇಳೆಯೇ ಭಾರತದ ಜೊತೆಗಿನ ಸಹಭಾಗಿತ್ವವನ್ನೂ ಮುಂದುವರೆಸುವುದಾಗಿ ಭಾನುವಾರ ಹೇಳಿದ್ದಾರೆ.

ಗ್ಲೋಬಲ್ ನ್ಯೂಸ್ ಸುದ್ದಿ ವಾಹಿನಿಗೆ ಸಂದರ್ಶನ ನೀಡಿರುವ ಬ್ಲೇರ್ ಅವರು, ‘ನಿಜ್ಜರ್ ಹತ್ಯೆಯಿಂದ ಉಂಟಾಗಿರುವ ಬಿಕ್ಕಟ್ಟು ಭಾರತದ ಜೊತೆಗಿನ ನಮ್ಮ ಸಂಬಂಧಕ್ಕೆ ಸವಾಲೊಡ್ಡಿದೆ ಎಂದು ನಾವು ಅರ್ಥಮಾಡಿದ್ದೇವೆ. ಆದರೆ, ಇಲ್ಲಿಯ ಕಾನೂನನ್ನು ಮತ್ತು ಪ್ರಜೆಯನ್ನು ಸಮರ್ಥಿಸಿಕೊಳ್ಳುವ ಹೊಣೆಗಾರಿಕೆಯು ನಮ್ಮ ಮೇಲಿರುತ್ತದೆ. ಕೂಲಂಕಷವಾದ ತನಿಖೆ ನಡೆಸಿ ಸತ್ಯವನ್ನು ಹೊರತರುತ್ತೇವೆ ಎಂಬ ವಿಶ್ವಾಸ ಇದೆ’ ಎಂದು ಅವರು ಹೇಳಿದ್ದಾರೆ.

‘ಭಾರತದ ವಿರುದ್ಧ ಮಾಡಲಾಗಿರುವ ಆರೋಪಗಳು ಸಾಬೀತಾದರೆ, ಕೆನಡಾದ ಸಾರ್ವಭೌಮತೆಯನ್ನು ಉಲ್ಲಂಘಿಸಿ ಇಲ್ಲಿಯ ಪ್ರಜೆಯನ್ನು ಈ ನೆಲದಲ್ಲೇ ಹತ್ಯೆ ಮಾಡಿದ್ದನ್ನು ನಮ್ಮ ದೇಶವು ಹಗುರವಾಗಿ ತೆಗೆದುಕೊಳ್ಳುವಂತಿಲ್ಲ’ ಎಂದೂ ಬ್ಲೇರ್ ಹೇಳಿದರು.

ಹಿಂದೂ ಮಹಾಸಾಗರ–ಪೆಸಿಫಿಕ್ ಸಾಗರ ಪ್ರದೇಶದಲ್ಲಿ ಮುಕ್ತ ಸಮುದ್ರಯಾನಕ್ಕೆ ಅವಕಾಶ ಮಾಡಿಕೊಡುವ ಬಹುರಾಷ್ಟ್ರಗಳ ಸೇನಾ ಕಾರ್ಯತಂತ್ರದಲ್ಲಿ ಕೆನಡಾವು ಸಹಭಾಗಿದಾರ.

ಈ ಕಾರ್ಯತಂತ್ರದ ಭಾಗವಾಗಿ ಈ ಪ್ರದೇಶದಲ್ಲಿ ಸೇನೆಯ ಉಪಸ್ಥಿತಿ ಮತ್ತು ಗಸ್ತನ್ನು ಹಚ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಾತನಾಡಿದ ಅವರು, ‘ಹಿಂದೂ ಮಹಾಸಾಗರ–ಪೆಸಿಫಿಕ್ ಕಾರ್ಯತಂತ್ರವು ಕೆನಡಾಕ್ಕೆ ಮಹತ್ವದ್ದಾಗಿದೆ ಮತ್ತು ಇದನ್ನು ಮುಂದುವರೆಸಿಕೊಂಡು ಹೋಗಲು ಬದ್ಧವಾಗಿದೆ’ ಎಂದು ಹೇಳಿದ್ದಾರೆ.

‘ಭಾರತದ ಕ್ರಮ ಕಳವಳಕಾರಿ’: ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತ ಕೈವಾಡವಿದೆ ಎಂದು ಪ್ರಧಾನಿ ಜಸ್ಟಿನ್ ಟ್ರುಡೊ ಅವರು ‘ಗುಪ್ತಚರ ಮಾಹಿತಿ’ ಆಧರಿಸಿ ಹೇಳಿಕೆ ನೀಡಿದ ಬಳಿಕ, ಕೆನಡಿಯನ್ನರ ವೀಸಾ ಸೇವೆಯನ್ನು ರದ್ದುಪಡಿಸುವುದೂ ಸೇರಿ ಭಾರತ ಕೈಗೊಂಡ ಹಲವು ಕ್ರಮಗಳ ಕುರಿತು ಸಚಿವ ಬಿಲ್ ಬ್ಲೇರ್ ಕಳವಳ ವ್ಯಕ್ತಪಡಿಸಿದ್ದಾರೆ. ನಿಜ್ಜರ್ ಹತ್ಯೆಯಿಂದ ಉಂಟಾಗಿರುವ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ಎರಡೂ ದೇಶಗಳು ಒಟ್ಟಾಗಿ ಕೆಲಸ ಮಾಡಬೇಕು ಎಂದು ಕೆನಡಾದ ಸಿಬಿಸಿ ನ್ಯೂಸ್‌ಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಗುಪ್ತಚರ ಸಂಸ್ಥೆಗಳು ನೀಡಿದ್ದ ಮಾಹಿತಿಯನ್ನು ಕೆನಡಾ ಬಹಿರಂಗಪಡಿಸಿದ ನಂತರದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮಾತನಾಡಿದ ಅವರು, ‘ಕೆನಡಾ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಯಾವ ಮೂಲದ ಮಾಹಿತಿ ಆಧರಿಸಿ ನಾವು ತನಿಖೆ ನಡೆಸುತ್ತಿದ್ದೇವೆ ಮತ್ತು ಯಾವ ರೀತಿಯ ಸಾಕ್ಷ್ಯಗಳನ್ನು ಕಲೆಹಾಕಿದ್ದೇವೆ ಎಂಬ ಕುರಿತು ಮಾಹಿತಿ ಬಿಟ್ಟುಕೊಡದಂತೆ ನಾವು ಎಚ್ಚರ ವಹಿಸಬೇಕು’ ಎಂದಿದ್ದಾರೆ.

‘ಕೆನಡಾದಲ್ಲಿ ಭಾರತ ಮೂಲದವರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಅವರು ಭಾರತದ ಜೊತೆ ಕೌಟುಂಬಿಕ, ವಾಣಿಜ್ಯ ಮತ್ತಿತರ ಸಂಬಂಧ ಹೊಂದಿದ್ದಾರೆ. ಈ ದೃಷ್ಟಿಯಿಂದ ಭಾರತ ತೆಗೆದುಕೊಂಡ ಕ್ರಮಗಳ ಬಗ್ಗೆ ಆತಂಕ ಉಂಟಾಗಿದೆ’ ಎಂದಿದ್ದಾರೆ.

ನವದೆಹಲಿ ವರದಿ: ಉಕ್ರೇನ್‌ನ ನಾಜಿಗಳಿಗೆ ಕೆನಡಾ ಸುರಕ್ಷಿತ ತಾಣವಾಗಿದೆ ಎಂದು ಭಾರತದಲ್ಲಿರುವ ಮಾಸ್ಕೊದ ರಾಜತಾಂತ್ರಿಕ ಅಧಿಕಾರಿ ಡೆನಿಸ್ ಅಲಿಪೊವ್ ಸೋಮವಾರ ಹೇಳಿದ್ದಾರೆ. ಕೆನಡಾ ಉಕ್ರೇನ್‌ನ ನಾಜಿಗಳಿಗಷ್ಟೇ ಸುರಕ್ಷಿತ ತಾಣವಾಗಿಲ್ಲ ಎಂದು ಹೇಳಿ ಉಗ್ರರಿಗೆ ಕೂಡ ಕೆನಡಾ ನೆಲೆಯಾಗಿದೆ ಎಂಬ ಭಾರತದ ಆರೋಪವನ್ನು ಪ್ರತಿಧ್ವನಿಸಿದ್ದಾರೆ.

ಉಗ್ರ ಲಖ್ಬೀರ್ ಸಹಚರರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ

ಫಿರೋಜ್‌ಪುರ (ಪಂಜಾಬ್): ಕೆನಡಾ ಮೂಲದ ಭಯೋತ್ಪಾದಕ ಲಖ್ಬೀರ್ ಸಿಂಗ್ ಲಾಂಡಾ ಅಲಿಯಾಸ್ ಲಾಂಡಾ ಹರಿಕೆಯ ಸಹಚರರಿಗೆ ಸಂಬಂಧಿಸಿದ 48 ಸ್ಥಳಗಳ ಮೇಲೆ ಪಂಜಾಬ್ ಪೊಲೀಸರು ಸೋಮವಾರ ದಾಳಿ ನಡೆಸಿ, ಕೆಲವರನ್ನು ಬಂಧಿಸಿದ್ದಾರೆ.

ಸೆ.21 ರಂದು ವ್ಯಾಪಾರಿಯೊಬ್ಬರ ಮೇಲೆ ಇಬ್ಬರು ದಾಳಿಕೋರರು ಹಲ್ಲೆ ನಡೆಸಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

‘ಲಾಂಡಾ ಹರಿಕೆ ಎಂದು ಹೇಳಿಕೊಂಡ ವ್ಯಕ್ತಿ ಕರೆ ಮಾಡಿ, ₹ 15 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದಾನೆ’ ಎಂದು ವ್ಯಾಪಾರಿ ಹೇಳಿದ್ದರು. ಮಖು, ಝಿರಾ, ಗುರುಹರ್‌ಸಾಯ್ ಮತ್ತು ಇತರ ಸ್ಥಳಗಳಲ್ಲಿ ಪ್ರತ್ಯೇಕ ಪೊಲೀಸ್ ತಂಡಗಳು ದಾಳಿ ನಡೆಸಿವೆ ಎಂದು ಪೊಲೀಸ್ ವರಿಷ್ಠಾಧಿಕಾರಿ ರಣಧೀರ್ ಕುಮಾರ್ ತಿಳಿಸಿದ್ದಾರೆ.

ತಾರ್ನ್ ತರಣ್‌ನ ಸರ್ಹಾಲಿ ಪೊಲೀಸ್ ಠಾಣೆಯಲ್ಲಿ ನಡೆದ ಆರ್‌ಪಿಜಿ ದಾಳಿಗೆ ಸಂಬಂಧಿಸಿದಂತೆ ಲಾಂಡಾ ಹೆಸರು ಕೇಳಿಬಂದಿತ್ತು.

ಜಾಗರೂಕರಾಗಿರಿ: ಕೆನಡಾ

ಟೊರಂಟೊ (ಪಿಟಿಐ): ಕೆನಡಾ ಮತ್ತು ಭಾರತ ನಡುವಿನ ರಾಜತಾಂತ್ರಿಕ ಬಿಕ್ಕಟ್ಟು ಉಲ್ಬಣಗೊಂಡ ಹಿನ್ನೆಲೆಯಲ್ಲಿ ಜಾಗರೂಕರಾಗಿರುವಂತೆ ಭಾರತದಲ್ಲಿನ ತನ್ನ ನಾಗರಿಕರಿಗೆ ಕೆನಡಾ ಸರ್ಕಾರ ಸಲಹೆ ನೀಡಿದೆ.

ಭಾರತದಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಕೆನಡಾದ ಬಗ್ಗೆ ಕೆಲವು ನಕಾರಾತ್ಮಕ ಹೇಳಿಕೆಗಳು ಪ್ರಕಟವಾಗುತ್ತಿವೆ. ಹಾಗಾಗಿ ಕೆನಡಾ ಪ್ರಜೆಗಳು ಎಚ್ಚರಿಕೆಯಿಂದ ಇರಬೇಕು ಎಂದು ಭಾನುವಾರ ಮಾಧ್ಯಮ ಪ್ರಕಟಣೆ ತಿಳಿಸಿದೆ.

ಜಿಡಿಪಿ ಮುನ್ನೋಟ ಬದಲಿಸದ ಎಸ್ ಆ್ಯಂಡ್ ಪಿ

ನವದೆಹಲಿ (ಪಿಟಿಐ): ಎಸ್ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆಯು ಭಾರತದ ಜಿಡಿಪಿ ಬೆಳವಣಿಗೆ ಮುನ್ನೋಟದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಪ್ರಸಕ್ತ ಹಣಕಾಸು ವರ್ಷಕ್ಕೆ ಜಿಡಿಪಿ ಬೆಳವಣಿಗೆ ಪ್ರಮಾಣವು ಈಗಾಗಲೇ ಅಂದಾಜು ಮಾಡಿರುವಂತೆ ಶೇ 6ರಷ್ಟು ಆಗಲಿದೆ ಎಂದು ಸಂಸ್ಥೆಯು ಹೇಳಿದೆ.

ಜಾಗತಿಕ ಆರ್ಥಿಕತೆಯು ಮಂದಗತಿಯಲ್ಲಿ ಇರುವುದು, ಮುಂಗಾರು ಮಳೆಯು ವಾಡಿಕೆಗಿಂತಲೂ ಕಡಿಮೆ ಆಗಿರುವುದು ಹಾಗೂ ಬಡ್ಡಿದರ ಏರಿಕೆಯ ಪ್ರಯೋಜನವು ಬಹಳ ತಡವಾಗಿ ಪ್ರಭಾವ ಬೀರಿರುವ ಕಾರಣಗಳಿಂದಾಗಿ ಜಿಡಿಪಿ ಬೆಳವಣಿಗೆಯನ್ನು ಬದಲಿಸದೇ ಇರಲು ನಿರ್ಧರಿಸಿರುವುದಾಗಿ ಹೇಳಿದೆ.

ಈ ವರ್ಷ ಆರ್ಥಿಕ ಬೆಳವಣಿಗೆಯು 2022ರಲ್ಲಿ ಆಗಿದ್ದಕ್ಕಿಂತಲೂ ಕಡಿಮೆ ಆಗಲಿದೆ. ಆದರೆ, ಒಟ್ಟಾರೆ ಮುನ್ನೋಟವು ಅನುಕೂಲಕರವಾಗಿ ಇರಲಿದೆ ಎಂದು ಏಷ್ಯಾ ಪೆಸಿಫಿಕ್‌ನ 2023ರ ನಾಲ್ಕನೇ ತ್ರೈಮಾಸಿಕದ ಆರ್ಥಿಕ ಮುನ್ನೋಟದ ವರದಿಯಲ್ಲಿ ತಿಳಿಸಿದೆ. ಭಾರತದ ಆರ್ಥಿಕತೆಯು 2022–23ರಲ್ಲಿ ಶೇ 7.2ರಷ್ಟು ಬೆಳವಣಿಗೆ ಕಂಡಿತ್ತು.

2024–25 ಮತ್ತು 2025–26ರಲ್ಲಿ ಭಾರತದ ಆರ್ಥಿಕತೆಯು ಶೇ 6.9ರಷ್ಟು ಬೆಳವಣಿಗೆ ಕಾಣಲಿದೆ ಎನ್ನುವ ತನ್ನ ಈ ಹಿಂದಿನ ಅಂದಾಜನ್ನು ಸಹ ಸಂಸ್ಥೆಯು ಬದಲಿಸಿಲ್ಲ.

ಈಚೆಗೆ ತರಕಾರಿಗಳ ಬೆಲೆ ಏರಿಕೆಯಿಂದ ಆಗಿರುವ ಹಣದುಬ್ಬರವು ತಾತ್ಕಾಲಿಕ ಆಗಿದೆ ಎಂದು ಅದು ಹೇಳಿದೆ. ಆದರೆ, ಪ್ರಸಕ್ತ ಹಣಕಾಸು ವರ್ಷಕ್ಕೆ ಚಿಲ್ಲರೆ ಹಣದುಬ್ಬರವನ್ನು ಶೇ 5 ರಿಂದ ಶೇ 5.5ಕ್ಕೆ ಏರಿಕೆ ಮಾಡಿದೆ. ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ದರ ಏರಿಕೆ ಆಗಿರುವುದನ್ನು ಗಮದನಲ್ಲಿ ಇಟ್ಟಕೊಂಡು ಹಣದುಬ್ಬರದ ಮುನ್ನೋಟದಲ್ಲಿ ಈ ಪರಿಷ್ಕರಣೆ ಮಾಡಿದೆ.



ಮುಂಬೈ ಧಾರಣೆ

ಶೇಂಗಾ

25-09-2023

ಜಾವಾ 70/80(ಹೊಸ)	12250-12350
ಜಾವಾ 80/90(ಹೊಸ)	11950-12050
ದಪ್ಪ ಮಧ್ಯಪ್ರದೇಶ(ಹೊಸ)	10850-10950
ದಪ್ಪ ಗುಜರಾತ್(ಹೊಸ)	11750-11850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1780 (-)
ಒಂದು ವಾರದ ಡೆಲಿವರಿ	1775 (-)
ಸೋಯಾ ಕಚ್ಚಾ	830 (-)
ಪಾಮ್ ವಾರದ ಡೆಲಿವರಿ	808(-)
ಸೂರ್ಯಕಾಂತಿ ಎಣ್ಣೆ ಕಚ್ಚಾ	780 (-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,850 (-)
ಬೆಳ್ಳಿ ಕೆ.ಜಿ
72,900 (-)

ಡಿ–ಮ್ಯಾಟ್ ಖಾತೆ ಸಂಖ್ಯೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಡಿ–ಮ್ಯಾಟ್ ಖಾತೆಗಳ ಸಂಖ್ಯೆಯು 2023ರ ಆಗಸ್ಟ್‌ನಲ್ಲಿ 12.7 ಕೋಟಿಗೆ ತಲುಪಿದ್ದು, ಹಿಂದಿನ ವರ್ಷದ ಆಗಸ್ಟ್‌ಗೆ ಹೋಲಿಸಿದರೆ ಶೇ 26ರಷ್ಟು ಏರಿಕೆಯಾಗಿದೆ.

ಖಾತೆ ತೆರೆಯುವ ಪ್ರಕ್ರಿಯೆ ಸರಳವಾಗಿರುವುದು ಹಾಗೂ ಈಕ್ವಿಟಿ ಮಾರುಕಟ್ಟೆಯಲ್ಲಿ ಗಳಿಕೆ ಹೆಚ್ಚಾಗುತ್ತಿರುವುದರಿಂದಾಗಿ ಡಿ–ಮ್ಯಾಟ್ ಖಾತೆಗಳ ಸಂಖ್ಯೆ ಹೆಚ್ಚಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.ಹಣಕಾಸು ಸಾಕ್ಷರತೆ ಪ್ರಮಾಣ ಏರಿಕೆ ಆಗುತ್ತಿರುವುದು ಹಾಗೂ ಯುವಪೀಳಿಗೆಯು ವಹಿವಾಟು ನಡೆಸಲು ಹೆಚ್ಚಿನ ಆಸಕ್ತಿ ತೋರಿಸುತ್ತಿರುವುದು ಸಹ ಖಾತೆಗಳ ಸಂಖ್ಯೆ ಹೆಚ್ಚಾಗಲು ಇತರ ಕಾರಣಗಳಾಗಿವೆ ಎಂದು ತಿಳಿಸಿದ್ದಾರೆ.

ಜುಲೈ ತಿಂಗಳ ಅಂತ್ಯಕ್ಕೆ ಡಿ–ಮ್ಯಾಟ್ ಖಾತೆಗಳ ಸಂಖ್ಯೆ 12.3 ಕೋಟಿ ಇತ್ತು.

ಸುಧಾ, ಮಯೂರ ಓದಿ

ಡಿ.31ರವರೆಗೆ ತೊಗರಿ, ಉದ್ದು ದಾಸ್ತಾನಿಗೆ ಮಿತಿ

ನವದೆಹಲಿ (ಪಿಟಿಐ): ತೊಗರಿ ಮತ್ತು ಉದ್ದಿನ ಬೇಳೆ ದಾಸ್ತಾನು ಮೇಲೆ ಹೇರಿದ್ದ ಮಿತಿಯನ್ನು ಕೇಂದ್ರ ಸರ್ಕಾರವು ಡಿಸೆಂಬರ್ 31ರವರೆಗೆ ವಿಸ್ತರಣೆ ಮಾಡಿದೆ. ಈ ಹಿಂದಿನ ಆದೇಶದಲ್ಲಿ ಅಕ್ಟೋಬರ್ 31ರವರೆಗೆ ಮಿತಿ ಹೇರಲಾಗಿತ್ತು.

ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯದ ಆದೇಶದ ಪ್ರಕಾರ, ಸಗಟುವ್ಯಾಪಾರಿಗಳು ಮತ್ತು ಬೃಹತ್ ಪ್ರಮಾಣದ ರಿಟೇಲ್ ವರ್ತಕರಿಗೆ ದಾಸ್ತಾನು ಮಿತಿಯನ್ನು 200 ಟನ್‌ಗಳಿಂದ 50 ಟನ್‌ಗಳಿಗೆ ಇಳಿಕೆ ಮಾಡಲಾಗಿದೆ. ರಿಟೇಲ್ ವ್ಯಾಪಾರಿಗಳಿಗೆ 5 ಟನ್, ಮಿಲ್‌ಗಳಿಗೆ ಹಿಂದಿನ 1 ತಿಂಗಳ ಉತ್ಪಾದನೆ ಅಥವಾ ವಾರ್ಷಿಕ ಸಾಮರ್ಥ್ಯದ ಶೇ 10ರಷ್ಟು ನಿಗದಿಪಡಿಸಲಾಗಿದೆ.

ಗ್ರಾಹಕ ವ್ಯವಹಾರಗಳ ಇಲಾಖೆಯ ಜಾಲತಾಣ https://fcainfoweb.nic.in ನಲ್ಲಿ ದಾಸ್ತಾನು ಮಾಹಿತಿಯನ್ನು ದಾಖಲಿಸುವಂತೆ ಸೂಚನೆ ನೀಡಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		**ಸಾಗರ**		ರಾಶಿ	44569-47899
ಕೋಕ	15000-25000	ಬಿಳಿಗೋಟು	18691-32400	ತಟ್ಟಿಬೆಟ್ಟೆ	36699-40199
ಹೊಸತು	28000-45000	ಚಾಲಿ	34099-38999	**ಶಿರಸಿ**	
ಹಳತು	46000-48000	ಕೋಕ	17869-33850	ಬೆಟ್ಟೆ	40899-42969
ದಾವಣಗೆರೆ		ಕೆಂಪುಗೋಟು	26891-34709	ಬಿಳಿಗೋಟು	31199-36271
ರಾಶಿ	25100-47108	ರಾಶಿ	36899-47099	ಚಾಲಿ	37000-41499
ಹೊನ್ನಾವರ		ಸಿಪ್ಪೆಗೋಟು	11100-21491	ಕೆಂಪುಗೋಟು	28699-32299
ಹೊಸಚಾಲಿ	37500-41000	**ಶಿವಮೊಗ್ಗ**		ರಾಶಿ	43699-49299
ಕುಮಟ		ಬೆಟ್ಟೆ	46100-53000	**ಯಲ್ಲಾಪುರ**	
ಚಿಪ್ಪು	32019-34609	ಗೊರಬಲು	18009-37009	ಬಿಳಿಗೋಟು	28969-35580
ಕೋಕ	19509-31509	ರಾಶಿ	39133-49129	ಚಾಲಿ	36899-40799
ಫ್ಯಾಕ್ಟರಿ	15019-26829	ಸರಕು	51569-81400	ಕೋಕ	18418-29699
ಹಳೆಚಾಲಿ	39509-41119	**ಸಿದ್ದಾಪುರ**		ಕೆಂಪುಗೋಟು	33603-35009
ಹೊಸಚಾಲಿ	37299-40009	ಬಿಳಿಗೋಟು	30399-35319	ರಾಶಿ	46800-51400
ಪುತ್ತೂರು		ಚಾಲಿ	37129-40099	ತಟ್ಟಿಬೆಟ್ಟೆ	39236-44100
ಹೊಸತು	34000-45000	ಕೋಕ	28219-33099	**ಚನ್ನಗಿರಿ**	
ಹಳತು	11000-25000	ಕೆಂಪುಗೋಟು	33299-33299	ರಾಶಿ	42510-49899

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಮಲ್ಲೇಶ್ವರಂನಲ್ಲಿ ಫೈನ್ ಡೈನಿಂಗ್ ರೆಸ್ಟೋರೆಂಟ್ ಆರಂಭವಾಗಿದ್ದು ನುರಿತ ಸೌತ್ ಮಾಸ್ಟರ್ ಗಳು ತಕ್ಷಣ ಬೇಕಾಗಿದ್ದಾರೆ. ಉದ್ಯಮದಲ್ಲಿ ಸಂಬಳ ಅತ್ಯುತ್ತಮವಾಗಿರುತ್ತದೆ. ಸಂಪರ್ಕಿಸಿ: 8884442517/ 9632044727.

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಪ್ರವಾಸ

Travel

10.10.2023ಮತ್ತು 10.11.2023 6ದಿನಗಳು ವಿಮಾನದಲ್ಲಿ ಅಲಹಾಬದ್,ಕಾಶಿ, ಗಯಾ,ಅಯೋಧ್ಯ (ಕೆಲವೇ ಸೀಟುಗಳಿವೆ)24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Land_Package15000/ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 25/10 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ ಪ್ಯಾಕೇಜ್. 22/10 ಹೈದರಾಬಾದ್ 4 ದಿನಗಳ ಪ್ಯಾಕೇಜ್ 9591017782, 9880621353

ಭವಿಷ್ಯ

Astrology

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

DH DECCAN HERALD Classifieds More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಟಿ20 ಕ್ರಿಕೆಟ್: ತಿತಾಸ್, ರಾಜೇಶ್ವರಿ ಅಮೋಘ ದಾಳಿ • ಶ್ರೀಲಂಕಾಗೆ ಬೆಳ್ಳಿ

ಭಾರತದ ಮಹಿಳೆಯರಿಗೆ ಚಿನ್ನ

ಚೀನಾದ ಹಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಮಹಿಳೆಯರ ಕ್ರಿಕೆಟ್‌ನಲ್ಲಿ ಚಿನ್ನದ ಪದಕ ಜಯಿಸಿದ ಭಾರತ ತಂಡ –ಪಿಟಿಐ ಚಿತ್ರ

ಹಾಂಗ್‌ಝೌ(ಪಿಟಿಐ): ಮಧ್ಯಮವೇಗಿ ತಿತಾಸ್ ಸಾಧು ಅವರ ಅಮೋಘ ಬೌಲಿಂಗ್ ಬಲದಿಂದ ಭಾರತ ಮಹಿಳಾ ಕ್ರಿಕೆಟ್ ತಂಡವು 19ನೇ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸಿತು.

ಸೋಮವಾರ ನಡೆದ ಫೈನಲ್ ಪಂದ್ಯದಲ್ಲಿ ಟೈಟಸ್ (6ಕ್ಕೆ3) ದಾಳಿಯ ಬಲದಿಂದ ಭಾರತ ತಂಡವು ಶ್ರೀಲಂಕಾ ಎದುರು 19 ರನ್‌ಗಳಿಂದ ಜಯಿಸಿತು. ಟೈಟಸ್ ಇದೇ 29ರಂದು ಹತ್ತೊಂಬತ್ತು ವರ್ಷದ ಜನ್ಮದಿನ ಆಚರಿಸಿಕೊಳ್ಳಲಿದ್ದಾರೆ. ಜೂಲನ್ ಗೋಸ್ವಾಮಿ ಅವರ ಅನುಪಸ್ಥಿತಿಯಲ್ಲಿ ಟೈಟಸ್ ಭರವಸೆ ಮೂಡಿಸಿದರು.

ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಎರಡು ಪಂದ್ಯಗಳ ಅಮಾನತು ಶಿಕ್ಷೆ ಪೂರೈಸಿ ಮರಳಿದ ಹರ್ಮನ್‌ಪ್ರೀತ್ ಕೌರ್ ಈ ಪಂದ್ಯದಲ್ಲಿ ತಂಡವನ್ನು ಮುನ್ನಡೆಸಿದರು.

ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (46 ರನ್) ಮತ್ತು ಜೆಮಿಮಾ ರಾಡ್ರಿಗಸ್ (42 ರನ್) ಅವರ ಉತ್ತಮ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 116 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಶ್ರೀಲಂಕಾ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 97 ರನ್ ಗಳಿಸಿ ಸೋತಿತು. ಮಧ್ಯಮ ಕ್ರಮಾಂಕದ ಬ್ಯಾಟರ್ ಹಾಸಿನಿ ಪೆರೆರಾ (25; 22ಎ) ಮತ್ತು ನಿಕಾಶಿ ಡಿಸಿಲ್ವಾ (23; 34ಎ) ಅವರ ಹೋರಾಟ ಫಲ ನೀಡಲಿಲ್ಲ.

ಭಾರತ ತಂಡದ ಆಟಗಾರ್ತಿ ಸ್ಮೃತಿ ಮಂದಾನ ಅವರ ಅಭಿಮಾನಿ ಚೀನಾದ ಜುನ್ ಯೂ ಅವರು 'ಮಂದಾನ ದಿ ಗಾಡೆಸ್' ಎಂಬ ಭಿತ್ತಪತ್ರ ಹಿಡಿದು ಗಮನ ಸೆಳೆದರು

ತಿತಾಸ್ ಪ್ರಮುಖ ಮೂವರು ಬ್ಯಾಟರ್‌ಗಳ ವಿಕೆಟ್ ಗಳಿಸಿದರು. ವಿಜಯಪುರದ ರಾಜೇಶ್ವರಿ ಗಾಯಕವಾಡ (20ಕ್ಕೆ2) ಅವರು ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ಗೆ ಪೆಟ್ಟು ನೀಡಿದರು. ದೀಪ್ತಿ ಶರ್ಮಾ, ಪೂಜಾ ವಸ್ತ್ರಕರ್ ಮತ್ತು ದೇವಿಕಾ ವೈದ್ಯ ತಲಾ ಒಂದು ವಿಕೆಟ್ ಗಳಿಸಿದರು.

ಭಾರತ ತಂಡವು ಕೂಟದ ಆರಂಭದಿಂದಲೂ ಚಿನ್ನ ಗೆಲ್ಲುವ ನೆಚ್ಚಿನ ತಂಡವಾಗಿತ್ತು. ಆದರೆ ಇಲ್ಲಿಯ ಕ್ರಿಕೆಟ್ ಮೈದಾನ ಮತ್ತು ಪಿಚ್‌ಗಳು ಕಳಪೆಮಟ್ಟದ್ದಾಗಿದ್ದವು.

ಹೋದ ವರ್ಷ ನಡೆದಿದ್ದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತ ತಂಡವು ಬೆಳ್ಳಿ ಪದಕ ಜಯಿಸಿತ್ತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 116 (ಹರ್ಮನ್‌ಪ್ರೀತ್ ಕೌರ್ 46, ಜೆಮಿಮಾ ರಾಡ್ರಿಗಸ್ 42) **ಶ್ರೀಲಂಕಾ:** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 97 (ಹಸಿನಿ ಪೆರೆರಾ 25, ತಿತಾಸ್ ಸಾಧು 6ಕ್ಕೆ3) **ಫಲಿತಾಂಶ:** ಭಾರತಕ್ಕೆ 19 ರನ್‌ಗಳ ಜಯ ಮತ್ತು ಚಿನ್ನದ ಪದಕ.

ಬಾಂಗ್ಲಾದೇಶ ತಂಡಕ್ಕೆ ಕಂಚು

ಬಾಂಗ್ಲಾದೇಶ ವನಿತೆಯರ ತಂಡವು ಏಷ್ಯನ್ ಕ್ರೀಡಾಕೂಟದ ಮಹಿಳೆಯರ ಟಿ20 ಕ್ರಿಕೆಟ್‌ನಲ್ಲಿ ಕಂಚಿನ ಪದಕ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಬಾಂಗ್ಲಾ ತಂಡವು 5 ವಿಕೆಟ್‌ಗಳಿಂದ ಪಾಕಿಸ್ತಾನ ಎದುರು ಜಯಿಸಿತು. ಶೋರ್ಣ ಅಖ್ತರ್ (16ಕ್ಕೆ3 ಮತ್ತು ಔಟಾಗದೆ 14) ಅವರ ಆಲ್‌ರೌಂಡ್ ಆಟದಿಂದ ಬಾಂಗ್ಲಾ ಗೆದ್ದಿತು. ಏಷ್ಯನ್ ಕೂಟದಲ್ಲಿ ಬಾಂಗ್ಲಾ ತಂಡಕ್ಕೆ ಇದು ಮೊದಲ ಪದಕವಾಗಿದೆ.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 64 (ಸದಾಫ್ ಶಮ್ಸ್ 13, ನಿದಾ ದಾರ್ 14, ಅಲಿಯಾ ರಿಯಾಜ್ 17, ಸಂಜಿದಾ ಅಖ್ತರ್ 11ಕ್ಕೆ2, ಶೋರ್ಣ ಅಖ್ತರ್ 16ಕ್ಕೆ3) ಬಾಂಗ್ಲಾದೇಶ: 18.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 65 (ಶಮಿಮಾ ಸುಲ್ತಾನ 13, ಶತಿ ರಾಣಿ 13, ಶೋರ್ಣ ಅಖ್ತರ್ ಔಟಾಗದೆ 14, ನಷ್ರಾ ಸಂಧು 10ಕ್ಕೆ3) ಫಲಿತಾಂಶ: ಬಾಂಗ್ಲಾದೇಶ ತಂಡಕ್ಕೆ 5 ವಿಕೆಟ್‌ಗಳ ಜಯಮತ್ತು ಕಂಚಿನ ಪದಕ.

ಪದಕ ಪಟ್ಟಿ (ಅಗ್ರ 10 ದೇಶ)

ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	39	21	9	69
2	ದಕ್ಷಿಣ ಕೊರಿಯಾ	10	10	13	33
3	ಜಪಾನ್	5	14	12	31
4	ಉಜ್ಬೇಕಿಸ್ತಾನ	4	4	6	14
5	ಹಾಂಗ್‌ಕಾಂಗ್	3	4	7	14
6	**ಭಾರತ**	2	3	6	11
7	ಚೀನಾ ತೈಪೆ	2	1	3	6
8	ಇಂಡೊನೇಷ್ಯಾ	1	1	4	6
9	ಥಾಯ್ಲೆಂಡ್	1	0	2	3
10	ಮಕಾವ್	1	0	1	2

ಪುರುಷರ ಕ್ವಾಡ್ರಾಪಲ್ ಸ್ಕಲ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡ ಭಾರತದ ತಂಡದ ಸ್ಪರ್ಧಿಗಳ (ಸುಖಮೀತ್ ಸಿಂಗ್, ಪರ್ಮಿಂದರ್ ಸಿಂಗ್, ಜಾಕರ್ ಖಾನ್, ಸತ್ನಾಮ್ ಸಿಂಗ್)– ಪಿಟಿಐ ಚಿತ್ರ

ಮಹಿಳೆಯರ ವಿಭಾಗದಲ್ಲಿ ನಿರಾಸೆ: ಕೊನೆಯ ಸ್ಥಾನ

ರೋಯಿಂಗ್: ಮತ್ತೆ 2 ಕಂಚು

ಹಾಂಗ್ ಝೌ (ಪಿಟಿಐ): ಭಾರತದ ರೋಯಿಂಗ್ ಪಟುಗಳು ಏಷ್ಯನ್ ಕ್ರೀಡಾಕೂಟದಲ್ಲಿ ಮತ್ತೆ ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡರು. ಇದರೊಂದಿಗೆ ಸೋಮವಾರ ಮುಕ್ತಾಯಗೊಂಡ ಜಲಸಾಹಸ ಕ್ರೀಡೆಯಲ್ಲಿ ಭಾರತ ಒಟ್ಟು ಐದು ಪದಕಗಳನ್ನು ಗೆದ್ದುಕೊಂಡಂತೆ ಆಯಿತು.

ಈ ಹಿಂದಿನ (ಜಕಾರ್ತಾ) ಕ್ರೀಡೆಗಳಲ್ಲಿ ಭಾರತ ಒಂದು ಚಿನ್ನ, ಎರಡು ಕಂಚಿನ ಪದಕಗಳನ್ನು ಪಡೆದಿತ್ತು. ಆದರೆ ಈ ಬಾರಿ ಚಿನ್ನ ಕೈತಪ್ಪಿದೆ. ಎರಡು ಬೆಳ್ಳಿ, ಮೂರು ಕಂಚಿನ ಪದಕಗಳೊಂದಿಗೆ ಒಟ್ಟಾರೆ ಐದನೇ ಸ್ಥಾನ ಪಡೆದಿದೆ. ಕಳೆದ ಬಾರಿ ಭಾರತ ಆರನೇ ಸ್ಥಾನ ಪಡೆದಿತ್ತು.

ಆತಿಥೇಯ ಚೀನಾ ಒಟ್ಟು 11 ಚಿನ್ನ, ಎರಡು ಬೆಳ್ಳಿ ಗೆದ್ದುಕೊಂಡು ಪಾರಮ್ಯ ಮೆರೆಯಿತು. ಉಜ್ಬೇಕಿಸ್ತಾನ (2–4–1) ಎರಡನೇ ಸ್ಥಾನ ಪಡೆಯಿತು.

ಹುಟ್ಟುದೋಣಿ ಕ್ವಾರ್ಟೆಟ್ (ನಾಲ್ಕು ಮಂದಿಯ) ವಿಭಾಗದಲ್ಲಿ ಜಸ್ವಿಂದರ್ ಸಿಂಗ್, ಭೀಮ್ ಸಿಂಗ್, ಪುನೀತ್ ಕುಮಾರ್ ಮತ್ತು ಆಶೀಷ್ ಗೊಲಿಯಾನ್ ಅವರಿದ್ದ ತಂಡಕ್ಕೆ ಸ್ವಲ್ಪದರಲ್ಲೇ ಬೆಳ್ಳಿಯ ಪದಕ ಕೈತಪ್ಪಿತು.

ಪುರುಷರ ಕ್ವಾಡ್ರಾಪಲ್ ಸ್ಕಲ್ಸ್ ವಿಭಾಗದಲ್ಲಿ ಸತ್ನಾಮ್ ಸಿಂಗ್, ಪರ್ಮಿಂದರ್ ಸಿಂಗ್, ಜಾಕರ್ ಖಾನ್ ಮತ್ತು ಸುಖಮೀತ್ ಸಿಂಗ್ ಅವರನ್ನು ಒಳಗೊಂಡ ತಂಡ 6ನಿ.08.61 ಸೆ.ಗಳ ಅವಧಿಯೊಡನೆ ಮೂರನೇ ಸ್ಥಾನ ಗಳಿಸಿತು. ಚಿನ್ನ ಗೆದ್ದ ಚೀನಾ ಸ್ಪರ್ಧಿಗಳು 6ನಿ.02.65 ಸೆ.ಗಳಲ್ಲಿ ಗುರಿತಲುಪಿದರೆ, ಉಜ್ಬೇಕಿಸ್ತಾನ (6:04.64) ಎರಡನೇ ಸ್ಥಾನ ಪಡೆಯಿತು. 2000 ಮೀ. ದೂರದ ಈ ರೇಸ್‌ನಲ್ಲಿ ಕೊನೆಯ 500 ಮೀ. ಉಳಿದಾಗ ಭಾರತದ ಸ್ಪರ್ಧಿಗಳು ನಾಲ್ಕನೇ ಸ್ಥಾನದಿಂದ ಮೂರನೇ ಸ್ಥಾನಕ್ಕೆ ಬಂದರು.

ಪುರುಷರ ಫೋರ್ ಸ್ಪರ್ಧೆಯಲ್ಲೂ ಅಂತಿಮ 500 ಮೀ. ಇದ್ದಾಗ ಭಾರತ ನಾಲ್ಕನೇ ಸ್ಥಾನದಲ್ಲಿತ್ತು. ಆದರೆ ಉತ್ತಮ ಸಮನ್ವಯ ಸಾಧಿಸಿ 6ನಿ.10.81 ಸೆ.ಗಳಲ್ಲಿ ಮೂರನೆ ತಂಡವಾಗಿ ಗುರಿತಲುಪಿತು. ಉಜ್ಬೇಕಿಸ್ತಾನ ತಂಡ 6:04.96 ಅವಧಿಯೊಡನೆ ಚಿನ್ನ ಗೆದ್ದರೆ, ಚೀನಾ (6:10.04) ಎರಡನೇ ಸ್ಥಾನ ಪಡೆಯಿತು.

ಪುರುಷರ ಸಿಂಗಲ್ ಸ್ಕಲ್ಸ್ ಸ್ಪರ್ಧೆಯಲ್ಲಿ ಭಾರತದ ಬಲರಾಜ್ ಪನ್ವರ್ ಸ್ವಲ್ಪದರಲ್ಲೇ ಕಂಚಿನ ಪದಕ ಕಳೆದುಕೊಂಡರು. ಕರ್ನಾಲ್‌ನ 24 ವರ್ಷದ ಬಲರಾಜ್ ಕೊನೆಯ 500 ಮೀ. (ಒಟ್ಟು ದೂರ: 2,000 ಮೀ.) ಇದ್ದಾಗ ನಾಲ್ಕನೇ ಸ್ಥಾನಕ್ಕೆ (7:08.79) ಸರಿದರು. ಅವರಿಗಿಂತ 9 ಸೆಕೆಂಡು ಬೇಗನೇ ತಲುಪಿದ ಹಾಂಗ್‌ಕಾಂಗ್‌ನ ಹಿನ್ ಚುನ್ ಚಿಯು ಅವರು (7:00.55) ಕಂಚಿನ ಪದಕ ಪಡೆದರು. ಚೀನಾದ ಲಿಯಾಂಗ್ ಝೂಂಗ್ (6:57.06) ಅವರು ಚಿನ್ನ, ಜಪಾನ್‌ನ ರಿಯುಟಾ ಅರಕಾವಾ (6:59.79) ಬೆಳ್ಳಿಯ ಪದಕ ಗೆದ್ದುಕೊಂಡರು.

ಹುಟ್ಟುದೋಣಿ 'ಮಹಿಳೆಯರ ಎಂಟು' ವಿಭಾಗದಲ್ಲಿ ಭಾರತ, ಐದು ತಂಡಗಳ ಪೈಕಿ ಕೊನೆಯ ಸ್ಥಾನ (7:05.71ಸೆ) ಗಳಿಸಿತು. ಚೀನಾ 6ನಿ.33.61 ಸೆ.ಗಳ ಅವಧಿಯೊಡನೆ ಆರಾಮವಾಗಿ ಚಿನ್ನ ಗೆದ್ದುಕೊಂಡಿತು.

ನಾಲ್ಕನೇ ಸ್ಥಾನ ಪಡೆದ ಥಾಯ್ಲೆಂಡ್ ಸ್ಪರ್ಧಿಗಳು, ಭಾರತ ತಂಡಕ್ಕಿಂತ 15 ಸೆ. ಬೇಗ ಗುರಿಮುಟ್ಟಿತು.

ಬ್ಯಾಸ್ಕೆಟ್‌ಬಾಲ್- ಭಾರತಕ್ಕೆ ಮಿಶ್ರಫಲ: ಏಷ್ಯನ್ ಕ್ರೀಡಾಕೂಟದ 3X3 ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಭಾರತಕ್ಕೆ ಸೋಮವಾರ ಮಿಶ್ರ ಫಲ ದೊರೆಯಿತು.

ಪುರುಷರ ತಂಡದವರು ಮಲೇಷ್ಯಾ ವಿರುದ್ಧ ಗೆದ್ದರೆ, ಮಹಿಳೆಯರು ಉಜ್ಬೇಕಿಸ್ತಾನ ಕೈಯಲ್ಲಿ ಪರಾಭವಗೊಂಡರು.

ಪುರುಷರ ವಿಭಾಗದ 'ಸಿ' ಗುಂಪಿನ ಪಂದ್ಯದಲ್ಲಿ ಸಹಜ್ ಪ್ರತಾಪ್ ಸಿಂಗ್ (10 ಪಾಯಿಂಟ್ಸ್) ಅವರ ಉತ್ತಮ ಆಟದ ನೆರವಿನಿಂದ ಭಾರತ, 20–16 ರಿಂದ ಜಯ ಸಾಧಿಸಿತು. ಮುಂದಿನ ಪಂದ್ಯದಲ್ಲಿ ಬುಧವಾರ ಮಕಾವ್ ವಿರುದ್ಧ ಪೈಪೋಟಿ ನಡೆಸಲಿದೆ.

ಮಹಿಳೆಯರ ವಿಭಾಗದ 'ಎ' ಗುಂಪಿನ ಪಂದ್ಯದಲ್ಲಿ ಭಾರತ, 14–19 ರಿಂದ ಉಜ್ಬೇಕಿಸ್ತಾನಕ್ಕೆ ತಲೆಬಾಗಿತು. ಭಾರತ ತಂಡದ ವೈಷ್ಣವಿ 9 ಪಾಯಿಂಟ್ಸ್ ಕಲೆಹಾಕಿ ಗಮನ ಸೆಳೆದರು.

ಜಿಮ್ನಾಸ್ಟಿಕ್ಸ್: ಫೈನಲ್‌ಗೆ ಪ್ರಣತಿ

ಏಷ್ಯನ್ ಗೇಮ್ಸ್‌ನ ಜಿಮ್ನಾಸ್ಟಿಕ್ಸ್‌ನ ಸ್ಪರ್ಧೆಯಲ್ಲಿ ಪ್ರಣತಿ ನಾಯಕ್ –ಪಿಟಿಐ ಚಿತ್ರ

ಹಾಂಗ್‌ಝೌ (ಪಿಟಿಐ): ಭಾರತದ ಪ್ರಣತಿ ನಾಯಕ್ ಅವರು ಸೋಮವಾರ ಜಿಮ್ನಾಸ್ಟಿಕ್ಸ್‌ನ ವಾಲ್ಟ್ ಮತ್ತು ಆಲ್‌ರೌಂಡ್ ಸ್ಪರ್ಧೆಗಳಲ್ಲಿ ಫೈನಲ್‌ಗೆ ಅರ್ಹತೆ ಪಡೆದರು.

ಮಹಿಳೆಯರ ವಾಲ್ಟ್ ಸ್ಪರ್ಧೆಯಲ್ಲಿ ಪ್ರಣತಿ ಒಟ್ಟು 12.716 ಅಂಕದೊಂದಿಗೆ ಆರನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದರು.

ಜತೆಗೆ ಬುಧವಾರ ನಡೆಯುವ ಮಹಿಳೆಯರ ಆಲ್‌ರೌಂಡ್ ಸ್ಪರ್ಧೆಯ ಫೈನಲ್‌ಗೂ ಅವರು ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ.

ಚೆಸ್: ಹಿನ್ನಡೆ ಕಂಡ ಹಂಪಿ, ಹಾರಿಕಾ

ವಿದಿತ್‌ಗೆ ಎರಡು ಜಯ

ಹಾಂಗ್‌ಝೌ (ಪಿಟಿಐ): ಎರಡನೇ ಸುತ್ತಿನಲ್ಲಿ ಸೋಲಿನ ಆಘಾತದಿಂದ ಚೇತರಿಸಿಕೊಂಡ ಭಾರತದ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ, ಏಷ್ಯನ್ ಗೇಮ್ಸ್ ಚೆಸ್ ವೈಯಕ್ತಿಕ ವಿಭಾಗದಲ್ಲಿ ಸೋಮವಾರ ಆಡಿದ ಎರಡೂ ಪಂದ್ಯಗಳಲ್ಲಿ ಜಯಗಳಿಸಿದರು. ಮೂರನೇ ಶ್ರೇಯಾಂಕದ ವಿದಿತ್ ಅವರು ಸ್ವದೇಶದ ಅರ್ಜುನ್ ಇರಿಗೇಶಿ ಜೊತೆ ಮೂರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಭಾರತ ಹಿನ್ನಡೆ ಅನುಭವಿಸಿತು.

ಅಗ್ರಸ್ಥಾನದಲ್ಲಿರುವ ಅಗ್ರ ಶ್ರೇಯಾಂಕದ ವೀ ಯಿ (ಚೀನಾ) ಮತ್ತು ಎರಡನೇ ಶ್ರೇಯಾಂಕದ ನಾಡಿರ್ಬೆಕ್ ಅಬ್ದುಸತ್ತಾರೋವ್ (ಉಜ್ಬೇಕಿಸ್ತಾನ) ಅವರು ತಲಾ ಮೂರುವರೆ ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನದಲ್ಲಿದ್ದಾರೆ.

28 ವರ್ಷದ ಗುಜರಾತಿ ಮೂರನೇ ಸುತ್ತಿನಲ್ಲಿ ಥಾಯ್ಲೆಂಡ್‌ನ ಪ್ರಿನ್ ಲಾವೊಹಾವಿರಪಾಪ್ ಅವರನ್ನು, ನಾಲ್ಕನೇ ಸುತ್ತಿನಲ್ಲಿ ವಿಯೆಟ್ನಾಮ್‌ನ ಲಿ ತುವಾನ್ ಮಿನ್ ಅವರನ್ನು ಸೋಲಿಸಿದರು. 20 ವರ್ಷದ ಅರ್ಜುನ್, ವಿಯೆಟ್ನಾಮಿ ಎನ್‌ಗುಯೆನ್ ಟ್ರುಆಂಗ್ ಅವರನ್ನು ಸೋಲಿಸಿದರು. ನಂತರ ಇರಾನ್‌ನ ಜಿಎಂ ತಬಾತಬೇಯಿ ಸೈಯದ್‌ಮೊಹಮ್ಮದಾಮಿ ಅವರ ಜೊತೆ ಡ್ರಾ ಮಾಡಿಕೊಂಡರು.

ಭಾರತದ ಪ್ರಮುಖ ಆಟಗಾರ್ತಿಯರಾದ ಕೋನೇರು ಹಂಪಿ ಮತ್ತು ಡಿ. ಹರಿಕಾ ಅವರು ಸೋಮವಾರ ಎರಡು ಸುತ್ತುಗಳಿಂದ ಬರೇ ಅರ್ಧ ಪಾಯಿಂಟ್ ಗಳಿಸಲಷ್ಟೇ ಶಕ್ತರಾದರು. ಭಾನುವಾರ ಇವರಿಬ್ಬರು ಎರಡೂ ಪಂದ್ಯಗಳಲ್ಲಿ ಜಯಗಳಿಸಿದ್ದರು.

ವಿದಿತ್ ಗುಜರಾತಿ

ಚೀನಾದ ಅಗ್ರ ಶ್ರೇಯಾಂಕದ ಆಟಗಾರ್ತಿ ಹೌ ಯಿಫಾನ್ ಅವರು ಮೂರನೇ ಸುತ್ತಿನಲ್ಲಿ ಹಾರಿಕಾ ಅವರನ್ನು, ನಾಲ್ಕನೇ ಸುತ್ತಿನಲ್ಲಿ ಹಂಪಿ ಅವರಿಗೆ ಸೋಲುಣಿಸಿದರು. ಹಂಪಿ ಮೂರನೇ ಸುತ್ತಿನಲ್ಲಿ ಚೀನಾದ ಝು ಜಿನೆರ್ ಅವರ ಜೊತೆ ಡ್ರಾ ಮಾಡಿಕೊಂಡಿದ್ದರು. ಹಾರಿಕಾ ನಾಲ್ಕನೇ ಸುತ್ತಿನಲ್ಲಿ ನಿಲುಫರ್ ಯಕುಬಯೇವಾ (ಉಜ್ಬೇಕಿಸ್ತಾನ) ವಿರುದ್ಧ ಪಾಯಿಂಟ್ ಹಂಚಿಕೊಂಡರು. ಹಾರಿಕಾ, ಹಂಪಿ ಇಬ್ಬರೂ, ಇತರ ಐವರು ಆಟಗಾರ್ತಿಯ ಜೊತೆ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಯಿಫಾನ್ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿ ಏಕಾಂಗಿಯಾಗಿ ಅಗ್ರಸ್ಥಾನದಲ್ಲಿ ಇದ್ದಾರೆ. ಜಿನೆರ್ ಎರಡನೇ ಸ್ಥಾನದಲ್ಲಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ ಇಂದು

ಸೇಲಿಂಗ್: ಪುರುಷರ ವಿಂಡ್‌ಸರ್ಫಿಂಗ್; ಬೆಳಿಗ್ಗೆ 8.30 (ಎಸ್. ಜೆರೋಮ್ ಕುಮಾರ್). ಮಿಕ್ಸೆಡ್ ಮಲ್ಟಿಹಲ್; ಬೆಳಿಗ್ಗೆ 8.30 (ಡಿ. ಸಿದ್ದೇಶ್ವರ ಇಂದಾರ್, ಸರವಣನ್ ರಮ್ಯಾ). ಮಿಕ್ಸೆಡ್ ಡಿಂಘಿ; ಬೆಳಿಗ್ಗೆ 8.30 (ಕೊಂಗರ ಪ್ರೀತಿ, ಸುಧಾಂಶು ಶೇಖರ್). ಮಹಿಳೆಯರ ಡಿಂಘಿ; ಬೆಳಿಗ್ಗೆ 8.30 (ಠಾಕೂರ್ ನೇಹಾ) ಪುರುಷರ ಡಿಂಘಿ; ಬೆಳಿಗ್ಗೆ 8.40 (ಮೆನನ್ ಅದ್ವೈತ್). ಮಹಿಳೆಯರ ಸ್ಕಿಫ್; ಬೆಳಿಗ್ಗೆ 11.30 (ತೋಮರ್ ಹರ್ಷಿತಾ, ವರ್ಮಾ ಶೀತಲ್). ಮಹಿಳೆಯರ ವಿಂಡ್‌ಸರ್ಫಿಂಗ್; ಬೆಳಿಗ್ಗೆ 11.30 (ಗಣೇಶ್ ಐಶ್ವರ್ಯಾ). ಪುರುಷರ ಸ್ಕಿಫ್; ಬೆಳಿಗ್ಗೆ 11.40 (ಕೆ. ಚೆಂಗಪ್ಪ ಗಣಪತಿ, ಅಶೋಕ್ ವರುಣ್ ಠಕ್ಕರ್)

ಸ್ಕ್ವ್ಯಾಷ್: ಪುರುಷರ ವಿಭಾಗ; ಭಾರತ–ಸಿಂಗಪುರ; ಬೆಳಿಗ್ಗೆ 7.30. ಮಹಿಳೆಯರ ವಿಭಾಗ; ಭಾರತ– ಪಾಕಿಸ್ತಾನ; ಬೆಳಿಗ್ಗೆ 7.30. ಪುರುಷರ ವಿಭಾಗ; ಭಾರತ–ಕತಾರ್; ಸಂಜೆ 4.30

ಈಜು: ಮಹಿಳೆಯರ 100 ಮೀ. ಫ್ರೀಸ್ಟೈಲ್; ಬೆಳಿಗ್ಗೆ 7.30 (ಶರ್ಮಾ ಶಿವಾಂಗಿ), ಮಹಿಳೆಯರ 200 ಮೀ. ಬ್ಯಾಕ್ ಸ್ಟ್ರೋಕ್; ಬೆಳಿಗ್ಗೆ 8 (ಜೋಶಿ ಪಾಲಕ್ ಅಶುತೋಷ್). ಪುರುಷರ 4x100 ಮೀ. ರಿಲೇ; ಬೆಳಿಗ್ಗೆ 9.05

ವಾಲಿಬಾಲ್: ಪುರುಷರ ತಂಡ; ಭಾರತ– ಪಾಕಿಸ್ತಾನ; ಸಂಜೆ 4

ವುಶು: ಪುರುಷರ 70 ಕೆಜಿ ಕ್ವಾರ್ಟರ್ ಫೈನಲ್; ಸಂಜೆ 7.30 (ಸೂರಜ್ ಯಾದವ್)

ಬಾಕ್ಸಿಂಗ್: ಪುರುಷರ 51–57 ಕೆಜಿ ವಿಭಾಗದ ಸ್ಪರ್ಧೆ; ಮಧ್ಯಾಹ್ನ 12.30 (ಸಚಿನ್). ಪುರುಷರ 92 ಕೆಜಿ ಪ್ರಿಲಿಮಿನರಿ; ಸಂಜೆ 6.15 (ನರೇಂದರ್)

ಇ-ಸ್ಪೋರ್ಟ್ಸ್: ಸ್ಟ್ರೀಟ್ ಫೈಟರ್ ವಿ; (ಪ್ರಜಾಪತಿ ಮಯಾಂಕ್, ಬಿಸ್ವಾಸ್ ಅಯಾನ್)

ಫೆನ್ಸಿಂಗ್: ಮಹಿಳೆಯರ ವೈಯಕ್ತಿಕ ಸ್ಪರ್ಧೆ; ಸಂಜೆ 6.30 (ಭವಾನಿ ದೇವಿ)

ಹಾಕಿ: ಪುರುಷರ ವಿಭಾಗ; ಭಾರತ–ಸಿಂಗಪುರ; ಸಂಜೆ 6.30

ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್, ಬೆಳಿಗ್ಗೆ 5.30ರಿಂದ

ಶೂಟಿಂಗ್ ಪಡೆಗೆ ಸ್ವರ್ಣ

10 ಮೀಟರ್ಸ್ ಏರ್ ರೈಫಲ್ ವಿಭಾಗದಲ್ಲಿ ವಿಶ್ವದಾಖಲೆ

ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಪಿಟಿಐ ಚಿತ್ರ

ಹಾಂಗ್‌ಝೌ (ಪಿಟಿಐ): ಭಾರತದ ಶೂಟರ್‌ಗಳು ಸೋಮವಾರ ಬೆಳಿಗ್ಗೆ ಚಿನ್ನದ ಪದಕ ಬೇಟೆಯಾಡಿದರು. ಅದರೊಂದಿಗೆ ವಿಶ್ವದಾಖಲೆಯನ್ನೂ ಬರೆದರು.

ಕೂಟದ ಎರಡನೇ ದಿನದಂದು ಪುರುಷರ ತಂಡ ವಿಭಾಗದಲ್ಲಿ 10 ಮೀಟರ್ಸ್ ಏರ್ ರೈಫಲ್ ವಿಭಾಗದಲ್ಲಿ ವಿಶ್ವ ಚಾಂಪಿಯನ್ ರುದ್ರಾಂಕ್ಷ್ ಪಾಟೀಲ, ಒಲಿಂಪಿಯನ್ ದಿವ್ಯಾಂಶ್ ಸಿಂಗ್ ಹಾಗೂ ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಅವರಿದ್ದ ತಂಡವು ಚಿನ್ನ ಗೆದ್ದಿತು. ಈ ಕೂಟದಲ್ಲಿ ಭಾರತಕ್ಕೆ ಒಲಿದ ಮೊದಲ ಬಂಗಾರ ಇದಾಗಿದೆ.

ಶೂಟಿಂಗ್‌ನಲ್ಲಿ ಬಲಾಢ್ಯವಾಗಿರುವ ಆತಿಥೇಯ ಚೀನಾ ಮತ್ತು ದಕ್ಷಿಣ ಕೊರಿಯಾ ತಂಡಗಳನ್ನು ಭಾರತವು ಹಿಮ್ಮೆಟ್ಟಿಸಿತು. ಕ್ವಾಲಿಫಿಕೇಷನ್‌ನಲ್ಲಿ 1893.7 ಅಂಕಗಳನ್ನು ಗಳಿಸಿತು.

ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಅಧಿಕಾರಯುತವಾಗಿ ಕೌಶಲ ಪ್ರದರ್ಶಿಸಿದ ಶೂಟಿಂಗ್ ತಂಡ ಇದಾಗಿದೆ. 19 ವರ್ಷದ ರುದ್ರಾಂಕ್ಷ್ 632.5 ಅಂಕ, ತೋಮರ್ 631.6 ಮತ್ತು ಪನ್ವಾರ್ 629.6 ಅಂಕಗಳನ್ನು ಕಲೆಹಾಕಿದರು. ಇದರೊಂದಿಗೆ ಗರಿಷ್ಠ ಸ್ಕೋರ್ ಗಳಿಕೆಯ ವಿಶ್ವದಾಖಲೆ ನಿರ್ಮಾಣವಾಯಿತು.

ಅಮೋಘ ಫಾರ್ಮ್‌ನಲ್ಲಿರುವ ರುದ್ರಾಂಕ್ಷ್ (104.8, 106.1, 103.8, 105.5 106.7 ಹಾಗೂ 105.6), ಐಶ್ವರಿ (104.1, 105.5, 105.3, 105.7, 105.7 ಹಾಗೂ 105.3) ಮತ್ತು ದಿವ್ಯಾಂಶ್ (104.8, 104.3, 104.6, 104.7, 106.3 and 104.9) ಅವರು ತಂಡವನ್ನು ಚಿನ್ನದತ್ತ ಮುನ್ನಡೆಸಿದರು.

'ಈ ಕ್ರೀಡಾಕೂಟದಲ್ಲಿ ತನ್ನ ಸಂಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡುವುದಾಗಿ ನನ್ನ ಮಗ ಹೇಳಿದ್ದ. ಅದೇ ರೀತಿ ಇವತ್ತು ಚಿನ್ನಕ್ಕೆ ಮುತ್ತಿಟ್ಟಿದ್ದಾನೆ. ಅಪಾರ ಆತ್ಮವಿಶ್ವಾಸದಲ್ಲಿರುವ ಆತನು ಇನ್ನಷ್ಟು ಯಶಸ್ಸು ಗಳಿಸುವುದು ಖಚಿತ' ಎಂದು ರುದ್ರಾಂಕ್ಷ್ ಅವರ ತಂದೆ ಬಾಳಾಸಾಹೇಬ ಪಾಟೀಲ ಹೇಳಿದರು.

ಈ ಸ್ಪರ್ಧೆಯಲ್ಲಿ ದಕ್ಷಿಣ ಕೊರಿಯಾ ತಂಡವು 1890.1 ಅಂಕಗಳೊಂದಿಗೆ ಎರಡನೇ ಹಾಗೂ ಚೀನಾ 1888.2 ಅಂಕಗಳೊಂದಿಗೆ 3ನೇ ಸ್ಥಾನ ಪಡೆದವು.

ಮೊದಲ ದಿನವಾದ ಸೋಮವಾರ ಭಾರತವು ಒಟ್ಟು ಐದು ಪದಕ ಜಯಿಸಿತ್ತು. ಅದರಲ್ಲಿ ಶೂಟರ್‌ಗಳು ಒಂದು ಬೆಳ್ಳಿ ಮತ್ತು ಒಂದು ಕಂಚು ಕಾಣಿಕೆ ನೀಡಿದ್ದರು.

ಹೋದ ವರ್ಷ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದ ರುದ್ರಾಂಕ್ಷ್ ಪ್ಯಾರಿಸ್ ಒಲಿಂಪಿಕ್ಸ್‌ಗೆ ಪ್ರವೇಶ ಗಿಟ್ಟಿಸಿದ್ದಾರೆ.

ಫೋಟೊಕ್ಕೆ ಒಲ್ಲೆನೆಂದ ಉತ್ತರ ಕೊರಿಯಾ: ಸೋಮವಾರ ಶೂಟಿಂಗ್ (ಪುರುಷರ 10 ಮೀ. ರನ್ನಿಂಗ್ ಟಾರ್ಗೆಟ್) ಸ್ಪರ್ಧೆಯಲ್ಲಿ ದಕ್ಷಿಣ ಕೊರಿಯಾ ಎದುರು ಬದ್ಧ ಎದುರಾಳಿ ಉತ್ತರ ಕೊರಿಯಾ ಸ್ವಲ್ಪದರಲ್ಲೇ ಚಿನ್ನದ ಪದಕ ಕಳೆದುಕೊಂಡಿತು.

ಆದರೆ, ಪದಕ ವಿಜೇತರ ಗುಂಪು ಫೋಟೊದಲ್ಲಿ ಭಾಗಿಯಾಗಲು ಉತ್ತರ ಕೊರಿಯಾ ತಂಡದ ಸ್ಪರ್ಧಾಳುಗಳು ನಿರಾಕರಿಸಿದರು.

ತೋಮರ್‌ಗೆ ಕಂಚಿನ ಪದಕ

ವೈಯಕ್ತಿಕ ವಿಭಾಗದಲ್ಲಿ ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಅವರು ಕಂಚಿನ ಪದಕ ಜಯಿಸಿದರು.

10 ಮೀಟರ್ ಏರ್ ರೈಫಲ್ ವಿಭಾಗದಲ್ಲಿ 228.8 ಅಂಕಗಳನ್ನು ಗಳಿಸಿದ ಐಶ್ವರಿ ಮೂರನೇ ಸ್ಥಾನ ಪಡೆದರು. ಚೀನಾದ ಲಿಹಾವೊ ಶೆಂಗ್ (253.3) ಹಾಗೂ ದಕ್ಷಿಣ ಕೊರಿಯಾದ ಹಜುನ್ ಪಾರ್ಕ್ (251.3) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗಳಿಸಿದರು.

ಐಶ್ವರಿ ಮತ್ತು ಚೀನಾದ ಸ್ಪರ್ಧಿಯ ನಡುವೆ ಫೈನಲ್ ಶಾಟ್‌ನಲ್ಲಿ ತುರುಸಿನ ಸ್ಪರ್ಧೆ ಏರ್ಪಟ್ಟಿತ್ತು. 9.8 ಅಂಕ ಶೂಟ್ ಮಾಡಿದ ಐಶ್ವರಿ ಹಿನ್ನಡೆ ಅನುಭವಿಸಿದರು.

ಶೂಟಿಂಗ್‌ನಲ್ಲಿ ಮತ್ತೊಂದು ಕಂಚಿನ ಪದಕ ಪುರುಷರ 25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಲಭಿಸಿತು. ಆದರ್ಶ್ ಸಿಂಗ್, ಅನೀಶ್ ಭನ್ವಾಲಾ ಮತ್ತು ವಿಜಯವೀರ್ ಸಿಧು ಅವರನ್ನೊಳಗೊಂಡ ತಂಡ 1,718 ಪಾಯಿಂಟ್ಸ್‌ಗಳೊಂದಿಗೆ ನಾಲ್ಕನೇ ಸ್ಥಾನ ಗಳಿಸಿತು. ವೈಯಕ್ತಿಕ ವಿಭಾಗದಲ್ಲಿ ವಿಜಯವೀರ್ ಅಲ್ಪ ಅಂತರದಲ್ಲಿ ಪದಕ ಗೆಲ್ಲುವ ಅವಕಾಶ ಕಳೆದುಕೊಂಡು ನಾಲ್ಕನೇ ಸ್ಥಾನ ಪಡೆದರು.

ಪದಕ: ಚೀನಾ ಸಿಂಹಪಾಲು

ಆತಿಥೇಯ ಚೀನಾದ ಪಾರಮ್ಯ ಎರಡನೇ ದಿನವೂ ಎಗ್ಗಿಲ್ಲದೇ ಮುಂದುವರಿಯಿತು. ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್, ಈಜು, ಸ್ಕೇಟ್ ಬೋರ್ಡಿಂಗ್, ಟೇಕ್ವಾಂಡೊ, ಫೆನ್ಸಿಂಗ್, ವುಶು, ಶೂಟಿಂಗ್, ರೋಯಿಂಗ್ ಸ್ಪರ್ಧೆಗಳಲ್ಲಿ ಚೀನಾ ಚಿನ್ನಗಳನ್ನು ಬಾಚಿಕೊಂಡಿತು. ಆದರೆ ರೋಯಿಂಗ್‌ನಲ್ಲಿ ಉಜ್ಬೇಕಿಸ್ತಾನದ ಹಾಯಿದೋಣಿ ಸ್ಪರ್ಧಿಗಳು (ರೋವರ್ಸ್) ಪುರುಷರ ಫೋರ್ ಮತ್ತು ಮಹಿಳೆಯ ಸಿಂಗಲ್ ಸ್ಕಲ್ಸ್ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದು, ಚೀನಾ ಏಕಸ್ವಾಮ್ಯಕ್ಕೆ ತಡೆಯೊಡ್ಡಿದರು.

ಬಾಕ್ಸಿಂಗ್: ಪ್ರಿ ಕ್ವಾರ್ಟರ್‌ಗೆ ದೀಪಕ್, ನಿಶಾಂತ್

ಹಾಂಗ್‌ಝೌ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿಕ ಪದಕ ವಿಜೇತ ಬಾಕ್ಸರ್ ದೀಪಕ್ ಭೋರಿಯಾ ಮತ್ತು ನಿಶಾಂತ್ ದೇವ್ ಅವರು ನಿರಾಯಾಸ ಗೆಲುವಿನ ಮೂಲಕ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಸೋಮವಾರ ನಡೆದ ಪುರುಷರ 51 ಕೆ.ಜಿ. ವಿಭಾಗದ 16 ಘಟ್ಟದ ಹಣಾಹಣಿಯಲ್ಲಿ ದೀಪಕ್ 5–0 ಯಿಂದ ಮಲೇಷ್ಯಾದ ಮುಹಮ್ಮದ್ ಅಬ್ದುಲ್ ಖಯ್ಯೂಮ್ ಅವರನ್ನು ಪರಾಭವಗೊಳಿಸಿದರು.

71 ಕೆ.ಜಿ. ವಿಭಾಗದ ಮೊದಲ ಸುತ್ತಿನ ಬೌಟ್‌ನಲ್ಲಿ ನಿಶಾಂತ್ ಇದೇ ಅಂತರದಿಂದ ನೇಪಾಳದ ದೀಪೇಶ್ ಲಾಮಾ ಅವರನ್ನು ಮಣಿಸಿದರು.

ನಿಶಾಂತ್ ದೇವ್

ಕಳೆದ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಜಯಿಸಿದ್ದ ಅಮಿತ್ ಪಂಘಲ್ ಅವರನ್ನು ಮಣಿಸಿ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದ ದೀಪಕ್, ಪ್ರಬಲ ಪಂಚ್‌ಗಳ ಮೂಲಕ ಎದುರಾಳಿಯನ್ನು ನಿಬ್ಬೆರಗಾಗಿಸಿದರು. ರಕ್ಷಣೆಗೆ ಒತ್ತು ನೀಡಿದ ಮಲೇಷ್ಯಾದ ಬಾಕ್ಸರ್ ಪಾಯಿಂಟ್ಸ್‌ಗಳ ಖಾತೆ ತೆರೆಯಲು ವಿಫಲರಾದರು.

ಮುಂದಿನ ಸುತ್ತಿನಲ್ಲಿ ಅವರು 2021ರ ವಿಶ್ವಚಾಂಪಿಯನ್ ಜಪಾನ್‌ನ ತೊಮೊಯ ತುಬೊಯ್ ವಿರುದ್ಧ ಹಣಾಹಣಿ ನಡೆಸುವರು.

ಅರುಂಧತಿಗೆ ನಿರಾಸೆ: ಮಹಿಳೆಯರ 66 ಕೆ.ಜಿ ವಿಭಾಗದಲ್ಲಿ ಕಣದಲ್ಲಿದ್ದ ಅರುಂಧತಿ ಚೌಧರಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿದರು. ಚೀನಾದ ವಿಶ್ವಚಾಂಪಿಯನ್ ಬಾಕ್ಸರ್ ಯಾಂಗ್ ಲಿಯು 5–0 ರಿಂದ ಅರುಂಧತಿ ಅವರನ್ನು ಮಣಿಸಿದರು.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ,ಬೆಂಗಳೂರು–560 001.

No.: SPLOCA/AALA/AUC/01/2023-24 Date: 25.09.2023

NOTICE/INVITATION FOR E-AUCTION FOR IMMOVABLE PROPERTY

Persuant to attachment of Immovable properties by the Government under the provisions of the Karnataka Protection of Interest of Depositors in Financial Establishments Act, 2004 (KPIDFE Act) and pursuant to the absolute attachment order by the Hon'ble Special Court the Special Officer & Competent Authority (under KPIDFE-IMA and other Scam), is issuing notice for e-auction of the immovable property through e-auction on **'as is where is and whatever there is basis'**.

"SPLOCA" here by invites bids from the intending bidders along with a bid deposit as mentioned in the table below as Earnest Money for **Immovable Properties** to be paid through DD in favor of **"Special Officer and Competent Authority (EMD)"** or through RTGS/NEFT to the Account number **41506340119, IFSC Code: SBIN0040277 STATE BANK OF INDIA, VIDHANA SOUDHA Branch.**

Short description of the Immovable items

Sl. No.	Address of the Property	Area (Dimension) & Boundaries	Title
1	Site bearing No.41/1 Situated at Kadugondanahalli Village, Kasaba Hobli, Bangalore North Taluk, Arabic College Post., Bengaluru -560045 Located in Old Ward No.94, New Ward No.30 having BBMP PID No.94-43/41/1 (Near Aala Dreams Apartment) comprising of non working petrol bunk. Google Map Link: https://maps.app.goo.gl/2QZLgz7tjBUJDcqD7	Land Area: 4800 sq.ft (Four thousand eight hundred square feet only) Bounded on East by: The factory of M/s. Bharath Products West by: Nagavara Main Road North by: Private Property South by: Private Property	Clear Title by Court in order No. MISC No. 1087/2019 and MiSC No. 51/2022

Reserve Price (Rs)	EMD (Rs)	Bid Increase Value (Rs)	Last Date of Submission of Bids & EMD submission	Date of Inspection & time	Date of Pre-bid meeting & time	Date & Time of E-Auction
5,00,00,000/- (Rs. Five Crores only)	50,00,000/- (Rs. Fifty Lakhs only)	5,00,000/- (Rs. Five Lakhs only)	5th October 2023 until 5pm	9th October 2023 11:00am to 05:00pm	10th of October 2023 3 pm to 4 pm	12th of October 2023 11 am to 1 pm

For Registration & Online Auction, you can login to: https://www.bankeauctions.com. The interested bidders who require auction related information can contact **Joint Secretary, Office of the Special Officer & Competent Authority,** 3rd Floor, Podium Block, Visveswuriah Towers, Dr.Ambedkar Veedi, Bengaluru-560001, e-mail ID: **splocaeauction@mail.com** or Contact Mob. No **8217203930.**

ಸ್ಥಳ : ಬೆಂಗಳೂರು
ದಿನಾಂಕ : 22–09–2023

ಸಹಿ/–
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು.
(KPIDFE-IMA ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು), ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/1421/2023–24

ಏಷ್ಯನ್ ಕ್ರೀಡಾಕೂಟದಲ್ಲಿ ಹಾಕಿ: ಭಾರತ–ಸಿಂಗಪುರ ಹಣಾಹಣಿ ಇಂದು

ಹರ್ಮನ್ ಪಡೆಗೆ ಜಯದ ಗುರಿ

ಹಾಂಗ್‌ಝೌ(ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ತಂಡವು ಏಷ್ಯನ್ ಕ್ರೀಡಾಕೂಟದ ಪುರುಷರ ಹಾಕಿ ವಿಭಾಗದಲ್ಲಿ ಮಂಗಳವಾರ ಸಿಂಗಪುರ ತಂಡದ ಎದುರು ಆಡಲಿದೆ.

ಮೊದಲ ಪಂದ್ಯದಲ್ಲಿ ಭಾರತ ತಂಡವು 16–0ಯಿಂದ ಉಜ್ಬೇಕಿಸ್ತಾನ ವಿರುದ್ಧ ಜಯಿಸಿತ್ತು. ಇದೀಗ ಎರಡನೇ ಪಂದ್ಯದಲ್ಲಿ ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳನ್ನಾಗಿ ಪರಿವರ್ತಿಸುವ ಕೌಶಲವನ್ನು ಸುಧಾರಣೆ ಮಾಡಿಕೊಳ್ಳುವತ್ತ ಭಾರತ ಚಿತ್ತ ನೆಟ್ಟಿದೆ.

ಮೊದಲ ಪಂದ್ಯದಲ್ಲಿ ತನಗೆ ಸಿಕ್ಕ 14 ಪೆನಾಲ್ಟಿಗಳಲ್ಲಿ ಕೇವಲ ಐದು ಗೋಲು ಮಾಡುವಲ್ಲಿ ಭಾರತದ ಆಟಗಾರರು ಸಫಲರಾಗಿದ್ದರು. ಅದರಿಂದಾಗಿ ಈ ವಿಭಾಗದಲ್ಲಿ ಹೆಚ್ಚಿನ ಸುಧಾರಣೆಗೆ ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಮುಂದಾಗಿದ್ದಾರೆ.

ಏಕೆಂದರೆ ಮುಂದಿನ ಹಂತಗಳಲ್ಲಿ ಬಲಿಷ್ಠ ತಂಡಗಳು ಎದುರಾದಾಗ ಒಂದೊಂದು ಗೋಲು ಅವಕಾಶವೂ ಅಮೂಲ್ಯವಾಗುತ್ತದೆ. ತಂಡದಲ್ಲಿರುವ

ಹರ್ಮನ್‌ಪ್ರೀತ್ ಸಿಂಗ್ ಮತ್ತು ಮನಪ್ರೀತ್ ಸಿಂಗ್

ಲಲಿತ್ ಉಪಾಧ್ಯಾಯ, ಮನದೀಪ್ ಸಿಂಗ್ ಅವರು ಉತ್ತಮ ಆಟವಾಡಿದ್ದರು. ಮಿಡ್‌ಫೀಲ್ಡ್‌ನಲ್ಲಿ ಮನಪ್ರೀತ್ ಸಿಂಗ್, ಉಪನಾಯಕ ಹಾರ್ದಿಕ್ ಸಿಂಗ್ ಮತ್ತು ವಿವೇಕ್ ಸಾಗರ ಪ್ರಸಾದ್ ಅವರು ತಮ್ಮ ಉತ್ತಮ ಲಯವನ್ನು ಮುಂದುವರಿಸುವ

ವಿಶ್ವಾಸದಲ್ಲಿದ್ದಾರೆ.

ಸಿಂಗಪುರ ತಂಡವು ತನ್ನ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಎದುರು ದೊಡ್ಡ ಅಂತರದಿಂದ ಸೋಲನುಭವಿಸಿತ್ತು. ಅಷ್ಟೇನೂ ಬಲಿಷ್ಠವಲ್ಲದ ಸಿಂಗಪುರವನ್ನು ಸೋಲಿಸುವ ವಿಶ್ವಾಸದಲ್ಲಿ ಭಾರತವಿದೆ. ನಂತರ 28ರಂದು ಹಾಲಿ ಚಾಂಪಿಯನ್ ಜಪಾನ್ ತಂಡವನ್ನು ಎದುರಿಸಲಿದೆ. 30ರಂದು ಪಾಕಿಸ್ತಾನ ಹಾಗೂ ಅಕ್ಟೋಬರ್ 2ರಂದು ಬಾಂಗ್ಲಾದೇಶ ವಿರುದ್ಧ ಭಾರತ ಸೆಣಸಲಿದೆ.

ಪಂದ್ಯದ ಸಮಯ: ಬೆಳಿಗ್ಗೆ 6.30
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಈಜು: ಶ್ರೀಹರಿಗೆ 6ನೇ ಸ್ಥಾನ

ನವದೆಹಲಿ (ಪಿಟಿಐ): ಕರ್ನಾಟಕದ ಶ್ರೀಹರಿ ನಟರಾಜ್ ಅವರು ಏಷ್ಯನ್ ಕ್ರೀಡಾಕೂಟದ ಈಜು ಸ್ಪರ್ಧೆಯ ಪುರುಷರ 50 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಆರನೇ ಸ್ಥಾನ ಪಡೆದರು.

ಸೋಮವಾರ ನಡೆದ ಸ್ಪರ್ಧೆಯನ್ನು ಅವರು 25.39 ಸೆ.ಗಳಲ್ಲಿ ಕೊನೆಗೊಳಿಸಿದರು. ಚೀನಾದ ಕ್ಸು ಜಿಯಾವು (24.38 ಸೆ.) ಮತ್ತು ವಾಂಗ್ ಗುಕೈಲಾಯ್ (24.88 ಸೆ.) ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದರು.

ಶ್ರೀಹರಿ, ಹೀಟ್ಸ್‌ನಲ್ಲಿ 25.43 ಸೆ. ಸಾಧನೆಯೊಂದಿಗೆ ಫೈನಲ್‌ನಲ್ಲಿ ಸ್ಥಾನ ಪಡೆದಿದ್ದರು. ಭಾನುವಾರ ನಡೆದಿದ್ದ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲೂ ಅವರು ಆರನೇ ಸ್ಥಾನ ಗಳಿಸಿದ್ದರು.

ಎಸ್.ಪಿ.ಲಿಖಿತ್ ಅವರು ಪುರುಷರ 100 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 1 ನಿ. 1.62 ಸೆ.ಗಳೊಂದಿಗೆ ಏಳನೆಯವರಾದರು.

ಆರ್ಯನ್ ಮೆಹ್ರಾ, ಅನೀಶ್ ಗೌಡ, ಕುಶಾಗ್ರ ರಾವತ್ ಮತ್ತು ತನೀಷ್ ಜಾರ್ಜ್ ಮ್ಯಾಥ್ಯೂ ಅವರನ್ನೊಳಗೊಂಡ ಪುರುಷರ 4X200 ಮೀ. ರಿಲೇ ತಂಡ 7 ನಿ.29.23 ಸೆ.ಗಳೊಂದಿಗೆ ಏಳನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಟೆನಿಸ್: ಪ್ರಿ ಕ್ವಾರ್ಟರ್ ಫೈನಲ್‌ಗೆ ಅಂಕಿತಾ, ರುತುಜಾ

ಬೋಪಣ್ಣ– ಭಾಂಬ್ರಿಗೆ ಆಘಾತ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಟೆನಿಸ್‌ನಲ್ಲಿ ಭಾರತಕ್ಕೆ ಚಿನ್ನದ ಪದಕ ತಂದುಕೊಡುವ ನೆಚ್ಚಿನ ಜೋಡಿ ಎನಿಸಿದ್ದ ರೋಹನ್ ಬೋಪಣ್ಣ ಮತ್ತು ಯೂಕಿ ಭಾಂಬ್ರಿ ಅನಿರೀಕ್ಷಿತ ಆಘಾತ ಅನುಭವಿಸಿದರು.

ಸೋಮವಾರ ನಡೆದ ಪುರುಷರ ಡಬಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಉಜ್ಬೇಕಿಸ್ತಾನದ ಸೆರ್ಜಿ ಫೋಮಿನ್– ಖುಮೊಯುನ್ ಸುಲ್ತಾನೋವ್ ಜೋಡಿ 2–6, 6–3, 10–6 ರಿಂದ ಇಲ್ಲಿ ಅಗ್ರಶ್ರೇಯಾಂಕದ ಹೊಂದಿದ್ದ ಭಾರತದ ಜೋಡಿಯನ್ನು ಮಣಿಸಿ ಅಚ್ಚರಿ ಉಂಟುಮಾಡಿತು.

ಎಟಿಪಿ ಡಬಲ್ಸ್ ರ‍್ಯಾಂಕಿಂಗ್‌ನಲ್ಲಿ ಬೋಪಣ್ಣ ಅಗ್ರ 10ರೊಳಗೆ ಹಾಗೂ ಭಾಂಬ್ರಿ ಅವರು ಅಗ್ರ 100ರ ಒಳಗಿನ ಸ್ಥಾನದಲ್ಲಿದ್ದಾರೆ. ಆದರೆ ಉಜ್ಬೇಕಿಸ್ತಾನದ ಜೋಡಿ 300ರ ಒಳಗಿನ ಸ್ಥಾನದಲ್ಲೂ ಇಲ್ಲ. ಆದ್ದರಿಂದ ಈ ಸೋಲು ಭಾರತದ ಜೋಡಿಯನ್ನು ಬಹಳವಾಗಿ ಕಾಡಲಿದೆ.

ಮೊದಲ ಸೆಟ್ ಜಯಿಸಿದ್ದ ಭಾರತದ ಜೋಡಿ ಸುಲಭ ಗೆಲುವಿನ ನಿರೀಕ್ಷೆಯಲ್ಲಿತ್ತು. ಆದರೆ ಎರಡನೇ ಸೆಟ್‌ನಲ್ಲಿ ಭಾಂಬ್ರಿ ಅವರು ಲಯ ಕಳೆದುಕೊಂಡದ್ದು ಮುಳುವಾಗಿ ಪರಿಣಮಿಸಿತು. ನಿರ್ಣಾಯಕ


ಅಂಕಿತಾ ರೈನಾ

ಘಟ್ಟದಲ್ಲಿ ಡಬಲ್‌ಫಾಲ್ಟ್ ಎಸಗಿದ ಅವರ ರಿಟರ್ನ್‌ಗಳಲ್ಲೂ ನಿಖರತೆ ಸಾಧಿಸಲು ವಿಫಲರಾದರು.

‘ರೋಹನ್ ಈ ಪಂದ್ಯದಲ್ಲಿ ಚೆನ್ನಾಗಿ ಆಡಿದರು. ಆದರೆ ಪಂದ್ಯ ಗೆಲ್ಲಲು ಬೇಕಾದ ಬೆಂಬಲ ಸಹ ಆಟಗಾರನಿಂದ ಅವರಿಗೆ ಲಭಿಸದೇ ಇದ್ದುದು ದುರದೃಷ್ಟಕರ’ ಎಂದು ಭಾರತ ತಂಡದ ಕೋಚ್ ಜೀಶನ್ ಅಲಿ ಪ್ರತಿಕ್ರಿಯಿಸಿದರು.

ಎಂಟರಘಟ್ಟಕ್ಕೆ ರಾಮಕುಮಾರ್–ಮೈನೇನಿ: ರಾಮಕುಮಾರ್ ರಾಮನಾಥನ್– ಸಾಕೇತ್ ಮೈನೇನಿ ಜೋಡಿ 6–3, 6–2 ರಿಂದ ಇಂಡೊನೇಷ್ಯಾದ ಇಗ್ನೇಷಿಯಸ್ ಆಂಥೋನಿ ಸುಸಾಂತೊ–ಡೇವಿಡ್ ಅಗಂಗ್ ಸುಸಾಂತೊ ವಿರುದ್ಧ ಗೆದ್ದು ಕ್ವಾರ್ಟರ್ ಫೈನಲ್‌ನಲ್ಲಿ ಸ್ಥಾನ ಪಡೆಯಿತು.

ಪ್ರಿ ಕ್ವಾರ್ಟರ್‌ಗೆ ಅಂಕಿತಾ, ರುತುಜಾ: ಅಂಕಿತಾ ರೈನಾ ಮತ್ತು ರುತುಜಾ ಭೋಸಲೆ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅಂಕಿತಾ 6–0, 6–0 ರಿಂದ ಉಜ್ಬೇಕಿಸ್ತಾನದ ಸಬ್ರಿನಾ ಆಲಿಮ್ಜೊನೊವಾ ಅವರನ್ನು ಮಣಿಸಿದರು. ಇದಕ್ಕಾಗಿ ಅವರು 51 ನಿಮಿಷಗಳನ್ನು ತೆಗೆದುಕೊಂಡರು.

ಇನ್ನೊಂದು ಪಂದ್ಯದಲ್ಲಿ ರುತುಜಾ 7–6, 6–2 ರಿಂದ ಕಜಕಸ್ತಾನದ ಅರುಝುನ್ ಸಂಗಂದಿಕೊವಾ ಅವರನ್ನು ಮಣಿಸಿದರು. ಸುಮಾರು ಎಂಟು ಗಂಟೆ ನಡೆದ ಹಣಾಹಣಿಯ ಮೊದಲ ಸೆಟ್ ಗೆಲ್ಲಲು ರುತುಜಾ ಪ್ರಯಾಸಪಟ್ಟರು.

ಹ್ಯಾಂಡ್‌ಬಾಲ್- ಭಾರತ ಮಹಿಳಾ ತಂಡಕ್ಕೆ ನಿರಾಸೆ: ಭಾರತ ಮಹಿಳೆಯರ ಹ್ಯಾಂಡ್‌ಬಾಲ್ ತಂಡವು ಏಷ್ಯನ್ ಕ್ರೀಡಾಕೂಟದಲ್ಲಿ ಸೋಮವಾರ ‘ಬಿ’ ಗುಂಪಿನ ಆರಂಭಿಕ ಪಂದ್ಯದಲ್ಲಿ 13–41 ಗೋಲುಗಳಿಂದ ಜಪಾನ್ ತಂಡದ ಎದುರು ಮುಗ್ಗರಿಸಿತು.

ಐಪಿಎಲ್: ದಾಲ್ಮಿಯಾ, ಧುಮಾಲ್ ಪುನರಾಯ್ಕೆ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಆಡಳಿತ ಸಮಿತಿಯ ಮುಖ್ಯಸ್ಥ ಅರುಣಸಿಂಗ್ ಧುಮಾಲ್ ಮತ್ತು ಬಂಗಾಳ ಕ್ರಿಕೆಟ್ ಸಂಸ್ಥೆ ನಿಕಟಪೂರ್ವ ಅಧ್ಯಕ್ಷ ಅವಿಷೇಕ್ ದಾಲ್ಮಿಯಾ ಅವರನ್ನು ಐಪಿಎಲ್ ಸಮಿತಿಗೆ ಪುನರಾಯ್ಕೆ ಮಾಡಲಾಗಿದೆ.

ಗೋವಾದಲ್ಲಿ ಸೋಮವಾರ ನಡೆದ ಬಿಸಿಸಿಐ (ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ) ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಐಪಿಎಲ್ ಸಮಿತಿಗೆ ದಾಲ್ಮಿಯಾ ಮತ್ತು ಧುಮಾಲ್ ಅವರನ್ನು ಪುನರಾಯ್ಕೆ ಮಾಡಲಾಯಿತು.

‘ಸಭೆಯಲ್ಲಿ ಎಂದಿನಂತೆ ನಿಗದಿಯಾದ ಎಲ್ಲ ಸಂಗತಿಗಳೂ ಚರ್ಚೆಯಾದವು. ತೀರ್ಮಾನಗಳನ್ನೂ ಕೈಗೊಳ್ಳಲಾಯಿತು. ಕ್ರಿಕೆಟ್ ಸಮಿತಿಗಳಿಗೆ ನಾಮನಿರ್ದೇಶನವನ್ನು ಪದಾಧಿಕಾರಿಗಳು ಸಿದ್ಧಪಡಿಸಿದರು. ಐಪಿಎಲ್ ಮುಖ್ಯಸ್ಥ ಅರುಣ್ ಧುಮಾಲ್ ಮತ್ತು ಅವಿಷೇಕ್ ದಾಲ್ಮಿಯಾ ಅವರನ್ನು ನಿರೀಕ್ಷೆಯಂತೆಯೇ ಆಯ್ಕೆ ಮಾಡಲಾಯಿತು‘ ಎಂದು ಮೂಲಗಳು ಖಚಿತಪಡಿಸಿದವು.

ಸದ್ಯ ಇರುವ ಒಂಬುಡ್ಸ್‌ಮನ್ –ನೈತಿಕ ಅಧಿಕಾರಿಯನ್ನು ಮುಂದಿನ ವರ್ಷದ

ಅರುಣಸಿಂಗ್ ಧುಮಾಲ್

ಜೂನ್ ವರೆಗೆ ಮುಂದುವರಿಸಲು ತೀರ್ಮಾನಿಸಲಾಯಿತು.

ಕಳೆದ ವರ್ಷದಲ್ಲಿ ಬಿಸಿಸಿಐ ಆದಾಯದಲ್ಲಿ ಗಣನೀಯ ಪ್ರಮಾಣದ ಹೆಚ್ಚಳವಾಗಿದೆ. ಐಸಿಸಿಯ ಆದಾಯಕ್ಕಿಂತಲೂ ಶೇ 38ರಷ್ಟು ಹೆಚ್ಚು ಬಿಸಿಸಿಐ ಗಳಿಕೆಯಿದೆ. ಮುಂಬರುವ ಐದು ವರ್ಷಗಳಲ್ಲಿ ನಡೆಯುವ ದ್ವಿಪಕ್ಷೀಯ ಸರಣಿಗಳ ಮಾಧ್ಯಮ ಹಕ್ಕುಗಳನ್ನು ಈಚೆಗೆ ಬಿಡ್ ಮಾಡಲಾಗಿದೆ. ಅದರಲ್ಲಿ ಪಂದ್ಯವೊಂದಕ್ಕೆ ಅಂದಾಜು ₹ 67 ಕೋಟಿಯನ್ನು ನಿರೀಕ್ಷಿಸಲಾಗಿದೆ. ಇದಕ್ಕೆ ಸದಸ್ಯರು ಸಂತಸ ವ್ಯಕ್ತಪಡಿಸಿದರು.

ಭಾರತ ಕ್ರಿಕೆಟಿಗರ ಸಂಘಟನೆಯಲ್ಲಿ ಪ್ರಗ್ಯಾನ್ ಓಜಾ ಅವರು ಮುಂದುವರಿಯುವುದಿಲ್ಲ. ಆದ್ದರಿಂದ ಅಪೆಕ್ಸ್ ಕೌನ್ಸಿಲ್‌ನಲ್ಲಿಯೂ ಅವರು ಇರುವುದಿಲ್ಲ.

‘ಐಸಿಎ ಚುನಾವಣೆ ನಡೆಯಲಿದೆ. ಅದರಲ್ಲಿ ನೂತನ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುವುದು’ ಎಂದು ಮೂಲಗಳು ತಿಳಿಸಿವೆ.

ವುಶು: ರೊಶಿಬಿನಾಗೆ ಪದಕ ಖಚಿತ

ಹಾಂಗ್‌ಝೌ (ಪಿಟಿಐ): ಭಾರತದ ನವೊರೆಮ್ ರೊಶಿಬಿನಾ ದೇವಿ, ಏಷ್ಯನ್ ಕ್ರೀಡಾಕೂಟದ ವುಶು ಸ್ಪರ್ಧೆಯ ಮಹಿಳೆಯರ 60 ಕೆ.ಜಿ. ವಿಭಾಗದಲ್ಲಿ ಸೆಮಿಫೈನಲ್‌ಗೆ ಅರ್ಹತೆ ಪಡೆದಿದ್ದು, ಭಾರತಕ್ಕೆ ಮತ್ತೊಂದು ಪದಕ ಖಚಿತವಾಗಿದೆ.

ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಕಜಕಸ್ತಾನದ ಯಿಮನ್ ಕರ್ಶಿಗಾ ಅವರನ್ನು ಪಾಯಿಂಟ್‌ಗಳ ಆಧಾರದಲ್ಲಿ ಸೋಲಿಸಿದರು. ರೊಶಿಬಿನಾ ಈ ಹಿಂದಿನ ಜಕಾರ್ತಾ ಕ್ರೀಡೆಗಳಲ್ಲಿ ಇದೇ ತೂಕ ವಿಭಾಗದಲ್ಲಿ ಕಂಚಿನ ಪದಕ ಪಡೆದಿದ್ದರು.

ಪುರುಷರ 60 ಕೆ.ಜಿ. ಸಾಂಡ ವಿಭಾಗದಲ್ಲಿ ಸೂರ್ಯಭಾನು ಪ್ರತಾಪ್ ಸಿಂಗ್ ಅವರು ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಇಸ್ಲೊಮ್‌ಬೆಕ್ ಖಾಯ್ದರೊವ್ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದರು.

ದಿನದ ಅಂತಿಮ ಸೆಣಸಾಟವಾದ 65 ಕೆ.ಜಿ. ವಿಭಾಗದಲ್ಲಿ ವಿಕ್ರಮ್ ಬಲಿಯಾನ್, ಇಂಡೊನೇಷ್ಯಾದ ಸಾಮ್ಯುಯೆಲ್ ಮಾರ್ಬನ್ ಅವರಿಗೆ 1–2 ರಲ್ಲಿ ಮಣಿದರು. ಬಲಿಯಾನ್ 2019ರ ವಿಶ್ವ ವುಶು ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದ್ದರು. ಅದೇ ವರ್ಷ ದಕ್ಷಿಣ ಏಷ್ಯಾ ಕ್ರೀಡೆಗಳಲ್ಲಿ ಚಿನ್ನದ ಪದಕವನ್ನೂ ಗೆದ್ದಿದ್ದರು.

ವಿಶ್ವಕಪ್ ಕ್ರಿಕೆಟ್: ಪಾಕ್ ತಂಡಕ್ಕೆ ವೀಸಾ

ಇಂದೋರ್ (ಪಿಟಿಐ): ಮುಂದಿನ ತಿಂಗಳು ಭಾರತದಲ್ಲಿ ಆರಂಭವಾಗಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಪಾಕಿಸ್ತಾನ ತಂಡದವರಿಗೆ ವೀಸಾ ಮಂಜೂರಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ತಿಳಿಸಿದೆ.

ಸೆ.27ರಂದು ಪಾಕ್ ತಂಡವು ಭಾರತಕ್ಕೆ ಬರಲಿದೆ. ಹೈದರಾಬಾದಿನಲ್ಲಿ 29ರಂದು ನಡೆಯುವ ಅಭ್ಯಾಸ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಆಡಲಿದೆ. ಈ ಪಂದ್ಯಕ್ಕೆ ಕೇವಲ 48 ಗಂಟೆಗಳ ಮೊದಲು ಭಾರತಕ್ಕೆ ಬಂದಿಳಿಯಲು ವೀಸಾ ಮಂಜೂರಾಗಿದೆ.

‘ವೀಸಾಗೆ ಸಂಬಂಧಿಸಿದಂತೆ ಭಾರತದ ಹೈಕಮಿಷನರ್ ಕಚೇರಿಯಿಂದ ನಮಗೆ ಕರೆ ಬಂದಿತ್ತು. ನಮ್ಮ ತಂಡದ ಪ್ರತಿನಿಧಿಯೊಬ್ಬರು ಕಚೇರಿಗೆ ತೆರಳಿದ್ದು ಅಗತ್ಯ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ‘ ಎಂದು ಪಾಕ್ ಕ್ರಿಕೆಟ್ ಮಂಡಳಿಯ ವಕ್ತಾರ ಉಮರ್ ಫಾರೂಕ್ ತಿಳಿಸಿದ್ದಾರೆ.

ಭಾರತದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ನೆದರ್ಲೆಂಡ್ಸ್ ತಂಡದ ಜೆರ್ಸಿಯನ್ನು ಸೋಮವಾರ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಅನಾವರಣಗೊಳಿಸಲಾಯಿತು. ಚಿತ್ರದಲ್ಲಿ ಮ್ಯಾಕ್ಸ್‌ವೆಲ್ ಒಡೌಡ್ (ಉಪನಾಯಕ), ರಾಜೇಶ್ ಕಶ್ಯಪ್ (ಪ್ರಾಯೋಜಕರಾದ ನಾರ್ಡೆಕ್ ಸಿಇಒ), ನವಲ್ ಕಿಶೋರ್ (ನಾರ್ಡೆಕ್ ಸಹ ಸಂಸ್ಥಾಪಕ), ಸ್ಕಾಟ್ ಎಡ್ವರ್ಡ್ಸ್ (ನಾಯಕ) ಇದ್ದಾರೆ

ಕರ್ನಾಟಕಕ್ಕೆ ಮಣಿದ ನೆದರ್ಲೆಂಡ್ಸ್

ಬೆಂಗಳೂರು: ವೇಗಿ ವಿದ್ವತ್ ಕಾವೇರಪ್ಪ ಮತ್ತು ವಿ. ಕೌಶಿಕ್ ಅವರ ಪರಿಣಾಮಕಾರಿ ದಾಳಿಯಿಂದಾಗಿ ಕರ್ನಾಟಕ ತಂಡವು ಇಲ್ಲಿ ನಡೆದ ಅಭ್ಯಾಸ ಕ್ರಿಕೆಟ್ ಪಂದ್ಯದಲ್ಲಿ ಪ್ರವಾಸಿ ನೆದರ್ಲೆಂಡ್ಸ್ ವಿರುದ್ಧ ಜಯಿಸಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವು 142 ರನ್‌ಗಳಿಂದ ನೆದರ್ಲೆಂಡ್ಸ್ ವಿರುದ್ಧ ಗೆದ್ದಿತು. ಮುಂದಿನ ತಿಂಗಳು ಆರಂಭವಾಗಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಈ ನೆದರ್ಲೆಂಡ್ಸ್ ತಂಡವು ಕಳೆದ ಕೆಲವು ದಿನಗಳಿಂದ ಇಲ್ಲಿಯೇ ಅಭ್ಯಾಸ ನಡೆಸುತ್ತಿದೆ.

ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕವು 46 ಓವರ್‌ಗಳಲ್ಲಿ 265 ರನ್ ಗಳಿಸಿತು. ದೇವದತ್ತ ಪಡಿಕ್ಕಲ್ (56 ರನ್) ಮತ್ತು ಆರ್. ಸಮರ್ಥ್ (81 ರನ್) ಗಳಿಸಿದರು.

ಗುರಿ ಬೆನ್ನಟ್ಟಿದ ನೆದರ್ಲೆಂಡ್ಸ್ ತಂಡವು 25 ಓವರ್‌ಗಳಲ್ಲಿ 123 ರನ್‌ಗಳಿಗೆ ಆಲೌಟ್ ಆಯಿತು. ವಿದ್ವತ್ ಮತ್ತು ಕೌಶಿಕ್ ತಲಾ ನಾಲ್ಕು ವಿಕೆಟ್ ಗಳಿಸಿದರು.

ಪೋಷಾಕು ಬಿಡುಗಡೆ: ಸಂಜೆ ನಡೆದ ಕಾರ್ಯಕ್ರಮದಲ್ಲಿ ನೆದರ್ಲೆಂಡ್ಸ್ ತಂಡದ ಪೋಷಾಕು ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ತಂಡದ ಮುಖ್ಯ ಕೋಚ್ ರಿಯಾನ್ ಕುಕ್, ‘ಭಾರತದಲ್ಲಿ ಎರಡು ಬಾರಿ ತರಬೇತಿ ಶಿಬಿರ ಮಾಡಿದ್ದೇವೆ. ಸ್ಪಿನ್ ಬೌಲಿಂಗ್ ಕುರಿತು ಹೆಚ್ಚು ಅಭ್ಯಾಸ ನಡೆಸಿದೆವು. ಭಾರತದ ಹವಾಗುಣ ಮತ್ತು ಪಿಚ್ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಬಗ್ಗೆ ಅಭ್ಯಾಸ ನಡೆಯಿತು’ ಎಂದರು.

ಸ್ಯಾಫ್ ಫುಟ್‌ಬಾಲ್: ಸೆಮಿಗೆ ಭಾರತ

ಕಠ್ಮಂಡು (ಪಿಟಿಐ): ಭಾರತ ತಂಡ 2–1 ಗೋಲುಗಳಿಂದ ಭೂತಾನ್ ತಂಡವನ್ನು ಸೋಲಿಸಿ, ಸ್ಯಾಫ್ 19 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ಗೆ ಅರ್ಹತೆ ಪಡೆಯಿತು.

ದಶರಥ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ವಿರಾಮದ ವೇಳೆ ಸ್ಕೋರ್ 1–1 ಸಮನಾಗಿತ್ತು. ಜಿಗ್ಮೆ ನಾಮ್‌ಗ್ಯಾಲ್ 20ನೇ ನಿಮಿಷ ಭೂತಾನ್‌ಗೆ ಮುನ್ನಡೆ ಒದಗಿಸಿದರು. ಆದರೆ ಗ್ವಾಮ್‌ಸರ್ ಗೊಯರಿ ಮತ್ತು ರಿಕಿ ಮೀಥಿ ಅವರು ಗಳಿಸಿದ ಗೋಲುಗಳ ನೆರವಿನಿಂದ ಭಾರತ ಜಯ ಸಾಧಿಸಿತು.

ಭಾರತ ‘ಬಿ’ ಗುಂಪಿನಲ್ಲಿ ಬಾಂಗ್ಲಾವನ್ನು 3–0 ಯಿಂದ ಸೋಲಿಸಿತ್ತು. ಭೂತಾನ್ ಈ ಪಂದ್ಯಕ್ಕೆ ಮೊದಲು ಬಾಂಗ್ಲಾ ವಿರುದ್ಧ 4–3 ರಲ್ಲಿ ಜಯಗಳಿಸಿದ್ದರಿಂದ ಭಾರತ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಭಾರತ, ಬುಧವಾರ ಸೆಮಿಫೈನಲ್‌ನಲ್ಲಿ ನೇಪಾಳ ವಿರುದ್ಧ ಆಡಲಿದೆ.

ಯುನೈಟೆಡ್ ಎಫ್‌ಸಿ ತಂಡ ಜಯಭೇರಿ

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1 ರಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಜೈಸನ್ ಜೋರ್ಡಾನ್ ವಾಜ್, ಚೆಸ್ಟರ್‌ಪೌಲ್ ಲಿಂಗ್ಡೊ ಅವರು ಯುನೈಟೆಡ್ ಪರ ತಲಾ ಒಂದು ಗೋಲು ಗಳಿಸಿದರು. ಇಂಡಿಪೆಂಡೆಂಟ್ಸ್‌ನ ರಾಜ ಗಣಪತಿ ಒಂದು ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವು 7–0ಯಿಂದ ಯಂಗ್ ಚಾಲೆಂಜರ್ಸ್ ತಂಡವನ್ನು ಮಣಿಸಿತು.

ಫುಟ್‌ಬಾಲ್ ಆಟಗಾರ ನರಸಿಂಹಯ್ಯ ನಿಧನ

ಬೆಂಗಳೂರು: ಫುಟ್‌ಬಾಲ್ ಮಾಜಿ ಆಟಗಾರ ಮತ್ತು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ಆಡಳಿತ ಮಂಡಳಿ ಮಾಜಿ ಸದಸ್ಯ ಪಿ. ನರಸಿಂಹಯ್ಯ (73) ಭಾನುವಾರ ನಿಧನರಾದರು.

ಐಡಿಯಲ್ ಜಾವಾ ಕಂಪನಿಯ ನಿವೃತ್ತ ನೌಕರರಾಗಿ ರುವ ಅವರು, ಮೈಸೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

INDIA'S FIRST 5 YEAR WARRANTY* *Conditions apply

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or CALL TOLL-FREE 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. *Terms and Conditions apply.

BENGALURU - PEENYA: SAI HERO - 9289922830. **MAGADI ROAD:** POORNA HERO - 9289923212. **KAMAKSHIPALYA:** POORNA MOTORS - 9606922534. **BANASHANKARI:** SAI HERO - 9289922476. **JP NAGAR:** SAI HERO - 99002 36280. **BANASWADI:** BHAGATH HERO - 9289922738. **HOSKOTE:** BHAGATH HERO - 8884600051. **K R PURAM:** BHAGATH HERO - 7829488706. **HOSUR ROAD:** RT KRISHNA HERO - 9289923177. **JIGANI:** RT KRISHNA HERO - 8762860999. **BYATARAYANAPURA:** BIMAL HERO - 9289922863. **RT Nagar:** Bimal Hero - 9535327710. **Doddaballapur:** Bimal Hero - 9742202125. **LALBAGH ROAD:** PRAKASH HERO - 9289922117. **RAJAJI NAGAR:** MAX HERO - 9289923023. **MARATHALLI:** VAAYURATHA HERO - 9289923811. **TUMKUR:** SAI HERO - 9289922986. B.H.ROAD – SAI HERO - 7022752841. **TIPTUR:** SAI HERO - 9164840456. **KUNIGAL:** SAI HERO - 7022752858. **SHIMOGA:** MYTHRI HERO - 9289922635. SREE KARTHIK HERO - 9289922509. **CHICKMAGALUR:** NAYANA HERO - 9289922120. **SAGAR:** PRAJWAL HERO - 9289922399. **UDUPI:** SHAKTI HERO - 9821696225, **MANGALORE:** TRIBHUVAN HERO - 9289923203. WEST COAST HERO - 9289922606. **DAVANAGERE:** PRAKASHA HERO - 9289922501. RUTVI HERO - 9289923174. **CHITRADURGA:** MAHESH HERO - 9289922126. **MYSORE:** SHAH MYSORE HERO (NAZARBAD CITY) - 9289922518. DYUTHI MYSORE HERO (B.M.HOSPITAL) - 9289922475. **NANJANGUD:** DYUTHI HERO - 9742885252 .**CHAMARAJNAGAR:** YEPIYES HERO - 9289922828. **HASSAN:** VENKATESHWARA HERO - 9289922121. **MANDYA:** DAYANAND HERO - 9289922123. **BELGAUM:** NAGSHANTI HERO - 9289922502, NAGSHANTI - 2 UNIT - 9289923173. **CHIKODI:** SHREE RENUKA MOTORS - 9289922884. **GOKAK:** CHINMAY HERO - 9289922673. **YADGIR:** SRI VENKATESH HERO - 9289922875. **BIDAR:** KAILASH HERO - 9289922124. **BASAVA KALYANA:** AKASH HERO - 9449337211. **GULBARGA:** SRI VENKATESH HERO - 9289922118. **HOSPET:** ANNAPOOORNA AUTOMOTIVES - 9289923165. **SINDHANUR:** ANAND HERO - 9289922943. **KOPPAL:** VIJAYA HERO - 9289922985. **BELLARY:** ANNAPOORNA HERO - 9289922125. **RAICHUR:** SRI VENKKATESHWARA HERO - 9289922944. **SIRSI:** SHAKTI HERO - 9289922391. **HAVERI:** BAHADDUR DESAI HERO - 9289922977. **HUBLI:** BELLAD HERO - 9289922565. **DHARWAD:** BELLAD HERO - 9686204480. CHADHA HERO - 9289922119. **GADAG:** CHADHA HERO - 8050041033. **MUDHOL:** KUMAR HERO - 9289922633. **BAGALKOT:** CHINMAY HERO - 9289923049. **SINDAGI:** JOGUR MOTORS - 9289922964. **BIJAPUR:** VIJAY HERO - 9289922122.

L&K | SAATCHI & SAATCHI